# ಸಹೃದಯ

## ಸಂಸ್ಮರಣ ಸಂಚಿಕೆ



ಡಾ॥ ಸಿದ್ಧಯ್ಯ ಪುರಾಣಿಕ
ಅಭಿನಂದನ ಸಮಾರಂಭ
21 - 6 - 1981



ಡಾ. ಸಿದ್ಧಯ್ಯ ಪುರಾಣಿಕರು

# ಸಹೃದಯ

ಸಂಸ್ಮರಣ ಸಂಚಿಕೆ

ಸಂಪಾದಕರು :

● ಟಿ. ಆರ್. ಮಹಾದೇವಯ್ಯ

ಪ್ರಕಾಶಕರು :

ಡಾ. ಸಿದ್ಧಯ್ಯ ಪುರಾಣಿಕ ಅಭಿನಂದನ ಸಮಿತಿ

ಚಾಮರಾಜಪೇಟೆ, ಬೆಂಗಳೂರು–೫೬೦ ೦೧೮

SAHRUDAYA—Samsmarana Sanchike presented to Dr. Siddayya Puranik, a well known Poet, Playwrite, Critic and Vachanakara in modern Kannada. Edited by T. R. Mahadevaiah and Published by Dr. Siddayya Puranika Abhinandana Samiti, Chamarajpet, Bangalore-18. 1981 pp. 1 + viii ; Price : Rs. 5/-

ಬೆಲೆ : ಐದು ರೂಪಾಯಿ

ರಕ್ಷಾಕವಚ : ಶ್ರೀ ಕಮಲೇಶ್

ಮುದ್ರಕರು :
ಲೋಟಸ್ ಪ್ರಿಂಟರ್ಸ್
ರಾಜಾಜಿನಗರ, ಬೆಂಗಳೂರು-560 010

# ಡಾ. ಸಿದ್ಧಯ್ಯ ಪುರಾಣಿಕ ಅಭಿನಂದನಾ ಸಮಿತಿ

ಅಧ್ಯಕ್ಷರು :
ಜಿ. ನಾರಾಯಣ
ಮಾಜಿ ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತು

ಕಾರ್ಯದರ್ಶಿಗಳು :
ಡಾ. ಪಿ. ವಿ. ನಾರಾಯಣ
ಆರ್. ಎಚ್. ರಾಜು

ಖಜಾಂಚಿ :
ಹೀ. ಚಿ. ಶಾಂತವೀರಯ್ಯ

ಸಂಪಾದಕರು-ಸಂಭಾವನಾ ಗ್ರಂಥ :
ಡಾ॥ ಸಾ. ಶಿ. ಮರುಳಯ್ಯ

ಸಂಪಾದಕರು-ಸಂಸ್ಮರಣ ಸಂಚಿಕೆ :
ಟಿ. ಆರ್. ಮಹಾದೇವಯ್ಯ

ಸದಸ್ಯರು :
ಡಾ॥ ವಿ. ಕೃ. ಗೋಕಾಕ್
ಎಸ್. ಎಸ್. ಒಡೆಯರ್
ಪೂಜ್ಯ ಶ್ರೀ ಶರಣಬಸವಪ್ಪ ಅಪ್ಪ
ಡಾ॥ ಡಿ. ಜವರೇಗೌಡ
ಡಾ॥ ರಂ. ಶ್ರೀ. ಮುಗಳಿ
ಡಾ॥ ಹಾ. ಮಾ. ನಾಯಕ
ಡಾ॥ ಗೊ. ರು. ರಾಮಸ್ವಾಮಿ ಅಯ್ಯಂಗಾರ್
ಹಂಪ. ನಾಗರಾಜಯ್ಯ
ಎಸ್. ಎಂ. ಕೆ. ಸೋಗಿ
ಎಚ್. ಎಲ್. ನಾಗೇಗೌಡ
ಕೆ. ಎಂ. ನಂಜಪ್ಪ
ಎಂ. ಜಿ. ಕೋದಂಡರಾಮಶೆಟ್ಟಿ
ಎಚ್. ಎಸ್. ಪಾರ್ವತಿ
ಎಚ್. ಬಿ. ಜ್ವಾಲನಯ್ಯ
ಎನ್. ಎಸ್. ಪೈ
ಭೀಮಣ್ಣ ಖಂಡ್ರೆ
ವಿಶ್ವನಾಥರೆಡ್ಡಿ ಮುದ್ನಾಳ್
ಕೆ. ಬಿ. ಷಣ್ಮುಖಪ್ಪ
ಎಚ್. ಎಂ. ಲಿಂಗಮರಿಯಪ್ಪ
ಪಿ. ಎನ್. ಜವರಪ್ಪಗೌಡ
ಎ. ಎಂ. ಬಸವೇಗೌಡ
ಕೆ. ಸುಬ್ಬರಾಯನ್
ಪಾಟೀಲ ಪುಟ್ಟಪ್ಪ
ಡಿ. ಆರ್. ಗುರುಶಾಂತಪ್ಪ
ಸೋಮರಾಮನಗೌಡ
ಕೆ. ಆರ್. ಲಿಂಗಪ್ಪ
ಕೆ. ರಾಜಶೇಖರಪ್ಪ
ಕೋ. ಚೆನ್ನಬಸಪ್ಪ
ಡಾ॥ ಜಯದೇವಿತಾಯಿ ಲಿಗಾಡೆ
ಬಿ. ಎ. ಪೂವಯ್ಯ
ಹೆಚ್. ಎಂ. ತಿಪ್ಪೆಸ್ವಾಮಿ
ಕೆ. ದೊಡ್ಡನಗೌಡ
ಪ್ರಹ್ಲಾದಕುಮಾರ ಭಾಗೋಜಿ
ಟಿ. ಎಸ್. ಕರಿಬಸಯ್ಯ
ಬಿ. ಎಂ. ಪಾಟೀಲ್
ಹೊ. ಶ್ರೀನಿವಾಸಯ್ಯ
ಏರ್ಯ ಲಕ್ಷ್ಮೀನಾರಾಯಣ ಆಳ್ವ
ವಿ. ಎಸ್. ಬೆಂಬಲಗಿ
ಆರ್. ಎಸ್. ಆರಾಧ್ಯ
ಎಚ್. ಎಸ್. ರೇಣುಕಾ ಪ್ರಸಾದ್
ಜಯಣ್ಣ ಚಿಗಟೇರಿ
ಟಿ. ಎನ್. ಮಂಜುನಾಥ್
ಪಂಪಾಪತಿ
ಶಂ. ಗು. ಬಿರಾದಾರ
ಡಿ. ಜೆ. ಪದ್ಮನಾಭ

## 'ಸಹೃದಯ'–ಸಂಸ್ಮರಣ ಸಂಚಿಕೆಯ ಸಂಪಾದಕ ಸಮಿತಿ

ಅಧ್ಯಕ್ಷರು ;

ಶ್ರೀ ಜಿ. ನಾರಾಯಣ

ಸಂಪಾದಕರು :

ಶ್ರೀ ಟಿ. ಆರ್. ಮಹಾದೇವಯ್ಯ

ಸದಸ್ಯರು :

ಶ್ರೀ ಎಚ್. ಜೆ. ಲಕ್ಕಪ್ಪಗೌಡ

ಡಾ॥ ಪಿ. ವಿ. ನಾರಾಯಣ

ಪಂಡಿತ ಚನ್ನಪ್ಪ ಎರೇಸೀಮೆ

ಶ್ರೀ ಕೆ. ನಿಸ್ಸಾರ್ ಅಹಮದ್

ಶ್ರೀ ಕೆ. ಸಿ. ಶಿವಪ್ಪ

ಶ್ರೀ ಕೆ. ಮುದ್ದಣ್ಣ

ಶ್ರೀ ದೊಡ್ಡರಂಗೇಗೌಡ

ಶ್ರೀ ಎಸ್. ಎನ್. ಕಾತರಕಿ

ಶ್ರೀ ಗೊ. ರು. ಚನ್ನಬಸಪ್ಪ

ಶ್ರೀ ಸಿ. ಕೆ. ಪರಶುರಾಮಯ್ಯ

ಶ್ರೀ ಶೂದ್ರ ಶ್ರೀನಿವಾಸ್

ಶ್ರೀ ವೊರಬದ ಮಲ್ಲಿಕಾರ್ಜುನ

## ಅಭಿನಂದನ ಸಮಿತಿಯ ಪರವಾಗಿ

ಶ್ರೇಷ್ಠ ಕವಿಗಳೂ, ಖ್ಯಾತ ಸಾಹಿತಿಗಳೂ, ವಿಮರ್ಶಕರೂ, ಅನುಭಾವಿಗಳೂ, ದಕ್ಷ ಆಡಳಿತಗಾರರೂ, ಉಜ್ವಲ
ವಾಗ್ಮಿಗಳೂ ಹಾಗೂ ಸ್ನೇಹಪರರೂ ಒಬ್ಬರೇ ಆಗಿರುವುದು ನಮ್ಮಲ್ಲಿ ತುಂಬ ವಿರಳ. ಇಂಥ ಅಪೂರ್ವ ಗುಣಗಳನ್ನು
ಪಡೆದಿರುವವರಲ್ಲಿ ಡಾ. ಸಿದ್ಧಯ್ಯ ಪುರಾಣಿಕರು (ಕಾವ್ಯಾನಂದ) ಒಬ್ಬರು. ಸುಸಂಸ್ಕೃತ ಸಾರಸ್ವತ ಮನೆತನದಲ್ಲಿ
ಜನ್ಮತಳೆದ ಶ್ರೀಯುತರು ಪ್ರತಿಭೆಯನ್ನು ಪಡೆದು ಹುಟ್ಟಿದರು, ವಿದ್ವತ್ತನ್ನು ಗಳಿಸುತ್ತಾ ಬೆಳೆದರು ; ಎರಡನ್ನೂ
ಸಮಪ್ರಮಾಣದಲ್ಲಿ ದುಡಿಸಿಕೊಂಡ ಸವ್ಯಸಾಚಿಗಳಾದರು.

ಹೈದರಾಬಾದ್-ಕರ್ನಾಟಕದಲ್ಲಿ ಕನ್ನಡ ಖಿಲವಾಗುತ್ತಿದ್ದ ಕಾಲದಲ್ಲಿ ಅದಕ್ಕೊಂದು ಊರುಗೋಲಾಗಿ ನಿಂತು ಅದರ
ಪುನರುಜ್ಜೀವನಕ್ಕೆ ಕಾರಣರಾದರು ; ನಿಜಾಮ ರಾಜ್ಯದಲ್ಲಿ ಅದಕ್ಕೊಂದು ಹಿರಿಯ ಸ್ಥಾನ ಕಲ್ಪಿಸಿಕೊಟ್ಟರು.
ನಿರ್ಜೀವವಾಗಿದ್ದ ಅನೇಕ ಕನ್ನಡ ಸಂಘ ಸಂಸ್ಥೆಗಳಿಗೆ ತಮ್ಮ ತನು-ಮನ-ಧನಗಳಿಂದ ಜೀವ ತುಂಬಿದರು. ಸರ್ಕಾರದ
ಅಧಿಕಾರಿಯಾಗಿ ತಮ್ಮ ದಕ್ಷತೆ ಮತ್ತು ನಿಸ್ಪೃಹತೆಯಿಂದ ಮೇಲೇರಿ ಬಂದು ಕರ್ನಾಟಕ ರಾಜ್ಯ ಉದಯವಾದ ಮೇಲೆ,
ಅಖಂಡ ಕರ್ನಾಟಕದ ಸೇವೆಗಾಗಿ ತಮ್ಮ ಬದುಕನ್ನು ಮುಡುಪಾಗಿಟ್ಟರು. ಪುರಾಣಿಕರು ಇಂದು ಸರಕಾರಿ ಸೇವೆಯಿಂದ
ನಿವೃತ್ತರಾಗಿದ್ದಾರೆ. ಆದರೂ ಅವರು ಹಿಂದೆ ಸೇವೆ ಸಲ್ಲಿಸಿದ ಜಿಲ್ಲೆಗಳಲ್ಲಿ ಅಲ್ಲಿಯ ಜನರು ಪುರಾಣಿಕರನ್ನು ಈಗಲೂ
ತಮ್ಮಲ್ಲಿಗೆ ಆಗಾಗ ಬರಮಾಡಿಕೊಂಡು ಸಭೆ ಸಮಾರಂಭಗಳನ್ನು ಏರ್ಪಡಿಸಿ ಗೌರವಿಸುತ್ತಿದ್ದಾರೆ. ಶ್ರೀ ಪುರಾಣಿಕರು
ಸರಕಾರಿ ಸೇವಾಕಾರ್ಯದ ಜೊತೆಗೆ ಸಾಹಿತ್ಯಕೃಷಿಯನ್ನೂ ಕೈಗೊಂಡು ಕಾವ್ಯ, ಕಥೆ, ನಾಟಕ, ವಿಮರ್ಶೆ, ವಚನ ಸಾಹಿತ್ಯ,
ಮಕ್ಕಳ ಸಾಹಿತ್ಯ ಮೊದಲಾದುವನ್ನು ರಚಿಸಿ ಸಾಹಿತ್ಯಪ್ರಪಂಚದಲ್ಲಿ ವಿಶೇಷವಾದ ಕೀರ್ತಿಯನ್ನು ಗಳಿಸಿದ್ದಾರೆ.
ಅವರ ಕೆಲವು ಕೃತಿಗಳಿಗೆ ರಾಜ್ಯಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳು ಮತ್ತು ರಾಷ್ಟ್ರಪ್ರಶಸ್ತಿಗಳು ಬಂದಿವೆ. ಕರ್ನಾಟಕ
ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ಕೊಟ್ಟು ಗೌರವಿಸಿದೆ. ಕಲ್ಕತ್ತದಲ್ಲಿರುವ ಭಾರತೀಯ ಭಾಷಾ ಪರಿಷತ್ತು
೧೯೭೭-೭೮ರಲ್ಲಿ ಪ್ರಕಟವಾದ ಉತ್ತಮ ಸೃಷ್ಟ್ಯಾತ್ಮಕ ಕೃತಿಗಳಿಗೆ ಗೊತ್ತುಮಾಡಿದ ಹನ್ನೊಂದು ಸಾವಿರ ರೂಪಾಯಿಗಳ
ನಗದು ಬಹುಮಾನವು ಇವರ "ವಚನೋದ್ಯಾನ"ಕ್ಕೆ ಸಂದಿರುವುದು ಕನ್ನಡಿಗರೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ ಮತ್ತು
ಆ ಸಂಸ್ಥೆಯಿಂದ ಪ್ರಪ್ರಥಮವಾಗಿ ಬಹುಮಾನ ಪಡೆದ ಕನ್ನಡಿಗರಲ್ಲಿ ಡಾ. ಸಿದ್ಧಯ್ಯ ಪುರಾಣಿಕರು
ಮೊದಲಿಗರೆಂಬುದು ಕನ್ನಡ ಸಾಹಿತ್ಯ ಲೋಕದಲ್ಲಿ ಕೃಷಿ ಮಾಡುವವರಿಗೆಲ್ಲಾ ಹೆಚ್ಚಿನ ಸಂತೋಷವನ್ನುಂಟುಮಾಡಿದೆ.

ಡಾ. ಸಿದ್ಧಯ್ಯ ಪುರಾಣಿಕರಿಗೆ ಕನ್ನಡ, ಸಂಸ್ಕೃತ, ಇಂಗ್ಲಿಷ್, ಉರ್ದು, ಮರಾಠಿ, ಪರ್ಷಿಯನ್ ಇತ್ಯಾದಿ ಅನೇಕ ಭಾಷೆಗಳ
ಪರಿಚಯವಿದೆ. ಅಂತೆಯೇ ಅವರ ಕೆಲವು ಕೃತಿಗಳು ಕನ್ನಡದಿಂದ ಇತರ ಭಾಷೆಗಳಿಗೆ ತರ್ಜುಮೆಯಾಗಿವೆ.
ಈ ವರ್ಷದ ಜೂನ್ ೧೮ ರಂದು ಸಿದ್ಧಯ್ಯ ಪುರಾಣಿಕರಿಗೆ ೭೩ ವರ್ಷ ತುಂಬಿತು. ಈ ಸಂದರ್ಭದಲ್ಲಿ ಕನ್ನಡ
ನಾಡು-ನುಡಿಗೆ ಇವರು ಸಲ್ಲಿಸಿದ ಮಹತ್ವದ ಸೇವೆಯನ್ನು ಗುರುತಿಸಿದ ಅನೇಕ ಸಹೃದಯರು ಶ್ರೀಯುತರಿಗೆ ಗೌರವ
ಸೂಚಿಸಲು ರಾಜ್ಯಮಟ್ಟದಲ್ಲಿ ಅಭಿನಂದನ ಸಮಾರಂಭವನ್ನು ಏರ್ಪಡಿಸಬೇಕೆಂದು ತೀರ್ಮಾನಿಸಿದುದು ಉಚಿತವೂ,
ನ್ಯಾಯವೂ ಆಗಿದೆ. ಈ ಸಮಾರಂಭದ ಅಂಗವಾಗಿ ನಡೆಯುವ ವಿವಿಧ ಕಾರ್ಯಕ್ರಮಗಳು ಪ್ರಭಾವಪೂರ್ಣವಾಗಿಯೂ,
ಸಾರ್ವಜನಿಕರಿಗೆ ಪ್ರಯೋಜನಕಾರಿಯಾಗಿಯೂ ಇರಬೇಕೆಂದು ಆಶಿಸಿ ಈ ಕಾರ್ಯವನ್ನು ಯಶಸ್ವಿಯಾಗಿ ನಡೆಸಲು
ರಾಜ್ಯಮಟ್ಟದ ಒಂದು ಸಮಿತಿಯನ್ನು ರಚಿಸಿದ್ದಾರೆ. ಈ ಸಮಿತಿಯಲ್ಲಿ ವಿವಿಧ ಜಿಲ್ಲೆಗಳಿಂದ ಆರಿಸಲ್ಪಟ್ಟ ವಿವಿಧ
ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ಒಳ್ಳೆಯ ಹೆಸರು ಗಳಿಸಿರುವ ಅನೇಕ ಗಣ್ಯರಿದ್ದಾರೆ. ನಾನು ಈ ಸಮಿತಿಯ ಗೌರವ
ಅಧ್ಯಕ್ಷನಾಗಿರುವುದು ನನ್ನ ಸೌಭಾಗ್ಯವೆಂದೇ ಭಾವಿಸಿದ್ದೇನೆ.

ಶ್ರೀ ಸಿದ್ಧಯ್ಯ ಪುರಾಣಿಕರ ಅಭಿಮಾನಿಗಳ ಅಪೇಕ್ಷೆಯಂತೆ ಶ್ರೀಯುತರಿಗೆ ಬೆಂಗಳೂರು ನಗರದಲ್ಲಿ ರಾಜ್ಯಮಟ್ಟದ
ಉನ್ನತ ಸನ್ಮಾನ ಸಮಾರಂಭವನ್ನು ಏರ್ಪಡಿಸಿರುವುದು, ಸಮಾರಂಭದ ಅಂಗವಾಗಿ ಅಭಿನಂದನ ಗ್ರಂಥ ಹಾಗೂ
ಸಂಸ್ಮರಣ ಸಂಚಿಕೆಯನ್ನು ಪ್ರಕಟಿಸಿರುವುದು, ಅವರ ಹೆಸರಿನಲ್ಲಿ ಒಂದು ಟ್ರಸ್ಟ್ ಸ್ಥಾಪಿಸಿ ಅದರ ಮೂಲಕ ಸಾಹಿತ್ಯ
ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದು ಸಮಿತಿಯ ಉದ್ದೇಶವಾಗಿದೆ. ಈ ಎಲ್ಲ

ಕಾರ್ಯಗಳು ಒಬ್ಬ ವ್ಯಕ್ತಿಯ ಹೆಸರಿನಲ್ಲಿ ನಡೆದರೂ, ಇದರ ಪ್ರಯೋಜನ ಸಾರ್ವಜನಿಕವಾಗಿ ಶಿಕ್ಷಣ ಹಾಗೂ ಸಾಹಿತ್ಯ
ಕ್ಷೇತ್ರದ ಚಟುವಟಿಕೆಗಳಿಗೆ ವಿಶೇಷ ಪ್ರೋತ್ಸಾಹದಾಯಕವಾಗಿರುತ್ತದೆ.

ಲಕ್ಷಾಂತರ ರೂಪಾಯಿ ವೆಚ್ಚ ತಗಲುವ ಈ ಯೋಜನೆಗಳು ಸಾರ್ವಜನಿಕರ ಸಹಾಯ ಸಹಕಾರಗಳಿಲ್ಲದಿದ್ದರೆ
ಯಶಸ್ವಿಯಾಗುವುದು ಕಷ್ಟ. ಅದನ್ನು ಮನಗಂಡು ಸಾರ್ವಜನಿಕರ ಸಹಾಯ ಪಡೆಯಲು 'ಡಾ. ಸಿದ್ಧಯ್ಯ
ಪುರಾಣಿಕ ಅಭಿನಂದನಾ ಸಮಿತಿ'ಯ ಹೆಸರಿನಲ್ಲಿ ಒಂದು ಮನವಿಯನ್ನು ಹೊರಡಿಸಲಾಯಿತು. ನಮ್ಮ ಪ್ರಾರ್ಥನೆಗೆ
ಮಹಾಜನರಿಂದ ಒಳ್ಳೆಯ ಪ್ರೋತ್ಸಾಹ ದೊರೆಯಿತು. ನಾಡಿನ ವಿವಿಧಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ
ಪುರಾಣಿಕರ ಅಭಿಮಾನಿಗಳು ಇದೊಂದು ಪುಣ್ಯಕಾರ್ಯವೆಂದು ಭಾವಿಸಿ ತಮ್ಮ ಶಕ್ತಿಮೀರಿ ಕಾಣಿಕೆ ಸಲ್ಲಿಸಿದ್ದಾರೆ.
ಸಮಿತಿಯ ಸದಸ್ಯರಲ್ಲಿ ಕೆಲವರು ಧನಸಂಗ್ರಹಣೆ ಕಾರ್ಯದಲ್ಲಿ ನೆರವಾಗಿದ್ದಾರೆ. ನಾಡಿನ ಕೆಲವು ಕನ್ನಡ
ಸಂಘ ಸಂಸ್ಥೆಗಳೂ, ಗುರುಮನೆಗಳೂ ಉದಾರವಾಗಿ ಹಣ ಕೊಟ್ಟಿವೆ. ಸಮಿತಿ ಪ್ರಕಟಿಸಿರುವ ಸಂಸ್ಮರಣ
ಸಂಚಿಕೆಗೆ ಅನೇಕ ಸಂಸ್ಥೆಗಳು ಜಾಹೀರಾತು ನೀಡಿ ಪ್ರೋತ್ಸಾಹ ನೀಡಿವೆ. ಈ ಎಲ್ಲ ಮಹನೀಯರ, ಸಂಘ ಸಂಸ್ಥೆಗಳ
ಉಪಕಾರವನ್ನು ಸಮಿತಿ ಎಂದೂ ಮರೆಯುವುದಿಲ್ಲ. ಇವರೆಲ್ಲರಿಗೂ ಸಮಿತಿ ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಅಭಿನಂದನ ಸಮಾರಂಭದ ಅಂಗವಾಗಿ ಸಂಭಾವನಾ ಗ್ರಂಥವನ್ನೂ, ಸಂಸ್ಮರಣ ಸಂಚಿಕೆಯನ್ನೂ ಪ್ರಕಟಿಸಬೇಕೆಂದಿರುವ
ವಿಷಯವನ್ನು ಕೆಲವು ವಿದ್ವಾಂಸರ ಸಂಗಡ ಪ್ರಸ್ತಾಪಿಸಿದಾಗ ಆ ಸಭೆಯಲ್ಲಿ ಉಪಸ್ಥಿತರಿದ್ದ ಕನ್ನಡ ನಾಡಿನ
ಹೆಸರಾದ ಕವಿಗಳೂ, ಉತ್ತಮ ವಿಮರ್ಶಕರೂ ಆದ ಡಾ. ಸಾ. ಶಿ. ಮರುಳಯ್ಯನವರು ನನ್ನ ಪ್ರಾರ್ಥನೆಯನ್ನು
ಮನ್ನಿಸಿ 'ಕಾವ್ಯಾನಂದ' ಅಭಿನಂದನ ಗ್ರಂಥದ ಪ್ರಧಾನ ಸಂಪಾದಕರಾಗಿರಲು ಮತ್ತು ಕನ್ನಡ ನಿಘಂಟು ಉಪ-
ಸಂಪಾದಕರೂ, ಸಾಹಿತಿಗಳೂ ಆದ ಶ್ರೀ ಟಿ. ಆರ್. ಮಹಾದೇವಯ್ಯನವರು 'ಸಹೃದಯ' ಸಂಸ್ಮರಣ ಸಂಚಿಕೆಯ
ಪ್ರಧಾನ ಸಂಪಾದಕರಾಗಿರಲು ಒಪ್ಪಿ ಮುಂದೆ ಬಂದುದು ಸಮಿತಿಯ ಹೊರೆಯನ್ನು ತುಂಬ ಹಗುರ ಮಾಡಿಕೊಟ್ಟಿತು.
ಈ ಇಬ್ಬರು ವಿದ್ವಾಂಸರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ತಮ್ಮ ಸಹಾಯಕ್ಕೆ ಸಂಪಾದಕ ಮಂಡಲಿಯನ್ನು
ರಚಿಸಿಕೊಂಡು ಎಲ್ಲರ ಸಹಕಾರದಿಂದ ಅಭಿನಂದನ ಗ್ರಂಥ ಮತ್ತು ಸಂಸ್ಮರಣ ಸಂಚಿಕೆಯನ್ನು ಬಹು ಅಚ್ಚುಕಟ್ಟಾಗಿ
ತಂದಿದ್ದಾರೆ. "ಕಾವ್ಯಾನಂದ" ಎಲ್ಲ ಕಾಲಕ್ಕೂ ಉಪಯುಕ್ತವಾದ ಕವಿ-ಕಾವ್ಯ ಮೀಮಾಂಸೆಗೆ ಮೀಸಲಾದ ಪ್ರಥಮ
ಸಂಭಾವನಾ ಗ್ರಂಥವಾಗಿದೆ. "ಸಹೃದಯ" ಡಾ. ಸಿದ್ಧಯ್ಯ ಪುರಾಣಿಕರ ನಾಡು-ನುಡಿಗಳ ಸೇವೆಯ ಸಂಸ್ಕೃತಿಯ
ಕುರುಹಾದ ಸಂಸ್ಮರಣ ಸಂಚಿಕೆ ಸಂಗ್ರಹಯೋಗ್ಯ ಕೃತಿಯಾಗಿದೆ. ಸಮಿತಿಯು ಈ ಇಬ್ಬರು ಹಿರಿಯ
ವಿದ್ವಾಂಸರುಗಳ ಉಪಕಾರವನ್ನು ಕೃತಜ್ಞತೆಯಿಂದ ಸ್ಮರಿಸುತ್ತದೆ.

ಈ ಪ್ರಕಟಣೆಗಳನ್ನು ಕೊಟ್ಟ ಅವಧಿಯಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಲೋಟಸ್ ಮುದ್ರಣಾಲಯದ ಮಾಲೀಕರಾದ
ಶ್ರೀ ಡಿ. ಎಸ್. ಪಾಟೀಲ್ ಅವರಿಗೂ, ರಕ್ಷಾಪತ್ರದ ನಕ್ಷೆಯನ್ನು ಬರೆದುಕೊಟ್ಟ ಶ್ರೀ ಕಮಲೇಶ್ ಅವರಿಗೂ ನಮ್ಮ
ವಂದನೆಗಳು ಸಲ್ಲುತ್ತವೆ.

ಸಮಿತಿಯ ಉದ್ದೇಶದಂತೆ ಅಭಿನಂದನ ಸಮಾರಂಭ ನಡೆಯುತ್ತದೆ; 'ಸಂಭಾವನಾ' ಗ್ರಂಥ, ಸಂಸ್ಮರಣ ಸಂಚಿಕೆಗಳೂ
ಪ್ರಕಟವಾಗುತ್ತವೆ. ಆದರೆ ಡಾ. ಸಿದ್ಧಯ್ಯ ಪುರಾಣಿಕರ ಹೆಸರಿನಲ್ಲಿ ಟ್ರಸ್ಟ್ ಸ್ಥಾಪಿಸಿ ಆ ಮೂಲಕ ಸಾಹಿತ್ಯ ಮತ್ತು
ಸಾಂಸ್ಕೃತಿಕ ವಿಷಯಗಳಿಗೆ ಪ್ರೋತ್ಸಾಹ ನೀಡುವ ಕಾರ್ಯ ಮಾತ್ರ ಉಳಿಯುತ್ತದೆ. ಈ ಜವಾಬ್ದಾರಿಯನ್ನು ನಿರ್ವಹಿಸಲು
ಮಹಾಜನತೆ ಎಂದಿನಂತೆ ಮುಂದೆಯೂ ಸಮಿತಿಯೊಡನೆ ಪೂರ್ಣ ಸಹಕಾರ ನೀಡಬೇಕಾಗಿ ಪ್ರಾರ್ಥಿಸುತ್ತೇನೆ.
ಡಾ. ಸಿದ್ಧಯ್ಯ ಪುರಾಣಿಕರದು ಈಗ ನಿವೃತ್ತ ಜೀವನ. ಆದರೂ ಅವರಿಗೆ ನಿವೃತ್ತಿ ಎಂಬುದೇ ಇಲ್ಲ. ಅವರು
ನಿವೃತ್ತರಾಗ ಕೂಡದೆಂಬುದೇ ಅವರ ಹೆಸರಿನಲ್ಲಿ ಸ್ಥಾಪಿಸುವ ಟ್ರಸ್ಟಿನ ಉದ್ದೇಶ. ಅವರಿಂದ ಕನ್ನಡ ನಾಡು-ನುಡಿಗಳಿಗೆ
ಹಾಗೂ ನಮ್ಮ ರಾಷ್ಟ್ರಕ್ಕೆ ಇನ್ನೂ ಬಹುಕಾಲ ನಿರಂತರ ಸೇವೆ ದೊರೆಯಲಿ ಎನ್ನುವುದೆ ಅವರ ಅಭಿಮಾನಿಗಳೆಲ್ಲರ
ಹಾರೈಕೆಯಾಗಿದೆ.

೨೧-೬-೧೯೮೧

**ದೇಶಹಳ್ಳಿ ಜಿ. ನಾರಾಯಣ**
ಅಧ್ಯಕ್ಷ

## ನಿವೇದನೆ :

ದಕ್ಷ ಹಾಗೂ ಪ್ರಾಮಾಣಿಕ ಆಡಳಿತಗಾರರಾಗಿ ನಾಡಸೇವೆಯನ್ನೂ, ಸಮರ್ಥ ಹಾಗೂ ಸತ್ವಪೂರ್ಣ ಬರಹಗಾರರಾಗಿ ನುಡಿಸೇವೆಯನ್ನು ಮಾಡಿ, ತಮ್ಮ ಹೃದಯವಂತಿಕೆಯಿಂದ ನಾಡಿನ ಮನೆ ಮಾತಾಗಿರುವ ಕನ್ನಡಮ್ಮನ ಸುಪುತ್ರ 'ಕಾವ್ಯಾನಂದ' ಡಾ. ಸಿದ್ಧಯ್ಯ ಪುರಾಣಿಕರಿಗೆ ರಾಜ್ಯಮಟ್ಟದ ಅಭಿನಂದನ ಸಮಿತಿಯು ಸನ್ಮಾನಿಸುತ್ತಿರುವ ಶುಭಾವಸರದ ಸವಿನೆನಪಿಗೆಂದು ಈ 'ಸಹೃದಯ' ಸಂಚಿಕೆ ರೂಪುಗೊಂಡಿದೆ.

ಕಾಯಕಶ್ರದ್ಧೆ ಮತ್ತು ಕಾವ್ಯಯೋಗಗಳೆರಡನ್ನೂ ಸಮವಾಗಿ ಮೈಗೂಡಿಸಿಗೊಂಡ ಡಾ. ಪುರಾಣಿಕರದು ವೈವಿಧ್ಯವೂ, ವೈಶಿಷ್ಟ್ಯವೂ ಆದ ಬದುಕು. ತಹಸೀಲ್ದಾರ ಹುದ್ದೆಯಿಂದ ಆರಂಭವಾದ ಅವರ ಔದ್ಯೋಗಿಕ ಜೀವನ ಕಮೀಷನರಂಥ ಅತ್ಯುಚ್ಚ ಅಧಿಕಾರದವರೆಗೆ ಸಾಗಿ ಬಂದಿದೆ. ಅವರು ಕೆಲಸ ಮಾಡಿದ ಇಲಾಖೆಗಳು, ನಿರ್ವಹಿಸಿದ ಅಧಿಕಾರ ಸ್ಥಾನಗಳು ಎಷ್ಟು ? ತಾವು ವಹಿಸಿಕೊಂಡ ಅಧಿಕಾರಕ್ಕೇ ಕೀರ್ತಿ ಬರುವಂತೆ ಅವರು ದುಡಿದಿದ್ದಾರೆ. ಅವರ ಸಾಹಿತ್ಯಸೇವೆಯೂ ಕೂಡ ಬಹುಮುಖವಾದುದು. ಪದ್ಯ, ನಾಟಕ, ಜೀವನಚರಿತ್ರೆ, ವ್ಯಕ್ತಿಚಿತ್ರ, ಕಾದಂಬರಿ, ಸಣ್ಣಕತೆ, ವಚನ ಹಾಗೂ ಹಾಡುಗಳು, ಕೃತಿ ಸಂಪಾದನೆ ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿ ಬೆಲೆಯುಳ್ಳ ಕೃತಿಗಳಿಂದ ನುಡಿದೇವಿಯ ಮಡಿಲ ತುಂಬಿದ್ದಾರೆ.

ಇಂಥ ಅಮೂಲ್ಯ ಸೇವೆಯನ್ನು ಪರಿಗಣಿಸಿಯೇ ನಾಡಿನ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟು ಪ್ರಶಸ್ತಿ ನೀಡಿದ್ದು ; ರಾಜ್ಯ ಸಾಹಿತ್ಯ ಅಕಾಡಮಿ ಪುರಸ್ಕರಿಸಿದ್ದು. ಈಚೆಗಂತೂ ಅವರಿಗೆ ಅಖಿಲ ಭಾರತ ಮಟ್ಟದ ಮನ್ನಣೆ ಸಂದಾಯವಾಯಿತು. ಕಲ್ಕತ್ತದಲ್ಲಿರುವ ಭಾರತೀಯ ಭಾಷಾ ಪರಿಷತ್ತು ಸೃಷ್ಟ್ಯಾತ್ಮಕ ಕೃತಿಗಳಿಗೆ ನೀಡುವ ಪುರಸ್ಕಾರ (ಹನ್ನೊಂದು ಸಹಸ್ರ ರೂ.ಗಳ ನಗದು ಬಹುಮಾನ) 1977–78 ರಲ್ಲಿ ಪ್ರಕಟವಾದ ಕನ್ನಡಗ್ರಂಥಗಳಲ್ಲಿ ಶ್ರೇಷ್ಠವೆಂದು ಪರಿಗಣಿತವಾದ ಅವರ 'ವಚನೋದ್ಯಾನ'ಕ್ಕೆ ದೊರೆಯಿತು. ಸರಿ, ಆರಂಭವಾದವು ಸನ್ಮಾನಗಳ ಸುರಿಮಳೆ. ನಾಡಿನಾದ್ಯಂತ ಸಂಘ–ಸಂಸ್ಥೆಗಳು, ಕಾರ್ಖಾನೆ–ಕಚೇರಿಗಳು, ನಗರಸಭೆ–ನಾಗರಕರು, ಗ್ರಾಮಪಂಚಾಯತಿ–ಗ್ರಾಮೀಣರು ಉತ್ಸಾಹದಿಂದ ಅವರನ್ನು ಸನ್ಮಾನಿಸಿ ಗೌರವಿಸಿದರು. ಅವರಿಗೆ ಈ ಅಖಿಲ ಭಾರತ ಮನ್ನಣೆ ಸಿಕ್ಕುವ ಮುಂಚೆಯೇ ಆರಂಭವಾಗಿದ್ದ ಅಭಿನಂದಸ ಸಮಿತಿಯು ತನ್ನ ಸಮಾರಂಭವನ್ನು ಮುಂದಕ್ಕೆ ಹಾಕುವಷ್ಟು ನಿರಂತರವಾಗಿ ಇವು ನಡೆದವು. ರಾಜಧಾನಿಯಲ್ಲೇ ಐದಾರು ಸಮಾರಂಭಗಳು ನಡೆದವು. ಇವೆಲ್ಲವಕ್ಕೂ ಕಿರೀಟಪ್ರಾಯವಾಗಿ ಈ ಸಮಾರಂಭ ನಡೆಯುತ್ತಿದೆ.

ಡಾ. ಪುರಾಣಿಕರು ನಮ್ಮ ನಾಡಿನ ಮಹಾಮೇಧಾವಿ, ಬಹುಭಾಷಾಪಂಡಿತ, ಉತ್ತಮ ಸಾಹಿತಿ, ನಿಜ. ಇದೆಲ್ಲಕ್ಕಿಂತ ನನಗೆ ಮಿಗಿಲಾಗಿ ಕಂಡದ್ದು ಅವರ ಮಾನವೀಯ ಗುಣ. ಎತ್ತರದ ನಿಲವಿನ ಅಜಾನುಬಾಹುವಾದ ಪುರಾಣಿಕರ ಆಕಾರ ಭಯ ಹುಟ್ಟಿಸುವಂಥದು. ಆದರೆ ಅವರ ಹಸುಮಗುವಿನಂಥ ಮುಖ, ಮುಗ್ಧವೂ ಸ್ನಿಗ್ಧವೂ ಆದ ಮಂದಹಾಸ, ಸರಸ–ಸಜ್ಜನಿಕೆ; ಅಕೃತಕವಾದ ನಡೆ–ನುಡಿ, ಹೃದಯವಂತಿಕೆಗಳು ಸಂದರ್ಶಕರನ್ನು ಮುಗ್ಧಗೊಳಿಸುತ್ತವೆ. ಇದೇ ಅವರ ವ್ಯಕ್ತಿತ್ವದ ಲೋಹಚುಂಬಕ ಶಕ್ತಿ. ಅವರ ಬಂಗಾರದ ಬದುಕಿಗೆ ಪರಿಮಳಗೂಡಿಸಿದ್ದು ಇದೇ !

ಶರಣರ ಬದುಕು, ಸಾಧನೆ, ಸಿದ್ಧಿಗಳನ್ನು ಚಿಕ್ಕಂದಿನಿಂದಲೇ ಅರ್ಥಮಾಡಿಕೊಂಡು ಅರಗಿಸಿಕೊಂಡ ಸಂಸ್ಕಾರವೋ ಏನೋ ಬೆಳೆಯುತ್ತಾ ಬಂದಂತೆ ಅವರು ಆಕಾಶದಲ್ಲಿ ತಲೆ ಎತ್ತಿ ಬೀಗುವ ತೆಂಗಾಗಲಿಲ್ಲ ; ಭೂಮಿತಾಯಿಗೆ ತಲೆಬಾಗಿ ನಮಿಸುವ ಬಾಳೆಯಾದರು. ಅವರ ಮೇಲೆ 'ಮುಗಿದ ಕೈಯ್ಯ, ಬಾಗಿದ ತಲೆಯ ಬಸವಣ್ಣ'ನ ಪ್ರಭಾವ ಗಾಢ. ಅಂತೆಯೇ ಅವರು ಮಾನವತೆಯ ಮೇಲೆ ಮಂದಾರವಾಗಿ ಅರಳಿದರು. ಕೆಲವರಿಗೆ ನೌಕರಿಯಿದ ನಿವೃತ್ತಿಯೆಂದರೆ ಮೂಲೆಗುಂಪಾಗುವುದೆಂದೇ ಅರ್ಥ. ಡಾ. ಪುರಾಣಿಕರದು ಹಾಗಲ್ಲ. 'ಆಗ ಒಂದೇ ಕೆಲಸ ; ಈಗ ಹತ್ತು ಕೆಲಸ' ಎಂಬಂತಾಗಿವೆ. ಈ ವಯಸ್ಸಿನಲ್ಲೂ ದಣಿವರಿಯದೆ ದುಡಿಯುವ ಅವರ ಕಾಯಕನಿಷ್ಠೆ ಅನನ್ಯ. ಅವರ ಸಮನ್ವಯ ದೃಷ್ಟಿಗೆ, ಹೃದಯ ವೈಶಾಲ್ಯಕ್ಕೆ ಒಂದು ಉದಾಹರಣೆ : 'ನಿಮಗೆ ನವೋದಯ ಕಾವ್ಯ ಪ್ರಿಯವೋ, ನವ್ಯವೋ ?' ಎಂಬ ಪ್ರಶ್ನೆಗೆ ಅವರು ಕೊಟ್ಟ ಉತ್ತರ : 'ಹೊಟ್ಟೆಯೊಳಗಣ ಒಂದೊಂದು ಕರುಳೂ ಒಂದೊಂದು ಹಣ್ಣಿಗಾಗಿ ಹಸಿದಿರುತ್ತವೆಯಂತೆ. ಹಾಗೆಯೇ ನನ್ನ ಕಾವ್ಯಪ್ರೇಮದ ಕರುಳುಗಳಲ್ಲಿ ಒಂದೊಂದೂ ಒಂದೊಂದು ತರದ ಕವಿತೆಗಾಗಿ ಹಸಿದಿರುತ್ತವೆ. ಹೀಗಾಗಿ

ಎಲ್ಲಾ ಬಗೆಯ ಕವಿತೆಗಳ ಸೊಬಗನ್ನು ಸವಿದಿದ್ದೇನೆ. ಯಾವುದೊಂದಕ್ಕೂ ಜೋತುಬಿದ್ದಿಲ್ಲ. ಸೇವಾಜೀವನದಲ್ಲಿದ್ದಾಗ ಸಾಧ್ಯವಾಗದಿದ್ದ ಅಧ್ಯಯನವನ್ನು ನಿವೃತ್ತನಾದ ಮೇಲಿನಿಂದ ಆರಂಭಿಸಿದ್ದೇನೆ. ತತ್ಫಲವಾಗಿ ಇನ್ನೂ ವಿವಿಧ ಕಾವ್ಯಗಳ ಆಸ್ವಾದನೆ ಸಾಧ್ಯವೆಂದುಕೊಂಡಿದ್ದೇನೆ'.

ಡಾ. ಪುರಾಣಿಕರ ಸಾಹಿತ್ಯಬಂಧುಗಳು, ಸಹೋದ್ಯೋಗಿಗಳು, ಅಭಿಮಾನಿಗಳು ಅವರ ಭವ್ಯವ್ಯಕ್ತಿತ್ವವನ್ನು ಶಬ್ದಾರ್ಥಕಲೆಯಲ್ಲಿ ಕಡೆದು ನಿಲ್ಲಿಸಲು ಸಹಕರಿಸಿದ್ದಾರೆ. ಹೀಗಾಗಿ ಇಲ್ಲಿ ನಾಡವರಿಗೆ ವಿವಿಧ ಅನುಭವಗಳ ರಸಾಯನ ವನ್ನು ಉಣಬಡಿಸಲು ಸಾಧ್ಯವಾಯಿತು. ಅವರ ವ್ಯಕ್ತಿತ್ವದ ಎಲ್ಲ ಮುಖಗಳ ಪೂರ್ಣಚಿತ್ರವನ್ನು ನೀಡುವಲ್ಲಿ ಸಫಲ ರಾಗಿದ್ದೇವೆಂದು ಹೇಳಲಾರೆ. ಏಕೆಂದರೆ ಕೆಲವು ಸಲ ಅವರು ಮಾತಿಗೆ ನಿಲುಕದ ಮಹೋನ್ನತರಾಗಿ ನಿಲ್ಲುತ್ತಾರೆ! ಅಭಿನಂದನ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರು ನನ್ನನ್ನು ಈ ಕೆಲಸಕ್ಕೆ ನಿಯೋಜಿಸಿದಾಗ ನನಗೆ ದಿಗಿಲು ಉಂಟಾಗಲು ಇದೇ ಕಾರಣ. ವೈವಿಧ್ಯಮಯವಾದ ಅವರ ಸಾರ್ಥಕಜೀವನದ ಉದಾತ್ತ ಚರಿತೆಯನ್ನು ಪರಿಚಯಿಸಿ, ಅವರ ಭವ್ಯ ವ್ಯಕ್ತಿತ್ವದ ರನ್ನಗನ್ನಡಿಯಾಗ ಬಲ್ಲ ಸವಿನೆನಪಿನ ಸಂಪುಟವನ್ನು ರೂಪಿಸುವುದು ಸುಲಭಸಾಧ್ಯವಾದ ಕೆಲಸವೆನಿಸಲಿಲ್ಲ. ಡಾ. ಪುರಾಣಿಕರ ಬಗ್ಗೆ ನನಗಿರುವ ಗೌರವ–ಅಭಿಮಾನಗಳು ಒಂದು ಕಡೆ, ಶ್ರೀ ಜಿ. ನಾರಾಯಣ ಅವರು ಹಮ್ಮಿಕೊಂಡ ಕೆಲಸದಲ್ಲಿ ಭಾಗಿಯಾಗುವುದು ಆತ್ಮಸಂತೋಷಕ್ಕೆ ಕಾರಣವೆಂಬ ಭಾವನೆ ಇನ್ನೊಂದು ಕಡೆ ನನ್ನನ್ನು ಈ ಕೆಲಸಕ್ಕೆ ತೊಡಗಿಸಿದವು.

ಈ ನೆನಪಿನ ಸಂಚಿಕೆಯ ಹೆಸರು 'ಸಹೃದಯ'. ಭಾರತೀಯ ಕಾವ್ಯಮೀಮಾಂಸೆಯಲ್ಲಿ ವಿಶಿಷ್ಟಸ್ಥಾನವನ್ನು ದೊರಕಿಸಿಕೊಂಡಿರುವ ಈ ಪದದ ಹಿಂದೆ ಒಂದು ಇತಿಹಾಸವೇ ಇದೆ. 'ಅಂತಃಕರಣದಿಂದ ಕೂಡಿದವನು, ಗುಣಗ್ರಾಹಿ, ಸದಭಿರುಚಿಯುಳ್ಳವನು, ಸಹಾನುಭೂತಿಯುಳ್ಳವನು' ಎಂಬ ಸಾಮಾನ್ಯಾರ್ಥವೂ, 'ಸಮಾನಹೃದಯವುಳ್ಳವನು, ಒಳ್ಳೆಯ ಹೃದಯವಂತಿಕೆಯಿರುವವನು' ಎಂಬ ವಿಶೇಷಾರ್ಥವುಳ್ಳ ಈ ಪದವನ್ನು 'ಕಾವ್ಯಾನಂದ'ರ ಪರ್ಯಾಯ ನಾಮವಾಗಿ ಬಳಸ ಬಹುದೇನೋ! ಸೇವಾಕ್ಷೇತ್ರದಲ್ಲಿ ಬೇರೆ ಬೇರೆ ಇಲಾಖೆ, ವಿವಿಧ ಹುದ್ದೆಗಳಲ್ಲಿ ಸಾರ್ವಜನಿಕ ಸೇವೆ ಮಾಡುವಾಗ ಅವರು ಜನರ ಕಷ್ಟಸುಖಗಳನ್ನು ಅಂತಃಕರಣದಿಂದ ಅರಿತು, ಅವರ ಅಗತ್ಯಗಳನ್ನು ಪೂರೈಸಲು ನೆರವಾದರು ; ಉಜ್ವಲ ದೇಶಭಕ್ತ ರಾಗಿ ನಾಡಗುಡಿಯನ್ನು ಕಟ್ಟಲು ಶ್ರಮಿಸಿದರು. ಸಾಹಿತ್ಯಕ್ಷೇತ್ರದಲ್ಲಿ ಜ್ಞಾನಪಿಪಾಸುವಾಗಿ ಸಹೃದಯತೆಯಿಂದ ಹಿಂದಿನ ಕಾವ್ಯಗಳನ್ನೆಲ್ಲಾ ಓದಿ ಮೈಗೂಡಿಸಿಕೊಂಡರು. ಆ ಹೃದಯವಂತಿಕೆಯಿಂದಲೇ ತಾವು ಸಾಹಿತ್ಯಕೃಷಿಗೆ ತೊಡಗಿ ಉತ್ತಮ ಫಸಲನ್ನು ನೀಡಿದರು. ಈ ಎರಡು ಮುಖದ ಅವರ ಬದುಕಿನಲ್ಲಿ ಅವರ ಸಹೃದಯತೆಯದೇ ಮೇಲುಗೈ. ಅಂತೆಯೇ ಅವರ ಅಭಿನಂದನ ಸಮಾರಂಭದ ಸವಿನೆನಪಿನ ಈ ಸಂಪುಟಕ್ಕೆ ಆ ಸಾರ್ಥಕ ಹೆಸರು.

ನಾಡಿನ ಹಿರಿ–ಕಿರಿಯ ಲೇಖಕರು, ಪುರಾಣಿಕರ ಸಹೋದ್ಯೋಗಿಗಳು, ಅಭಿಮಾನಿಗಳು ನಮ್ಮ ಕೋರಿಕೆಯನ್ನು ಮನ್ನಿಸಿ ತಮ್ಮ ಅನಿಸಿಕೆ–ಅನುಭವಗಳನ್ನು ಬರೆದು ಕಳಿಸಿಕೊಟ್ಟು ನೆನಪಿನ ಸಂಚಿಕೆ ಅಚ್ಚಹಸುರಾಗುಳಿಯುವಂತೆ ಮಾಡಿ ದ್ದಾರೆ. ಅವರಿಗೆಲ್ಲಾ ನಮ್ಮ ಕೃತಜ್ಞತೆಗಳು. ಜಾಹೀರಾತುಗಳನ್ನು ನೀಡುವುದರ ಮೂಲಕ ನಮಗೆ ಪ್ರೋತ್ಸಾಹ ನೀಡಿದ ಕರ್ನಾಟಕ ಸರ್ಕಾರ, ಖಾಸಗೀಸಂಸ್ಥೆಗಳು, ವಿವಿಧ ವಾಣಿಜ್ಯಸಂಸ್ಥೆಗಳವರಿಗೆ ನಮ್ಮ ಧನ್ಯವಾದಗಳು. ಸಂಚಿಕೆಯ ಸಂಪಾದನಾ ಕಾರ್ಯ ನನಗೆ ಹೆಚ್ಚು ಹೊರೆಯಾಗದಂತೆ ನೋಡಿಕೊಂಡು ಈ ಕೆಲಸವನ್ನು ಆಗುಮಾಡಿಸಿದ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರಿಗೆ ನಾನು ಋಣಿಯಾಗಿದ್ದೇನೆ. ಇದನ್ನು ಸರ್ವಾಂಗ ಸುಂದರ ವಾಗಿ ಸಕಾಲದಲ್ಲಿ ಅಚ್ಚುಮಾಡಿಕೊಟ್ಟವರು ಮುದ್ರಣಕಲೆಗೆ ಹೆಸರಾಗಿರುವ ಲೋಟಸ್ ಪ್ರಿಂಟರ್ಸ್ ಅವರು. ಅವರಿಗೂ ನಮ್ಮ ಧನ್ಯವಾದಗಳು. ಸಹೃದಯ ಡಾ. ಪುರಾಣಿಕರು ನೂರ್ಕಾಲ ಬಾಳಿ, ನಾಡಿನ ಮತ್ತು ನುಡಿಯ ಸೇವೆಯನ್ನು ಮುಂದುವರಿಸಲಿ ಎಂಬ ಹರಕೆಯೊಡನೆ ಇದನ್ನು ತಮ್ಮ ಕೈಯಲ್ಲಿರಿಸುತ್ತಿದ್ದೇವೆ.

**ಟಿ. ಆರ್. ಮಹಾದೇವಯ್ಯ**
ಸಂಪಾದಕ

# ಪರಿವಿಡಿ


ಪುಟ

**ಅಭಿನಂದನ ಸಮಿತಿಯ ಪರವಾಗಿ**/ಸಮಿತಿಯ ಅಧ್ಯಕ್ಷ ಶ್ರೀ ಜಿ. ನಾರಾಯಣ v

**ನಿವೇದನೆ**/ಸಂಪಾದಕ ಶ್ರೀ ಟಿ. ಆರ್. ಮಹಾದೇವಯ್ಯ vii

**ಅನಿಸಿಕೆ :** ಸಾಹಿತ್ಯ ಬಂಧುಗಳಿಂದ ೩

೧. ಮಾಸ್ತಿ ವೆಂಕಟೇಶ ಅಯ್ಯಂಗಾರ್, 49, ಗವಿಪುರಂ ಬಡಾವಣೆ, ಬೆಂ-9 ೪

೨. ವಿ. ಕೃ. ಗೋಕಾಕ್, 525, ಮಿರಾ ಕಾಟೇಜು, ರಾಜಮಹಲ್ ವಿಲಾಸ ಬಡಾವಣೆ, ಬೆಂ-6 ೫

೩. ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್, 400, ಒಂದನೇ ಬ್ಲಾಕು, ರಾಜಾಜಿನಗರ, ಬೆಂ-10 ೭

೪. ಡಾ. ರಂ. ಶ್ರೀ. ಮುಗಳಿ, ಕಮಲಾಲಯ, 95ಬಿ, ಒಂದನೆ ಬ್ಲಾಕು, ರಾಜಾಜಿನಗರ, ಬೆಂ-10 ೮

೫. ಶಂ. ಬಾ. ಜೋಶಿ, ಸಾಧನಕೇರಿ, ಧಾರವಾಡ ೯

೬. ಪ್ರೊ. ಸ. ಸ. ಮಾಳವಾಡ, ಪ್ರಶಾಂತ, ಕಲ್ಯಾಣನಗರ, ಧಾರವಾಡ-7 ೧೩

೭. ಹಂಪ. ನಾಗರಾಜಯ್ಯ, ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತು, ಬೆಂ-18 ೧೪

೮. ಪ್ರೊ. ಬಿ. ಹೆಚ್. ಶ್ರೀಧರ, ವಿಶ್ರಾಂತ ಪ್ರಾಚಾರ್ಯ, ನವಾಜ ಗುಡ್ಡ, ಸಿರ್ಸಿ, ಉತ್ತರ ಕನ್ನಡ ೧೮

೯. ಡಾ. ಕೆ. ಎಂ. ಕೃಷ್ಣರಾವ್, ಕನ್ನಡ ಪ್ರಾಧ್ಯಾಪಕ, ಉಸ್ಮಾನಿಯ ವಿಶ್ವವಿದ್ಯಾಲಯ, ಹೈದರಾಬಾದು-7 ೨೦

೧೦. ಕೊರಟಿ ಶ್ರೀನಿವಾಸರಾವ್, ಆನಂದ ನಿಲಯ, ಸಮೀರಪುರಂ ಬಡಾವಣೆ, ಚಾಮರಾಜಪೇಟೆ, ಬೆಂ-18 ೨೨

೧೧. ಪ್ರೊ. ಜಿ. ವೆಂಕಟಸುಬ್ಬಯ್ಯ, ಅಧ್ಯಕ್ಷ, ಕನ್ನಡ ನಿಘಂಟು ಸಂಪಾದಕ ಸಮಿತಿ, ಬೆಂ-18 ೨೪

೧೨. ಕೃಷ್ಣಮೂರ್ತಿ ಪುರಾಣಿಕ, 'ಆಶೀರ್ವಾದ', ಸಾಹಿತ್ಯ ಸೇವಾಸದನ, ಗೋಕಾಕ ೨೭

೧೩. ಇಟಗಿ ರಾಘವೇಂದ್ರ, ಕೇಂದ್ರ ನಿರ್ದೇಶಕ, ಆಕಾಶವಾಣಿ, ಪಣಜಿ, ಗೋವಾ ೨೮

೧೪. ಎನ್. ಬಸವಾರಾಧ್ಯ, ಉಪ ನಿರ್ದೇಶಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-7 ೨೯

೧೫. ಎಸ್. ಎಸ್. ಭೂಸರೆಡ್ಡಿ, ಕಿಲ್ಲೆ, ಧಾರವಾಡ ೩೩

೧೬. ಶಂ. ಗು. ಬಿರಾದಾರ, ಅಧ್ಯಕ್ಷರು, ಜಿಲ್ಲಾ ಸಾಹಿತ್ಯ ಪರಿಷತ್ತು, ವಿಜಾಪುರ ೩೬

೧೭. ಮೃತ್ಯುಂಜಯ ಶಾಸ್ತ್ರೀಮಠ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೪೨

೧೮. ಎ. ಪಂಕಜ. ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂ-8

**ಮನೆಯವರ ಅನುಭವ:** ೪೭

೧೯. ವಿಜಯಾ ನಂದೀಶ್ವರ, ಒಂದನೇ ಬ್ಲಾಕು, ರಾಜಾಜಿನಗರ, ಬೆಂ-10

**ಅನುಭವ ಸಹೋದ್ಯೋಗಿಗಳಿಂದ** ೫೩

೨೦. ಬ. ದಾ. ಜತ್ತಿ, ಅಧ್ಯಕ್ಷ, ಬಸವ ಸಮಿತಿ, ಬಸವೇಶ್ವರ ಸರ್ಕಲ್, ಬೆಂ-1 ೫೫

೨೧. ಬಿ. ಎ. ಸನದಿ, ಕಾರ್ಯಕ್ರಮ ನಿಯೋಜಕ, ಆಕಾಶವಾಣಿ, ಬೊಂಬಾಯಿ-20

೨೨. ಎನ್. ಎಸ್. ಭರತ್, ನಿವೃತ್ತ ಅರ್ಥಶಾಖೆಯ ವಿಶೇಷ ಕಾರ್ಯದರ್ಶಿ, ರಾಮಕೃಷ್ಣ ವಿದ್ಯಾರ್ಥಿ ಮಂದಿರ, ಗವಿಪುರಂ. ಬೆಂ-19 ೫೮

೨೩. ಜಯತೀರ್ಥ ರಾಜಪುರೋಹಿತ, 70ಬಿ ಐವಾನ್ ಶಾಹಿ ರಸ್ತೆ, ಕಲ್ಬುರ್ಗಿ ೬೦

ಪುಟ

೨೪. ಹಮೀದ ಅಲ್ಮಾಸ್, 1355 ಬಿ, 9ನೇ ಬ್ಲಾಕು, ಜಯನಗರ ಪೂರ್ವ, ಬೆಂ-69 ೬೨
೨೫. ಎಸ್. ಎಂ. ಶಂಕರಗೌಡ, ನಿವೃತ್ತ ಡೆಪ್ಯುಟಿ ಲೇಬರ್ ಕಮೀಷನರ್, ಕ್ಯೂ 42, 2ನೇ ಅಡ್ಡರಸ್ತೆ, ನೆಹ್ರೂನಗರ, ಬೆಂ 20 ೬೬
೨೬. ಎಚ್. ಆರ್. ದಾಸೇಗೌಡ, ನಿರ್ದೇಶಕ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂ-56 ೭೬
೨೭. ಡಿ. ಜೆ. ಪದ್ಮನಾಭ, ಅಧ್ಯಕ್ಷ, ಕೊಡಗು ಜಿಲ್ಲಾ ಸಾಹಿತ್ಯ ಪರಿಷತ್ತು, ವಿರಾಜಪೇಟೆ, ಕೊಡಗು ೭೩


**ಕವನಮಾಲೆ**

೨೮. ಷಡಕ್ಷರಿ ಮಂತ್ರ / ಹೆಚ್. ಚಂದ್ರಶೇಖರ, 709, ಹಿಮ್ಮನೆ, 3ನೇ ಬ್ಲಾಕು, ರಾಜಾಜಿನಗರ, ಬೆಂ-10 ೭೭
೨೯. ಕಾವ್ಯಾನಂದರಿಗೆ ಕಿರುಕಾಣಿಕೆ / ಬಿ. ಪುಟ್ಟಸ್ವಾಮಯ್ಯ, ಒಂದನೇ ಕ್ರಾಸ್, ಶ್ರೀರಾಮಪುರ, ಬೆಂ-21 ೭೭
೩೦. ಸಿದ್ಧಯ್ಯಾರ್ಯಗೆ ಶುಭಾಶಯ / ಟಿ. ಎನ್. ಮಲ್ಲಪ್ಪ, ಲಲಿತ ಪ್ರಭ, ಮಾಧವನಗರ, ಬೆಂ. ೭೮
೩೧. ಮಾನೋನ್ನತ ಕವಿ ಕಾವ್ಯಾನಂದ / ಪಂ. ಕೆ. ಪಿ. ಶಿವಲಿಂಗಯ್ಯ, ೭೮
ಕನ್ನಡ ಅಧ್ಯಾಪಕ, ಗೌ. ಜೂನಿಯರ್ ಕಾಲೇಜು, ಉಪ್ಪಿನಂಗಡಿ, ದ.ಕ.
೩೨. ಬೆಲೆಯುಳ್ಳ ಮಾಣಿಕ / ನ. ಮ. ಕೊ. ಸೋಗಿ, 376-45, 6ನೇ ಕ್ರಾಸು, ವಿಲ್ಸನ್ ಗಾರ್ಡನ್, ಬೆಂ 27 ೭೯
೩೩. ನಿನಗಿದೋ ನಮನ / 'ಸತ್ಯಶೀಲ', 145, 5ನೇ ಕ್ರಾಸು, 2ನೇ ವಿಭಾಗ, ಜಯನಗರ, ಬೆಂ-11 ೭೯


**ಕೃತಿ ಪರಿಚಯ**

೩೪. ಮಾನಸ ಸರೋವರ / ವೊರಬದ ಮಲ್ಲಿಕಾರ್ಜುನ, ಉಪ ಸಂಪಾದಕ, ಬಸವ ಪಥ, ಬೆಂ-1 ೮೩
೩೫. ಶರಣ ಚರಿತಾಮೃತ / ನಾ. ಮ. ಬಸವರಾಜ, ನಾಗರಹಾಳು, ಸಿರುಗುಪ್ಪ ತಾಲ್ಲೋಕು, ಬಳ್ಳಾರಿ ಜಿಲ್ಲಾ ೮೮
೩೬. ತುಷಾರಹಾರ / ಬಿ. ಎಸ್. ಸ್ವಾಮಿ, ಆಕಾಶವಾಣಿ, ಬೆಂ-1 ೯೦
೩೭. ಗಿಲ್ ಗಿಲ್ ಗಿಲಗಚ್ಚಿ / ಎ. ಕೆ. ರಾಮೇಶ್ವರ, ಸಹ ಸಂಪಾದಕ, ಜೀವನವಿಕಾಸ, ಗುಲ್ಬರ್ಗ ೯೪
೩೮. ವಚನೋದ್ಯಾನವನ್ನು ಕುರಿತು / ಡಾ. ಎಂ. ಚಿದಾನಂದ ಮೂರ್ತಿ, ೧೦೦
ಕನ್ನಡ ಪ್ರಾಧ್ಯಾಪಕ, ಜ್ಞಾನಗಂಗೋತ್ರಿ, ಬೆಂಗಳೂರು ವಿಶ್ವವಿದ್ಯಾಲಯ
೩೯. ಪುರಾಣಿಕರ ಕೃತಿಗಳಲ್ಲಿ ಜಾನಪದ ಅಂಶಗಳು / ಜಿ. ಆರ್. ತಿಪ್ಪೇಸ್ವಾಮಿ, ೧೦೨
ಕನ್ನಡ ಜಾನಪದ ಕೋಶ, ಕನ್ನಡ ಸಾಹಿತ್ಯ ಪರಿಷತ್ತು, ಬೆಂ-18
೪೦. ವಚನೋದ್ಯಾನ–ಆದರ ನೆಲೆ ಬೆಲೆಗಳು / ಟಿ. ಕೇಶವಭಟ್ಟ, ೧೦೪
754, ಶ್ರೀವರ್ಧನ, 15ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂ-70
೪೧. ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯಸಂತಾನ ೧೧೧
೪೨. ಡಾ. ಸಿದ್ಧಯ್ಯ ಪುರಾಣಿಕರ ಜೀವನದ ಪ್ರಮುಖ ಘಟನೆಗಳು ೧೧೨



ತಂದೆ ಶ್ರೀ ಕಲ್ಲಿನಾಥ ಶಾಸ್ತ್ರಿಗಳು



ತಾಯಿ ಶ್ರೀಮತಿ ದಾನಮ್ಮನವರು




'ಸಿದ್ಧಯ್ಯ ಪುರಾಣಿಕ ದಂಪತಿ




ಮಡದಿ, ಮಕ್ಕಳು, ಮೊಮ್ಮಕ್ಕಳು ಹಾಗೂ ಅಳಿಯಂದಿರೊಂದಿಗೆ




ಕೊಡಗಿನುಡುಗೆಯಲ್ಲಿ ಪುರಾಣಿಕ ದಂಪತಿ




ರಾಷ್ಟ್ರಕವಿ ಕುವೆಂಪು ಜೊತೆಯಲ್ಲಿ



ಜವಾಹರಲಾಲ್‌ನೆಹರೂ ಅವರೊಡನೆ



ಬಿಜಾಪುರದ ಬರೆಹಗಾರರ ಬಳಗದಲ್ಲಿ



ಗಡಿನಾಡ ಗಾಂಧಿ ಅವರೊಡನೆ




ಭಾರತೀಯ ಭಾಷಾ ಪರಿಷತ್ತು ತಮ್ಮ 'ವಚನೋದ್ಯಾನ'ಕ್ಕೆ ನೀಡಿದ ಭಿಲ್ವಾರ ಪ್ರಶಸ್ತಿ
ಯನ್ನು ಸ್ವೀಕರಿಸುತ್ತಿರುವುದು. (೨೬-೧೨-೧೯೮೦)




ಪ್ರಶಸ್ತಿಗೆ ಕೃತಜ್ಞತೆ

भारतीय भाषा परिषद

कलकत्ता

**भारतीय भाषा परिषद**

द्वारा

**एच. ई. जी. पुरस्कार-१९८०**

**१९७७-७८ में प्रकाशित कन्नड़ की**

**श्रेष्ठ साहित्यिक कृति**

**'वचनोद्यान'**

पर


**श्री सिद्धैया पुराणिक**

को

सादर प्रदत्त।

२६, दिसम्बर, १९८०

ಭಿಲ್ವಾರ ಪ್ರಶಸ್ತಿ ಪತ್ರ



ಅಭಿನಂದನ ಸಮಿತಿ ಅಧ್ಯಕ್ಷ ಜಿ. ನಾರಾಯಣ. 'ಕಾವ್ಯಾನಂದ' ಸಂಪಾದಕ ಡಾ. ಸಾ. ಶಿ. ಮರುಳಯ್ಯ ಹಾಗೂ
'ಸಹೃದಯ' ಸಂಪಾದಕ ಟಿ. ಆರ್. ಮಹಾದೇವಯ್ಯ ಅವರೊಡನೆ

ಡಾ. ಸಿದ್ಧಯ್ಯ ಪುರಾಣಿಕರ ಬಗ್ಗೆ

# ಅನಿಸಿಕೆ:

ಸಾಹಿತ್ಯ ಬಂಧುಗಳಿಂದ

## ಶ್ರೀ ಸಿದ್ಧಯ್ಯ ಪುರಾಣಿಕರು

● **ಮಾಸ್ತಿ ವೆಂಕಟೇಶ ಅಯ್ಯಂಗಾರ್**

ಶ್ರೀ ಸಿದ್ಧಯ್ಯ ಪುರಾಣಿಕರು ಈಗ ನನ್ನ ಅತ್ಯಂತ ಆಪ್ತಮಿತ್ರರಲ್ಲಿ ಒಬ್ಬರಾಗಿದ್ದಾರೆ. ಇವರನ್ನು ನಾನು ಮೊದಲ ಬಾರಿ ಕಂಡದ್ದು ೧೯೪೨ರ ಹೈದರಾಬಾದ್ ಸಾಹಿತ್ಯ ಸಮ್ಮೇಲನದಲ್ಲಿ. ಕವಿಗೋಷ್ಠಿಯಲ್ಲಿ ಇವರು ಒಂದು ಪದ್ಯವನ್ನು ಓದಿದರು. ಅದನ್ನು ಬಹಳವಾಗಿ ಮೆಚ್ಚಿಕೊಂಡು ನಾನು ಇವರಿಗೆ ಗೋಷ್ಠಿ ಮುಗಿದ ಮೇಲೆ ನನ್ನ ಸಂತೋಷವನ್ನು ತಿಳಿಸಿದೆನು. ಆ ಬಳಿಕ ನಾನು ನನ್ನ "ಜೀವನ" ಪತ್ರಿಕೆಯಲ್ಲಿ ಇವರ ಕವಿತೆ ಕೆಲವನ್ನು ಪ್ರಕಟಿಸಿದೆನು. ಪರಿಷತ್ತಿನ ಉಪಾಧ್ಯಕ್ಷನಾಗಿ ನಮ್ಮ ನಾಡನ್ನು ಸುತ್ತುತ್ತ ಒಮ್ಮೆ ಹೈದರಾಬಾದಿಗೆ ಹೋದಾಗ ನಾನು ನಗರದ ಕಾಲೇಜಿನ ಕರ್ನಾಟಕ ಸಂಘದಲ್ಲಿ ಒಂದು ಭಾಷಣ ಮಾಡಿದೆನು. ಆಗ ಇವರು ಕಾಲೇಜ್ ವಿದ್ಯಾರ್ಥಿ ; ಕರ್ನಾಟಕ ಸಂಘದ ಕಾರ್ಯದರ್ಶಿಗಳು ಸಭೆಗೆ ನನ್ನ ಪರಿಚಯವನ್ನು ತಿಳಿಸುವ ವೇಳೆ ಈ ಮಿತ್ರರು, ಅದೇ ಆಗ ನನ್ನ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ನನ್ನ ಒಂದು ಪದ್ಯದ "ನೀ ಕೈಯಾಡಿಸಿ ನಡೆಸಿದ ವಸ್ತು ಒಳಿತರಲೇ ಮುಗಿವುದು ; ಮತ್ತೇನು ?" ಎಂಬ ಪಂಕ್ತಿಯನ್ನು ಉದ್ಧರಿಸಿ, ಅದನ್ನು, ನಾನು ಆದರದಿಂದ ಕಂಡ ಸಂಘ ಚನ್ನಾಗಿಯೇ ಬೆಳೆಯುತ್ತದೆ, ಎಂಬ ಅರ್ಥ ಹೇಳಲು ಅನ್ವಯಿಸಿದರು. ಇವರು ನನ್ನ ವಿಷಯದಲ್ಲಿ ತೋರಿದ ಈ ಅಕ್ಕರೆಯಿಂದ ನನಗೆ ತುಂಬ ಸಂತೋಷ ಆಯಿತು. ಅಷ್ಟೇ ದಿಟವಾಗಿ ಹೊಸದಾಗಿ ಬರುತ್ತಿರುವ ನಮ್ಮ ಸಾಹಿತ್ಯ ಕೃತಿಗಳನ್ನು ಇವರು ಎಷ್ಟು ಶ್ರದ್ಧೆಯಿಂದ ಗಮನಿಸುತ್ತಿದ್ದಾರೆ ಎಂದು ಅಚ್ಚರಿಯಾಯಿತು. ಹಾಗೆಯೇ ಆ ಪಂಕ್ತಿಯನ್ನು ತಮ್ಮ ಒಂದು ಅರ್ಥಕ್ಕೆ ತಿರುಗಿಸಿಕೊಂಡ ಇವರ ಚದುರಿಗೆ ನಾನು ಮಾರು ಹೋಗಿದ್ದೇನೆ. ಈಚೆಗೆ ನನ್ನ–ಇವರ ಸ್ನೇಹ ಹಂತ ಹಂತವಾಗಿ ಬೆಳೆಯುತ್ತಾ ಬಂದಿದೆ. ನನ್ನ ಬಾಳಿನ ಭಾಗ್ಯವಾಗಿ ಈಗಲೂ ಬೆಳೆಯುತ್ತಿದೆ. ಶ್ರೀ ಸಿದ್ಧಯ್ಯನವರು ಕೂಡ, ಲೇಖಕರಾಗಿ ಸಾಹಿತ್ಯಸೇವೆಯಲ್ಲಿ, ಅಧಿಕಾರಿಯಾಗಿ ಜನತೆಯ ಸೇವೆಯಲ್ಲಿ, ಹಿರಿಯರಾಗಿ ಬೆಳೆಯುತ್ತ ಬಂದಿದ್ದಾರೆ. ಸಾಹಿತ್ಯಸೇವೆಯಲ್ಲಿ, ವ್ಯಕ್ತಿತ್ವದ ಉನ್ನತಿಯಲ್ಲಿ, ಈಗಲೂ ಬೆಳೆಯುತ್ತಿದ್ದಾರೆ. ನಾವು ಒಬ್ಬರನ್ನೊಬ್ಬರು ಕಂಡ ವೇಳೆ ಇವರ ಕಣ್ಣಿನಲ್ಲಿ ಕಾಣುವ ಅಕ್ಕರೆ ಉಕ್ಕುವ ನೋಟ, ತುಟಿಯ ಮೇಲೆ ಆಡುವ ಪ್ರೀತಿಯ ನಸುನಗೆ, ಅವರ ನಡತೆಯಲ್ಲಿ ಕಾಣುವ ಅಭಿಮಾನ, ನನ್ನ ಚೇತನಕ್ಕೆ ಸಂತೋಷವನ್ನು ಕೊಡುತ್ತವೆ. ತೃಪ್ತಿಯನ್ನು ತರುತ್ತವೆ, ಶಕ್ತಿಯನ್ನು ತುಂಬುತ್ತವೆ, ನನ್ನಂತೆ ಇವರ ಈ ಗುಣಗಳಿಂದ ಬೇರೆ ಜನ ಅನೇಕರು ಸುಖಿಸಿರಬೇಕು. ಜೊತೆಯ ಜನಕ್ಕೆ ಈ ಸುಖವನ್ನು ನೀಡುತ್ತ, ನಾಡು ನುಡಿಗಳಿಗೆ ಸೇವೆ ಸಲ್ಲಿಸುತ್ತಾ, ಶ್ರೀಯುತರು ನೂರುಕಾಲ ಬಾಳಿ ಬೆಳೆಯುವಂತೆ ದೇವರು ಅನುಗ್ರಹಿಸಲಿ, ಎಂದು ನಾನು ಇವರ ಎಲ್ಲ ಮಿತ್ರರ ಜೊತೆಯಲ್ಲಿ ಪ್ರಾರ್ಥಿಸುತ್ತೇನೆ. □

# ಪುರಾಣ-ನೂತನ ವ್ಯಕ್ತಿತ್ವ

● ವಿ. ಕೃ. ಗೋಕಾಕ್

ಬಹಳ ವರ್ಷದ ಹಿಂದಿನ ಮಾತು. ಸುಮಾರು ೩೫ ವರ್ಷಗಳಾಗಿರಬಹುದು. ನಾನು ಉತ್ತರ ಗುಜರಾಥದಲ್ಲಿ ವೀಸನಗರ ಕಾಲೇಜನ್ನು ಕಟ್ಟುವ ಕಾರ್ಯದಲ್ಲಿ ತೊಡಗಿದ್ದೆ. ಅದಕ್ಕೂ ಮೊದಲು ಒಂದು ವರ್ಷ ಹೈದರಾಬಾದಿನಲ್ಲಿದ್ದೆ. ಅದೇ ಪುರಾಣಿಕರು ಒಂದು ಸರಕಾರಿ ಹುದ್ದೆಯಲ್ಲಿ ತೊಡಗಿದ್ದರೆಂದು ಕಾಣುತ್ತದೆ. ಯಾರೋ ತಯಾರಿಸಿದ್ದ **ಶೂನ್ಯಸಂಪಾದನೆ**ಯ ಒಂದು ಇಂಗ್ಲಿಷ್ ಅನುವಾದವನ್ನು ತಿದ್ದಲೆಂದು ಅವರು ನನ್ನೆಡೆಗೆ ಕೊಟ್ಟಿದ್ದರು. 'ಆ ಕಾರ್ಯವನ್ನು ವೀಸನಗರದಲ್ಲಿ ನಾನು ಕ್ರಮೇಣ ಪೂರೈಸಿ ಕಳುಹಿಸುತ್ತಿದ್ದೆ' ಆ ಸಂಬಂಧದಲ್ಲಿಯ ಪತ್ರವ್ಯವಹಾರದಿಂದ ನನಗೆ ಅವರ ಮೃದು ಸ್ವಭಾವದ, ವಿನಯದ ಪರಿಚಯವಾಯಿತು. ಹೈದ್ರಾಬಾದು ಎಲ್ಲಿ? ವೀಸನಗರ ಎಲ್ಲಿ? ಆದರೆ **ಶೂನ್ಯಸಂಪಾದನೆ**ಯನ್ನು ಕುರಿತ ಪತ್ರವ್ಯವಹಾರ ನಮ್ಮ ನಡುವಿನ ಸ್ನೇಹತಂತುವಾಯಿತು.

ನಿಝಾಮ್‌ಕರ್ನಾಟಕವು ಆಗ ಹಂಚಿಹೋದ ಕರ್ನಾಟಕದ ಒಂದು ಭಾಗವಾಗಿತ್ತು. ಅಲ್ಲಿಯ ಕನ್ನಡದ ಚಟುವಟಿಕೆಗಳಿಗೆ ನರಸಿಂಗರಾವ್ ಮಾನ್ವಿ ಹಾಗು ಸಿದ್ಧಯ್ಯ ಪುರಾಣಿಕರು ಸ್ನೇಹಿತ-ನೇತಾರರಾದರು.

ಕ್ರಮೇಣ ಪುರಾಣಿಕರ ಕವನ ಸಂಗ್ರಹಗಳು ಅಚ್ಚಾದವು. ಶರಣರ ಚರಿತ್ರೆಯನ್ನು ಅವರು ತಿಳಿಗನ್ನಡದಲ್ಲಿ ಲೋಕಪ್ರಿಯವಾಗಿ ಬರೆದರು. ಏಕೀಕೃತ ಕರ್ನಾಟಕದಲ್ಲಿ ಅವರು ಆಡಳಿತದಲ್ಲಿ ಉನ್ನತ ಪದವಿಗೇರಿದರು. ಒಂದೇ ವ್ಯಕ್ತಿತ್ವದ ಎರಡು ಶಾಖೆಗಳಂತೆ ಪುರಾಣಿಕರಲ್ಲಿದ್ದ ಕವಿಯೂ ಆಡಳಿತಗಾರನೂ ಬೆಳೆದರು.

ಒಮ್ಮೊಮ್ಮೆ ಆಡಳಿತದಿಂದ ಬಂದ ಪರಿಜ್ಞಾನದಲ್ಲಿಯೇ ಅವರ ಕಾವ್ಯದಲ್ಲಿ ಹಾಸ್ಯ-ವಿಡಂಬನೆಗಳು ಚಿಗಿತವು. ಪ್ರಜಾಪ್ರಭುತ್ವದಂತಹ ಆದರ್ಶಗಳ ಮೌಲ್ಯಗಳನ್ನು ಅವರ ಕವಿತ್ವವು ಜನತೆಗೆ ನಿರೂಪಿಸಿತು. ಇಂದಿನ ಯುಗದ ಮನಸ್ಸಿನಿಂದ ಪುರಾಣ ಮೌಲ್ಯಗಳನ್ನು ಅರ್ಥೀಕರಿಸಿಕೊಂಡು ಅವರು ತಮ್ಮ ವ್ಯಕ್ತಿತ್ವದಲ್ಲಿ ಒಂದು ಸಮನ್ವಯವನ್ನು ಸಾಧಿಸಿದರು. ಸಮನ್ವಯ ಸಮಿತಿಯು 'ಸಮನ್ವಯ' ಎಂಬ ತ್ರೈಮಾಸಿಕವನ್ನು ನಡೆಸಿದಾಗ ಪುರಾಣಿಕರೂ ಕೆಲವು ಕಾಲ ಆ ಸಮಿತಿಯ ಸದಸ್ಯರಾಗಿದ್ದರು.

ನಾನು ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದಾಗ ಒಮ್ಮೆ ಮಡಿಕೇರಿ ಕಾಲೇಜಿನ ವಾರ್ಷಿಕೋತ್ಸವಕ್ಕೆ ಹೋಗಿದ್ದೆ, ಮನೆಯವರೂ ಜೊತೆಗೆ ಬಂದಿದ್ದರು. ಪುರಾಣಿಕರು ಆಗ ಅಲ್ಲಿ ಡೆಪ್ಯುಟಿ ಕಮಿಶನರ್ ಆಗಿದ್ದು ನನಗೆ ಹೆಚ್ಚಿನ ಸಂತಸವನ್ನುಂಟು ಮಾಡಿತ್ತು. ನಾನಿದ್ದ ರಾತ್ರಿಗೇ ತಲಕಾವೇರಿಗೆ ಹೋಗಿ ಅಲ್ಲಿಯ ಅತಿಥಿಗೃಹದಲ್ಲುಳಿದು ನಮಗೆ ಬ್ರಹ್ಮಗಿರಿಯಿಂದ ಸೂರ್ಯೋದಯದ ಅದ್ಭುತ ದರ್ಶನವನ್ನು ಪಡೆಯಲು ಸಮಯವಿರುವಂತೆ ಪುರಾಣಿಕರು ಏರ್ಪಾಟು ಮಾಡಿದ್ದರು. ಅದೊಂದು ಎಂದಿಗೂ ಮರೆಯಲಾಗದ ಪ್ರಾತಃಕಾಲ. ಅದರ ಸವಿನೆನಪು ಎಂದಿಗೂ ನನ್ನಲ್ಲಿ ಜಾಗೃತವಾಗಿರುತ್ತದೆ.

ಬೆಂಗಳೂರು ನಿವಾಸಿಗಳಾಗಿ ನಾವಿಬ್ಬರೂ ಇಲ್ಲಿ ನೆಲಸಿದ್ದರಿಂದ ನಮ್ಮ ಭೇಟಿ ಮೇಲಿಂದ ಮೇಲೆ ಸಾಧ್ಯವಾಗುತ್ತಿದೆ. Thinkers International, ಬಸವಸಮಿತಿ, ಸಾಹಿತ್ಯಪರಿಷತ್ತು-ಹೀಗೆ ವಿವಿಧ ಪರಿಸರದಲ್ಲಿ ನಾವು ಕಲೆಯುವುದುಂಟು.

ಇಂದಿನ ನಾಗರೀಕತೆಯು ಯಶಸ್ವಿಯಾಗದೆ ಭಾರತ ಆಧುನಿಕ ರಾಷ್ಟ್ರವಾಗದೆಂದು ಪುರಾಣಿಕರಿಗೆ ಮನವರಿಕೆಯಾಗಿದೆ. ಆದರೆ ಸಾರ್ವಕಾಲಿಕ ಮೌಲ್ಯಗಳನ್ನು ಮತ್ತೆ ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳದೆ ನಮ್ಮ ಆಕಾಂಕ್ಷೆ ಸಫಲವಾಗದೆಂಬುದನ್ನೂ ಅವರು ಸಾರಿ ಹೇಳುತ್ತಾರೆ. ಇವೆರಡೂ ಮಾತು ಸಂಧಿಸುವಲ್ಲಿ ಪುರಾಣಿಕರ ವ್ಯಕ್ತಿತ್ವದ ಬೇರಿದೆ.

ಸಾಹಿತಿಗಳ ಸಹಕಾರ ಸಂಘವೊಂದನ್ನು ಸ್ಥಾಪಿಸಲು ಅವರು ಶ್ರಮಿಸುತ್ತಿದ್ದಾರೆ. ಅವರ ಹವಣಿಕೆಗೆ ಎಲ್ಲ ಯಶಸ್ಸಿರಲಿ. ಅವರಲ್ಲಿದ್ದ ಸಂಸ್ಕೃತಿಯ ಕೆಚ್ಚು ಈಗ ಮಾಗುತ್ತ ನಡೆದಿದೆ. ಇದರಿಂದ ಅವರಿಗೆ ಸುಖ-ಶಾಂತಿ-ಸಮೃದ್ಧಿಯನ್ನು ಬಯಸುವುದಲ್ಲದೆ ನಾಡಿಗೂ ಅವು ಅವರ ಸಾಹಿತ್ಯ ಹಾಗು ಕಟ್ಟುವ ಸಂಸ್ಥೆಗಳಿಂದ ಲಭಿಸುವವೆಂದು ಹೇಳಬಹುದು. □

# ಪುರಾಣಿಕರ ನಿಕಟ ಪರಿಚಯದಲ್ಲಿ

● ಡಾ॥ ಗೊರೂರು ರಾಮಸ್ವಾಮಿ ಅಯ್ಯಂಗಾರ್

ಶ್ರೀಮಾನ್ ಡಾ. ಸಿದ್ಧಯ್ಯ ಪುರಾಣಿಕರ ಹೆಸರು, ಮೂವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ, ಕವಿ, ಶ್ರೇಷ್ಠವಿದ್ವಾಂಸ, ನಾಟಕಕರ್ತೃ, ಉತ್ತಮ ಆಡಳಿತಗಾರ, ಚಿಂತಕ, ಸಮಾಜಹಿತೈಷಿ, ಅನುಭಾವಿ ಎಂದೆಲ್ಲ ಮನೆಮಾತಾಗಿದೆ. ಅವರಿಗೂ ಅವರ ಮಿತ್ರರಿಗೂ ಪ್ರಿಯವಾದ ಹೆಸರು "ಕಾವ್ಯಾನಂದ". ಅದು ಅವರ ಸ್ವಭಾವ ಮತ್ತು ಪ್ರವೃತ್ತಿಗೆ ಅನುಗುಣವಾದ ಹೆಸರು. ಅವರು ತಮ್ಮ ಜೀವಮಾನವೆಲ್ಲ ಸಾಹಿತ್ಯಸೇವೆ ಮತ್ತು ಜನಸೇವೆಯನ್ನು ಪ್ರಾಮಾಣಿಕವಾಗಿ ನಡೆಸಿದ್ದಾರೆ. ಸವ್ಯಸಾಚಿಯಂತೆ, ಈ ಎರಡೂ ಕಾರ್ಯಗಳನ್ನೂ ಸಮರ್ಪಕವಾಗಿ–ಮನಸ್ಸಾಕ್ಷಿಗೂ ನ್ಯಾಯಕ್ಕೂ ಅನುಗುಣವಾಗಿ–ನಡೆಸಿದ ತೃಪ್ತಿಹೊಂದಿದ ಕೆಲವೇ ಅಧಿಕಾರಿಗಳಲ್ಲಿ ಅವರೊಬ್ಬರು. ಇಪ್ಪತ್ತೈದು ವರುಷ ರವಿನ್ನೂ ಅಧಿಕಾರಿಗಳಾಗಿರುವುದೆಂದರೆ ಕಡಿಮೆ ಕಾಲವಲ್ಲ. ಜನಜೀವನದ ಎಲ್ಲ ಸಮಸ್ಯೆಗಳೂ ಅವರಿಗೆ ಅನುಭವವಾಗುತ್ತವೆ. ಅದರಲ್ಲಿಯೂ ಕವಿಗಳಂಥ ಸೂಕ್ಷ್ಮಪ್ರಕೃತಿ, ಸಂವೇದನೆಯುಳ್ಳವರಿಗೆ ಜನತೆಯ ಕಷ್ಟ ಸುಖ ಸ್ವಭಾವ ಬಲ ದೌರ್ಬಲ್ಯಗಳು, ಕಣ್ಣಿಗೆ ಕಟ್ಟಿದಂತೆ ತೆರೆದ ಪುಸ್ತಕವಾಗುತ್ತದೆ. ಶ್ರೀಮಾನ್ ಪುರಾಣಿಕರು ಜನಜೀವನದಲ್ಲಿ ಸಂಮಿಳಿತರಾಗಿ ಅವರ ತೀವ್ರಭಾವಗಳನ್ನೆಲ್ಲ ಅರಿತು ಅವರೊಂದಿಗೆ ಒಂದಾಗಿ–ಆದರೂ ಪೃಥಕ್ಕಾಗಿ ನಿಂತು–ಸರ್ಕಾರ ಅಧಿಕಾರಿಗಳು ಜನತೆಯ ತಂದೆತಾಯಿ ಎಂಬ ಮನೋಭಾವವಿದ್ದ ಕಾಲ ಅದು–ಜನತೆಯ ಕಷ್ಟಗಳನ್ನು ಪ್ರಾಮಾಣಿಕವಾಗಿ ಅರಿತು ಅವುಗಳನ್ನು ಪರಿಹರಿಸಲು ನೆರವಾದರು. ಪುರಾಣಿಕರು ದೀರ್ಘಕಾಲ ನಮ್ಮ ಜನತೆಯ ನಿಕಟ ಮತ್ತು ಆತ್ಮೀಯ ಸಂಪರ್ಕವನ್ನು ಹೊಂದಿ ಮಾನವ ಸ್ವಭಾವವನ್ನು ಅರಿತು ವಿಶ್ಲೇಷಿಸಿ–ಮಾನವನಲ್ಲಿ ಸುಪ್ತವಾಗಿರುವ ದಾನವತ್ವವನ್ನು ಸಹ ಅರಿತು, ಸಹಾನುಭೂತಿಯಿಂದ ಎಲ್ಲಕ್ಕೂ ಪರಿಹಾರವನ್ನು ಒದಗಿಸಿದರು. ಅವರು ಅಧಿಕಾರವನ್ನು ಸಹ ಒಂದು ಯಜ್ಞದಂತೆ ಆಚರಿಸಿದರು. ಒಳ್ಳೆಯ ಅಧಿಕಾರಿ, ಹೇಗೆ ಇರುವ ಕಾನೂನಿನ ಚೌಕಟ್ಟಿನೊಳಗೇ ಜನಕ್ಕೆ ಸಹಾಯ ಮಾಡಬಲ್ಲ, ಕೆಲವು ವೇಳೆ ಅಧಿಕಾರಿಗಳು ಹೇಗೆ ಕಾನೂನನ್ನು ತಮಗೆ ಇಷ್ಟಬಂದಂತೆ ಅರ್ಥೈಸಿ, ಪರಿಸ್ಥಿತಿಯನ್ನು ಹೆಚ್ಚು ಗೊಂದಲಮಯವಾಗಿ ಮಾಡುತ್ತಾರೆ, ಮನುಷ್ಯನ ಸ್ವಭಾವವನ್ನು ಅರಿಯುವ ಸೂಕ್ಷ್ಮಶಕ್ತಿಯನ್ನು ಬೆಳೆಸಿಕೊಳ್ಳುವುದು ಹೇಗೆ? ತಾನು ಅಧಿಕಾರದಲ್ಲಿದ್ದಾಗ, ಪರಸ್ಪರ ವಿರುದ್ಧಗಳಾದ ಹೇಳಿಕೆಗಳಿಂದ ಸತ್ಯವನ್ನು ಕಂಡುಹಿಡಿದು ನ್ಯಾಯವಿತರಣೆ ಮಾಡಿದುದು ಇವುಗಳನ್ನೆಲ್ಲ ರಂಜನೀಯವಾಗಿ ರಸವತ್ತಾಗಿ ವಿವರಿಸುತ್ತಾರೆ. ಅವರು ತದೇಕಧ್ಯಾನರಾಗಿ ಮಾತನಾಡುವಾಗ ದೃಶ್ಯಗಳು, ನಮ್ಮ ಮುಂದೆ ಚಿತ್ರಿತವಾಗುತ್ತವೆ. ಒಂದು ರಾತ್ರಿ ನಾವಿಬ್ಬರೂ ಒಟ್ಟಿಗೆ ದೂರದ ರೈಲುಪ್ರಯಾಣ ಮಾಡುತ್ತಿರುವಾಗ, ಶ್ರೀಮಾನ್ ಪುರಾಣಿಕರು, ತಮ್ಮ ಅಧಿಕಾರಜೀವನದ ಅನೇಕ ಸಂಗತಿಗಳನ್ನು ಪುಂಖಾನುಪುಂಖವಾಗಿ ಹೇಳಿ, ತಾವು ಕೆಲಸಮಾಡಿದ ನಾನಾಭಾಗದ ಜಂಗಮ ಲೀಲೆಯನ್ನು ವರ್ಣಿಸಿದಾಗ "ನೀವು ಇದನ್ನೆಲ್ಲ ಯಾಕೆ ಬರೆದಿಡಬಾರದು? ನಿಮ್ಮ ಅನುಭವಗಳೂ ಕಾರ್ಯಗಳೂ ಮುಂದಲ ಜನಾಂಗದವರಿಗೆ ಮಾರ್ಗದರ್ಶನವಾಗುತ್ತವೆ" ಎಂದು ಕೇಳಿದೆ. ಅವರು ನನ್ನ ಈ ಅನುಭವ, ಎರಡು ಮೂರು ಸಾವಿರ ಪುಟಗಳಿಗಿಂತ ಹೆಚ್ಚಾಗಬಹುದು. ಇದನ್ನು ಪ್ರಕಟಿಸುವ ಸಾಹಸಿ (ಪ್ರಕಟಿಸುವವರು ಇಲ್ಲದಿರುವಾಗ ಬರೆದೇನು ಪ್ರಯೋಜನ?) ಯಾರಿದ್ದಾರೆ! ಎಂದು ಕೇಳಿದರು.

ಶ್ರೀಮಾನ್ ಪುರಾಣಿಕರದು ಬಹುಮಟ್ಟಿಗೆ ಸುಸಂಸ್ಕೃತವಾದ ಜೀವ. ಕನ್ನಡ, ಇಂಗ್ಲಿಷ್, ಉರ್ದು, ಸಂಸ್ಕೃತ ಈ ಎಲ್ಲ ಭಾಷೆಗಳಲ್ಲಿಯೂ ಅವರ ಪಾಂಡಿತ್ಯ ನಿರ್ದುಷ್ಟ ಮತ್ತು ಪೂರ್ಣ. ಉರ್ದೂ ಸಾಹಿತ್ಯದ ಅನೇಕ ಸ್ವಾರಸ್ಯಗಳನ್ನು, ಅವರು ಕನ್ನಡ ನಾಟಕ ಮತ್ತು ಪ್ರಬಂಧಗಳಲ್ಲಿ ನಮಗೆ ನೀಡಿದ್ದಾರೆ. ಜೀವನದ ಮೌಲ್ಯಗಳ ಅನ್ವೇಷಣೆ, ಆದರ್ಶಗಳ ಔನ್ನತ್ಯ, ಭಕ್ತಿ, ಅನುಭಾವ ದರ್ಶನ ಇವು ಇವರ ಕಾವ್ಯದ ಗುರಿಗಳು. ಅವರು ಬಹುಶ್ರುತರೂ, ಬಹು ವ್ಯಾಸಂಗಿಗಳೂ ಆದುದರಿಂದ ಇವರ ಕಾವ್ಯಗಳಲ್ಲಿ

ಜೀವನಾನುಭವ ಮತ್ತು ಜೀವನಪ್ರೇಮ ವ್ಯಕ್ತವಾಗುತ್ತದೆ. ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷರಾಗಿ ಇವರು ಮಾಡಿದ ಭಾಷಣ, ಕಾವ್ಯವನ್ನು ಕುರಿತ ಅವರ ಧ್ಯೇಯ ಮತ್ತು ಅವರ ಕಾವ್ಯರಚನೆಯ ಗುರಿ-ಮಾನವನ ಕಲ್ಯಾಣ–ಇವನ್ನು ಸ್ಪಷ್ಟವಾಗಿ ಸಾರುತ್ತವೆ. ಪುರಾಣಿಕರು, ಬರೆದುದಕ್ಕಿಂತ ಚಿಂತನೆ ಮಾಡಿದ್ದು, ವ್ಯಾಸಂಗಮಾಡಿದ್ದು ಹೆಚ್ಚು. ಆದುದರಿಂದ ಅವರು, ಹಸನಾದ, ಆತಂಕ ಉದ್ವೇಗಗಳಿಲ್ಲದ ಸಮಚಿತ್ತತೆಯ ಜೀವನವನ್ನು ಸಾಗಿಸಿದ್ದಾರೆ.

ಉನ್ನತ ಅಧಿಕಾರದಲ್ಲಿದ್ದಾಗ ಸಹ, ಅವರು, ಸೌಜನ್ಯಶೀಲರಾಗಿ ಜನತೆಯ ಕಷ್ಟ ಸುಖಗಳನ್ನರಿತು ಸಹಾಯ ಮಾಡುತ್ತಿದ್ದರು. ಅವರು ಇಲಾಖೆಯ ಕಾರ್ಯದರ್ಶಿಯಾಗಿರುವಾಗ (ವಿದ್ಯಾ ಇಲಾಖೆ) ನನಗೆ ಸಂಬಂಧಪಟ್ಟ ಒಂದು ಹಳೆಯ ಪ್ರಕರಣವನ್ನು ಪರಿಶೀಲಿಸಬೇಕಾಗಿತ್ತು. ಸರ್ಕಾರದ ಅಪ್ಪಣೆಯಂತೆ (ವಿದ್ಯಾ ಇಲಾಖೆ ಡೈರೆಕ್ಟರ್‌ರ ಆದೇಶದಂತೆ) ಕೆಲವು ಶಾಲೆಗಳಿಗೆ ಪುಸ್ತಕಗಳನ್ನು ಕಳುಹಿಸಿದುದಕ್ಕೆ ಬರಬೇಕಾದ ಮೊಬಲಗಿನ ವಿಚಾರ. ಪ್ರಕರಣ, ಕೆಲವು ವರುಷಗಳ ಹಳೆಯದಾಗಿತ್ತು. ಪುರಾಣಿಕರ ಕಛೇರಿಗೆ ನಾನು ಹೋದ ದಿನವೇ, ಅವರು ನನ್ನನ್ನು ಆಸನದಲ್ಲಿ ಕೂರಿಸಿ, ನನ್ನ ಕಟ್ಟಿನ ಪೂರ್ವಾಪರಗಳನ್ನೆಲ್ಲ ಪರಾಂಬರಿಸಿ, ಅನೇಕ ಕಡೆ ಫೋನುಮಾಡಿ, ಕೆಲವು ರಿಕಾರ್ಡುಗಳನ್ನೆಲ್ಲ ತರಿಸಿ, ಕಛೇರಿ ಮುಗಿಯುವ ವೇಳೆಗೆ, ನನ್ನ ಕಾರ್ಯವನ್ನು ಮುಗಿಸಿ ನನ್ನನ್ನು ಕಳುಹಿಸಿಕೊಟ್ಟರು. ನನ್ನಂತೆ ಅಲ್ಲಿ ಬಂದು ಕುಳಿತಿದ್ದ ಇನ್ನೂ ಕೆಲವು ಅಹವಾಲುದಾರರೂ ಸಹ, ತಮ್ಮ ಕೆಲಸವನ್ನು ಪುರಾಣಿಕರು, ನನಗೆ ಮಾಡಿಕೊಟ್ಟಂತೆ, ಒಂದೇ ಬೈಠಕ್‌ನಲ್ಲಿ ಮುಗಿಸಿಕೊಟ್ಟರೆಂದು ಹೇಳಿದರು. ನನಗೆ ಅದು, ಪುರಾಣಿಕರ ಕಾರ್ಯದಕ್ಷತೆ ಮತ್ತು ಜನಪ್ರೇಮದ ಕುರುಹಾಗಿ ಕಂಡಿತು.

ಪುರಾಣಿಕರು ಒಳ್ಳೆಯ ಭಾಷಣಕಾರರು; ಯಾವ ವಿಷಯವನ್ನು ಕುರಿತಾದರೂ ನಿರರ್ಗಳವಾಗಿ ಒಂದು ಗಂಟೆ, ಎರಡು ಗಂಟೆ ಮಾತನಾಡಬಲ್ಲರು. ಅವರ ಭಾಷಣದಲ್ಲಿ ಜನರನ್ನು ಹಿಡಿದಿಡುವ ಮನೋಜ್ಞವಾದ ತಂತ್ರವುಂಟು. ಪ್ರಾರಂಭದಲ್ಲಿ ಒಂದೋ ಎರಡೋ ಪ್ರಾಚೀನರ ವಚನ, ಭಾಷಣದ ನಡುವೆ ಸಹ ವಚನಗಳು, ಪದ್ಯಗಳು. ಅವರು ಕೈಯನ್ನು ಎಡಕ್ಕೂ ಬಲಕ್ಕೂ ತಿರುಗಿಸುತ್ತ–ಏನನ್ನೋ ಹಂಚುತ್ತಲೂ ಇರುವಂತೆ – ಮಾತನಾಡುತ್ತಿರುವಾಗ, ಭಾಷಣದ ಜೊತೆಗೆ, ಮುಖಭಾವವೂ ಆಕರ್ಷಣೀಯವಾಗಿ ತೋರುತ್ತದೆ.

ಶ್ರೀಮಾನ್ ಪುರಾಣಿಕರು ಜೀವನದಲ್ಲಿ ಒಂದು ಸಮರಸವನ್ನೂ ಸಮತೂಕವನ್ನೂ ಸಾಧಿಸಿಕೊಂಡಿದ್ದಾರೆ. ಅದು ಅವರ ದೀರ್ಘವಾದ ವ್ಯಾಸಂಗ, ಅನುಭವ ಚಿಂತನೆಗಳ ಫಲ. ಎಲ್ಲಿದ್ದರೂ ಎದ್ದುಕಾಣುವ ವ್ಯಕ್ತಿತ್ವ ಅವರದು. ನಾವು ಅವರೊಂದಿಗೆ ತ್ರಿಚೂರಿನ ಒಂದು ದೇವಾಲಯಕ್ಕೆ ಹೋಗಿದ್ದಾಗ, ಅವರು ರೇಷ್ಮೆ ಜರಿವಸ್ತ್ರಗಳನ್ನು ಹೊದೆದಿದ್ದು, ಎಲ್ಲರ ಗಮನವನ್ನೂ ತಮ್ಮ ಕಡೆಗೆ ಎಳೆದರು. ಶಂಕರರ ಸನ್ನಿಧಿಯಲ್ಲಿ ಅರ್ಚಕರು ಅವರನ್ನೇ ನಮ್ಮೆಲ್ಲರ ಮುಖಂಡರನ್ನಾಗಿ ಭಾವಿಸಿ ಗೌರವಿಸಿದರು.

ಅನುಭವ, ದೀರ್ಘವ್ಯಾಸಂಗ, ವ್ಯಾವಹಾರಿಕ ನಿಪುಣತೆಯಿಂದಾಗಿ ಶ್ರೀಮಾನ್ ಪುರಾಣಿಕರು, ಯಾವುದೇ ಉದ್ಯೋಗ ಕಸಬು ಚಟುವಟಿಕೆಯನ್ನು ಹಿಡಿದರೂ, ಅದರಲ್ಲಿ ಉನ್ನತ ಸ್ಥಾನವನ್ನೂ ಸಂಪ್ರದಾಯವನ್ನೂ ಕಲ್ಪಿಸಬಲ್ಲವರು. "ಲೋಕವಾಣಿ" ಪತ್ರಿಕೆಗೆ ಅವರು ಸಂಪಾದಕರಾದ ಮೇಲೆ, ಆ ಪತ್ರಿಕೆಯ ಸಂಪಾದಕೀಯಕ್ಕೆ ಒಂದು ಪ್ರತಿಷ್ಠೆ ಬಂದಿತು–ಇಂದಿನ ಸಂಪಾದಕರೂ ಅದನ್ನು ಉಳಿಸಿಕೊಂಡು ಬಂದಿದ್ದಾರೆ. ದಿಲ್ಲಿಯ ಆಕಾಶವಾಣಿಯವರು, ಪ್ರಸಾರಮಾಡುವ ಪತ್ರಿಕಾ ಸಂಪಾದಕೀಯದ ವರದಿಯಲ್ಲಿ, ಲೋಕವಾಣಿಯ ಸಂಪಾದಕೀಯವನ್ನು ಕುರಿತ ಪ್ರಸ್ತಾಪ, ಮೂರು ಸಲಕ್ಕಿಂತ ಹೆಚ್ಚಾಗಿ ಬಂದಿತು. ಪುರಾಣಿಕರು ಬಸವ ಸಮಿತಿಯ ಚಟುವಟಿಕೆಗಳಲ್ಲಿಯೂ ನಿರತರಾಗಿ, ಅದರ ನಿಯತಕಾಲಿಕಗಳು ಗ್ರಂಥಪ್ರಕಾಶನ ಇವುಗಳ ಹೊಣೆಯನ್ನೂ ಹೊತ್ತಿದ್ದಾರೆ.

ಇವುಗಳೆಲ್ಲದರ ಜೊತೆ, ಸಿದ್ಧಯ್ಯ ಪುರಾಣಿಕರು, ಕನ್ನಡದ ಅಧ್ವರ್ಯು. ಕನ್ನಡಕ್ಕೆ ಯಾವೆಡೆಯಿಂದ ಅಪಾಯ ಬಂದರೂ, ಕೂಡಲೇ ಅದನ್ನು ಪ್ರತಿಭಟಿಸುವವರು. ಅವರು ಶ್ರೀಮಾನ್ ಜವರೇಗೌಡರ ಜೊತೆ ಕನ್ನಡಕ್ಕಾಗಿ ಉಪವಾಸಮಾಡಿ, ಸರ್ಕಾರದಿಂದ ಆಶ್ವಾಸನೆ ಪಡೆದುದು ನಾವೆಲ್ಲ ಬಲ್ಲ ಸಂಗತಿ.

ಶ್ರೀಮಾನ್ ಸಿದ್ಧಯ್ಯ ಪುರಾಣಿಕರು, ಆರೋಗ್ಯ ದೃಢಕಾಯರಾಗಿ ನಮ್ಮ ನಡುವೆ ನೂರು ವರುಷ ಬಾಳುತ್ತ ನಾಡು ಮತ್ತು ನುಡಿಗಳ ಸೇವೆ ಗೈಯಲೆಂದು ಹಾರೈಸುತ್ತೇನೆ. □

# ಚಿಂತನ - ಸೃಜನಗಳ ಸಮತೋಲನ

**ಡಾ.** ಸಿದ್ಧಯ್ಯ ಪುರಾಣಿಕರು ಸೌಂದರ್ಯೋಪಾಸಕರೂ ಅಂತರ್ಮುಖಿಗಳೂ ಆದ ಕವಿಗಳಾಗಿ ಹೊಸಗನ್ನಡ ಸಾಹಿತ್ಯ ಪ್ರಪಂಚದಲ್ಲಿ ಮೊದಲು ಪದಾರ್ಪಣ ಮಾಡಿದರು. ಬರ ಬರುತ್ತ ಸಾಹಿತ್ಯಸಂಶೋಧನೆ, ಸಂಕಲನ, ಸಮೀಕ್ಷೆ ಈ ಕ್ಷೇತ್ರಗಳಲ್ಲಿಯೂ ಅವರು ಮನನೀಯವಾದ ಸೇವೆಯನ್ನು ಸಲ್ಲಿಸಿದರು. ಆಡಳಿತದ ವಿಶಾಲ ಅನುಭವ ಮತ್ತು ಬಿಡುವಿಲ್ಲದ ಅಧಿಕಾರ ಹಾಗೂ ಹೊಣೆಗಾರಿಕೆ ಇವು ಅವರ ಸೃಜನಾತ್ಮಕ ಪ್ರತಿಭೆ ಮತ್ತು ಪ್ರಜ್ಞೆಗಳನ್ನು ಇನ್ನಿಷ್ಟು ವ್ಯಾಪಕಗೊಳಿಸಿದುವು, ಹರಿತಗೊಳಿಸಿದುವು. ಇದರಿಂದ ಅವರ ಬರವಣಿಗೆಯಲ್ಲಿ ಚಿಂತನ–ಸೃಜನ ಇವೆರಡರ ಸಮತೋಲನ ಮತ್ತು ಪರಿಪಕ್ವತೆ ಇವು ಕಾಣಿಸಿಕೊಳ್ಳತೊಡಗಿದುವು. ಇದರ ಒಂದು ನಿದರ್ಶನವೆಂದರೆ ಅವರ 'ವಚನೋದ್ಯಾನ' ಎಂಬ ಕೃತಿ. ಅಂಬಿಕಾತನಯದತ್ತರ 'ಕರುಳಿನ ವಚನಗಳು', ಎಸ್. ವಿ. ರಂಗಣ್ಣನವರ 'ರಂಗ ಬಿನ್ನಪ' ಈ ಮುಂತಾದ ಕೃತಿಗಳಲ್ಲಿ ಹೊಸ ಸಾಹಿತ್ಯಕ್ಕೆ ಆಧುನಿಕ ವಚನವಾಙ್ಮಯದ ಹುಲುಸಾದ ಬೆಳೆಯೊಂದು ಸಂದಿದೆ. ಈ ಬೆಳೆಯಲ್ಲಿ 'ವಚನೋದ್ಯಾನ'ವು ತನ್ನವೇ ಆದ ಹೂ ಬಳ್ಳಿಗಳ ಹಂದರವನ್ನು ಹರಡಿಕೊಂಡು ನಿಂತಿದೆ. ಈ ಹಂದರವು ಎಂದಿಗೂ ಮಾಸದ ಸುವಾಸದಿಂದ ಕೂಡಿ ಮೆರೆಯಲಿ ಎಂದು ಹಾರೈಸುತ್ತೇನೆ. ಡಾ. ಸಿದ್ಧಯ್ಯ ಪುರಾಣಿಕರಿಗೆ ಈ ಸಂದರ್ಭದಲ್ಲಿ ಸಕಲ ಶ್ರೇಯಸ್ಸನ್ನು ಕೋರುತ್ತೇನೆ. □

● ಡಾ|| ರಂ. ಶ್ರೀ. ಮುಗಳಿ

# ಡಾ. ಸಿದ್ಧಯ್ಯ ಪುರಾಣಿಕರು

ಇಂತಹ ಗುಣೀಸಾಹಿತ್ಯಕರನ್ನು ಸಾಕಷ್ಟು ಹತ್ತಿರದಿಂದ ಕಾಣುವ ಯೋಗವು ನನ್ನ ಪಾಲಿಗೆ ಶಕ್ಯವೇ ಇರಲಿಲ್ಲ. ಧಾರವಾಡದ ಸಾಹಿತ್ಯಮಂದಿರದ ಶ್ರೀ ಶಿವಲಿಂಗಯ್ಯ ಇವರಿಂದ ಶ್ರೀ ಸಿದ್ಧಯ್ಯನವರ ಬಗೆಗೆ ತುಂಬ ಗೌರವದ ಮಾತುಗಳನ್ನು ಮೊದಲ ಬಾರಿ ಕೇಳಲು ದೊರೆತ ನೆನಪು ಇದೆ. ಆ ಬಳಿಕ ಸಾಹಿತ್ಯಿ ಮಂದಿರಕ್ಕೆ ಹೋದಾಗಲೆಲ್ಲ, ಶ್ರೀ ಪುರಾಣಿಕರ ಸಾಹಿತ್ಯಕ ಹಾಗೂ ಲೌಕಿಕ ಕ್ಷೇತ್ರದಲ್ಲಿ ಆಗುತ್ತಿದ್ದ ಪ್ರಗತಿಯನ್ನು ಕೇಳಿ ಆನಂದಿಸಲು ಸಿಗುತ್ತಿತ್ತು.

ಒಮ್ಮೆ ಬೆಂಗಳೂರಿಗೆ ಹೋದಾಗ ನನ್ನ ಮಿತ್ರ ಶ್ರೀ ಬೀಚಿ ಕೇಳಿದರು — "ಶ್ರೀ ಪುರಾಣಿಕರ ಪರಿಚಯವೇ ಇಲ್ಲವೆ ?" ಎಂದು. ಇದನ್ನು ತಿಳಿದು ಸೋಜಿಗಪಟ್ಟರು. ಸಾಧನ ಕೆರೆಯನ್ನು–ಧಾರವಾಡವನ್ನು ಬಿಟ್ಟು ಹೆಚ್ಚು ಹೊರಗೆ ಹೋಗುವ ಯೋಗಗಳು ನನ್ನ ಪಾಲಿಗೆ ಕಡಿಮೆ. ಇದರಿಂದಾಗಿ ಮಹಾನ್ ಸಾಹಿತ್ಯಿಕರು ನನಗೆ ಸಾಕ್ಷಾತ್ತಾಗಿ ಪರಿಚಯ ಹೆಚ್ಚು ಇದ್ದವರು ತೀರ ಕಡಿಮೆ.

ನನ್ನ ಈ ಕೊರತೆ ಕಡಮೆ ಮಾಡಿಕೊಳ್ಳಲು ಮಿತ್ರ ಶ್ರೀ ಬೀಚಿ ನೆರವಾದರು. ಅವರ ಮಹಡಿಯ ಮನೆಗೆ ಹೋದೆವು. ಸೊಗಸಾದ ಆತಿಥ್ಯವಾಯಿತು. ಸಾಹಿತ್ಯಿಕ ಹರಟೆಯ ಊಟವು ಸಿಕ್ಕಿತು. ಶ್ರೀ ಸಿದ್ಧಯ್ಯನವರು ತಮ್ಮ ಸಾಹಿತ್ಯಿಕ ಕೃತಿಗಳಿಂದ ಹೆಸರಾಗಿದ್ದಾರೆ. ರಾಜ್ಯ ಸಾಹಿತ್ಯದ ಅಕಾಡೆಮಿಯ ಮೆಚ್ಚಿಕೆ ದೊರೆತಿದ್ದು ಸರ್ವಶ್ರುತವಿದೆ. ಸರಕಾರಿ ಕೆಲಸದಿಂದ ನಿವೃತ್ತರಾದ ಬಳಿಕ ಹಣದ ಆಸೆಯಿಂದ ಮರಳಿ ನೌಕರಿ ಸೇರುವ ಹವ್ಯಾಸವು ಇವರಲ್ಲಿ ಇಲ್ಲದ್ದು ಸಂತೋಷದ ಸಂಗತಿ. ಆದರೂ ವಿಶ್ವವಿದ್ಯಾಲಯದಂತಹ ಸಂಸ್ಥೆಗಳು, ಇವರ ಜ್ಞಾನದ, ಲೋಕಾನುಭವದ ಲಾಭ ಪಡೆಯಲು ಪ್ರಯತ್ನಪಟ್ಟು, ಇವರೇ ಆ ಜಂಜಾಟ ಬೇಡವೆಂದರೊ ನಾನರಿಯೆ.

ಆದರೆ ವ್ಯಾಸಂಗ, ವಿಚಾರಸಾಮರ್ಥ್ಯವಿರುವ ಸಾಹಿತ್ಯಿಕ ಕೃಷಿ ಮಾಡಿರುವ ಇಂತಹ ಅನುಭವಿಕರ ಲಾಭವು ವಿಶ್ವವಿದ್ಯಾಲಯಗಳಿಗೆ ದೊರೆತರೆ, ಅದು ಆ ಸಂಸ್ಥೆಗಳ ಏಳಿಗೆಗೆ ಕಾರಣವಾಗಬಲ್ಲದು.

"ಕಾವ್ಯಾನಂದ" ನಾಮದಿಂದ ಸಾಹಿತ್ಯ ಕ್ಷೇತ್ರದಲ್ಲಿ ವಿಖ್ಯಾತರಾಗಿರುವ ಡಾ. ಸಿದ್ಧಯ್ಯರವರನ್ನು ಸನ್ಮಾನಿಸುವ ಯೋಜನೆಯು ನಡೆದದ್ದು ತುಂಬ ಸಂತೋಷದ ಸಂಗತಿ. ಶ್ರೀ ಪುರಾಣಿಕರಿಗೆ, ಆಯುರಾರೋಗ್ಯವು ಲಭಿಸಿ, ಇವರಿಂದ ಇನ್ನೂ ಹೆಚ್ಚಿನ ಸೇವೆ ನಾಡಿಗೆ ಸಲ್ಲಲಿ ಎಂದು ಹಾರೈಸುವೆ. □

● ಶಂ. ಬಾ. ಜೋಶಿ

# ಚಿಂತನಶೀಲ ಕಾವ್ಯಾನಂದರು

● ಪ್ರೊ. ಸ. ಸ. ಮಾಳವಾಡ

**ಡಾ.** ಸಿದ್ಧಯ್ಯ ಪುರಾಣಿಕರು ಸವ್ಯಸಾಚಿ. ಸಾಹಿತ್ಯದ ಮತ್ತು ಆಡಳಿತೆಯ ಲೆಕ್ಕಣಿಕೆಯನ್ನು ಏಕ ಕಾಲದಲ್ಲಿ ಏಕ ಬಗೆಯ ದಕ್ಷತೆಯಿಂದ ಬಳಸಬಲ್ಲವರು. ಗದ್ಯ ಪದ್ಯಗಳೆರಡರಲ್ಲಿ ಸಮರ್ಥವಾಗಿ ಕೃಷಿ ಮಾಡಿದವರು. ಮೇಧಾವಿಗಳಾದ ಇವರ ಮಾತು, ಬರಹಗಳೆರಡೂ ಮೋಹಕವೆನಿಸುವಂತಹವು. ದಕ್ಷ ಆಡಳಿತೆಗಾರ, ಉತ್ತಮ ಶ್ರೇಣಿಯ ಸಾಹಿತಿಯಾಗಿಯೂ ಸದುವಿನಯದಿಂದ ಸದಾ ಶಿವನ ಒಲುಮೆಯನ್ನು ಪಡೆಯುವ ಹಂಬಲವುಳ್ಳವರು. ಕುಟುಂಬವತ್ಸಲರಾಗಿಯೂ ಲೋಕಸಂಗ್ರಹದ ಕಾರ್ಯದಲ್ಲಿ ನಿರತರಾದವರು, ತೀಕ್ಷ್ಣ ವಿಡಂಬನೆಯೊಂದಿಗೆ ಮನ ವೊಲಿಸುವಂತೆಯೂ ಬರೆಯಬಲ್ಲರು. ಲೌಕಿಕ ಜಾಣ್ಮೆ ತೋರಿಯೂ ಆಧ್ಯಾತ್ಮದತ್ತ ಗಮನವಿರುವವರು. ಒಳ್ಳೆಯದಕ್ಕೆ ಬಾಗುತ್ತಾರೆ. ದುಷ್ಟವೃತ್ತಿಗಳನ್ನು ತಮ್ಮ ರೀತಿಯಲ್ಲಿ ಟೀಕಿಸುತ್ತಾರೆ. ವಿಶಾಲ ಜನಸಂಪರ್ಕ ಬೆಳೆಸಿಕೊಂಡಿದ್ದರೂ ಏಕಾಂತಪ್ರಿಯರು. ಸತತೋದ್ಯೋಗದಲ್ಲಿ ತೊಡಗಿಯೂ ಅಂತರ್ಮುಖಿತೆಯಲ್ಲಿ ಆಸ್ಥೆಯುಳ್ಳವರು. ಸಭೆ ನಡೆದಾಗ ಚರ್ಚೆಯತ್ತ ಗಮನವಿದ್ದೂ ಗ್ರಂಥ ಕಾಗದಗಳ ಪರಿಶೀಲನೆಯಲ್ಲಿ ಮಗ್ನರಾಗಬಲ್ಲರು.

ಕವನಗಳಲ್ಲಿ, ವಚನ ರಚನೆಯಲ್ಲಿ ಕತೆ ಹೇಳುವಲ್ಲಿ ಸುರಮ್ಯ ಕಲ್ಪಕತೆಯಿದ್ದೂ, ಆಳವಾದ ಆಲೋಚನೆ ಅರ್ಥಪೂರ್ಣ ಚಿಂತನೆಗಳನ್ನು ವ್ಯಕ್ತಪಡಿಸುತ್ತಾರೆ; ಬೆಳಕು ಬೀರುತ್ತಾರೆ ; ವಿವೇಕ ಬೋಧಿಸುತ್ತಾರೆ.

ಬಾಳಿಗೆ ನಲಿವು ಬೇಕು, ನಿಜ. ಆದರೆ ಅದರೊಂದಿಗೆ ವಿವೇಕವೂ ಆವಶ್ಯಕವಾಗಿದೆ. ವಿವೇಕವಿಲ್ಲದ ಬಾಳು ಕತ್ತಲೆಯಲ್ಲಿ ಸಾಗಿ ಮುಗ್ಗರಿಸೀತು. ಬೆಳಕಿನ ಅಭಾವದಲ್ಲಿ ರಮ್ಯತೆಯು ದುಮ್ಮಾನವಾಗಿ ಪರಿಣಮಿಸೀತು. ಆದುದರಿಂದ ಜೀವನದ ರಮ್ಯತೆಯೊಂದಿಗೆ ಬೆಳಕನ್ನು ಅರ್ಥವನ್ನು ಕೊನೆಯ ಪಕ್ಷ ಸಾಂತ್ವನವನ್ನು ಸಾಹಿತ್ಯ ಕೃತಿಗಳು ಒದಗಿಸಬೇಕು. ಈ ದೃಷ್ಟಿಯಿಂದ ಕಾವ್ಯಾನಂದರ **ತುಷಾರಹಾರ** (ಕಿರುಗತೆಗಳು) ಕನ್ನಡದ ಒಂದು ಒಳ್ಳೆಯ ಕೃತಿಯಾಗಿದೆ. ಅವರ ವಿಪುಲ ಬರೆಹದಲ್ಲಿ "ತುಷಾರಹಾರ" ಒಂದು ತೀರ ಚಿಕ್ಕ ಕೃತಿಯೇ ಅಹುದು. ಲೇಖಕರೇ ಹೇಳಿದಂತೆ ಇದು "ಕಿರು ನುಡಿಗಳ ಕಿರು ಬರೆಹ". ಆದರೆ ಅದರಲ್ಲಿಯ ಒಂದು ಕಿರುಗತೆಗೆ ಕೊಡಲಾದ ಶೀರ್ಷಿಕೆಯಂತೆ "ಘನತೆಯ ಗುರುತು ಗಾತ್ರವಲ್ಲ, ಪಾತ್ರತೆ". ಈ ಚಿಕ್ಕ ಗಾತ್ರದ ಬರೆಹವು ಘನವಾದ ಅಂಶಗಳನ್ನು ಒಳಗೊಂಡಿದೆ. ಈಚೆಗೆ ಒಬ್ಬ ವಿದೇಶೀ ಲೇಖಕನ "Small is beautiful" (ಸಣ್ಣದು ಸುಂದರ) ಎಂಬ ಕೃತಿಯು ವಿಶ್ವಖ್ಯಾತಿಯನ್ನು ಗಳಿಸಿದೆ.

ವಿಪುಲವಾಗಿ, ವಿವಿಧವಾಗಿ ಓದಿದ ಸಿದ್ಧಯ್ಯನವರು "ಈ ಕತೆಗಳಲ್ಲಿ ಅವರಿವರ ಛಾಯೆ ಕಾಣುವುದು ಅಸಂಭವವೇನಲ್ಲ" ಎಂದು ಹೇಳಿದ್ದಾರೆ. ಆದರೆ ಹಾಗೆ ಕಂಡು ಬರುವುದು ನೆರಳು ಮಾತ್ರ. ತಿರುಳು, ಅದನ್ನು ನಿರೂಪಿಸುವ ಬಗೆಯಲ್ಲಿ ಸ್ವಂತಿಕೆಯಿದೆ. ಪ್ರತಿಭೆಯನ್ನೂ ಕಾಣಬಹುದು.

ಇಲ್ಲಿಯ ಇಪ್ಪತ್ತೆರಡು ಕಿರುಬರೆಹಗಳಲ್ಲಿ ಮೊದಲನೆಯದು ಸರಸ್ವತೀಮಾತೆಯನ್ನು ಕುರಿತಿದೆ. ಅದರಲ್ಲಿ ಲೇಖಕನ ಆತ್ಮನಿವೇದನೆಯಿದೆ. ಸರಸ್ವತೀ ಸ್ತೋತ್ರದಲ್ಲಿ "ಯಾಕುಂದೇಂದು **ತುಷಾರಹಾರ** ಧವಲಾ" ಎಂಬ ಪದಪುಂಜವಿದೆ. ಅದರಲ್ಲಿಯ "**ತುಷಾರಹಾರ**"

ಎಂಬುದನ್ನು ಈ ಕೃತಿಯು ಹೆಸರನ್ನಾಗಿ ಕೊಡಲಾಗಿದೆ. ಇದರಲ್ಲಿಯ 'ಕಲೆಯ ನೆಲೆ' ಎಂಬ ಸಂವಾದ ರೂಪದ ಬರೆಹವು ಆಲೋಚನೆ, ಉಪದೇಶಗಳಿಂದ ಕೂಡಿದೆ. ಇನ್ನುಳಿದ ಇಪ್ಪತ್ತು ಬರೆಹಗಳಲ್ಲಿ ನಿಸರ್ಗದ ವ್ಯವಹಾರ. ಮಾನವರ, ಪಕ್ಷಿಗಳ, ಹುಳಗಳ ಸ್ವಭಾವ ದರ್ಶನ, ಕಲ್ಪಿತ –ಸಂವಾದಗಳಿಂದ ಕೂಡಿದ ಕಿರುಗತೆಗಳಿವೆ. ಇಲ್ಲಿಯ ಒಟ್ಟು ಬರೆಹವು ಮಾನವೀಯ ಬಾಳಿಗೆ ವಿವೇಕವನ್ನು ಬೋಧಿಸುವ ಬಗೆಯಲ್ಲಿ ಮೂಡಿ ಬಂದಿದೆ.

ಹಿಂದೆ ವ್ಯಕ್ತಿಗತವೆನಿಸುತ್ತಿದ್ದ ಅವಿವೇಕವು ಇಂದಿನ ಬಾಳಿನಲ್ಲಿ ಸಾರ್ವತ್ರಿಕವಾಗ ತೊಡಗಿದೆ ; ಸಿಂಹಾಸನವನ್ನೇರಿದೆ ; ಸಂಸ್ಕಾರವ ಪಡೆದಿದೆ. ಅವಿವೇಕದ ವರ್ತನೆಯು ಸ್ವಾತಂತ್ರ್ಯದ ಲಕ್ಷಣವೆಂಬ ತಪ್ಪು ಭಾವನೆಯು ಹರಡಿದೆ. ವಿವೇಕವನ್ನು ಹೇಳುವ ನೈತಿಕ ಧೈರ್ಯವುಳ್ಳವರು ಕನಿಕರದ ಅಲ್ಪ ಸಂಖ್ಯಾತರಾಗುತ್ತಿದ್ದಾರೆ. ಅಂತೆಯೇ ವಿವೇಕವನ್ನು ಬೋಧಿಸುವ ಕೃತಿಗಳು ಹೆಚ್ಚಾಗಿ ಬರಬೇಕಾಗಿದೆ. ಆದರೆ ಅಂತಹ ಬೋಧೆಯು ರಮ್ಯ ಬಗೆಯಲ್ಲಿ ನಿರೂಪಿತವಾಗಬೇಕಾದ ಆವಶ್ಯಕತೆಯೂ ಇದೆ. 'ರಮ್ಯವಾಗಿ ಕಲಿ'ಸುವ "ಕಲೆಯ ನೆಲೆ"ಯನ್ನು ಕಾವ್ಯಾನಂದರು ಕಂಡುಕೊಂಡಿದ್ದಾರೆ. ಇದಕ್ಕೆ ಕವನರೂಪದ ಅವರ "ಕಲ್ಲೋಲ ಮಾಲೆ" ಒಂದು ಸಾಕ್ಷಿಯಾದರೆ ಕಿರುಗತೆಗಳ "ತುಷಾರಹಾರ" ಇನ್ನೊಂದಾಗಿದೆ.

ನಿಷ್ಠೆ ಪರಿಶ್ರಮಗಳಿಂದ ದುಡಿಯುವವರು ಕೆಲವರು. ಅದರ ಫಲ ಭೋಗಿಸುವವರು ಬೇರೆಯವರು—ಈ ಬಗೆಯ ಸನ್ನಿವೇಶಗಳು ನಮ್ಮ ಬಾಳಿನಲ್ಲಿ ಸಾಮಾನ್ಯವಾಗಿ ಕಂಡು ಬರುತ್ತಿವೆ. ದುಡಿದವರಿಗೆ ಮನ್ನಣೆ ಲಭ್ಯವಾಗದೆಯಿರುವಾಗ ನಿರಾಶೆಯೆನಿಸುವುದೂ ಸ್ವಾಭಾವಿಕ. ಈ ಬಗೆಗೆ ಕವಿರಾಜನೊಬ್ಬ ಬ್ರಹ್ಮದೇವನಿಗೇ ತಕರಾರು ಮಾಡುತ್ತಾನೆ: "ನಿನ್ನ ಸೃಷ್ಟಿ...ಮಾಡಿದವರನ್ನು ಮೆಟ್ಟಿ ಮೇಲೆ ಬರುವ ಕಾರಸ್ಥಾನಿಗಳನ್ನು ಮೆರೆಸುತ್ತದೆ" ಎಂದು ಹೇಳುತ್ತಾನೆ. ಬ್ರಹ್ಮನ ಉತ್ತರ ಹೀಗಿದೆ :

ಮಾಡುವವರು ಮೆರವಣಿಗೆಯತ್ತ ಗಮನ ಕೊಟ್ಟರೆ ಮಾಡುವ ಕಾರ್ಯ ಕುಂಠಿತವಾಗುತ್ತದೆ. ಮಾಡುವವರು ಬೇಡುವವರು ಆಗಬಾರದು ; ಎತ್ತುವ ಕೈ ಬೇರೆ ; ಒಡ್ಡುವ ಕೈ ಬೇರೆ. ಈ ಉತ್ತರವು ಮಾಡುವವರಿಗೆ ಉತ್ತೇಜನವನ್ನು, ನಿರಾಶೆ ಪಡುವವರಿಗೆ ಸಾಂತ್ವನವನ್ನು ಒದಗಿಸುತ್ತದೆ. ಮಾಡುವುದರಲ್ಲಿ ಆಂತರಿಕವಾದ ಸಂತೋಷವಿದೆ. ಮನ್ನಣೆ ಮೆರವಣಿಗೆಗಳ ವಿಷಯ ಆಘ್ಯತೆಯದು. ಅದು ತೃಪ್ತಿದಾಯಕವೂ ಆಗಲಿಕ್ಕಿಲ್ಲ. ಇಂದು ಹೂಮಳೆ, ನಾಳೆ ಕಲ್ಲಿನೇಟೂ ಆಗಬಹುದು.

ಕೆಸರಿನಲ್ಲಿ ಬೆಳೆದ ಕಮಲದ ಬಗೆಗೆ ಗುಲಾಬಿ-ಕೇದಿಗೆಗಳಿಗೆ ಮತ್ಸರವಂತೆ, ಲಕ್ಷ್ಮಿ ಕಮಲದಲ್ಲಿಯೇ ಏಕೆ ನೆಲಸಬೇಕು ? ಎಂದು. ಲಕ್ಷ್ಮಿ ಉತ್ತರ ಕೊಡುತ್ತಾಳೆ :

"ಕೈ ಕೆಸರಾಗದವರಲ್ಲಿ ನಾನು ಇರಲಾರೆ... ಕೆಸರಿನಿಂದಲೇ ಹಸಿರು, ಕುಸುರು, ದವಸ ಧಾನ್ಯ..."

ತ್ರಿಮೂರ್ತಿ ದೇವತೆಗಳ ಭಕ್ತರು ಜಗಳಾಡುತ್ತಾರೆ. ಆದರೆ ಅವರ ಪತ್ನಿಯರು ಎಲ್ಲರಿಗೂ ಬೇಕು. ಹೆಣ್ಣಿನ ಹಿರಿಮೆಯನ್ನು ಬಿತ್ತರಿಸುವ ಕಿರುಗತೆಯೊಂದು.

ಸವಿ ನೀರಿನ ನದಿಗಳು ಸಮುದ್ರ ಸೇರುತ್ತಿವೆ. ಆಗಲೂ ಸಾಗರವು ಉಪ್ಪುನೀರಿನದೇ ಆಗಿ ಉಳಿಯುತ್ತಿದೆ. ಈ ಬಗೆಗೆ ನದಿಗಳು ಕೇಳಿದ ಪ್ರಶ್ನೆಗೆ ಸಮುದ್ರರಾಜನ ಉತ್ತರ ಹೀಗೆ :

"ಬಾಳ ರುಚಿಗೆ ಸವಿಯೊಂದೇ ಸಾಕೇ ? ಉಪ್ಪಿಗಿಂತಲೂ ರುಚಿಯುಂಟೇ ?... ನನ್ನೆದೆಯ ಉಪ್ಪು ನನ್ನ ದುಡಿತದ ಬೆವರಿನ ಪ್ರತೀಕ".

ನವೀನ ಪೀಳಿಗೆಯವರ ಬರೆಹ–ಮಾತುಗಳಲ್ಲಿ ಬೆವರಿನ ವಾಸನೆಯ ಘೋಷಣೆ ಹೆಚ್ಚಾಗಿ ಕೇಳಬರುತ್ತಿದೆ. ಆದರೆ ಬೆವರು ಸುರಿಸಿ ದುಡಿಯುವವರ ಸಂಖ್ಯೆಯೂ ಕಡಿಮೆಯಾಗತೊಡಗಿದೆ. ಘೋಷಣೆ ಒಂದು ಬಗೆ, ಆಚಾರ ಇನ್ನೊಂದು ಬಗೆ–ಇದು ಹೊಸ ಕಾಲದ ಅವಿವೇಕಗಳಲ್ಲಿ ಒಂದಾಗಿದೆ.

ಇನ್ನೊಂದು ಕಿರುಗತೆಯಲ್ಲಿ ಶಿವನ ತಲೆಯ ಮೇಲೆ ಇದ್ದ ಗಂಗೆಗೆ ಬೇಸರವೆನಿಸಿತು. ತನ್ನ ಜೀವನ ವಿಫಲವೆಂದು ತೋರಿತು ಆಗ.

"ಗಂಗೆ ಅಮೃತತರಂಗೆಯಾಗಿ ಹಿಮಶೃಂಗಗಳಿಂದಿಳಿದು ಬಂದಳು. ಅವಳು ಹೋದೆಡೆಗಳಲ್ಲೆಲ್ಲ ಹರಾಲಯಗಳೆದ್ದು ನಿಂತವು. ಗಂಗೆ ಎಲ್ಲೆಡೆಗಳಲ್ಲಿಯೂ ಹರನಡಿಗಳನ್ನು ತೊಳೆಯುತ್ತ ಕಾಶೀ ವಿಶ್ವನಾಥನ ಚರಣ ಸನ್ನಿಧಿಯನ್ನು ಸೇರಿ ಧನ್ಯಳಾದಳು–ತಲೆಗೇರಿದರೆ ಫಲವಿಲ್ಲವೆಂಬುದನ್ನು ಮನಗಂಡಳು".

ಸಮುದ್ರರಾಜನ ಅಬ್ಬರವು ಎಚ್ಚರಿಸಲಾರದಷ್ಟು,

ಗಂಗೆ ಕಂಡುಕೊಂಡ ಧನ್ಯತೆಯನ್ನು ಅರಿಯಲಾರದಷ್ಟು ದಪ್ಪ ತೊಗಲನ್ನು ನಾವು ಬೆಳೆಸಿಕೊಳ್ಳಬಾರದಲ್ಲ !

ಬ್ರಹ್ಮಾಂಡದಲ್ಲಿ ಹಲವು ಬಗೆಯ ಬೆಂಕಿಗಳಿವೆ. ಈಚೆಗೆ ವಿಜ್ಞಾನವು ಅಣುಬಾಂಬಿನ ಬೆಂಕಿಯನ್ನು ಸಿದ್ಧಗೊಳಿಸಿದೆ. ಆ ಬೆಂಕಿಗಳಲ್ಲಿ ಯಾರು ಹೆಚ್ಚು ? ಎಂಬ ಬಗೆಗೆ ವಾಗ್ವಾದ ತಲೆದೋರಿತು. ಆಗ ಮಾನವನು ಹೇಳಿದ :

'ನನ್ನ ಬೆಂಕಿ ನಿಮ್ಮೆಲ್ಲರಿಗಿಂತ ಹೆಚ್ಚಿನದು.

ನನ್ನಲ್ಲಿ ನೂರು ಬೆಂಕಿಗಳು ! ಹಸಿವೆಯ ಬೆಂಕಿ, ಹುಸಿಯ ಬೆಂಕಿ, ಅಸೂಯೆಯ ಬೆಂಕಿ, ಕಾಮದ ಬೆಂಕಿ, ಕ್ರೋಧದ ಬೆಂಕಿ (ಮೊದಲಾದವು)...

ಮೇಲಾಗಿ ಮೊದಲು ನನ್ನಲ್ಲಿ ಯಾವುದೊಂದು ಬೆಂಕಿ ಹೊತ್ತದೆ ಹೊರಗೆಲ್ಲಿಯೂ ಹೊತ್ತಲಾರದು".

ಭೀಕರವೆನಿಸುವ ಹೊರಗಿನ ಬೆಂಕಿಗಳು ಹೊತ್ತುವುದಕ್ಕೆ ಮಾನವನ ಮನದ ಬೆಂಕಿಯೇ ಕಾರಣವಾಗುತ್ತಿದೆ. ಅಂತೆಯೇ ಎಲ್ಲಕ್ಕಿಂತ ಅದು ಹೆಚ್ಚು ಭಯಾನಕ.

ಇಂದಿನ ಅವಿವೇಕಗಳಲ್ಲಿ ಪ್ರಮುಖಸ್ಥಾನಕ್ಕೆ ಅರ್ಹವಾದುದೊಂದಿದೆ. ಅದೆಂದರೆ ದಿಢೀರನೆ ಸಿರಿವಂತಿಕೆ, ಅಧಿಕಾರ, ಪ್ರತಿಷ್ಠೆ ಗಳಿಸಬೇಕೆಂಬ 'ಮಬ್ಬು'. ನಿಸರ್ಗದ ವ್ಯವಹಾರವನ್ನು ಆಧರಿಸಿದ "ಬೇಗ ಬಂದುದು ಬೇಗ ಹೋಗುತ್ತಿದೆ" ಎಂಬ ಕಿರುಗತೆಯೊಂದು ಇಲ್ಲಿ ಬಂದಿದೆ. ಅದರಲ್ಲಿ ಮೇಲ್ಕಂಡ 'ಮಬ್ಬು' ವ್ಯರ್ಥವೆಂಬುದನ್ನು ಸುಂದರವಾಗಿ, ಪರಿಣಾಮಕಾರಿಯಾಗಿ ನಿರೂಪಿಸಲಾಗಿದೆ.

ಆಳಕ್ಕೆ ಇಳಿಯದೆ ಎತ್ತರಕ್ಕೆ ಏರುವುದು ಸಾಧ್ಯವಲ್ಲವೆಂಬ ಸಂದೇಶ ಇನ್ನೊಂದು ಕತೆಯದಾಗಿದೆ. ದಿಢೀರ್ ಮಾರ್ಗಕ್ಕೆ ಮನಸೋಲುವವರು ಈ ಸಂದೇಶವನ್ನು ಅರ್ಥಯಿಸಿಕೊಳ್ಳಬೇಕು.

ಈ ಸಂಕಲನದಲ್ಲಿ "ಕಿರಿಯರ ಹಿರಿಮೆ"ಯನ್ನು ತೋರಿಸಿಕೊಡುವ ಕಿರುಗತೆಯೊಂದಿದೆ :

'...ತೇಗು, ದೇವದ್ವಾರ, ಶ್ಯಾಮತಮಾಲ ಎತ್ತರದ, ಬಿತ್ತರದ ಚಿತ್ರವಿಚಿತ್ರ ಪತ್ರ ಪುಷ್ಪ ಫಲಗಳ ವೃಕ್ಷರಾಜಿ ಪರ್ವತರಾಜನ ಸಾಮ್ರಾಜ್ಯವೈಭವವನ್ನು ಸೂಚಿಸುವ ರಾಯಭತ್ರದಂತೆ ರಾರಾಜಿಸುತ್ತಲಿದ್ದವು. ಅವುಗಳ ಕಾಲ ಕಸದಂತಿದ್ದ ಹಸಿರನ್ನು ಕೇಳುವವರಾರು............ ............ ಬಿರುಗಾಳಿ ಬೀಸಿತು. ಪ್ರಳಯಕಾಲದ ಝಂಝಾವಾತವಾಗಿ ಬೀಸಿತು. ಪರ್ವತದ ಮೇಲಿನ ಹೆಮ್ಮರಗಳೆಲ್ಲ ಬೇರ್ವೆರಸಿ ಕಿತ್ತು ಕೆಳಗುರುಳಿದವು. ಹುಲ್ಲು ಮಾತ್ರ ಹಾಗೆ ಉಳಿಯಿತು.......................

..............ಪರ್ವತರಾಜ ನಾಚಿನುಡಿದ: ಕಿರಿಯರ ಹಿರಿಮೆಯನ್ನರಿತೆ ಹುಲ್ಲೇ !

ಸಂಕಲ್ಪ ಬಲವಿದ್ದರೆ ಎಂತಹ ಪರಿಸ್ಥಿತಿಯಲ್ಲಿಯೂ ಬೆಳೆಯಬಲ್ಲೆವು ; ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬಲ್ಲೆವು—ಎಂಬ ಸಂದೇಶ ಬೀರುವ ಎರಡು ಕಿರುಗತೆಗಳಿವೆ :

(i) ಗಾಳಿಯೊಡನೆ ಬೀಜವೊಂದು ತೂರಿ ಬಂದಿತು. ಅದಕ್ಕೆ ಅವಕಾಶವೊದಗಿಸಲು ಬಳ್ಳಿ ಸಮ್ಮತಿಸಲಿಲ್ಲ. ತನ್ನ ಸಂಕಲ್ಪ ಬಲದಿಂದ ಆ ಬೀಜವು ಎರಡು ಶಿಲೆಗಳ ಮಧ್ಯದ ಬಿರುಕಿನಲ್ಲಿ ಬೆಳೆದು ತಲೆಯೆತ್ತಿ ನಿಂತಿತು.

(ii) ಆಕಾಶದಿಂದ ಹನಿಯೊಂದು ಬಿದ್ದಿತು. ಆ ಹನಿಯು ಸಾಗರದೊಂದಿಗೆ ಶಪಥ ತೊಟ್ಟು ತನ್ನ ಸ್ವಾತಂತ್ರ್ಯ ಕಾಯ್ದುಕೊಂಡಿತು. ಸಿಂಪಿನೊಳಗೆ ಸೇರಿ ಆಣಿಮುತ್ತಾಗಿ ಸ್ವಾತಂತ್ರ್ಯದೊಂದಿಗೆ ಪ್ರತಿಷ್ಠೆಯನ್ನೂ ಪಡೆಯಿತು.

ಏನೆಲ್ಲವೂ ಸುಲಭವಾಗಿ ದಿಢೀರನೆ ಪ್ರಾಪ್ತವಾಗಬೇಕೆಂಬ ಹಂಬಲದಿಂದ ನಮ್ಮ ಜನ ಅದೆಂತಹ ಮಾನಸಿಕ ದೌರ್ಬಲ್ಯಕ್ಕೆ ಒಳಗಾಗಿದ್ದಾರೆ ? ಸಹಜ ನಿಸರ್ಗ ವ್ಯವಹಾರದಿಂದ ಏನಿತೊಂದು ಅರ್ಥಪೂರ್ಣ ಸಂದೇಶ ಇಲ್ಲಿ ಮೂಡಿಬಂದಿದೆ ! !

ಮತ್ತೊಂದು ಕತೆಯಲ್ಲಿ ಕದಡಿದ ಮನದ ಒಬ್ಬನಿಗೆ ಒರತೆಯಲ್ಲಿ ರಾಡಿನೀರೇ ದೊರೆಯುತ್ತಿದೆ. ಆಗ 'ಆಟ್ಟುಂಡ ಅಜ್ಜ'ನೊಬ್ಬ ಬಂದು ಹೇಳುತ್ತಾನೆ.

"ತಿಳಿನೀರು ಬೇಕಾದರೆ ಮೊದಲು ಮನ ತಿಳಿಯಾಗ ಬೇಕು, ತಮ್ಮಾ, ಮನ ಕಲಕಿರುವವರಿಗೆ ತಿಳಿಯಾದುದು ಯಾವುದೂ ದೊರೆಯದು. ಈಶ್ವರನ ಸೃಷ್ಟಿಯಲ್ಲಿ ಮೊಂಡ ಮನುಜನಿಗೆ ಒಂಡು ನೀರು".

ಉದ್ವಿಗ್ನ ಮನದ ಇಂದಿನವರಿಗೆ ಸಮರ್ಪಕವಾದ ಸಂದೇಶವಿದು.

ತನ್ನ ನೆರೆಯಲ್ಲಿ ಬೆಳೆಯುತ್ತಿರುವ ಫುಂಡಿಯ ಗಿಡದ ಬಗೆಗೆ ಮೂಗುಮುರಿಯುತ್ತಿದ್ದ ಮಲ್ಲಿಗೆ ಲತೆಯ ದೃಷ್ಟಾಂತದಿಂದ "ಯಾರು ಯಾವಾಗ ಬೇಕಾಗುವರೋ ಯಾರಿಗೆ ಗೊತ್ತು ?" ಎಂಬ ಕಿರುಗತೆಯೊಂದು ರೂಪು

ಗೊಂಡಿದೆ. ಪುಂಡಿಯ ನಾರಿನ ಆಶ್ರಯ ಪಡೆದೇ ಮಲ್ಲಿಗೆ ಹೂ ಧನ್ಯತೆ ಪಡೆಯಬೇಕಾಗಿದೆ. ಇದೇ ಬಗೆಯ ಇನ್ನೊಂದು ಕತೆ ಕಬ್ಬು ಬಿದಿರುಗಳ ದೃಷ್ಟಾಂತದ್ದು.

ಬೇರೆ ಎರಡು ಕತೆಗಳ ಶೀರ್ಷಿಕೆಗಳು ಹೀಗಿವೆ :–

೧) "ಬೀಗ ಬೇಡ, ಬಾಗಿ ನಡೆ"

೨) "ಪರಪ್ರಕಾಶದ ರಾಶಿಗಿಂತ
ಸ್ವಪ್ರಕಾಶದ ಲವಲೇಶವೇ ಲೇಸು"

ಮಗದೊಂದು ಶೀರ್ಷಿಕೆ "ಒಲವಿನ ಬಲವಿದ್ದರೆ ಗೆಲಲಹುದು"

ಈ ಉಕ್ತಿಗೆ ದೃಷ್ಟಾಂತವಾಗುವ ಕತೆ ಅಲ್ಲಿ ಬಂದಿದೆ. ಮಾನವೀಯ ಬಾಳಿನಲ್ಲಿ ಪ್ರಸನ್ನತೆ ಪಡೆಯಲು ಒಂದು ಘನವಾದ ಸೂತ್ರವೆಂದರೆ "ಸರ್ವವೂ ಶಿವನ ಪ್ರಸಾದ" ಎಂಬ ನಿಲುಮೆಯಿಂದ ಸಾಗುವುದು. ಈ ಶೀರ್ಷಿಕೆಯ ಕತೆಯು ಈ ಹಾರದ ಕೊನೆಯ ತುಷಾರವಾಗಿದೆ. ಇದನ್ನು ದೈವವಾದವೆಂದು ಟೀಕಿಸುವ ತರ್ಕಬುದ್ಧಿಯವರೂ ಇದ್ದಾರೆ. ಆದರೆ ಅಂತಹರು ಒಂದಿಲ್ಲೊಂದು 'ವಾದ'ದ ದಾಸರಾಗಿರುವುದುಂಟು. ಬುದ್ಧಿ ಪ್ರಾಮಾಣ್ಯವೆಂಬುದು ಸೀಮಿತವಾದುದು, ಅಂತಃಸ್ಫುರಣೆಯು ಮೌಲಿಕವಾದುದು. ನಾವು ಅಂತಃಪ್ರಕಾಶವನ್ನು ಆಶ್ರಯಿಸದೆ ಹೋದರೆ ನಮ್ಮ ಬಾಳು ಉದ್ವಿಗ್ನತೆ, ಆಕ್ರೋಶ, ವ್ಯಾಕುಲಗಳಲ್ಲಿಯೇ ಸಾಗುವುದು.

ಈ ಕಿರುಗತೆಯಲ್ಲಿ ವನದ ಅಧಿದೇವತೆ ವಾಸಂತಿ ಹೇಳುತ್ತಾಳೆ :

"ನಿಷ್ಕಾರಣವಾಗಿ ನೀವೆಲ್ಲರೂ ಇಂದು ವ್ಯಾಕುಲಕ್ಕೆ ಒಳಗಾಗಿರುವಿರಿ. ಜೀವಿಗಳ ಸ್ವಭಾವವೇ ಹೀಗೆ. ತನ್ನಲ್ಲಿದ್ದುದನ್ನು ಮರೆತು ಅನ್ಯರಲ್ಲಿರುವುದಕ್ಕೇ ಹಾರೈಸಿ ಹಂಬಲಿಸಿ ದುಃಖಿಯಾಗುವುದೇ ಜೀವಿಯ ಲಕ್ಷಣ...

ಇದ್ದುದನ್ನು ಮರೆತು ಇಲ್ಲದುದಕ್ಕಾಗಿ ಮರುಗಿ ಕೊರಗಿ ಸೊರಗಬೇಡಿರಿ...ಸರ್ವವೂ ಶಿವಪ್ರಸಾದವೆಂದು ನಂಬಿ ಆನಂದದ ಅಮೃತವನ್ನು ಸವಿಯಿರಿ".

ಬಾಳಿನಲ್ಲಿ ಆನಂದವು ಎಲ್ಲರಿಗೂ ಬೇಕು. ಆದರೆ ಆದನ್ನು ಪಡೆದುಕೊಳ್ಳುವ ಸರಿಯಾದ ಪಥದಲ್ಲಿ ಸಾಗಬೇಕು. ಅಂತಹ ಪಥವನ್ನು 'ತುಷಾರಹಾರ'ವು ತೋರಿಸಿಕೊಡುತ್ತಿದೆ. ಹಾಗೆ ತೋರಿಸಿಕೊಡುವ ಬಗೆಯು ಯಶಸ್ವಿಯಾಗುವಂತಹದಿದೆ.

"ಸರ್ವವೂ ಶಿವಪ್ರಸಾದ"ವೆಂದು ಸ್ವೀಕರಿಸುವ ದೃಷ್ಟಿಕೋನವನ್ನು ಡಾ. ಸಿದ್ಧಯ್ಯ ಪುರಾಣಿಕರು ತಮ್ಮ ಬಾಳಿನಲ್ಲಿ ರೂಢಿಸಿಕೊಂಡಿರುವರೆಂದು ನಾನು ಭಾವಿಸಿದ್ದೇನೆ.

ಬುದ್ಧಿ ಶಕ್ತಿಯಂತೆ ಅವರ ನಿರೀಕ್ಷಣ ಶಕ್ತಿಯೂ ಪ್ರಖರವಾಗಿರುವುದೆಂದು 'ತುಷಾರಹಾರ' ಕೃತಿಯಿಂದ ತಿಳಿದುಬರುವಂತಿದೆ. ಆ ಬಗೆಯ ನಿರೀಕ್ಷಣೆಯ ಫಲವಾಗಿ ಬಂದ ಅರಿವನ್ನು ಕಲ್ಪಕತೆ, ಚಿಂತನಶೀಲತೆಗಳೊಂದಿಗೆ ಹೆಣೆದು ಈ "ಹಾರ"ವನ್ನು ಸಿದ್ಧಗೊಳಿಸಿದ್ದಾರೆ. ಇಲ್ಲಿಯ ಕಿರುಗತೆಗಳಿಂದ ಓದುಗರಿಗೆ ಆನಂದ–ಆಲೋಚನೆಗಳು, ಸಮಾಧಾನ–ಸಾಂತ್ವನಗಳು, ಅರಿವು–ವಿವೇಕಗಳು ಒದಗಿಬರುತ್ತಿವೆ. ಕಾವ್ಯಾನಂದರು ಚಿಂತನಶೀಲರೂ ಆಗಿರುವುದು ಸ್ಪಷ್ಟವಾಗುತ್ತಿದೆ. □

ಯಾರು ಹಿತವರು ನಿನಗೆ ಈ ಮೂವರೊಳಗೆ !
ನೀನಿತ್ತ ಕಸ ನುಂಗಿ ರಸವನೀಯುವ ಮಣ್ಣೋ !
ಬೆಂಕಿಯೊಳು ಸುಟ್ಟು ಅಲಂಕಾರವಾಗುವ ಹೊನ್ನೋ ?
ಬಾಳಹಣತೆಯೊಳೆಣ್ಣೆಯಾಗಿ ಉರಿಯುವ ಹೆಣ್ಣೋ ?

ಕಲ್ಲೋಲಮಾಲೆ, ಪು. ೨೩

# ಅಪರೂಪದವರು

● ಹಂಪ. ನಾಗರಾಜಯ್ಯ

**ಡಾ.** ಸಿದ್ಧಯ್ಯ ಪುರಾಣಿಕ ಅವರು ಕಳೆದ 40 ವರ್ಷಗಳಿಂದ ಸಾರಸ್ವತೋಪಾಸನೆಯಲ್ಲಿ ಅಗ್ರಗಣ್ಯರಾಗಿದ್ದಾರೆ. ಕರ್ನಾಟಕರಾಜ್ಯ ಸರ್ಕಾರದ ನಾನಾ ವಿಭಾಗಗಳ ಮುಖ್ಯಸ್ಥರಾಗಿ, ಹಿರಿಯ ಅಧಿಕಾರಿಯಾಗಿ ಅವರು ಸಲ್ಲಿಸಿದ ಸಾರ್ವಜನಿಕ ಸೇವೆಯ ಒಂದು ಮುಖವನ್ನು ಬಹುಜನರು ಅರಿತಿದ್ದಾರೆ. ಅದರಂತೆ ಅವರ ಸೇವೆಯ ಇನ್ನೊಂದು ಮುಖವನ್ನು ಕೂಡ ಕನ್ನಡನಾಡು ಕಂಡು ಆನಂದಪಟ್ಟಿದೆ. ಡಾ. ಮಾಸ್ತಿ ಅವರು, ಶ್ರೀ ಹೆಚ್. ಎಲ್. ನಾಗೇಗೌಡರು ಹಾಗೂ ಡಾ. ಸಿದ್ಧಯ್ಯ ಪುರಾಣಿಕ ಅವರು ದಕ್ಷ ಆಡಳಿತಗಾರರಾಗಿ, ಸಮರ್ಥ ಲೇಖಕರಾಗಿ ಕನ್ನಡ ನಾಡಿನಲ್ಲಿ ತ್ರಿಮೂರ್ತಿಗಳಂತೆ, ರತ್ನತ್ರಯಗಳಂತೆ ಮನೆ ಮಾತಾಗಿದ್ದಾರೆ.

ಸಿದ್ಧಯ್ಯ ಪುರಾಣಿಕರನ್ನು ಪ್ರಸಿದ್ಧಯ್ಯ ಪುರಾಣಿಕರೆಂದು ಕರೆದಿರುವುದು ಕೇವಲ ಶಬ್ದಲಾಲಿತ್ಯದಿಂದ ಮಾತ್ರ ಹೇಳಿದ ಮಾತಾಗಿರದೆ ಅರ್ಥಪೂರ್ಣವಾದ ಹೇಳಿಕೆಯೂ ಆಗಿದೆ. ಅವರು ಉತ್ತಮ ವಾಗ್ಮಿಗಳು. ಅವರು ಮಾತಿಗೆ ನಿಂತರೆ, ಅಕ್ಕಸಾಲಿಗನು ತಂಬಟ್ಟಿನಿಂದ ಬಂಗಾರದ ಎಳೆಗಳನ್ನು ಎಳೆಯುವಂತೆ ತಮ್ಮ ನೆನಪಿನ ಉಗ್ರಾಣದಿಂದ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಕವಿಗಳ ಕಾವ್ಯಗಳಿಂದ ನೂರಾರು ಸಾಲುಗಳನ್ನು ಪುಂಖಾನುಪುಂಖಾನುವಾಗಿ ಉದಾಹರಿಸುತ್ತಾರೆ. ಅವರು ಕೊಡುವ ಉದಾಹರಣೆಗಳು "ಉದಾಹರಣೆಗಳಿಗಾಗಿ ಉದಾಹರಣೆಗಳು" ಎಂಬಂತೆ ಆಗಿರದೆ ಹೇಳುವ ವಿಷಯಕ್ಕೆ ಸಮಯೋಚಿತವಾಗಿ, ಅರ್ಥಗರ್ಭಿತವಾಗಿ ಹೊಂದಿಕೊಳ್ಳುವ ಉದ್ಧರಣಗಳಾಗಿರುತ್ತದೆ. ಅವರ ಅಗಾಧ ಸ್ಮರಣ ಶಕ್ತಿಯನ್ನು ಕಂಡಾಗ ಡಾ. ಡಿ. ಎಲ್. ನರಸಿಂಹಾಚಾರ್ಯರ ನೆನಪಾಗುತ್ತದೆ.

ಕರ್ನಾಟಕದ ಉದ್ದಗಲಗಳನ್ನು ಅವರು ಸಂಚರಿಸಿ ಜನಮನವನ್ನು ವಿಶ್ವಾಸದಿಂದ ಸೂರೆಗೊಂಡಿದ್ದಾರೆ. ಬೆಳಗಾವಿ ಹಾಗೂ ಕೊಡಗು ಜಿಲ್ಲೆಗಳ ಜಿಲ್ಲಾಧಿಕಾರಿಗಳಾಗಿ ಜನಾನುರಾಗಿಗಳಾಗಿದ್ದಾರೆ.

ಕಳೆದ 20 ವರ್ಷಗಳಿಂದ ಅವರ ಆತ್ಮೀಯ, ಪ್ರಾಂಜಲ, ನಿರ್ಮಲ ಸ್ನೇಹದ ಲಾಭವನ್ನೂ ಆನಂದವನ್ನೂ ನಾನು ಯಥೇಚ್ಛವಾಗಿ ಅನುಭವಿಸಿ ಸುಖಿಸಿದ್ದೇನೆ, ಸಂತೋಷಪಟ್ಟಿದ್ದೇನೆ. ಹತ್ತಾರು ಸ್ಥಳಗಳಿಗೆ ಅವರೊಡನೆ ಅನೇಕ ದಿನಗಳ ಕಾಲ ಸಂಚರಿಸುವ ಅವಕಾಶವೂ ಲಾಭವೂ ನನ್ನ ಪಾಲಿಗೆ ಸಾಕಷ್ಟು ದೊರೆತಿದೆ. ಹತ್ತಿರದಿಂದ ಅರಿತಾಗ ಕೆಲವರ ಸಣ್ಣತನ ಕಂಡುಬರುವುದುಂಟು, 'ದೂರದ ಬೆಟ್ಟ ನುಣ್ಣಗೆ' ಎಂಬ ಗಾದೆಯಂತೆ. ಆದರೆ ಸಿದ್ಧಯ್ಯ ಪುರಾಣಿಕರ ರೀತಿಯೇ ಬೇರೆ. ಅವರನ್ನು ಹತ್ತಿರದಿಂದ ಅರಿತಷ್ಟೂ ಅವರ ಸ್ನೇಹಶೀಲ ಅಕುಟಿಲ ಸ್ವಭಾವ, ಮುಕ್ತ ಮನಸ್ಸು, ಸಜ್ಜನಿಕೆ, ಧಾರಾಳತೆ ಚೆನ್ನಾಗಿ ಪರಿಚಯವಾಗುತ್ತದೆ. ನಾನು ಪಡೆದ ಅನೇಕ ಹಿರಿಯರ ಪ್ರೀತಿ ವಾತ್ಸಲ್ಯಗಳಲ್ಲಿ ಡಾ. ಸಿದ್ಧಯ್ಯ ಪುರಾಣಿಕರ ಪ್ರೀತಿ ಬಹಳ ದೊಡ್ಡದು ಎಂದು ಭಾವಿಸಿದ್ದೇನೆ.

ಅವರ ಸೇವೆಯ ಸಂಕೇತವಾಗಿ ಒಂದು ಸಂಭಾವನಾ ಗ್ರಂಥವನ್ನು ಇದೀಗ ಪ್ರಕಟಿಸುತ್ತಿರುವುದು ತುಂಬಾ ಪ್ರಾಶಸ್ತ್ಯವಾಗಿದೆ. ಇದಕ್ಕಾಗಿ ಶ್ರಮಿಸಿದ ಸಮಿತಿಯವರಿಗೆಲ್ಲಾ ನನ್ನ ನಮಸ್ಕಾರಗಳು. □

# ಸಿದ್ಧಯ್ಯ ಪುರಾಣಿಕರು

● ಪ್ರೊ. ಬಿ. ಎಚ್. ಶ್ರೀಧರ

ಪ್ರಿಯ ಶ್ರೀ ಸಿದ್ಧಯ್ಯ ಪುರಾಣಿಕರು ಬಹಳ ಒಳ್ಳೆಯ ಗೆಳೆಯರು ; ಸಾದಾಜೀವನ ನಡೆಸುವವರು. ನಾನು ಕಂಡ ಹಾಗೆ ಅವರಲ್ಲಿ ಯಾವ ಮಾನಸಿಕ ಸಂಕೀರ್ಣತೆಯೂ ಇಲ್ಲ : ತಮ್ಮ ಕೈಲಾದ ನೆರವನ್ನು ಇತರರಿಗೆ ಸಲ್ಲಿಸುತ್ತ ಬಂದವರು. ಕನ್ನಡದ ಕಾವ್ಯದಲ್ಲಿ ಆನಂದವನ್ನು ಕಂಡ ಪುರಾಣಿಕರು ತಮ್ಮ ಪ್ರಾಮಾಣಿಕತೆ – ಔದಾರ್ಯಗಳಿಂದ ಹತ್ತು ಜನರಿಗೆ ಬೇಕಾದವರು. ಅವರೆಂದೂ ಚರ್ಚಾಸ್ಪದ ವ್ಯಕ್ತಿಗಳಾಗಿರಲಿಲ್ಲ. "ಅತಿ ಸರ್ವತ್ರ ವರ್ಜಯೇತ್" ಎಂಬುದನ್ನು ಅವರಿಗೆ ಯಾರೂ ಹೇಳಕೊಡಬೇಕಾಗಿ ಬರಲಿಲ್ಲ. ಆದುದರಿಂದ ಅವರ ಜೀವನವು ಅನುಕರಣೀಯ ವಾಯಿತು.

"ಯಾವುದನ್ನು ಕೆಲವರು ಶಕ್ತಿವಂತರು ಮಾಡು ತ್ತಾರೋ ಅದು ಆಗುತ್ತದೆ. ಉಳಿದವರು ಕುರಿಮಂದೆ ಯಂತೆ ಅವರನ್ನು ಅನುಕರಿಸುವರು" ಎಂಬ ವಿವೇಕಾನಂದ ವಾಣಿಯು ದುರನುಕರಣಕ್ಕೆ ಸೀಮಿತ. ಆದರೆ ಇಂದು ನಮ್ಮ ದೇಶದಲ್ಲಿ ಕುರಿಯಂಥ ಅಂಧಾನುಕಾರಿಗಳು ಹೆಚ್ಚಾಗಿದ್ದಾರೆ. ಅಂದರೆ ದುಃಶೀಲ, ದುರ್ವಾದ, ದುರುದ್ದೇಶ, ದುರ್ವ್ಯವಹಾರಗಳನ್ನು ಮಾಡುವ ಗಲಭೆಗಾರರನ್ನು ಅನುಕರಿಸಿ ಮೋಸಹೋಗುತ್ತಿರುವವರು ಅಧಿಕ. ಕಾಪ್ಯಾನಂದರ ಅಲಿಪ್ತತೆಯೊಂದು ಅಪವಾದ.

"ತ ಏವ ಉತ್ಕ್ರಾಂತ ಮೇಧಾ ಅಮೇಧ್ಯಾಃ ಪರ ಪಸ್ತಸ್ಮಾದೇತೇಷಾಂ ನಾಶ್ನೀಯಾತ್" ಎಂಬ ಐತರೇಯ ಬ್ರಾಹ್ಮಣೋಕ್ತಿಯಂತೆ ಮನುಷ್ಯಾದಿ ಸರ್ವಪ್ರಾಣಿಗಳೂ ಯಜ್ಞಾದಿ ಹಿಂಸಾ ಕಾರ್ಯಗಳಿಗೆ ನಿಯೋಜ್ಯವೆನ್ನಿಸವು —ಎಂಬುದು ಭಾರತದ ಮಾನವೀಯತೆಯ ತಳಹದಿ. ಹಾಗೇ —

"ಸರ್ವೋ ದಂಡಜಿತೋ ಲೋಕೋ ದುರ್ಲಭೋಹಿ ಶುಚಿರ್ನರಃ"– ತಪ್ಪಿಗೆ ತಕ್ಕ ಶಿಕ್ಷೆಯಿಲ್ಲದಿದ್ದರೆ ಮನುಷ್ಯರು ನಿರ್ಮಲಶೀಲರಾಗಿ ಉಳಿಯರು—ಎಂಬುದು ಮನೂಕ್ತಿ. ಈ ಎರಡು ಸೂತ್ರಗಳನ್ನು ದೇಶ-ಕಾಲ-ಸಂದರ್ಭಗಳಿಗೆ ತಕ್ಕಂತೆ ಅನುಸರಿಸಬಲ್ಲ ಪ್ರಜೆಯೇ ನಿಜವಾದ ಭಾರತೀಯ. ಅಂಥ ಭಾರತೀಯತೆಯನ್ನು ಆಡಳಿತಗಾರಿಕೆಯಲ್ಲಿ ತೋರಿಸಬಲ್ಲವರಿಂದು ವಿರಳ. ಪುರಾಣಿಕರ ಸಾಧುತ್ವವು, ಆದ್ದರಿಂದಲೇ, ದೌರ್ಬಲ್ಯವಾಗಲಿಲ್ಲ.

"ಯದ್ ಘ್ರಾಣಭಕ್ಷೋವಿಹಿತಃ ಸುರಾಯಾಃ
ತಥಾ ಪಶೋರಾಲಭನಂ ನ ಹಿಂಸಾ ।
ಏವಂ ವ್ಯವಾಯಃ ಪ್ರಜಯಾ ನ ರತ್ಯಾ
ಇಮಂ ವಿಶುದ್ಧಂ ನ ವಿದುಃ ಸ್ವಧರ್ಮಂ
॥ ಶ್ರೀಮದ್ ಭಾಗವತ ॥

ಎಂಬ ಮಾತು ಸ್ವಾಯಂಭುವ ಮನುವಿಗೂ ಸಂಮತ ವೆನ್ನಲಾಗಿದೆ :

"ಯೋಽಹಿಂಸಕಾನಿ ಭೂತಾನಿ ಹಿನಸ್ತ್ಯಾತ್ಮ
ಸುಖೇಚ್ಛಯಾ
ಸಜೀವಂಶ್ಚ ಮೃತಶ್ಚೈವ ನಕ್ವಚಿತ್ ಸುಖಮೇಧತೇ"

ಅದರಿಂದಲೇ ಮನ್ವರ್ಥಜ್ಞರಾದ ಗಾಂಧಿಯವರು ವ್ಯಾಸ ರಂತೆ ಸತ್ಯಾಹಿಂಸೆಗಳು ಒಂದೇ ನಾಣ್ಯದ ಎರಡು ಮುಖ

ಕೆಂದರು, ಅವರೆಂದುದನ್ನು ಇಂದು ಅನೇಕರು ಎನ್ನುತ್ತಾರೆ ; ಆದರೆ ಮಾಡುವುದೂ ಇಲ್ಲ, ಮಾಡಿಸುವುದೂ ಇಲ್ಲ. ಈ ವರ್ಗಕ್ಕೆ ಪ್ರಿಯ ಪುರಾಣಿಕರು ಸೇರಲಿಲ್ಲ.

"ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ವಿಕಂ
ಸ್ಮೃತಂ"

ಎಂಬುದು ಗೀತೋಕ್ತಿ. ಇದನ್ನರಿಯದ ರಾಜ್ಯಭಾರವು ಪ್ರಜಾದ್ರೋಹಕ್ಕೆ ಕಾರಣವಾಗುತ್ತದೆ. ಹಾಗೇ ಇದನ್ನು ತಪ್ಪಾಗಿ ತಿಳಿದು ಅನ್ವಯಿಸಿದರೂ ಅದೇ ಪರಿಣಾಮ ಉಂಟಾಗುತ್ತದೆ ; ಸರಿಯಾಗಿ ತಿಳಿದು ತಪ್ಪಾಗಿ ಅನ್ವಯಿಸಿದರೂ ಹಾಗೇ. ಇಂಥ ಧರ್ಮಸೂಕ್ಷ್ಮವನ್ನು ಕುರಿತೋದದೆಯೂ ಪಾಲಿಸಿದ ಜೀವ ಪುರಾಣಿಕರದು. ಅಂತೆಯೇ ಅವರ ಕಾವ್ಯರಚನೆಯಲ್ಲಿಯೂ ಅನುದಾತ್ತತೆ ಎಲ್ಲಿಯೂ ಪ್ರವೇಶಿಸಲಿಲ್ಲ ; ಚೆನ್ನವೀರ ವಿಮರ್ಶೆಯ ಹೃದಯ ಸ್ವರೂಪವು ಅವರ ಬರೆಹ-ಭಾಷಣಗಳಲ್ಲಿ ತಲೆ ಹಾಕಲಿಲ್ಲ ; ಮಾನವ ಸಂಬಂಧವಾವುದರಲ್ಲೂ ಅದು ಕಾಣಿಸಲಿಲ್ಲ. The Spirit of Service ಸೇವಾ ಮನೋಭಾವವು ಅವರ ಮುಖಮುದ್ರೆಯಲ್ಲಿ ಯಾವಾಗಲೂ ಪ್ರಸನ್ನವಾಗಿರುತ್ತಿತ್ತು. ಕನ್ನಡದ ಆಧುನಿಕ ಲೇಖಕರಲ್ಲಿ ಅನೇಕರಿಗೆ ಇಂಥ ಸಂಸ್ಕೃತಪ್ರಜ್ಞೆ ಬೇಕಾದ ಪ್ರಮಾಣದಲ್ಲಿ ಇಲ್ಲವಾಗಿರುವುದನ್ನು ಕಂಡು ನೊಂದಿದ್ದೇನೆ.

ದೇಶವು ಸ್ವಾತಂತ್ರ್ಯ ಪಡೆದ ಮೇಲೆ ಉಂಟಾದ ಮನೋಮಾಲಿನ್ಯವು ಕೀರ್ತಿಗರ್ಹರಲ್ಲದ ಅನೇಕ ಪ್ರಸಿದ್ಧರ ಮಾತು-ಕೃತಿಗಳಲ್ಲಿ ಪ್ರಕಟವಾಯಿತು. ಅಂಥ ವಾತಾವರಣದಲ್ಲಿ ತೋರಿದ ರಾಜಕೀಯ ಚದುರಂಗದಾಟದಿಂದ ಉದಾತ್ತರನೇಕರು ಎಲೆಮರೆಯ ಕಾಯಿಗಳಂತಾದರು ; ಅರಿಷಡ್ವರ್ಗಕ್ಕೆ ದಾಸರಾದವರೂ ಅನೇಕರು.

ಅರಿಷಡ್ವರ್ಗದಿಂದ ಆದಷ್ಟು ದೂರವಿರಲು ಯತ್ನಿಸುತ್ತಿರುವ ಜನರು ನನಗೆ ಸುಪ್ರಿಯರು. ಅವುಗಳಿಗೆ ಸ್ಥಾಯಿತ್ವ ಕೊಟ್ಟಲ್ಲಿ ಮಾನವೀಯತೆಯು ಬಲಿಷ್ಠವಾಗಿ ಉಳಿಯಲಾರದು. ಅವು ರಾಜಕೀಯಾದಿ ಸರ್ವ ಚಟುವಟಿಕೆಗಳನ್ನೂ ವ್ಯಾಪಿಸಬಲ್ಲವು ; ಸರ್ವಶಾಸ್ತ್ರಜ್ಞಾನಗಳ ವಿಚಾರಧಾರೆಗಳನ್ನೂ ಮಾರ್ಪಡಿಸಬಲ್ಲವು ; ಸರ್ವದೃಷ್ಟಿಕೋನಗಳ ಹಿಂದೆಯೂ ಅವು ಅಡಗಿ ಪ್ರಭಾವಿಗಳಾಗಿ ನಿಲ್ಲಬಲ್ಲವು, ಕುಟುಂಬಾದಿ ಸರ್ವ ಮಾನವಸಂಘಗಳಲ್ಲೂ ಅವು ಎದ್ದು ಉರಿಯ ಬಲ್ಲವು. ಅವುಗಳ ವಿಶ್ರುಂಖಲ ವೃತ್ತಿಯಿಂದ ಮಾನವ ವ್ಯಕ್ತಿತ್ವವು ವಿಕೃತಹೊಂದುತ್ತದೆ. ವಿಕೃತ ಕಾಮ, ವಿಕೃತ ಕ್ರೋಧ, ವಿಕೃತ ಲೋಭ, ವಿಕೃತ ಮೋಹ, ವಿಕೃತ ಮದ, ವಿಕೃತ ಮಾತ್ಸರ್ಯಗಳು ಅಧರ್ಮ್ಯಗಳು, ತಮಃಶಕ್ತಿಗಳು, ಶಾಶ್ವತ ಸಮಾಧಾನಕ್ಕೆ ಮಾರಕಗಳು. ಅವು ವ್ಯಕ್ತಿತ್ವದ ಸರಳತನಕ್ಕೆ ವಿಘ್ನಗಳು. ಈ ಅಂಶ ಗೊತ್ತಿದ್ದರೂ ಈ ದೋಷಕಾರಕ ಮನೋಭಾವನೆಗಳ ದಾಸರಾಗಿ ವರ್ತಿಸುವವರು ರಾಷ್ಟ್ರಹಾನಿಗೆ ಕಾರಣರಾಗುವರು. ರಾಷ್ಟ್ರಹಾನಿಕಾರಕ ವ್ಯಕ್ತಿಗಳ ನಡುವೆ ಕೆಲಸ ಮಾಡಬೇಕಾದ ಒತ್ತಾಯ ಬಂದಾಗಲೂ ಅವರ ಪ್ರಭಾವಕ್ಕೆ ಒಳಗಾಗದ ಶುದ್ಧಸತ್ವವಂತಿಕೆ ಸಾದಾಜೀವಿಗಳದು, ಸಭ್ಯರದು. ಪುರಾಣಿಕರ ಸಭ್ಯತೆ ವಿತನ್ಮುಖವಾದುದು. ಆದುದರಿಂದ ಅವರ ಜೀವನವೂ ಕಾವ್ಯವೂ ಮೂಢ-ಮೂರ್ಖರಿಗೆ ಅನಾಕರ್ಷಕಗಳಾದವು. ಕರ್ನಾಟಕದಲ್ಲಿ ಶ್ರೀಯುತ ಬೆಟಗೇರಿ ಕೃಷ್ಣಶರ್ಮರ ಚರಿತ್ರೆಯೂ ತತ್ಸಮ.

"ನೀಃಸ್ಸಾರಸ್ಯ ಪದಾರ್ಥಸ್ಯ ಪ್ರಾಯೇಣಾಡಂಬರೋ
ಮಹಾನ್

ನ ಸುವರ್ಣೇ ಧ್ವನಿಸ್ತಾದೃಗ್ ಯಾದೃಕ್ಕಾಂ
ಸ್ಯೇಽಭಿಜಾಯತೇ"

ಕಂಚಿನ ಸ್ವರವು ಕಾಂಚನಕ್ಕಿಲ್ಲ ; ಕಾಂಚನದ ಸಾರವೂ ತೇಜಸ್ಸೂ ಕಂಚಿಗಿಲ್ಲ. ಪ್ರಚಾರ, ಜಾಹೀರಾತು, ಸ್ವಪ್ರಶಂಸೆ, ಸ್ವಾರ್ಥಾಗ್ರಹಗಳು ಕಂಚಿನ ವ್ಯಕ್ತಿತ್ವಕ್ಕೆ ಸಹಜ.

The perfect worker must have patience, a feeling for subtlety and an accuracy that comes from a form of intuition, instuitive mind, not of the reasoning and logical mind, which can achieve only a laboured accuracy. He must have the immediate perception of the intuitive mind and also a conscious hand, not a mechanical hand. Every movement of the hand must be conscious, only so can perfection be built up ; there must also be a discerving eye, that is, an eye that distinguishes and perceives how things are developing, how things vary from the original conception when they are being

shaped, how they are to be combined, what are the new elements that enter, and such matters— ಎಂಬ (Service Letter No. 89, Dated 14-4-1980, Pondicherry) ಅನುಚ್ಛೇದವು ಪೂರ್ಣತೆಯನ್ನು ಹೊಂದಿದ ಕರ್ತೃತ್ವದ ಲಕ್ಷಣಗಳನ್ನು ಹೇಳುತ್ತದೆ. ಸಹನೆ, ಸೂಕ್ಷ್ಮಗ್ರಾಹಿತ್ವ; ಪ್ರಾತಿಭ ನಿರ್ದುಷ್ಟತೆ, ಅಂಥದೇ ಆದ ನೇರಗಾಣ್ಕೆ, ಜಾಗರಿತ ಹಸ್ತ (ಯಾಂತ್ರಿಕತೆಯಿಂದ ಚಲಿಸುವ ಹಸ್ತವಲ್ಲ), ವಸ್ತುವಿಕಾಸ ಕ್ರಿಯೆಯನ್ನು ಪರೀಕ್ಷಿಸುವ ದೃಷ್ಟಿ ಮುಂತಾದವು ಲೋಕಸಂಗ್ರಹ (altruism) ಮಾಡುವ ಮಹಾವ್ಯಕ್ತಿಗೆ ಇರಬೇಕಾದ ಲಕ್ಷಣಗಳು. ಈ ಅರವಿಂದಾಯಣದ ಬೆಳಕು ಸತ್ವಪ್ರಧಾನರಲ್ಲಿ ಸಹಜದೃಶ್ಯ. ಯಾರಿಗೆ ? ಅಜ್ಞನಿಗಲ್ಲ, ವಿಶೇಷಜ್ಞನಿಗೆ. ಶ್ರೀಸಾಮಾನ್ಯನ ಹೆಸರಿನಲ್ಲಿ ಮಾರಾಟವಾಗುತ್ತಿರುವ ಅಜ್ಞಾನ ಬೀಜಗಳ ಸದ್ಮದ ಪೇಟೆಯಲ್ಲಿ ಅಪೂರ್ವ ಪೌರಾಣಿಕತೆಯು ಮಾರಾಟವಾಗಲಾರದು ; ಏಕೆಂದರೆ ಅದರ ಮಾರ್ಗವು ನಿರಾಡಂಬರ, ಏಕಾಗ್ರತಾನುಬದ್ಧ ಮತ್ತು ಸ್ವಾರ್ಥವಿಮುಖ. ಅಲ್ಲದೆ, ಲೋಕೋಪಕಾರೋನ್ಮುಖ.

"ದೇವರ ಹೆಸರಿನಲ್ಲಿ ಖೂನಿಮಾಡಿ ಯಜ್ಞವೆಂದು ಕರೆದಂತೆಯೇ ರಾಷ್ಟ್ರೀಯತೆಯ ಹೆಸರಿನಲ್ಲಿ ಖೂನಿಮಾಡಿ ಅದನ್ನು ದೇಶಸೇವೆ ಎಂಬ ನಟಸಾರ್ವಭೌಮರೂ ಇಂದಿನ ರಾಜಕೀಯದಲ್ಲಿ ಬೇಕಾದಷ್ಟು ಜನರು ಸಿಗುತ್ತಾರೆ" (ರಾಷ್ಟ್ರಸೂತ್ರ, ಪುಟ ೩೯) ಎಂಬುದು ಅನುಭವಾಮೃತ. ಏಕೆಂದರೆ

"ಚಾರು ಚಂಪಕಮನಾ ಚಂಚರೀಕಂ ತಿರ–
ಸ್ಕಾರಮಂ ಮಾಡುವುದು ಪಗಲಂ ಸದಾ ಗೂಗೆ
ಸೇರದಿರ್ಪುದು ಚಂದ್ರನಂ ಕಂಡ ಚಕ್ರವಾಕಂ
ದುಃಖಮಂ ಮಾಳ್ಪುದು ॥
ಕ್ಷೀರಮಂ ಪೈತ್ಯಜ್ವರಂ ಪಿಡಿದವಂ ಕಾಣೆ
ದೂರೀಕೃತಂ ಮಾಳ್ಪನುತ್ತಮರುಮಂ ಕಂಡ
ಕ್ರೂರಮಾನಸರು ನಿಂದಿಸಿ ಮಾತನಾಡುವುದು
ನಿಜವಿಳಾಮಂಡಳದೊಳು ॥"
(ಮಂಗರಸನ ಸಮ್ಯಕ್ತ್ವಕೌಮುದಿ)

ಚಂಚರೀಕಾದಿಗಳನ್ನು ಹೋಲುವ ಮಾನವರ ದಾನವೀಯತೆಗೆ ನೀರುಣಿಸಿ ಗೊಬ್ಬರಹಾಕಿ ಬೆಳೆಯಿಸುತ್ತಿರುವ ರಾಜಧರ್ಮದ ದೆಸೆಯಿಂದ ವ್ಯಕ್ತಿಜೀವನದ ಸಾಮಾಜಿಕ ಆವರಣವು ಹೊಲಸಾಗಿ ಹೋಗುತ್ತಿದೆ ಎಂಬುದನ್ನು ಪ್ರಿಯ ಪುರಾಣಿಕರು ಬಲ್ಲರು. ವಿಶ್ವವಿದ್ಯಾನಿಲಯಗಳು ಕೂಡ ಇಂಥ ಹೊಲಸಿನಿಂದ ದೂರವಿರಲಾಗದೆ ಹೋಗಿರುವ ಹಾಗೂ ನ್ಯಾಯಾಲಯಗಳು ಸಹ ಕೆಲವೊಮ್ಮೆ ಸ್ವತಂತ್ರವಾಗಿ ನಿಷ್ಪಕ್ಷಪಾತ ತೀರ್ಮಾನಗಳನ್ನು ಕೊಡಲಾರದಂತಹ ಪರಿಸ್ಥಿತಿ ತಲೆದೋರಿರುವ ಈ ನವ್ಯಯುಗದಲ್ಲಿ ಯಾರ ಬೆಲೆಯನ್ನು ಯಾರು ಯಾರೋ ಹೇಗೆ ಹೇಗೋ ಕಟ್ಟುವುದು ಸಾಧಾರಣವಾಗಿದೆ. "ಅಕ್ಕಕ್ಕು ಬಚ್ಚಲುದಕಂ ನೋಡಲಾರ ವಿಾಹಕ್ಕೆ ಯೋಗ್ಯಂ ? ನಾಯ್ಗೆ ಹಾಲುಳ್ಳೊಡಾವನೂಟಕ್ಕೆ ಯೋಗ್ಯಂ ?" (ಹರಿಶ್ಚಂದ್ರಕಾವ್ಯ) ಎಂದು ಕೇಳುವ ಅಧಟರು ಕನ್ನಡನಾಡಿನಲ್ಲಿರುವರೇ ? ಪತಿತೋದ್ಧಾರದ ಹೆಸರಿನಲ್ಲಿ ಗದ್ದಲಿಸುವ ಪತಿತರ ಪಾತಕದ ಜ್ವಾಲೆ ಪಸರಿಸಿರುವಾಗ ವಿಶ್ವಮಾನವ ಧರ್ಮದಂತೆ ತಮ್ಮಷ್ಟಕ್ಕೆ ತಾವು ಅನ್ಯರ ಅಪಪ್ರಭಾವಗಳಿಗೆ ವಶರಾಗದಿರುವ ತಪೋಮಯ ಗೃಹಸ್ಥಜೀವನದ ಮೂಲಕ ಅರಳಿನಿಂತು ಜನಜೀವನದಲ್ಲಿ ಪರಿಮಳ ಹಬ್ಬಿಸುವ ಸಜ್ಜನರಿಗೆ ತಡವಾಗಿಯಾದರೂ ರತ್ನಪರೀಕ್ಷಕರ ಮನ್ನಣೆ ದೊರಕುವುದು ಶುಭೋದಯಕ್ಕೆ ಮುಂಗುರುಹು. ನಿನ್ನೆಯು ಇಂದಿನಲ್ಲಿ ಇಂದು ಮುಂದಿನಲ್ಲಿ ತನ್ನ ಸಾರವನ್ನು ಪ್ರಕಟಿಸುವ ಕಾರಣ–ಕಾರ್ಯ ಸಂಪ್ರದಾಯನುಸಾರವಾಗಿ, ನಾಳಿನ ನಾಡು ಶುಭೋದಯದ ಹೆಚ್ಚಿನ ಹಂತಗಳನ್ನು ಏರಲು ಇಂದು ಬಾಳುತ್ತಿರುವ ಪ್ರಜೆಗಳಿಗೆ ಪುರಾಣಿಕ ಪ್ರಜ್ಞೆಯು ಅರ್ಥವಾಗಬೇಕು. ಆರಕ್ಕೇರದ ಮೂರಕ್ಕಿಳಿಯದ ಮರ್ಯಾದೆಯ ಗೆರೆಗಳೊಳಗೇ ಇದ್ದು, ಕಾವ್ಯಜೀವನಗಳಲ್ಲಿ ಭಿನ್ನಧ್ಯೇಯಗಳನ್ನು ಇಟ್ಟುಕೊಟ್ಟರೆ, ಕರಣತ್ರಯದ ಶುದ್ಧಿಯಿಂದ ಸಜ್ಜನರನ್ನಾಯ್ದು ಅವರೊಡನೆ ಸಹಕರಿಸಿ ಸರ್ವೋದಯಕ್ಕಾಗಿ ಬಾಳನ್ನು ಸವೆಯಿಸುತ್ತ ಬರುವ ಪುರಾಣಿಕರನ್ನು—

"Fair as a star when only one
Is shining in the sky—

"ಆಕಾಶದಲ್ಲಿ ಒಂದೇ ಒಂದಾಗಿ ಹೊಳೆಯುತ್ತಿರುವ ಸುಂದರವಾದ ನಕ್ಷತ್ರಕ್ಕೆ" ಹೋಲಿಸಬಹುದಾಗಿದೆ. ಗುರುವು ನಿಜವಾಗಿ ಗುರುತ್ವವುಳ್ಳವನೇ ಆಗಿದ್ದರೆ, ಅವನ ಆಜ್ಞೆಯನ್ನು ಉಲ್ಲಂಘಿಸದೆ ಪಾಲಿಸುವ ಮತ್ತು ನಾವು ಮಾತ್ರ ಗುರುತ್ವವುಳ್ಳವರ ಮಾತುಗಳನ್ನು ಕೇಳದೆ, ಯುಕ್ತಿಯುಕ್ತವಾಗಿ ನಡೆದುಕೊಳ್ಳುವ ವೀರಯೋಧನಂಥ ಆತ್ಮಗಳಿಂದು ರಾಷ್ಟ್ರೋತ್ಥಾನಕ್ಕೆ ಬೇಕಾಗಿವೆ.

ಅವುಗಳನ್ನು ನೋಡಬಯಸುವವರು ಶ್ರೀ ಸಿದ್ಧಯ್ಯ ಪುರಾಣಿಕರ ಮನೆಗೆ ಹೋಗಬೇಕು.

ವಿಮರ್ಶೆ, ವಿಚಾರ, ವಿವೇಕ, ವಿಚಿಕಿತ್ಸೆ, ವಿಜ್ಞಾನ, ವಿನಿರ್ಣಯಗಳಲ್ಲಿ ವಸ್ತುಸತ್ಯದ ವಧೆಯಾದುದಕ್ಕೆ ಕನ್ನಡ ನಾಡು ಕೂಡ ಸದ್ಯಃ ಹಲವಾರು ಲಿಖಿತ ಉದಾಹರಣೆಗಳಿಂದ ತುಂಬಿದೆ. "ಸಂಶಂಬಿಸುವುದೋ" ಸಂಶೋಧಿಸುವುದೋ ? ಅದಿದ್ದಲ್ಲಿ ಇದಿಲ್ಲ, ಇದಿದ್ದಲ್ಲಿ ಅದಿಲ್ಲ. ಕಡಿವಾಣವಿಲ್ಲದ ಕುದುರೆಗಳಿಂದ ನಡೆಯುವ ಕಾರಭಾರದಲ್ಲಿ ಸಿಲುಕಿದ ಕರ್ತವ್ಯಪರಾಯಣರು ನಂದಿದಂತಿರಬೇಕಾಗುತ್ತದೆ. ಅಪೂಜ್ಯರ ಪೂಜೆ ಮತ್ತು ಪೂಜ್ಯರ ತಿರಸ್ಕಾರಗಳಿಂದ ಕಲುಷಿತವಾದ ಆವರಣದಲ್ಲಿ ನಾಡಿನ ಏಳ್ಗೆಯನ್ನು ನಾಳಿನ ಇತಿಹಾಸಕಾರನು ಗುರುತಿಸಲಾರನು : ದುರುಪಯುಕ್ತತೆ ಮತ್ತು ನಿರುಪಯುಕ್ತತೆಗಳ ಲಾಂಛನಗಳಿಂದ ತುಂಬಿದ ಜನಜೀವನದ ಚಿತ್ರವೊಂದೇ ಸಂಶೋಧಕನಿಗೆ ದೊರಕುವಂತಾಗುವುದು.

"ಒಳ್ಳಿದರವೊಡನಿರ್ದ ಕಳ್ಳನೊಳ್ಳಿದನಕ್ಕು  
ಒಳ್ಳಿದನು ಕಳ್ಳರೊಡನಾಡೆ ಅವ ಶುದ್ಧ  
ಕಳ್ಳನೇ ಅಕ್ಕು ಸರ್ವಜ್ಞ"

ಎಂಬ ಮಾತಿನ ಉತ್ತರಾರ್ಧದ ಪರಿಣಾಮಕ್ಕೆ ತುತ್ತಾಗದೆ ಉಳಿದ ಕೆಲವರಲ್ಲಿ ಪುರಾಣಿಕರು ಒಬ್ಬರು. ಮಾತಿನ ಧ್ವನಿಯಿರುವ ಅವರ ಮೌನವು ಸಂಸ್ಕೃತಜ್ಞೀಯು. ಆದರೆ ಅದನ್ನು ಕಂಡ ಪ್ರಾಧಿಕಾರಿಗಳೂ "Admire and do otherwise–ಮೆಚ್ಚು ಮತ್ತು ಮೆಚ್ಚಿದವರ ವರ್ತನೆಯಂತೆ ನಡೆದುಕೊಳ್ಳದಿರು" ಎಂಬ ವಿಕಟನೀತಿಯ ಬೆನ್ನುಹತ್ತಿ ಹೋಗುತ್ತಿರುವುದು ಇಂದಿನ ಸ್ವದೇಶೀಯ ವೈಚಿತ್ರ್ಯ. ಎಲ್ಲರೂ ತಾವು originality ಅನನ್ಯತೆಯುಳ್ಳ ಕವಿಗಳು, ಲೇಖಕರು, ಆಡಳಿತಗಾರರು ಎಂದೂ ಉಕ್ತ ಅನನ್ಯತೆಯು ನ್ಯಾಯವೂ ಸರ್ವೋಪಕಾರಿಯೂ ಎಂದು ತಮ್ಮಷ್ಟಕ್ಕೇ ತಾವು ಭಾವಿಸಿಕೊಂಡು ಗುಂಪುಗುಳಿತನದಿಂದ ಜನಜೀವನಸಾಗರದಲ್ಲಿ ಅಪಸ್ಮಾರ ತರಂಗಗಳೇಳಲು ಕಾರಣರಾಗುವಂಥ ಪ್ರಜಾಪ್ರಭುತ್ವವು ಪ್ರಶಂಸನೀಯವೇ ? ಈ ಅಪ್ರಾಶಸ್ತ್ಯವನ್ನು ಪ್ರಶಸ್ತವೆಂದು ಪ್ರಚಾರ ಮಾಡುವ ಕನ್ನಡಿಗರಲ್ಲಿ ಪುರಾಣಿಕರು ಸೇರಿಲ್ಲ. ಕಾಳಿದಾಸ – ಠಾಕೂರಾದಿಗಳು ಕವಿಗಳಲ್ಲ, ತಾವು ಮಾತ್ರ (ಅಜಾವಿಕ) ಮಹಾಕವಿಗಳೆಂದು ನಿರ್ಲಜ್ಜೆಯಿಂದ ವೇದಿಕೆಯನ್ನೇರಿ ಕೂಗುವವರ ನಡುವೆ ಅವಿಚಲ ಚಿತ್ತರಾಗಿ ಉಳಿದುಕೊಂಡ ಅಪೂರ್ವರಲ್ಲಿ ಪುರಾಣಿಕರೊಬ್ಬರು. ಕೇಂದ್ರಸರಕಾರ ಗದಿಸಿದ ಲಕ್ಷಣದಂತೆ ಕಾವ್ಯವು any combination of words–ಪದಗಳ ಯಾವುದಾದರೊಂದು ಸಂಘಟನೆಯಾಗಿ ಹೋಗುತ್ತಾ ಬಂದಂತೆ ಜೀವನವೂ any combination of deeds or a combination of any deeds – ಕೃತಿಗಳ ಯಾವುದಾದರೊಂದು ಸಂಘಟನೆ ಅಥವಾ ಯಾವ ಯಾವುವೋ ಆದ ಕೃತಿಗಳ ಒಂದು ಸಂಘಟನೆ ಎಂಬಂತಾದ ಈ ಅವಧಿಯಲ್ಲಿ ಪುರಾಣಿಕರಂಥವರ ಕಾವ್ಯವೂ ಜೀವನವೂ out of date–ಕಾಲಕ್ಕೆ ತಕ್ಕವುಗಳಾಗಿಲ್ಲ ಎಂದು ಯಜಮಾನಂ ಮನ್ಯರು ಗಳಹಿದರೆ ಆಶ್ಚರ್ಯವೆನ್ನಿಸದು.

Who buys a moment's mirth  
to wail a week ?  
Who sells eternity  
to get a toy ?"

ಎಂದು ಷೇಕ್ಸ್‌ಪಿಯರ್ ಹೇಳಿದ್ದರಿಂದ ಅವನು ಶನಿಯೇ ಅಲ್ಲ ಎಂಬಂಥ ನವ್ಯೋಪನವ್ಯರುದಿಸಿದ ಮ್ಲೇಚ್ಛಿತಾವರಣದಲ್ಲಿ, ಕನ್ನಡದಲ್ಲಿ ತಪ್ಪಾಗಿ ನಡೆಯುತ್ತಿರುವ ಕಾರ್ಗಾಲದಲ್ಲಿ, ಕಾವ್ಯಾನಂದರು ಒಂದು ನಂದಾದೀಪವೇ ಸರಿ.

ಪರರವಗುಣಮಂ ಗುಣಮಂ  
ದೊರಲ್ದು ಗುಣಮಂ ತೆಗಳ್ದು ಧೂಷ್ಯಮದೆಂದು ।  
ಪರದೇಶೀಯತೆಯಿಂದಂ  
ಕರಟಕರೊದರಲ್ ಸುಸಂಸ್ಕೃತರ್ ಬೆದರ್ದಪರೇ ॥

ಎಂಬ ಸವಾಲು ಹಾಕಲು ಪುರಾಣಿಕರ ಜೀವನ, ಕಾವ್ಯ, ವ್ಯಕ್ತಿತ್ವ, ಸದಾತ್ಮೀಯತೆಗಳು ಆಧಾರವಾಗಬಲ್ಲವು. ಆದುದರಿಂದ ಶ್ರೀ ಸಿದ್ಧಯ್ಯ ಪುರಾಣಿಕರು ದೀರ್ಘಾಯು ರಾರೋಗ್ಯಾದಿಗಳಿಂದ ಕೂಡಿ ಕನ್ನಡನಾಡಿನ ಹಾಗೂ ನುಡಿಯ ಸೇವೆಗಳ ಮೌಲ್ಯವನ್ನು ಅಧಿಕಾಧಿಕವಾಗಿ ಉದಾತ್ತೀಕರಿಸುವಲ್ಲಿ ಸಮರ್ಥರಾಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ. □

ಸಿದ್ಧಯ್ಯ ಪುರಾಣಿಕರು

# ನಾ ನು ಕಂ ಡಂ ತೆ

● ಡಾ॥ ಕೆ. ಎಂ. ಕೃಷ್ಣರಾವ್

"ಕಾವ್ಯಾನಂದ" ಕಾವ್ಯನಾಮದಿಂದ ಕವಿತೆಯನ್ನು ರಚಿಸುವವರು ಶ್ರೀ ಸಿದ್ಧಯ್ಯ ಪುರಾಣಿಕರು-ಹೈದರಾಬಾದಿನವರು ಎಂಬ ವಿಚಾರ ನನಗೆ ತಿಳಿದಿತ್ತಾದರೂ, ಅವರ ವೈಯಕ್ತಿಕ ಪರಿಚಯು ನನಗೆ ಇರಲಿಲ್ಲ. ಅನೇಕ ವರ್ಷಗಳ ಹಿಂದೆ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿದ್ದಾಗ ಒಮ್ಮೆ ಪರಿಷನ್ಮಂದಿರದಲ್ಲೇ ಈ ಕವಿ ಮಹನೀಯರ ಪರಿಚಯು ನನಗಾಯಿತು. ಗಂಭೀರವದನದ ಸಣ್ಣ ನಸುನಗೆಯನ್ನು ಬೀರಿ ಕೈ ಕುಲುಕಿದ ಇವರ ಅಂದಿನ ಪರಿಚಯವಾದ ಮೇಲೆ ಮತ್ತೆ ಈ ಇಪ್ಪತ್ತು ವರ್ಷಗಳಲ್ಲಿ ಅವರನ್ನು ನಾನು ನಾಲ್ಕಾರು ಬಾರಿ ಮಾತ್ರ ಭೇಟಿಮಾಡುವ ಅವಕಾಶ ಒದಗಿದೆಯಷ್ಟೆ. ಆದ್ದರಿಂದ ನನಗೂ ಅವರಿಗೂ ಅಂತಹ ಗಾಢವಾದ ಮೈತ್ರಿ ಇತ್ಯಾದಿಗಳನ್ನೇನೂ ಹೇಳಿಕೊಳ್ಳುವಂತಿಲ್ಲ.

ಅತಿ ಹತ್ತಿರದಿಂದಲ್ಲವಾದರೂ, ಬಹುದೂರದಿಂದಲೂ ಅಲ್ಲದೆ ನಿಂತು ಅವರನ್ನು ನೋಡಿದ ನನ್ನ ಕೆಲವು ಅನಿಸಿಕೆಗಳನ್ನು ಮಾತ್ರ ಇಲ್ಲಿ ಬರೆಯಲು ಯತ್ನಿಸಿದ್ದೇನೆ.

ಡಾ. ಸಿದ್ಧಯ್ಯ ಪುರಾಣಿಕರ ಪರಿಚಯು ನನಗೆ ಆದಾಗ ಅವರು ಅಂದಿನ ಮೈಸೂರು ಸರ್ಕಾರದಲ್ಲಿ ದೊಡ್ಡ ಅಧಿಕಾರಿಗಳಾಗಿದ್ದರು. ಹಿರಿಯ ಅಧಿಕಾರಿಗಳಾಗಿದ್ದರೂ ಅವರು ಮುಖ್ಯವಾಗಿ ಸಾಹಿತಿಗಳು, ಸಹೃದಯರು-ಕವಿಗಳು ಎಂಬ ಭಾವನೆ ನನಗೆ ಅವರ ನಡೆನುಡಿಗಳಿಂದ ಉಂಟಾಯಿತು. ತುಂಬು ಸೌಜನ್ಯದಿಂದ ಅವರು ನಡೆದುಕೊಳ್ಳುತ್ತಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ಕೆಲಸಕ್ಕಾಗಿ ಅವರನ್ನು ನಾನು ಎರಡು ಮೂರು ಬಾರಿ ಕಂಡಾಗ ಅದರಲ್ಲಿ ಆಸಕ್ತಿಯನ್ನು ತೋರಿದರು. ಅಲ್ಲದೆ ಆಗ ತಾನೆ ಪ್ರಕಟವಾಗಿದ್ದ ನನ್ನ ಒಂದೆರಡು ಲೇಖನಗಳನ್ನು ಪ್ರಶಂಸಿಸಿದರು.

ಸಿದ್ಧಯ್ಯ ಪುರಾಣಿಕರು ಕರ್ನಾಟಕ ರಾಜ್ಯ ರೂಪಗೊಳ್ಳುವ ಮುಂಚೆ ಹಿಂದಿನ ಹೈದರಾಬಾದಿನಲ್ಲಿ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಓದಿ ಪದವೀಧರರಾದವರು. ಕನ್ನಡವನ್ನು ವಿಶೇಷವಾಗಿ ವ್ಯಾಸಂಗ ಮಾಡಿದವರು. ಇಲ್ಲಿನ ಕನ್ನಡ ಧುರೀಣರಾಗಿದ್ದ ಪ್ರೊಫೆಸರ್ ಡಿ. ಕೆ. ಭೀಮಸೇನರಾವ್ ಮತ್ತು ಶ್ರೀ ಮಾನ್ವಿ ನರಸಿಂಗರಾವ್ ಮುಂತಾದ ಪ್ರಭೃತಿಗಳ ಶಿಷ್ಯರಾಗಿ ಕನ್ನಡ ಸ್ಫೂರ್ತಿ ಪ್ರೇಮಗಳನ್ನು ಪಡೆದವರು.

ವ್ಯಾಸಂಗ ಮುಗಿದ ಮೇಲೆ ನೈಜಾಮ್ ರಾಜ್ಯದಲ್ಲಿಯೇ ದೊಡ್ಡ ಉದ್ಯೋಗವನ್ನು ಪಡೆದು ಸಮರ್ಥರೆಂದು ಹೆಸರು ಗಳಿಸಿ, ಕರ್ನಾಟಕ ಪ್ರಾಂತವಾದಾಗ ವರ್ಗವಾಗಿ ಬೆಂಗಳೂರಿಗೆ ಬಂದು ಹಿರಿಯ ಹುದ್ದೆಗಳನ್ನು ಪಡೆದು ಕೀರ್ತಿ ಗಳಿಸಿ ವಿಶ್ರಾಂತಿ ಹೊಂದಿದವರು.

ಸಿದ್ಧಯ್ಯ ಪುರಾಣಿಕರ ಕನ್ನಡ ಪ್ರೇಮ ಗುರುಭಕ್ತಿದ್ಯೋತಕವಾಗಿ ಹೇಳುವುದಾದರೆ, ಶ್ರೀ ಮಾನ್ವಿ ನರಸಿಂಗರಾಯರ ಹೆಸರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮೂರು ಸಾವಿರ ರೂಪಾಯಿಗಳ ಒಂದು ದತ್ತಿನಿಧಿ ಸ್ಥಾಪಿಸಿ ಅದರಿಂದ ಬರುವ ಬಡ್ಡಿ ಹಣದಲ್ಲಿ ಅವರ ಗುರುಗಳ ಹೃದಯಕ್ಕೆ ಹತ್ತಿರವಾದ ಹರಿದಾಸ ಸಾಹಿತ್ಯವನ್ನು ಕುರಿತು ಉಪನ್ಯಾಸವನ್ನು ಏರ್ಪಡಿಸಬೇಕೆಂದು ಅಪೇಕ್ಷಿಸಿ

ದ್ದಾರೆ, ಇದು ಅನೇಕ ದೃಷ್ಟಿಗಳಿಂದ ಅವರ ಔದಾರ್ಯ-ವೈಶಾಲ್ಯ ಸೂಚಕವೂ ಆಗಿದೆ ಎಂದು ಸಂತೋಷದಿಂದ ನೆನೆಯತಕ್ಕ-ಪ್ರಶಂಸಿಸತಕ್ಕ ವಿಚಾರವಾಗಿದೆ.

ದಾಸಸಾಹಿತ್ಯದಲ್ಲಿ ಅವರಿಗೆ ಹೆಚ್ಚಿನ ಆಸಕ್ತಿ ಇದೆ ಎಂಬುದೂ ಇನ್ನೊಂದು ಉದಾಹರಣೆಯಿಂದ ತಿಳಿಯಬಹುದಾಗಿದೆ :

ಕೆಲವು ವರ್ಷಗಳ ಹಿಂದೆ ಅವರು ನನಗೊಂದು ಮಾತನ್ನು ಹೇಳಿದರು. ಶ್ರೀ ಜಗನ್ನಾಥದಾಸರನ್ನು ಕುರಿತು ಬರೆದು ಗೌರವ ಖ್ಯಾತಿಗಳನ್ನು ಗಳಿಸಿದ್ದೀರಿ ; ಅವರ ಹರಿಕಥಾಮೃತಸಾರವನ್ನೂ ಉತ್ತಮ ರೀತಿಯಲ್ಲಿ ಸಂಪಾದಿಸಿ ಪ್ರಕಟಿಸಿದ್ದೀರಿ ; ಹಾಗೆಯೇ ಅವರ ಕೀರ್ತನೆಗಳು ಮತ್ತು ತತ್ವಸುವಾಲಿಗಳನ್ನು ಕೂಡ ಸಂಪಾದಿಸಿ ನೀವೇ ಪ್ರಕಟಿಸಬೇಕು ; ಅಲ್ಲಿಗೆ ಜಗನ್ನಾಥದಾಸರ ಎಲ್ಲ ಕೃತಿಗಳೂ ನಿಮ್ಮಿಂದ ಪ್ರಕಟವಾದಂತಾಗುತ್ತವೆ ; ಅದನ್ನು ನೀವೇ ಮಾಡಬೇಕಾದವರು-ಎಂದು. ಆ ಅಪೇಕ್ಷೆ ನನಗೂ ಇತ್ತು. ಆ ಪ್ರಯತ್ನವನ್ನೂ ಮಾಡಿದೆ. ಆದರೂ ಆ ಕೆಲಸ ಮಾತ್ರ ಹಲವು ವರ್ಷಗಳಾದರೂ ಈಡೇರದೆ ಇದೀಗ ಆ ಪುಸ್ತಕದ ಹಸ್ತಪ್ರತಿ ಅಚ್ಚಿನ ಮನೆಯನ್ನು ಹೊಕ್ಕಿದೆ ಎಂದು ಹೇಳಲು ಸಂತೋಷವಾಗುತ್ತದೆ. ಆದರೆ ಅದು ಯಾವಾಗ ಅಚ್ಚಾಗಿ ಹೊರಬರುತ್ತದೆ ಎಂಬುದನ್ನು ಮಾತ್ರ ಧೈರ್ಯವಾಗಿ ಹೇಳಲಾರೆ.

ಸಿದ್ಧಯ್ಯ ಪುರಾಣಿಕರ ಭೇಟಿ, ಅವರು ಉದ್ಯೋಗದಿಂದ ನಿವೃತ್ತರಾದಮೇಲೆ ಕಳೆದ ವರ್ಷ ಹೈದರಾಬಾದ್-ಸಿಕಂದರಾಬಾದ್ ಕನ್ನಡಿಗರ ಸಮ್ಮೇಳನ ಸಂದರ್ಭದಲ್ಲಿ ಆಗಿತ್ತು. ಅವರು ಎಂದಿನ ಸಿದ್ಧಯ್ಯ ಪುರಾಣಿಕರೇ ಆಗಿದ್ದಾರೆಂದು ಹೇಳಲು ಸಂತೋಷವೆನಿಸುತ್ತದೆ ; ಅದೇ ಸೌಜನ್ಯ ಗಾಂಭೀರ್ಯಗಳು ಅವರ ವ್ಯಕ್ತಿತ್ವ ದ್ಯೋತಕವಾಗಿದೆ.

ಹಿಂದೊಮ್ಮೆ ನನ್ನ ವಿದ್ಯಾರ್ಥಿ ಮಿತ್ರರಿಗೆ ಒಂದು ಕಾಲೇಜಿನ ಕರ್ನಾಟಕ ಸಂಘದ ಕಾರ್ಯಕ್ರಮಕ್ಕಾಗಿ ಈ ಮಹನೀಯರನ್ನು ಆಹ್ವಾನಿಸಬೇಕು ಎಂದು ಸೂಚಿಸಿದೆ. ನನ್ನ ಸೂಚನೆಗೆ ಮನ್ನಣೆಯಿತ್ತ ವಿದ್ಯಾರ್ಥಿವೃಂದ ಅವರನ್ನು ಆಹ್ವಾನಿಸಿದಾಗ ಸಂತೋಷದಿಂದ ನಮ್ಮ ಕರೆಯನ್ನು ಅಂಗೀಕರಿಸಿ, ಕಾಲೇಜಿಗೆ ದಯಮಾಡಿಸಿ ಉತ್ತಮವಾದ ಉಪನ್ಯಾಸವನ್ನು ಮಾಡಿದರು. ಅದುವರೆಗೆ ನಾನು ಅವರ ಉಪನ್ಯಾಸವನ್ನು ಕೇಳಿರಲಿಲ್ಲ. ಅಂದು ಅವರೊಬ್ಬ ಉತ್ತಮ ಉಪನ್ಯಾಸಕರೆಂದು ನನಗೆ ವೇದ್ಯವಾಯಿತು. ಅವರ ಶೈಲಿ, ಶಬ್ದಸಂಪತ್ತು, ವಾಕ್ಪಟುತ್ವ, ವಿಮರ್ಶಕ ಶಕ್ತಿ, ಉತ್ತಮಭಾವನೆಗಳನ್ನು ಕಂಡು ಕೇಳಿ ನಾನು ತುಂಬ ಸಂತೋಷಪಟ್ಟೆ.

ಉಪನ್ಯಾಸವನ್ನು ರುಚಿಕರವಾಗಿ ಮಾಡಿ ಇನ್ನೂ ಸ್ವಲ್ಪ ಕೇಳೋಣ ಎನ್ನಿಸುತ್ತಿರುವಾಗಲೇ ಅವರು ಭಾಷಣವನ್ನು ಉತ್ತಮ ರೀತಿಯಲ್ಲಿ ಮುಕ್ತಾಯಗೊಳಿಸಿದರು, ಶ್ರೋತೃವೃಂದಕ್ಕೆ ಬೇಸರ ಬರುವಷ್ಟು ಕಾಲವೂ ಕೊರೆಯುವರಲ್ಲ ಎಂಬುದು ತುಂಬ ಮೆಚ್ಚಬೇಕಾದ ಗುಣವಲ್ಲವೆ ?

ಸಿದ್ಧಯ್ಯ ಪುರಾಣಿಕರು 'ಕಾವ್ಯಾನಂದ' ಎಂಬ ಕಾವ್ಯನಾಮದಿಂದ ಅನೇಕ ಕವಿತೆಗಳನ್ನು ರಚಿಸಿದ್ದಾರೆ. ಶಿಶುಸಾಹಿತ್ಯ, ಪ್ರೌಢಸಾಹಿತ್ಯ, ಶರಣಸಾಹಿತ್ಯ, ವಿಮರ್ಶೆ ಮೊದಲಾದ ಪ್ರಕಾರಗಳಲ್ಲಿ ಕನ್ನಡ ಸಾಹಿತ್ಯಸೇವೆಯನ್ನು ಮಾಡಿ, ಆಧುನಿಕ ಕನ್ನಡ ಸಾರಸ್ವತ ಲೋಕದಲ್ಲಿ ಒಳ್ಳೆಯ ಲೇಖಕರು ಎಂಬ ಹೆಸರು ಪಡೆದವರಾಗಿದ್ದಾರೆ. ಉತ್ತಮ ವಿಮರ್ಶಕರೂ ವಾಕ್ಪಟುಗಳೂ ಆಗಿದ್ದಾರೆ.

ದೇಹಗಾತ್ರಕ್ಕೆ ತಕ್ಕ ವ್ಯಕ್ತಿತ್ವ ಗಾತ್ರವನ್ನು ಅವರು ಬೆಳೆಸಿಕೊಂಡು ನಾಡು ನುಡಿಗಳ ಸೇವೆಯನ್ನು ಹಲವು ರೀತಿಗಳಲ್ಲಿ ಸಮರ್ಥವಾಗಿ ಮಾಡಿ ಕನ್ನಡ ಮಾತೆಯ ಸುಪುತ್ರರೆನಿಸಿದ್ದಾರೆ ಎಂದು ಬರೆಯಲು ಸಂತೋಷವಾಗುತ್ತದೆ.

ಇಂತಹ ಮಹನೀಯರಿಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸುವುದು ಸ್ತುತ್ಯವೇ ಸರಿ. "ಡಾ. ಸಿದ್ಧಯ್ಯ ಪುರಾಣಿಕ–ನಾನು ಕಂಡಂತೆ" ಎಂಬ ವಿಷಯವನ್ನು ಕುರಿತು ಬರೆಯಬೇಕೆಂದು ಸಂಭಾವನಾ ಗ್ರಂಥದ ಪ್ರಧಾನ ಸಂಪಾದಕರು ತಿಳಿಸಿದ್ದಾರೆ. ಅವರ ನನ್ನ ಮೈತ್ರಿ ಗಾಢವಾದುದಲ್ಲ ಎಂದು ತಿಳಿಸಿದ್ದೇನೆ. ಅನೇಕ ಬಾರಿ ಅವರನ್ನು ಕಂಡು ಮಾತನಾಡಿ, ಅವರ ಕೃತಿಗಳ, ಭಾಷಣಗಳ, ಭೇಟಿಗಳ ಮೂಲಕ ಅವರ ವ್ಯಕ್ತಿತ್ವದ ಬಗೆಗೆ ನನಗನಿಸಿದ ಒಂದೆರಡು ಸಂಗತಿಗಳನ್ನು ಮಾತ್ರ ಅವರ ಸನ್ಮಾನೋತ್ಸವಕ್ಕೆ ಕಾಣಿಕೆಯಾಗಿ ಸಮರ್ಪಿಸುತ್ತಿದ್ದೇನೆ.

ಶ್ರೀಯುತ ಡಾ. ಸಿದ್ಧಯ್ಯ ಪುರಾಣಿಕರಿಗೆ ಆಯುರಾರೋಗ್ಯ ವೃದ್ಧಿಯಾಗಿ ಕನ್ನಡ ಸೇವೆ ಅವರ ಪರಿಪಕ್ವದಶೆಯಲ್ಲಿ ಇತೋಪ್ಯತಿಶಯವಾಗಿ ನಡೆಯಲಿ ಎಂದು ಹಾರೈಸುತ್ತೇನೆ. □

# ಸಿದ್ಧಯ್ಯ ಪುರಾಣಿಕರು ನಾ ಕಂಡಂತೆ

● **ಕೊರಟಿ ಶ್ರೀನಿವಾಸರಾವ್**

ಶ್ರೀ ಸಿದ್ಧಯ್ಯ ಪುರಾಣಿಕರಿಗೆ ಅರವತ್ತು ವರ್ಷ ತುಂಬುತ್ತಿದೆ ಎಂದು ಹೇಳಿದರೆ ನಂಬುವುದು ಕಷ್ಟ. ಅವರನ್ನು ನಾನು ಎರಡು ದಶಕಗಳಿಂದ ನೋಡುತ್ತ ಬಂದಿದ್ದೇನೆ. ಅವರು ಅಂದು ಹೇಗಿದ್ದರೋ, ಇಂದೂ ಹಾಗೇ ಇದ್ದಾರೆ. ಅದೇ ಎತ್ತರದ ನಿಲುವು. ಮಂದಸ್ಮಿತ ಮುಖ, ಕಾಂತಿಯುಕ್ತ ಕಣ್ಣುಗಳು, ಗಂಭೀರವಾದ ವ್ಯಕ್ತಿತ್ವ. ಪರಿಚಯವಾದೊಡನೆ ಆತ್ಮೀಯತೆಯನ್ನು ಹುಟ್ಟಿಸುವ ಅವರ ಮಾತು, ಶುಚಿಯಾದ ಸರಳ ಉಡುಪು—ಇವು ಅಂದಿದ್ದಂತೆ ಇಂದಿಗೂ ಮಾಸದೆ, ಅಳಿಯದೆ ಉಳಿದಿವೆ. ಈ ಅವಧಿಯಲ್ಲೂ ಪುರಾಣಿಕರು ಬೆಳೆದಿದ್ದಾರೆ, ತುಂಬ ಎತ್ತರಕ್ಕೆ ಬೆಳೆದಿದ್ದಾರೆ. ರಾಜ್ಯದ ಗಡಿ ದಾಟಿ ಅವರ ಹೆಸರು ಇಂದು ಅಂತರ್‌ಭಾರತ ಖ್ಯಾತಿ ಪಡೆದಿದೆ. ಅವರು ತಮ್ಮ 'ವಚನೋದ್ಯಾನ'ದಿಂದ ಕನ್ನಡಿಗರ ಮನಸ್ಸನ್ನು ಅಪಹರಿಸಿದಂತೆ, ಭಾರತೀಯರ ಹೃದಯವನ್ನು ಗೆದ್ದಿದ್ದಾರೆ.

ಸಿದ್ಧಯ್ಯ ಪುರಾಣಿಕರು ಸುಸಂಸ್ಕೃತ ಸಂಪ್ರದಾಯ ಮನೆತನದಿಂದ ಬಂದವರು. ತಂದೆ ಪುರಾಣಿಕ ವೃತ್ತಿಯಿಂದ ಜೀವಿಸುತ್ತಿದ್ದವರು. ಸಾಹಿತ್ಯೋಪಾಸಕರೂ ಹೌದು. ಈ ಗುಣಗಳು ಮಗನಿಗೆ ಬಳುವಳಿಯಾಗಿ ಬಂದವು. ಜೊತೆಗೆ ಮಗನ ಶಿಕ್ಷಣರಂಗ ವಿಸ್ತರಿಸಿ ಬೆಳೆಯಿತು. ಅಂದಿನ ನಿಜಾಮ ಸರಕಾರದ ಆಡಳಿತ ಭಾಷೆ, ಶಿಕ್ಷಣ ಮಾಧ್ಯಮ ಉರ್ದುವಿನಲ್ಲಿ ವ್ಯಾಸಂಗ ಮಾಡಿ ಪದವಿ ಪಡೆದರೂ; ತಾಯಿನುಡಿಯಾದ ಕನ್ನಡವನ್ನು ಮರೆಯಲಿಲ್ಲ. ದೇವನುಡಿಯಾದ ಸಂಸ್ಕೃತವನ್ನೂ ಕೈಬಿಡಲಿಲ್ಲ. ಮುಂದೆ ಐ. ಎ. ಎಸ್ ಪರೀಕ್ಷೆಯಲ್ಲಿ ಸ್ಪರ್ಧಿಸಿ ಅದರಲ್ಲೂ ಶ್ರೇಷ್ಠಮಟ್ಟದಲ್ಲಿ ಉತ್ತೀರ್ಣರಾಗಿ, ಶಿಕ್ಷಕರಾಗಬೇಕಾಗಿದ್ದ ಅವರು ಆಡಳಿತ ನಿರ್ವಹಣೆಯ ಚುಕ್ಕಾಣಿ ಹಿಡಿದರು. ಹೀಗೆ ನಿಜಾಮ್ ಸರ್ಕಾರ ಕನ್ನಡಿಗರಿಗೆ ಕಾಣಿಕೆಯಾಗಿ ಅರ್ಪಿಸಿದ ದಕ್ಷ ಆಡಳಿತಗಾರರೂ, ಸಾಹಿತಿಗಳೂ ಎನಿಸಿದವರಲ್ಲಿ ಇಬ್ಬರನ್ನು ನಾನು ಬಲ್ಲೆ. ಒಬ್ಬರು ಸಿದ್ಧಯ್ಯ ಪುರಾಣಿಕರು, ಇನ್ನೊಬ್ಬರು ಜಯತೀರ್ಥ ರಾಜಪುರೋಹಿತರು !

ಪುರಾಣಿಕರು ಹೈದರಾಬಾದಿನಲ್ಲಿ ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಕನ್ನಡ ಸಂಘ ಕಟ್ಟಿ ಬೆಳೆಸಿದ ಮಾನ್ವಿ ನರಸಿಂಗರಾಯರು, ಭೀಮಸೇನರಾಯರು ಮುಂತಾದ ಕನ್ನಡ ನುಡಿಯ 'ಡಿಂಗರಿಗ'ರಿಂದ ಸ್ಫೂರ್ತಿ ಪಡೆದರು. ಅವರ ನಾಡುನುಡಿಗಳ ಸೇವೆಯಿಂದ ಕನ್ನಡದೀಕ್ಷೆಯನ್ನು ಪಡೆದರು. ಈ ದೀಕ್ಷೆ ಪುರಾಣಿಕರನ್ನು ಏರಿಳಿತದ ಜೀವನದಲ್ಲಿ ಕಾಪಾಡಿಕೊಂಡು ಬಂದಿದೆ. ಏಷ್ಟೆಂದರೂ ಕನ್ನಡ ಎಂಬ ಮೂರಕ್ಷರದ ಮಾತು ಕನ್ನಡಿಗರ ಪಾಲಿಗೆ ಗಾಯತ್ರಿಯಲ್ಲವೆ ?

ಪುರಾಣಿಕರಿಗೆ ಸಾಹಿತ್ಯ ನಿರ್ಮಾಣ ಒಂದು ಹವ್ಯಾಸ ಮಾತ್ರವಲ್ಲ, ಮಾತೃಋಣ ತೀರಿಸುವ ಒಂದು ಸಾಧನ, ಸೇವಾಮಾರ್ಗ. ವಿದ್ಯಾರ್ಥಿದೆಸೆಯಲ್ಲೇ ಅವರು ಬಸವಣ್ಣನವರ ಜೀವನ ಹಾಗೂ ಸಂದೇಶಗಳಿಗೆ ಮಾರು ಹೋಗಿದ್ದರು. ಅವರನ್ನು ಕುರಿತು ಪುರಾಣಿಕರು ಬರೆದ ಮೂರಂಕದ ನಾಟಕ, ಇಂದಿಗೂ ರಂಗಭೂಮಿಯ ಮೇಲೆ ಪ್ರದರ್ಶಿಸಲು ಬರುವಂಥ ಸತ್ವಯುಕ್ತ ಕೃತಿ. ಬಸವಣ್ಣನವರು ನಿಜಜೀವನದಲ್ಲಿ ಹೇಗಿದ್ದರು, ಅವರನ್ನು ಕಂಡವರ ದೃಷ್ಟಿಯಲ್ಲಿ ಹೇಗಿದ್ದರು, ವಚನಗಳಲ್ಲಿ ಚಿತ್ರಿತವಾಗಿದ್ದ ಬಸವೇಶ್ವರರ ಚಿತ್ರಣ ಎಂಥದು—ಇವುಗಳನ್ನು ಮೂಲಸಾಮಗ್ರಿಯಾಗಿ ಮಾಡಿಕೊಂಡು ಚತುರಶಿಲ್ಪಿ ಕಡೆದ ಸುಂದರ, ಭಾವನಾತ್ಮಕ, ಮಾನವೀಯ ಚಿತ್ರಣ—ಈ ದುರಂತ ನಾಟಕದಲ್ಲಿ ಮೂಡಿದೆ. ಇದು ಇಷ್ಟು ಕಾಲವಾದರೂ ಪುನರ್ಮುದ್ರಣವಾಗದಿರುವುದು ಒಂದು ದೌರ್ಭಾಗ್ಯ. ಈ ನಾಟಕದಲ್ಲಿ ಪುರಾಣಿಕರು ಬಸವೇಶ್ವರರ ಪಾತ್ರವಹಿಸಿದ್ದರೆಂದು ಕೇಳಿದ್ದೇನೆ. ತರುಣ ವಯಸ್ಸಿನ ಪುರಾಣಿಕರು ಬಸವಣ್ಣನ ವೇಷದಲ್ಲಿ ರಂಗಭೂಮಿಯ ಮೇಲೆ ಬಂದಾಗ ಹೇಗೆ ಕಾಣುತ್ತಿದ್ದರೆಂಬುದನ್ನು ನನ್ನ ಭಾವುಕ ದೃಷ್ಟಿಯಿಂದ ಕಲ್ಪಿಸಿಕೊಳ್ಳುತ್ತಿದ್ದೇನೆ. ಅಂದು ಮೊದಲಾದ ಅವರ ವಚನಸಾಹಿತ್ಯಾಸಕ್ತಿ ಸುಮಾರು ನಲವತ್ತು ವರ್ಷಗಳ ನಂತರ ವಚನೋದ್ಯಾನವನ್ನು ನಿರ್ಮಿಸುತ್ತದೆಂದು ಯಾರು ತಿಳಿದಿದ್ದರು ?

ಪುರಾಣಿಕರು ಸ್ನೇಹಜೀವಿ. ಅವರು ಒಬ್ಬ ಅಜಾತ ಶತ್ರುವೆಂದರೂ ಸಲ್ಲುತ್ತದೆ. ಅವರನ್ನು ದ್ವೇಷಿಸಿದ ಒಬ್ಬರನ್ನೂ ನಾನು ಇದುವರೆಗೆ ಕಂಡಿಲ್ಲ. ಮಾತಿನಲ್ಲಿ ಸಕ್ಕರೆ, ಹೃದಯವೂ ಜೇನು! ಇಂಥವರನ್ನು ದ್ವೇಷಿಸಲು ಹೇಗೆ ಸಾಧ್ಯ? ಆದರೂ ಅವರು ವಿಧಾನಸೌಧದಲ್ಲಿ ಶಿಕ್ಷಣ ಇಲಾಖೆ, ಅಭಿವೃದ್ಧಿ ಇಲಾಖೆ, ಲೇಬರ್, ಟ್ರಾನ್ಸ್‌ಪೋರ್ಟ್ ಕಮೀಷನರ್ ಅಧಿಕಾರಿಗಳಾಗಿದ್ದಾಗ ಅವರನ್ನು ಕಂಡಿದ್ದೆ. ಅದೇ ಸ್ನೇಹ, ಅದೇ ಸರಸ ಸಜ್ಜನಿಕೆ. ಕೈಕೆಳಗಿನವರ ಬಗ್ಗೆ ಆದರ, ಮಮತೆ, ಕರ್ತವ್ಯದಲ್ಲಿ ನಿಷ್ಠುರತೆ. ಸತ್ಯಕ್ಕೆ ಸ್ನೇಹಕ್ಕೆ ಅಂಜುವ ಈ ಚೇತನ-ಅಧರ್ಮಕ್ಕೆ, ದರ್ಪಕ್ಕೆ, ಲಂಚಕ್ಕೆ, ಪ್ರಲೋಭಕ್ಕೆ ಒಗ್ಗದ ಜೀವ! 'ವಜ್ರಾದಪಿ ಕಠೋರಾಣಿ, ಮೃದೂನೀ ಕುಸುಮಾದಪಿ'-ಎನ್ನುತ್ತಾರಲ್ಲ, ಅಂಥ ವ್ಯಕ್ತಿತ್ವ ಪುರಾಣಿಕರದು.

ಒಮ್ಮೆ ವಿಧಾನಸೌಧದಲ್ಲಿ ನನಗೆ ಒಂದು ಕೆಲಸ ಆಗಬೇಕಾಗಿತ್ತು. ನನ್ನ ತಮ್ಮ ಕೊಡಗಿನ ಮಡಿಕೇರಿಯ ಸರ್ಕಾರಿ ಕಾಲೇಜಿನ ಬಳಿ 'ಮಿಸ್ ಲೀಲಾವತಿ' ಚಿತ್ರಕ್ಕಾಗಿ, ಶೂಟಿಂಗ್ ನಡೆಸಿದ್ದ. ಕಾಲೇಜಿನ ಹೊರವಲಯದಲ್ಲಿ ಕ್ಯಾಮರಾ ಇಡಲೂ ಸರಕಾರದ ಅನುಮತಿ ಬೇಕಾಗಿತ್ತು! ಚಿತ್ರದ ತಂಡದ-ಯೂನಿಟ್‌ನ-ಕೆಲಸಗಾರರೆಲ್ಲ ಮಡಿಕೇರಿಯಲ್ಲಿ ಸ್ಥಾಪಿತಗೊಂಡಿದ್ದರು. ಆದರೆ ಚಿತ್ರ ತೆಗೆಯಲು ಅನುಮತಿ ನಿರಾಕರಿಸಿದ್ದರು ಕಾಲೇಜಿನ ಪ್ರಿನ್ಸಿಪಾಲರು. ಬೇರೆ ದಾರಿ ಇಲ್ಲದೆ ಈ ಕೆಲಸಕ್ಕೆ ಇಪ್ಪತ್ತುನಾಲ್ಕು ಗಂಟೆಗಳಲ್ಲಿ ಪೂರೈಸಿಕೊಂಡು ಅನುಮತಿ ಪಡೆದು ಬರಲು ನನ್ನನ್ನು ಬೆಂಗಳೂರಿಗೆ ನನ್ನ ತಮ್ಮ ಕಳುಹಿಸಿ ಕೊಟ್ಟ. ಆಗ ಸಿದ್ಧಯ್ಯ ಪುರಾಣಿಕರಿಗೆ ನಾನು ಶರಣು ಬಂದೆ. ಅವರ ಮಿತ್ರರಾಗಿದ್ದ ಸ್ವಲ್ಪ ಹಿಂದೆ ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಶ್ರೀ ಜಯರಾಮನ್ ಅವರು ಆಗ ಶಿಕ್ಷಣ ಇಲಾಖೆಯ ಕಮೀಷನರ್. ಪುರಾಣಿಕರಂತೆ ಅವರೂ ಆಸೆ ಆಮಿಷಗಳಿಗೆ ಬಲಿ ಬೀಳದ ದಕ್ಷ ಅಧಿಕಾರಿಗಳೆಂದು ಹೆಸರಾಗಿದ್ದವರು. ಅವರಿಗೆ ಫೋನ್ ಮಾಡಲು ನಾನು ಪುರಾಣಿಕರನ್ನ ಪ್ರಾರ್ಥಿಸಿದೆ. ಅವರು ಕೂಡಲೇ ಒಪ್ಪಲಿಲ್ಲ. 'ನಾನು ಕಳುಹಿಸಿರುವುದಾಗಿ ತಿಳಿಸಿರಿ, ನಿಮ್ಮ ಕೆಲಸ ಮಾಡಿಕೊಡುತ್ತಾರೆ' ಎಂದು ಹೇಳಿ ಜಯರಾಮನ್ ಅವರ ಬಳಿಗೆ ಕಳುಹಿಸಿ ಕೊಟ್ಟರು. ನಾನು ಆಫೀಸರ್‌ರನ್ನ ನೋಡಲು ಅಲ್ಲಿನ ಪ್ಯಾದೆ ಅವಕಾಶ ಕೊಡುವುದಕ್ಕೆ ತಡಮಾಡಿದನೇ ಹೊರತು, ಜಯರಾಮನ್ ತಡಮಾಡಲಿಲ್ಲ. ನನ್ನ ಕೆಲಸ ನನ್ನ ನಿರೀಕ್ಷೆಗೂ ಮೀರಿ, ಶೀಘ್ರವಾಗಿ ಸಾಧಿಸಿತ್ತು. 'ಪುರಾಣಿಕ' ಎಂಬ ಶಬ್ದದಲ್ಲಿ ಅಂಥ ಮಂತ್ರಶಕ್ತಿ ಇತ್ತು.

ಸಿದ್ಧಯ್ಯ ಪುರಾಣಿಕರ ಬರೆವಣಿಗೆಯಲ್ಲಿ ನಾನು ಮೆಚ್ಚಿಕೊಂಡ ಒಂದು ಅಂಶವೆಂದರೆ ಅವರ ಐತಿಹಾಸಿಕ ಪ್ರಜ್ಞೆ. ನಾನು ಚಾರಿತ್ರಿಕ ಕಾದಂಬರಿಕಾರನೆಂಬ ಸಂಗತಿ ಪುರಾಣಿಕರ ವಿಶ್ವಾಸ ನನ್ನದಾಗಿಸಿದೆ. ಅವರು ಚಾಲುಕ್ಯ ತ್ರಿಭುವನ ಮಲ್ಲನನ್ನು ಕುರಿತು ಒಂದು ಕಾದಂಬರಿ ಬರೆದಿದ್ದಾರೆ. ಭಾರತವೀರ ಎಂಬ ಹೆಸರಿನಲ್ಲೂ ಒಂದು ಚಾರಿತ್ರಿಕ ನಾಟಕ ರಚಿಸಿದ್ದಾರೆ. ಗುಪ್ತಸಾಮ್ರಾಟ ನರಸಿಂಹ ಬಾಲಾದಿತ್ಯನು ಹೂಣದೊರೆ ಮಿಹಿರಕುಲನಿಂದ ಒದಗಿದ ದುರಾಕ್ರಮಣವನ್ನು ಎದುರಿಸಿ, ದೇಶದ ಜನತೆಗೆ ಸ್ವಾತಂತ್ರ್ಯ ದೊರಕಿಸಿ ಕೊಟ್ಟ ಐತಿಹಾಸಿಕ ಘಟನೆ ಈ ನಾಟಕದ ವಸ್ತು. ಚೀನೀ ದುರಾಕ್ರಮಣ ಭಾರತದ ಮೇಲೆ ಒದಗಿದ್ದಾಗ, ವಿಪತ್ಕಾರಕ ಗಂಡಾಂತರ ಪರಿಸ್ಥಿತಿಯಲ್ಲಿ ಲೇಖಕರ ಸಮರ್ಥ ಲೇಖಣಿಯಿಂದ ಹೊರಬಿದ್ದ ವೀರಗಾಥಾ ಇದು. ಈ ನಾಟಕದಲ್ಲೂ ಅವರು ಎತ್ತಿ ಹಿಡಿದ ಜೀವನದ ಮೌಲ್ಯಗಳು ಎಲ್ಲ ಕಾಲಕ್ಕೂ ಆದರ್ಶವಾದದ್ದು. ಅಂಥ ಒಂದು ಮೌಲ್ಯ ದೇಶಪ್ರೇಮ.

ದೇಶಪ್ರೇಮ ಕೇವಲ ರಾಜಕಾರಣಿಗಳ ಸ್ವತ್ತೆಂಬ ವಿಚಿತ್ರವಾದ ಪರಿಸ್ಥಿತಿ ಇಂದು ಭಾರತಭೂಮಿಗೆ ಬಂದಿದೆ. ದೇಶಪ್ರೇಮದ ಮಾತನಾಡುವುದೆಂದರೆ ಆರ್.ಎಸ್.ಎಸ್. ಮನೋಭಾವ ಎಂಬ ಲೇಬಲ್-ಹಣೆಪಟ್ಟಿ-ಬೀಳುವ ಸಂಭವವಿದೆ. ಆದರೆ ರಾಷ್ಟ್ರಪ್ರೇಮ ಎಂಥ ಮೃತ ಸದೃಶ ಹೇಡಿಗಳಲ್ಲೂ ಜೀವಸತ್ವವನ್ನು ತುಂಬುವ ಅಮೃತಸಂಜೀವನಿ ಎಂಬುದನ್ನು ಮನಗೊಂಡಿರುವ ಪುರಾಣಿಕರು ಈ ನಾಟಕದ ಉದ್ದಕ್ಕೂ ವಿಚಾರಾರ್ಹವಾದ, ಉನ್ನತಭಾವನೆಗಳನ್ನು ಸ್ಫುರಿಸುವ ಮಂತ್ರಶಕ್ತಿಯುಳ್ಳ ಅನೇಕ ಮಾತುಗಳನ್ನು ಬರೆದಿದ್ದಾರೆ; ಪಾತ್ರಗಳ ಬಾಯಲ್ಲಿ ಸಮಯೋಚಿತವಾಗಿ ಹಾಕಿದ್ದಾರೆ. ಇದು ಪುರಾಣಿಕರ ನಿರ್ಮಲ ರಾಷ್ಟ್ರಪ್ರೇಮದ ಉಜ್ವಲ ನಿದರ್ಶನ. "ಪ್ರಜಾಹಿತ ಕರ್ತವ್ಯವಾದರೆ, ರಾಷ್ಟ್ರರಕ್ಷಣೆ ಧರ್ಮ" ಎಂದು ಹೇಳಿದ ಪುರಾಣಿಕರು ಭಾರತದ ಭವ್ಯಸತ್ವವನ್ನು, ಉದಾತ್ತ ತತ್ತ್ವವನ್ನು "ವೈರದಿಂದ ವೈರದ ಶಮನ ಸಾಧ್ಯವಿಲ್ಲ. ಅವೈರದಿಂದ-ಪ್ರೇಮದಿಂದ-ವೈರದ ಶಮನ ಸಾಧ್ಯ"-ಎಂಬ ಮಾತಿನ ಮೂಲಕ ಪ್ರಕಟಿಸಿದ್ದಾರೆ! ಇಂಥ ದ್ರಷ್ಟಾರ ಸಾಹಿತಿ ಸಿದ್ಧಯ್ಯ ಪುರಾಣಿಕರಿಗೆ ನಮೋನಮಃ. □

# ಸರಸ ಚೇತನ

● ಪ್ರೊ॥ ಜಿ. ವೆಂಕಟಸುಬ್ಬಯ್ಯ

**ಡಾ.** ಸಿದ್ಧಯ್ಯ ಪುರಾಣಿಕರನ್ನು ನಾನು ಮೊದಲು ಕಂಡದ್ದು ಹೈದರಾಬಾದಿನಲ್ಲಿ. ಸಾಹಿತ್ಯಪರಿಷತ್ತಿನ ಕಾರ್ಯದರ್ಶಿಯಾಗಿ ನಾನು ಯಾವುದೋ ಕಾರ್ಯ ನಿಮಿತ್ತವಾಗಿ ಹೈದರಾಬಾದಿನ ಮೂಲಕ ಬೀದರ್ ನಗರಕ್ಕೆ ಹೋಗಬೇಕಾಗಿತ್ತು. ಹೈದರಾಬಾದಿನ ಕರ್ನಾಟಕ ಸಂಘದವರು ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಅದರಲ್ಲಿ ಶ್ರೀ ಎ. ಎನ್. ಮೂರ್ತಿರಾಯರೂ, ಶ್ರೀ ವಿ. ಸೀತಾರಾಮಯ್ಯನವರೂ, ನಾನೂ ಮಾತನಾಡುವುದೆಂದು ಗೊತ್ತಾಗಿತ್ತು. ಸಿದ್ಧಯ್ಯ ಪುರಾಣಿಕರ ತಮ್ಮ ಅನ್ನದಾನಯ್ಯ ಪುರಾಣಿಕರು ನಮ್ಮ ವಾಸ್ತವ್ಯದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಆ ಸಂದರ್ಭದಲ್ಲಿ ನಾನು ಸಿದ್ಧಯ್ಯ ಪುರಾಣಿಕರನ್ನು ಎರಡು ಮೂರು ದಿನದ ಬಳಿಕ ಕಂಡ ನೆನಪು.

ಆ ವೇಳೆಗೆ ಆಗಲೇ ನಾನು 'ಕಾವ್ಯನಂದ'ರ ಕವನಗಳನ್ನು ಓದಿದ್ದೆ. ಅವರ ಸಂಘವೇ ಪ್ರಕಟಿಸಿದ್ದ ಶ್ರೀಕಾರದಲ್ಲಿ ಅವರ ಕವನವಿದ್ದದ್ದನ್ನು ನೋಡಿದ್ದೆ. ಹೈದರಾಬಾದಿನಲ್ಲಿ ಕನ್ನಡದ ಹಿತರಕ್ಷಕರಾಗಿ ಪ್ರೊ. ಡಿ. ಕೆ. ಭೀಮಸೇನರಾಯರು, ಶ್ರೀ ಮಾನ್ವಿ ನರಸಿಂಗರಾಯರು, ಶ್ರೀ ಸಿದ್ಧಯ್ಯ ಪುರಾಣಿಕರು ತ್ರಿಮೂರ್ತಿಗಳಾಗಿ ಕೆಲಸ ಮಾಡುತ್ತಿದ್ದರು. ನನಗೆ ಮಾನ್ವಿಯವರ ಸ್ನೇಹ ಮೈಸೂರಿನ ಮಹಾರಾಜ ಕಾಲೇಜಿನಲ್ಲಿಯೇ ಆಗಿತ್ತು. ಎಂ. ಎ. ತರಗತಿಯಲ್ಲಿ ಅವರು ನನಗಿಂತ ಒಂದು ವರ್ಷ ಮುಂಚೆ ಅಭ್ಯಾಸಮಾಡುತ್ತಿದ್ದರು. ಹೀಗಾಗಿ ಈ ಮೂರು ಜನರ ಕಾರ್ಯವನ್ನು ನೋಡಬೇಕೆಂಬ ಕುತೂಹಲ ಹೆಚ್ಚಾಗಿತ್ತು. ಬೀದರ್ ನಗರಕ್ಕೆ ಹೋದಾಗ ನನಗೆ ಅದು ಚೆನ್ನಾಗಿ ಪರಿಚಯವಾಯಿತು. ಬೀದರ್ ನಗರದ ಅಥವಾ ಜಿಲ್ಲೆಯ ಜನರಿಗೆ ಕನ್ನಡದಲ್ಲಿ ಅಕ್ಷರಮಾಲೆಯೊಂದಿದೆ ಎಂಬುದೇ ಗೊತ್ತಿರಲಿಲ್ಲ. ನಗರವೆಲ್ಲ ಮರಾಠಿಮಯ. ಇಂಥ ಸನ್ನಿವೇಶದಲ್ಲಿ ಭಾಲ್ಕಿಯವರೆಗೆ ಈ ಮೂವರೂ ತಮ್ಮ ಪ್ರಭಾವವನ್ನು ಬೀರಿ ಕನ್ನಡದ ಪ್ರಚಾರವನ್ನು ಎಸಗುತ್ತಿದ್ದರು. ಪ್ರಭುರಾವ್ ವಕೀಲರು ಇವರಿಗೆ ಬೀದರಿನಲ್ಲಿ ಸಹಾಯಕರಾಗಿದ್ದರು ಆಗ. ಹೀಗೆ ಮೊದಲಾದ ಪರಿಚಯ ಬರಬರುತ್ತ ಗಾಢವಾದ ಸ್ನೇಹವಾಯಿತು. ನಾನು ಅವರು ರಚಿಸಿರುವ ಎಲ್ಲ ಗ್ರಂಥಗಳನ್ನೂ ಓದಿದ್ದೇನೆ. ಈಚೆಗೆ ಬಹುಮಾನವನ್ನು ಪಡೆದ 'ವಚನೋದ್ಯಾನ'ವು ಪ್ರಕಟವಾದೊಡನೆ ನಾನು ಒಂದು ಪತ್ರವನ್ನು ಬರೆದು ನನ್ನ ಅಭಿನಂದನೆಗಳನ್ನು ಸೂಚಿಸಿದ್ದೆ.

ಕವಿ ಹೃದಯ, ಆಡಳಿತದಕ್ಷತೆ, ಸ್ನೇಹಪರತೆ, ಸತ್ಕಾರ್ಯದಲ್ಲಿ ಮೆಚ್ಚಿಗೆ, ಹಿರಿಯರಲ್ಲಿ ಭಕ್ತಿಗೌರವಗಳು, ಒಡನಾಡಿಗಳಲ್ಲಿ ನಿರ್ಮತ್ಸರವಾದ ವಿಶ್ವಾಸ, ಶುಭ್ರ ಜೀವನ, ಪಾಂಡಿತ್ಯವರ್ಧನ–ಇವುಗಳು ಸಿದ್ಧಯ್ಯನವರ ವಿಶಿಷ್ಟ ಗುಣಗಳು.

ನಾವು ಹೆಚ್ಚಾಗಿ ಕನ್ನಡ–ಕನ್ನಡ ನಿಘಂಟು ಸಮಿತಿಯ ಪ್ರತಿತಿಂಗಳ ಸಭೆಯಲ್ಲಿ ಭೇಟಿಯಾಗುತ್ತೇವೆ. ನಮ್ಮ ಸಮಿತಿ

ಯಲ್ಲಿ ಅರಬ್ಬೀ, ಪಾರಸೀ ಭಾಷೆಗಳ ಅಧಿಕೃತ ಸಾರ್ವಭೌಮರು ಅವರು. ಉರ್ದು, ಹಿಂದೀ ಭಾಷೆಗಳ ಪರಿಚಯದ ಸಹಾಯ ಬೇಕಾದಾಗಲೂ ನಾನು ಅವರ ಮೊರೆ ಹೋಗುತ್ತೇನೆ. ಎಷ್ಟೋ ವೇಳೆ ಅವರು ಆ ಭಾಷೆಗಳ ನಿಘಂಟನ್ನು ನೋಡಬೇಕಾದ ಅಗತ್ಯವೇ ಬರದಂತೆ ನಮ್ಮ ಸಮಸ್ಯೆಗಳನ್ನು ಪರಿಹಾರ ಮಾಡಿಬಿಡುತ್ತಾರೆ.

ವೀರಶೈವ ಸಾಹಿತ್ಯದಲ್ಲಿ ಅವರ ಪಾಂಡಿತ್ಯ ಅಪಾರವಾದದ್ದು. ವೀರಶೈವ ಧರ್ಮ, ಸಾಹಿತ್ಯ ಎರಡನ್ನೂ ಚೆನ್ನಾಗಿ ಅಭ್ಯಾಸಮಾಡಿರುವುದರಿಂದ ನಮ್ಮ ಅನೇಕ ಪ್ರಶ್ನೆಗಳಿಗೆ ಅವರು ಬೇಗ ಉತ್ತರ ನೀಡುತ್ತಾರೆ.

ಇಷ್ಟಾದರೂ ತಮ್ಮನ್ನು ತಾವೇ ಎಂದೂ ಮುಂದೆ ಮಾಡಿಕೊಂಡವರಲ್ಲ ಅವರು. 'ನೀ ಮುಂದು ನಾ ನಿನ್ನ ಹಿಂದು' ಎಂದೇ ದುಡಿದು ಕನ್ನಡದ ಕೈಂಕರ್ಯದಲ್ಲಿ ಶಾಶ್ವತಕೀರ್ತಿಯನ್ನು ಗಳಿಸಿದ್ದಾರೆ.

ಅಂಥವರಿಗೆ ಸನ್ಮಾನಮಾಡುವುದು ಸ್ತುತ್ಯವಷ್ಟೇ ಅಲ್ಲದೆ ಅಗತ್ಯ. ಇಂಥ ಸನ್ಮಾನಗಳಿಂದ ಅನೇಕ ಯುವಕ ಚೈತನ್ಯಗಳಿಗೆ ಸ್ಫೂರ್ತಿ ದೊರಕುತ್ತದೆ.

ಡಾ॥ ಸಿದ್ಧಯ್ಯ ಪುರಾಣಿಕರ ಜೀವನ ಅಂತಃಕರಣ ಪೂರ್ವಕವಾದುದು, ಅನುಕಂಪಾರ್ದಿತವಾದುದು. ಸಹಪಾಠಿಗಳನ್ನು, ಸಹೋದ್ಯೋಗಿಗಳನ್ನು ಕಂಡರೆ ಅವರು ಕೊಡುವ ಮರ್ಯಾದೆ, ತೋರಿಸುವ ವಿಶ್ವಾಸ, ಆತ್ಮೀಯತೆಗಳಿಗೆ ಮಾರು ಹೋಗದವರೇ ಇಲ್ಲ. ಇಂಥ ಸಜ್ಜನ ನೂರುಕಾಲ ಬಾಳಿ ಕನ್ನಡನಾಡಿನ ನುಡಿಯ ಸೇವೆಯನ್ನು ಭವ್ಯಕರವಾಗಿ ಮಾಡುತ್ತಿರಲಿ ಎಂದು ನಾನು ಹಾರೈಸುತ್ತೇನೆ. □

ವಕ್ರರೇಖೆ ನೂರು ವಿಧ
ಸರಳರೇಖೆಯೊಂದೆ
ಜಗದ ಭಾಷೆ ನೂರು ವಿಧ
ಹೃದಯ ಭಾಷೆಯೊಂದೆ
ಜೀವಿಗಳಿಗೆ ಬಣ್ಣ ಹಲವು
ಜೀವಮಾತ್ರ ಒಂದೆ
ನಾಡು ನುಡಿಯ ಗಡಿಗಳೆನಿತೊ
ಪೊಡವಿ ಮಾತ್ರ ಒಂದೆ

—ಕಲ್ಲೋಲಮಾಲೆ, ಪು. 53

# ಜೇನು ತುಂಬಿದ ಕೊಡ

● ಕೃಷ್ಣಮೂರ್ತಿ ಪುರಾಣಿಕ

ಸ್ನೇಹಕ್ಕೆ ಇನ್ನೊಂದು ಹೆಸರು ಸಿದ್ಧಯ್ಯ ಪುರಾಣಿಕ. ಈ ಹೆಸರು ನನ್ನಂತಹ ಅವರ ಮಿತ್ರರಿಗೆ ಬಹು ಪ್ರೀತಿಯ ಹೆಸರು. ಅವರ ವ್ಯಕ್ತಿತ್ವ ಅಂಥದು. ಅವರ ವಿಶಾಲ ದೃಷ್ಟಿ, ಜೀವನದ ಬಗೆಗಿರುವ ಅವರ ಸ್ಪಷ್ಟ ವಿವೇಚನೆ, ಜನ ಸಂಪರ್ಕದಲ್ಲಿ ಅವರ ಘನವಾದ ನಿಲುವು, ಹೃದಯ ಸಂಪತ್ತು, ನೊಂದವರ ಕಣ್ಣಹನಿ ಒರೆಸುವ ಅವರ ಅಂತಃಕರಣ, ತನ್ನಂತೆ ಪರರ ಬಗೆವ ಮನಸ್ಸು, ಸೌಂದರ್ಯದಲ್ಲಿ ದೈವೀಭಾವವನ್ನು ಪೂಜಿಸುವ ಅವರ ಸೌಂದರ್ಯ ದೃಷ್ಟಿ. ಈ ಶಾಂತಿ, ತುಷ್ಟಿ, ಪುಷ್ಟಿಗಳು ಸಿದ್ಧಯ್ಯನವರನ್ನು 'ಕಾವ್ಯಾನಂದ'ರನ್ನಾಗಿ ರೂಪುಗೊಳಿಸಿವೆ.

'ಮುಡಿವವರ ಮುಖ ನೋಡಿ ಅರಳುತವೆ ಪುಷ್ಪಗಳು
ಓದುವರ ಆಸೆಯಲಿ ನೀ ಬರೆಯಬೇಡ !
ನಿನ್ನ ರುಚಿಯೆತ್ತರಕೆ ಓದುಗರೆ ಬರಬೇಕು,
ಅವರನೊಲಿಸಲು ನಿನ್ನ ಗುರಿ ತೊರೆಯಬೇಡ.

(ಬಾಳ ಹೊತ್ತಿಗೆ)

ಇದು ಅವರ ಬರೆಹದ ಗುರಿ. ಇವರು ಬರೆದಂತೆ ಬದುಕುವ ಅಪರೂಪದ ವ್ಯಕ್ತಿ. ಸಿದ್ಧಯ್ಯನವರು ದೊಡ್ಡ ಅಧಿಕಾರಸ್ಥಾನದಲ್ಲಿದ್ದವರು. ಆಗ ಕೂಡ ಅವರ ಕವಿ ಹೃದಯ ಒಳಗೊಳಗೆ ಕಾವ್ಯ ಝೇಂಕಾರ ಮಾಡುತ್ತಲೆ ಇತ್ತು. ಅಧಿಕಾರವು ಅವರಿಗೊಂದು ಜನಸಂಪರ್ಕದ ಸಾಧನೆಯಾಗಿತ್ತು, ಅನುಭವದ ರಸಾಸ್ವಾದನೆಗೊಂದು ಮಾರ್ಗವಾಗಿತ್ತು. ಅವರ ಕಾವ್ಯಕಾವೇರಿಗೆ ಬ್ರಹ್ಮಗಿರಿಯಾಗಿತ್ತು.

ನಮ್ಮ ಅಡ್ಡ ಹೆಸರು ಅನೇಕ ಸಾಹಿತ್ಯ ಮಿತ್ರರಿಗೂ, ಸಾಹಿತ್ಯಾಭಿಮಾನಿಗಳಿಗೂ ಅನೇಕ ದಿನಗಳವರೆಗೆ ಒಂದು ಒಗಟವಾಗಿತ್ತು. ಇಬ್ಬರೂ ಪುರಾಣಿಕರು. ಆದರೆ ಒಬ್ಬ ಸಿದ್ಧಯ್ಯ; ಇನ್ನೊಬ್ಬ ಕೃಷ್ಣಮೂರ್ತಿ...

ಒಮ್ಮೆ ನಾನು ಸಾಹಿತ್ಯ ಪರಿಷತ್ತಿನ ಸಭೆಗಾಗಿ ಬೆಂಗಳೂರಿಗೆ ಹೋದಾಗ ಮಡಿಕೇರಿಯ ಮಿತ್ರರು ನನ್ನನ್ನು ಕಂಡು : "ನಿಮ್ಮ ತಮ್ಮಂದಿರು ಆರೋಗ್ಯವಾಗಿದ್ದಾರೆ ಸ್ವಾಮಿ ! ಅವರಷ್ಟು ಜನಪ್ರಿಯ ಅಧಿಕಾರಿ ಈವರೆಗೆ ಬಂದಿರಲೇ ಇಲ್ಲ..." ಎಂದರು.

ಸಿದ್ಧಯ್ಯನವರು ಕೊಡಗಿನ ಜಿಲ್ಲಾಧಿಕಾರಿಗಳಾಗಿ ವರ್ಗವಾಗಿ ಹೋದ ಸಂಗತಿ ನನಗೆ ತಿಳಿದಿರಲಿಲ್ಲ. ನನ್ನ ತಮ್ಮಂದಿರು ಶಿಕ್ಷಕರು. ಈ ಅಧಿಕಾರಿ ತಮ್ಮ ಯಾರು ? ಎಂದು ನಾನು ಯೋಚಿಸುತ್ತಿರುವಾಗ ಅವರೇ ಹೇಳಿದರು. "ನಾವು ಸಿದ್ಧಯ್ಯ ಪುರಾಣಿಕರ ಭೆಟ್ಟಿಗೆ ಹೋದಾಗ ನಿಮ್ಮ ಹೆಸರಿನ ಪ್ರಸ್ತಾಪ ಬಂದಿತು. 'ಕೃಷ್ಣಮೂರ್ತಿ ಪುರಾಣಿಕರು ನಿಮಗೆ ಏನಾಗಬೇಕು ಸರ್ !' ಎಂದು ಕೇಳಿದಾಗ ಅವರು ನಗುತ್ತ 'ನನ್ನ ಅಣ್ಣ! ಹೇಗೂ ನೀವು ಬೆಂಗಳೂರಿಗೆ ಹೋಗುತ್ತೀರಿ. ಅಣ್ಣನಿಗೆ ನನ್ನ ನಮಸ್ಕಾರ ತಿಳಿಸಿ. ಒಮ್ಮೆ ಕೊಡಗಿಗೆ ಬರಲು ಹೇಳಿರಿ' ಎಂದು ಹೇಳಿದರೆಂದು ಮಿತ್ರರು ಹೇಳಿದಾಗ ನನಗೆ ಒಮ್ಮೆಲೆ ಪ್ರಕಾಶ ಬಿದ್ದು ಸುಗಂಧದ ವಾಸನೆ ತೇಲಿಬಂದಂತಾಯಿತು.

ಇದು ಸಿದ್ಧಯ್ಯನವರ ಹೃದಯ. ನಮ್ಮ ಬಾಂಧವ್ಯ ದೈವೀ ಬಾಂಧವ್ಯ. ಇಲ್ಲಿ ಜಾತಿಯ ಕೋತಿ ಲಾಗ ಹಾಕಲಿಲ್ಲ. ನಮ್ಮ ಈ ಸುಮಧುರ ಬಾಂಧವ್ಯದ ಪರಿ ತಿಳಿದ 'ಭಾರತಿಸುತರ' ಕಣ್ಣಹನಿ ತುಳುಕಿತು. ಇದು ಕೇವಲ ಮೇಲು ಮಾತು ಆಗಿರಲಿಲ್ಲ. ನಾವು ಈಗಲೂ ಅಣ್ಣ ತಮ್ಮಂದಿರ ಹಾಗೆಯೇ ಬಾಳುವೆವು.

ಈ ಹೃದಯವಂತಿಕೆಯನ್ನು ಅವರ ಮಾತುಗಳಲ್ಲೇ ಕೇಳಿ :

ಎಲ್ಲೆಡೆಯೊಳೂ ಶುದ್ಧಪ್ರೇಮವನೆ ಕಾಣುವಂ—
ತೆನ್ನ ನಯನಕೆ ಬರಲಿ ಪ್ರೇಮದೃಷ್ಟಿ.
ನಿನ್ನ ನಗೆಯಂತೆಯೆ ನಗುನಗುತ ಕಾಣಿಸಲಿ
ನನ್ನ ಕಣ್ಣಿಗೆ ಸಕಲ ಮನುಜ ಸೃಷ್ಟಿ.
(ಮನೆಯಿಂದ ಹೊರಡುವಾಗ).

ಗೋಕಾಕದ ಜನತೆಗೆ, ಅಲ್ಲಿಯ ಅಧಿಕಾರಿಗಳಿಗೆ ಆ ದಿನ ಅಚ್ಚರಿಯೊಂದು ಕಾದಿತ್ತು. ಬೆಳಗಾವಿ ಜಿಲ್ಲಾಧಿಕಾರಿಗಳಾಗಿ ಕಾರ್ಯ ವಹಿಸಿಕೊಂಡ ಮೇಲೆ ಮೊದಲ ಸಲ ಅವರು ಗೋಕಾಕ ತಾಲ್ಲೂಕು ಆಫೀಸಿನ 'ತಪಾಸಣೆ'ಗೆ ಬಂದರು. ಹೊಸ 'ಕಲೇಕ್ಟರ'ರನ್ನು ನೋಡುವ ಕುತೂಹಲದಲ್ಲಿ ಜನಸಂದಣಿ ನೆರೆದಿತ್ತು.

ಅವರ ಕಾರು ನೇರವಾಗಿ ತಾಲೂಕು ಆಫೀಸಿಗೆ ಹೋಗಲಿಲ್ಲ : ನನ್ನ ಮನೆಗೆ ಬಂದಿತು. ಶಿಕ್ಷಕನ ಮನೆಗೆ ಜಿಲ್ಲಾಧಿಕಾರಿ ಬಂದದ್ದು ಅಚ್ಚರಿಯೊಳಚ್ಚರಿಯಾಗಿತ್ತು. ಬಂದವರು, ಕುಶಲಪ್ರಶ್ನೆ ಮಾಡಿದರು. ನನ್ನ ಹೆಂಡತಿಯನ್ನು ಅವರು ಅತ್ತಿಗೆಯೆಂದೇ ಕರೆಯುತ್ತಿದ್ದರು. ಅತ್ತಿಗೆ ಖಾದ್ಯವನ್ನು ಸಿದ್ಧಪಡಿಸುವವರೆಗೆ ಕಾದು, ಹಾಲು ಕುಡಿದು ಹೊರಬಿದ್ದಾಗ ನಮಗೆಲ್ಲಾ ಸಂಭ್ರಮವೋ ಸಂಭ್ರಮ.

ಅಧಿಕಾರದಲ್ಲಿದ್ದರೂ ಅವರು ಅಂತಃಕರಣವನ್ನು ವಿಜೃಂಭಿಸಿದರು. ಸ್ನೇಹಕ್ಕೆ ಮೊದಲ ಪ್ರಾಶಸ್ತ್ಯ.

ಸರ್ವಧರ್ಮ ಸಮ್ಮೇಳನಕ್ಕಾಗಿ ನಾವು ಧರ್ಮಸ್ಥಳದಲ್ಲಿ ಎರಡು ದಿನ ಇರಬೇಕಾಯಿತು. ನನ್ನ ಸೌಭಾಗ್ಯವತಿಗೆ ನೇತ್ರಾವತಿ ನದಿಯಲ್ಲಿ ಸ್ನಾನ ಮಾಡಬೇಕಾಗಿತ್ತು. ಉಜಿರೆಯಿಂದ ಅದು ತುಸು ದೂರ. ನಾವು ಉಳಿದುಕೊಂಡದ್ದು ಉಜಿರೆಯ ಕಾಲೇಜದ ಆವರಣದಲ್ಲಿ. ಸಿದ್ಧಯ್ಯನವರು ತಮ್ಮ ಕಾರನ್ನು ಕಳಿಸಿ ನನ್ನ ಹೆಂಡತಿಯ ನೇತ್ರಾವತಿ ಸ್ನಾನದ ಬಯಕೆಯನ್ನು ಪೂರ್ತಿಗೊಳಿಸಿದರು. ಈ ಸಂವೇದನಾಶೀಲ ವ್ಯಕ್ತಿ ಇನ್ನೊಬ್ಬರ ಹೃದಯದಲ್ಲಿ ನಡೆಯುವ ವಿಚಾರಗಳನ್ನು ತಿಳಿಯಬಲ್ಲರೇನೊ ?

ಇವರು ಬೆಳಗಾವ ಜಿಲ್ಲಾಧಿಕಾರಿಯಿರುವಾಗ ನನಗೆ ಅರವತ್ತು ವರುಷಗಳು ತುಂಬಿದವು. ನನ್ನ ಸತ್ಕಾರ ಸಮಾರಂಭಗಳಲ್ಲೆಲ್ಲ ಸಿದ್ಧಯ್ಯನವರೇ ಅಧ್ಯಕ್ಷರು. ಗೋಕಾಕದಲ್ಲಿ, ಬಸವನ ಬಾಗೇವಾಡಿಯಲ್ಲಿ, ಹುಬ್ಬಳ್ಳಿಯಲ್ಲಿ–ಹೀಗೆ ಅನೇಕ ಕಡೆಗಳಲ್ಲಿ ನನ್ನ ಕಾದಂಬರಿಗಳ ಬಗೆಗೆ ಒಳ್ಳೆಯ ಮಾತುಗಳನ್ನಾಡಿ ಜನರನ್ನು ಪುಳುಕಿತಗೊಳಿಸಿದರು, ಇದರಿಂದ ಅವರಲ್ಲಿ ಹೊಸ ಪ್ರಭಾವವೇ ಮೂಡುವಂತಾಯಿತು. ಹುಬ್ಬಳ್ಳಿಯ ಮೆಡಿಕಲ್ ಕಾಲೇಜು ಮಹಾಸನ್ಮಾನ ಸಭೆಯಲ್ಲಿ ಸಿದ್ಧಯ್ಯನವರ ಅಧ್ಯಕ್ಷ ಭಾಷಣದ ನಾಲ್ಕಾರು ಮಾತುಗಳು ಇವು : "...ಇಂದಿನ ದಿನಮಾನದಲ್ಲಿ ತಂದೆಯನ್ನು ಕದ್ದು ಮಗ, ಮಗನನ್ನು ಕದ್ದು ತಂದೆ, ಗಂಡನಿಗೆ ಗೊತ್ತಾಗದಂತೆ ಹೆಂಡತಿ, ಹೆಂಡತಿಗೆ ಗೊತ್ತಾಗದಂತೆ ಗಂಡ ಓದುವ ಪುಸ್ತಕಗಳೇ ಹೆಚ್ಚಾಗಿ ಇರುವಾಗ ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿಗಳನ್ನು ಎಲ್ಲರೂ ಧಾರಾಳವಾಗಿ ಓದಬಹುದು......"

ಇಂಥ ಸಕ್ಕರೆಯಂಥ ಮಾತುಗಳನ್ನು ಆಡುವ ಅವರ ಸದಭಿರುಚಿಯನ್ನು ಆ ಸಭೆಯಲ್ಲಿದ್ದ ಶ್ರೀ ಕೆ. ಎಸ್. ನರಸಿಂಹಸ್ವಾಮಿ (ಮೈಸೂರು ಮಲ್ಲಿಗೆ) ಯವರು ಮುಕ್ತಕಂಠವಾಗಿ ಹೊಗಳಿದರು.

ಬೆಳಗಾವಿಯಲ್ಲಿ ನನ್ನ ಮಗನ ಮದುವೆಯಾದಾಗ ಸತಿಪತಿಗಳಿಬ್ಬರೂ ಬಂದು ನೂತನ ದಂಪತಿಗಳನ್ನು ಆಶೀರ್ವದಿಸಿ ಉಡುಗೊರೆ ಕೊಟ್ಟುಹೋದ ದೃಶ್ಯ ಈಗಲೂ ನನ್ನ ಕಣ್ಣಮುಂದೆ ಕಟ್ಟಿದೆ.

ಮಾನವೀಯತೆಯನ್ನು ಅಳವಡಿಸಿಕೊಂಡ ಹೃದಯ ಕುಂಭದಲ್ಲಿ ಜೇನುರಸವನ್ನೇ ತುಂಬಿಕೊಂಡ ಸಿದ್ಧಯ್ಯನವರು ಅಪ್ಪಟ ಸರಳ ವ್ಯಕ್ತಿ. ಅವರಲ್ಲಿ ಅಧಿಕಾರದ ವ್ಯಾಮೋಹವಿರಲಿಲ್ಲ. ಇದು ಎಂದು ಮುಗಿದೀತೋ, ಎಂದು ಸಂಪೂರ್ಣವಾಗಿ ಕನ್ನಡ ಸೇವೆಗೆ ಅರ್ಪಿಸಿಕೊಂಡೇನೋ ಎಂಬ ಅವರ ಕಾತುರತೆಯನ್ನು ನಾನು ಪ್ರತ್ಯಕ್ಷವಾಗಿ ಕಂಡಿದ್ದೇನೆ. ಇಡಿಯ ಜೀವಮಾನವನ್ನು, ಅನುಭವದ ಪ್ರಯೋಗಶಾಲೆಯನ್ನಾಗಿ ಪರಿವರ್ತಿಸಿಕೊಂಡವರು ಸಿದ್ಧಯ್ಯನವರು,

ಹರಿಹಾಯದಿರು ಹೆರರ ಮೇಲೆ ಕೆಳೆಯ
ಈ ನಗುವ ನಂದನವ
ಮಸಣ ಮಾಡಿದವ ನೀನೇ !
ಈ ಮಸಣದಲಿ ಮತ್ತೆ
ವನ ಬೆಳೆಸುವವ ನೀನೇ !

ನಿನಗೆ ನೀನೇ ! ನಿನಗೆ ನೀನೇ !
ನಿನ್ನ ಕೆಡಿಸುವವ ನೀನೇ !
ನಿನ್ನ ಸರಿಪಡಿಸುವವ ನೀನೇ !

ಎಂಥ ಅಮೋಘವಾದ ವಿಚಾರಗಳಿವು !

ನಮ್ಮ ಬಾಂಧವ್ಯದಲ್ಲಿ ಪರಿದಾಡುತ್ತಿರುವ ಹಾಲು ಹೊಳೆಯು ಕೇವಲ ತರಂಗಮಾಲೆಯದಲ್ಲ ; ಆಳವಾದದ್ದು. ನಮ್ಮ ಅಂತಃಕರಣದ ಸೇತುವೆ ಯಾವಾಗಲೂ ಗಟ್ಟಿಯಾದದ್ದು. ನಮ್ಮ ನೋವು ನಲಿವುಗಳು ಅದು ಹೇಗೋ ಪರಸ್ಪರರನ್ನು ತಟ್ಟುತ್ತಿದ್ದವು. ನನ್ನ ಜನ್ಮಬಂಧುಗಳಲ್ಲಿ ಕಾಣದ ಹೆಗ್ಗಳಿಕೆ ಇಲ್ಲಿದೆ. ಇದು ಜನ್ಮಜನ್ಮಾಂತರ ಪುಣ್ಯ.

ನಾನು ಹೇಳಿದ ಮಾತುಗಳನ್ನು ಸಮರ್ಥಿಸುವಂತೆ ಅವರ ನಿಷ್ಕಲ್ಮಷ ಹೃದಯದ ಬಗ್ಗೆ ಒಂದು ಮಾತನ್ನು ಹೇಳಿ, ಈ ಲೇಖನದ ಬರೆಹವನ್ನು ಮುಗಿಸುತ್ತೇನೆ. ನನ್ನ ಧರ್ಮಪತ್ನಿ ಶಿವನ ಸಾನ್ನಿಧ್ಯವನ್ನು ಸೇರಿದ ಸುದ್ದಿ ತಿಳಿದ ಕೂಡಲೆ ಅವರು ಬರೆದ ಪತ್ರವಿದು :

"ಶ್ರೀಗಿರಿ", ೪/೫ ಎ. ಅಲಿಆಸ್ಕರ್ ರಸ್ತೆ,
ಬೆಂಗಳೂರು-೫೨.
೧೭-೮-೭೭.

...ಬಹುಶಃ ೭-೮-೧೯೭೭ಕ್ಕೆ (ನನ್ನ ಹೆಂಡತಿ ನಿಧನವಾದ ದಿನಾಂಕ) ನಾನು ಅತ್ತಿಗೆಯನ್ನು ನೆನೆಸಿದ್ದೆ. ಸ್ನೇಹಿತರೊಬ್ಬರೆದುರು ನೀವು ತುಂಬಿದ ಸಭೆಯೊಂದರಲ್ಲಿ, ನಾನು ನಿಮ್ಮ ಸಹಧರ್ಮಿಣಿಯವರಿಗೆ ಅತ್ತಿಗೆಯೆಂದು ಕರೆಯುತ್ತಿರುವುದನ್ನು, ಅಭಿಮಾನದಿಂದ ಹೇಳಿಕೊಂಡುದುದನ್ನು ತಿಳಿಸಿ ಅವರನ್ನು ಆನಂದಗೊಳಿಸಿದ್ದೆ. ಆ ನಿಮಿತ್ತದಿಂದ "ಅತ್ತಿಗೆಯನ್ನು ಮತ್ತೆ ಎಂದು ನೋಡುವೆನೋ" ಎಂಬ ಕಳವಳ ಸುಳಿದುಹೋಯಿತು ಮನದಲ್ಲಿ. ಅಂದೇ ಅವರು ಇಹಲೋಕ ಯಾತ್ರೆ ಮುಗಿಸುತ್ತಲಿದ್ದುದು ನನಗೆ ಹೇಗೆ ಗೊತ್ತಾಗಬೇಕು.

ನಿಮಗೆ ಸಾಂತ್ವನ ನೀಡಲು ನಾನೆಷ್ಟರವನು ? ಆದರೂ ಈ ದಾರುಣ ದುಃಖವನ್ನು ನುಂಗಿಕೊಳ್ಳಿರೆಂದು ಹೇಳದೆ ಇರಲಾರೆ !

ಇನ್ನು ನಿಮ್ಮ ಕಾದಂಬರಿಗಳಲ್ಲಿ ಈ ಮೊದಲಿಲ್ಲದ ಕ್ರಂದನ ಸ್ವರವೊಂದು ಯಾವುದೋ ಪಾತ್ರದ ಮುಖದಿಂದ ಹೊರಬೀಳಬಹುದು. ಅದು ಓದುಗರಿಗೆ ಹೊಸ ಅನುಭವವನ್ನು ಒದಗಿಸಬಹುದು. ಅದನ್ನು ಕಂಡು ಅತ್ತಿಗೆಯ ಆತ್ಮ ಅರಳಬಹುದು :

ಭವದೀಯ,
ಸಿದ್ಧಯ್ಯಪುರಾಣಿಕ.

ಈ ಪತ್ರದ ಜೊತೆಗೆ ಈ ನಾಲ್ಕು ಚರಣಗಳನ್ನೂ ಜೋಡಿಸಿದ್ದರು ಕಾವ್ಯಾನಂದರು:

ಮತ್ತೆ ನೋಡಬೇಕೆನ್ನುವ ಹೊತ್ತಿಗೆ
ಹೊರಟು ಹೋದಳು ನನ್ನ ಅತ್ತಿಗೆ !
ಕಣ್ಣಿಲ್ಲ, ಕರುಳಿಲ್ಲ, ಮಿಳ್ತುಗೆ
ಅಳುವದೇ ಗತಿಯಾಯ್ತು ಅಳ್ತಿಗೆ.

ಇಂಥ ವಿಶ್ವಮಾನವ ಹೃದಯವನ್ನು ಹೊಂದಿದ ನನ್ನ 'ತಮ್ಮ' ಸಿದ್ಧಯ್ಯನವರು ಇನ್ನೂ ನೂರು ವರುಷ ಬಾಳಲಿ! ಕನ್ನಡ ತಾಯಿ ಧನ್ಯಳಾಗಲಿ. □

ಹಣ್ಣಾಗದಿಹ ಹೂವೆ ಸಣ್ಣಾಗದಿರು ಮನದಿ
ಮಣ್ಣಾಗಿ ಹೋಗದೇ ಹಣ್ಣು ಕೂಡ ?

—ಕಲ್ಲೋಲಮಾಲೆ, ಪು. 33

# ಸ್ನೇಹ ಸಂಚಯ

● ಇಟಗಿ ರಾಘವೇಂದ್ರ

'ಬಾಳುವೆಯ ಸವಿಬೆಳಕ ಬರೆಯುವವ ಬೇಕಾಗಿ
ಸಾರುತಿದೆ ಸೃಷ್ಟಿ, ಸವಿ-ಛವಿಯಾಗಿ ನಿಂದು
ಕವಿಯಾಗು ಕವಿಯಾಗು—ಎಂದು!'

ಕವಿ ಏನನ್ನು ಸಾಧಿಸಬೇಕು, ಏನನ್ನು ಕುರಿತು ಆಲೋಚಿಸಿ, ಚಿಂತನೆ ನಡೆಸಿ ಮಾನವನ ಅಂತಃಕರಣ ಚೈತನ್ಯಮಯಿ ಆಗುವುದಕ್ಕೆ, ಅವನ ಈಪ್ಸಗಳಿಗೆ, ಸೋಲು-ಗೆಲುವು-ನಲಿವುಗಳಿಗೆ ಹೇಗೆ ಅಭಿವ್ಯಕ್ತಿ ಒದಗಿಸಬೇಕು. ಪ್ರಜ್ಞಾವಂತನಾಗಿ ಮೂಕಹೃದಯದ ನಾಲಿಗೆ ಆಗಬೇಕು-ಎಂಬುದನ್ನು ತಮ್ಮ ಒಂದು ಚಿಕ್ಕದಾದ ಚೊಕ್ಕ ಭಾವಗೀತದಲ್ಲಿ ಕಾವ್ಯಾನಂದರು ಇಪ್ಪತ್ತೈದು ವರುಷಗಳ ಹಿಂದೆಯೇ ಸ್ಪಷ್ಟಪಡಿಸಿದ್ದಾರೆ. ಕರುಣಾಶ್ರಾವಣಮಯಿ ಅವರ ಕಾವ್ಯಸ್ರೋತ ಇದಕ್ಕೆ ಸಾಕ್ಷಿಯಾಗಿದೆ. ಮನನ, ಕಲ್ಪನೆ, ಅನುಭವಕ್ಕೆ ತಕ್ಕ ರಾಜಗಂಭೀರಶೈಲಿ ಅವರದು — ಯಾವುದೋ ಅಬ್ಬರದಲ್ಲಿ (ಉಬ್ಬರದಲ್ಲಿ ಅನ್ನಿ ಬೇಕಾದರೆ) ಬರೆಯುವ ಆತುರದ ಅತೃಪ್ತಿಯ ಕವಿ ಅಲ್ಲ ಅವರು – ಅಂತೆಯೇ ಅವರು ಮಾನಸ ಸರೋವರದವರೆಗೆ ಇದಿರು ಪ್ರಯಾಣ ಮಾಡಿದ್ದಾರೆ—ಕಲ್ಲೋಲಮಾಲೆಯಂಥ ಸುಂದರ ಕಾವ್ಯ ತುಷಾರಹಾರ ಹೆಣೆದಿದ್ದಾರೆ. ವಚನ ಸಾಹಿತ್ಯದ ಚೊಕ್ಕಕಾಳು ಬಿತ್ತಿ ಸಮೃದ್ಧವಾದ ಫಸಲನ್ನು ತೆಗೆದಿದ್ದಾರೆ. ಭಾವಶುದ್ಧಿಯ ಜ್ಞಾನವೃದ್ಧಿಯ – ಸೌಜನ್ಯವೇ ನಡೆದಾಡುವ ವಿನಯದ ವ್ಯಕ್ತಿತ್ವವುಳ್ಳ ಈ ಕವಿ, ಸ್ನೇಹಿತರಾಗಿ ಅದಕ್ಕಿಂತ ಮಿಗಿಲಾಗಿ ಅಣ್ಣನಾಗಿ ನನಗೆ ಸಿಕ್ಕಿದ್ದು, ದಕ್ಕಿದ್ದು, ನಾನು ಜೀವನದಲ್ಲಿ ಗಳಿಸಿದ ಮಹತ್ವದ ಆಸ್ತಿ. ನನಗೆ ಆಪ್ಯಾಯಮಾನರಾದ ಕನ್ನಡ ಧೀಮಂತರನ್ನು ಗೌರವದಿಂದ ನೆನೆಯುವ ಅನೇಕ ಪದ್ಯಗಳನ್ನು ನಾನು ಬರೆದಿದ್ದೇನೆ. ಕಾವ್ಯಾನಂದರನ್ನೂ ಕುರಿತು ಬಹು ಹಿಂದೆ ಬರೆದ ಒಂದು ಪದ್ಯ ಇದು—**ಸ್ನೇಹ ಸಂಚಯ:**

ಸ್ನೇಹ ಸಕ್ಕರೆ ಒಲವಿನೀ ಕರೆ
ಏನು ಅಕ್ಕರೆ ನಿಮ್ಮದು ॥
ಹಾಸು ಹೊಕ್ಕಿರೆ ಮಮತೆ ತೆರೆತೆರೆ
ಪಡೆದ ಭಾಗ್ಯವು ನನ್ನದು ॥
ವಿದ್ಯೆ ವಿನಯದ ಸ್ವರ್ಣಕಲಶವ
ಹೊತ್ತ ಕನ್ನಡ ಪೂಷಣ
ಬಾಳಬಟ್ಟೆಯ ಕಾವ್ಯನೀಡುವ
ನೀನು ಕನ್ನಡ ಭೂಷಣ ॥
ಇರುವ ಹಿರಿತನ ಇಳುಹಿ ಕೆಳೆತನ–
ಕೆಳೆಸಿ ನಡೆವಿರಿ ಹತ್ತಿರ
ತಮ್ಮನೆನ್ನುತ ಜೊತೆಗೆ ನಡೆಸುತ
ಬೆಳೆಸುತಿರುವಿರಿ ಎತ್ತರ ॥

ಕಾವ್ಯನದಿಗಿದೆ ರಸದ ಸೇತುವೆ
ಶ್ರದ್ಧೆ ಜೀವನ ಸಾಥಿಯು ।
ನಿಮ್ಮ ಸ್ನೇಹದ ರಕ್ಷೆ ಸಂತತ
ನನ್ನ ಬಾಳಿಗೆ ಸ್ಫೂರ್ತಿಯು ॥

ಬಾಳಸರಸಿಯ ಮೇಲೆ ಅರಳಿದ
ಸ್ನೇಹ–ಸಾರ ಸರೋಜವು ।
ಬೀರೆ ಪರಿಮಳ ಗಾಳಿ ನೆಲ ಜಲ
ಕೂಡಿಕೊಳುತಿದೆ ಓಜವು ॥
ಬಗೆಯ ಮಂದಿರ ಭಾವ ಸುಂದರ
ಸ್ನೇಹಚಂದಿರ ನಕ್ಕರೆ ।
ನಮ್ಮ ನಿಮ್ಮಯ ಸ್ನೇಹಸಂಚಯು
ಹೃದಯ ಉಭಯರ ಉಕ್ಕಿರೆ ॥

ಸ್ನೇಹಕೋಕಿಲವಿತ್ತ ಕೂಜನ
ಹೊತ್ತ ಕಾನನ ಧನ್ಯವು ।
ಎಲ್ಲಿ ಹೋದರು ಸೊಲ್ಲು ಇರುವುದು
ಸ್ನೇಹವಾಗದು–ಅನ್ಯವು ॥ □

# ಡಾ. ಸಿದ್ಧಯ್ಯ ಪುರಾಣಿಕ ಅವರ ಸಾಹಿತ್ಯಸೇವೆ

● ಎನ್. ಬಸವಾರಾಧ್ಯ

ಭಾರತೀಯ ಭಾಷಾ ಪರಿಷತ್ತಿನ ಪ್ರಥಮಭಾರಿಯ ಪ್ರಶಸ್ತಿಯನ್ನು ಗಳಿಸಿರುವ ಡಾ. ಸಿದ್ಧಯ್ಯ ಪುರಾಣಿಕರು ಕನ್ನಡ ಸಾರಸ್ವತ ಲೋಕಕ್ಕೆ ಚಿರಪರಿಚಿತರು. ಶ್ರೀಯುತರ ಪ್ರಶಸ್ತಿ ವಿಜೇತ "ವಚನೋದ್ಯಾನ" ಕನ್ನಡದ ಒಂದು ಮಹತ್ಕೃತಿ. ಪ್ರಾಚೀನ ವಚನಸಾಹಿತ್ಯವನ್ನೆಲ್ಲ ಕರತಲಾಮಲಕ ಮಾಡಿಕೊಂಡು ರಚಿತವಾಗಿರುವ ಈ ಕೃತಿ ಚಿರಕಾಲ ನಿಲ್ಲುವಂತಹುದು. ಇದು ಯಾವುದೋ ದೇಶಕ್ಕೆ, ಯಾವುದೋ ಕಾಲಕ್ಕೆ, ಯಾವುದೋ ಉದ್ದೇಶಕ್ಕೆ ರಚಿತವಾದುದಲ್ಲ. ಇದು ಎಲ್ಲ ಕಾಲಕ್ಕೂ ಎಲ್ಲ ಜನಾಂಗಕ್ಕೂ ಎಂದೆಂದಿಗೂ ಉಪಯುಕ್ತವಾಗ ಬಲ್ಲ ಮೇರುಕೃತಿ. ಈ ಸಂಕಲನದ ವಚನಗಳು ಸುವರ್ಣದ ನಾಣ್ಯಗಳಿದ್ದಂತೆ, ಇವಕ್ಕೆ ಎಲ್ಲ ದೇಶಗಳಲ್ಲಿಯೂ ಎಲ್ಲ ಕಾಲಗಳಲ್ಲಿಯೂ ಅಚ್ಚಳಿಯದ ಮೌಲ್ಯವಿದೆ. ಆದ್ದರಿಂದಲೇ ಇವು ಸಾರ್ವತ್ರಿಕ ನಿರಂತರ ಚಲಾವಣೆಯುಳ್ಳ ಸುವರ್ಣ ನಾಣ್ಯಗಳು. ಕಾಲಕಳೆದಂತೆಲ್ಲ ಇವುಗಳ ಮೌಲ್ಯ ಏರುತ್ತಲೇ ಇರುತ್ತದೆ. ಈ ದೃಷ್ಟಿಯಿಂದ ವಚನೋದ್ಯಾನ ಸರ್ವಾದರಣೀಯವಾದುದರಲ್ಲಿ ಆಶ್ಚರ್ಯವೇನೂ ಇಲ್ಲ.

ಡಾ. ಸಿದ್ಧಯ್ಯ ಪುರಾಣಿಕರು ವಿದ್ವದ್ಮನೆತನಕ್ಕೆ ಸೇರಿದವರು. ಇವರ ತಂದೆ ತಾತಂದಿರು ಕವಿಗಳಾಗಿ ಪರಮ ಶಿವಭಕ್ತರಾಗಿ ಪ್ರಸಿದ್ಧರಾಗಿದ್ದಾರೆ. ಸಿದ್ಧಯ್ಯ ಪುರಾಣಿಕರು ತಮ್ಮ ಹಿರಿಯರ ಗುಣಗಳನ್ನೆಲ್ಲ ಗರ್ಭೀಕರಿಸಿಕೊಂಡು ಕನ್ನಡಕ್ಕೆ ಸಾರಸ್ವತ ಕೃತಿಗಳನ್ನು ನೀಡಿದ್ದಾರೆ. 'ಕಾವ್ಯಾನಂದ' ನಾಮಾಂಕಿತರಾದ ಸಿದ್ಧಯ್ಯ ಪುರಾಣಿಕರು ಸುಸಂಸ್ಕೃತರು. ಕವಿಗಳಾಗಿ, ಕಾದಂಬರಿಕಾರರಾಗಿ, ನಾಟಕಕಾರರಾಗಿ, ಕತೆಗಾರರಾಗಿ, ಚರಿತ್ರಕಾರರಾಗಿ, ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರು ಕನ್ನಡ ಪದ್ಯ ರತ್ನಾಕರ, ಶ್ರೀಕಾರ, ಪ್ರಬಂಧಮಾಲೆ, ಸುಬೋಧಸಾರ, ಮಹಾತ್ಮ ಕನಕದಾಸ ಪ್ರಶಸ್ತಿ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಶರಣ ಚರಿತಾಮೃತ ಎಂಬ ಶಿವಶರಣರ ಚರಿತ್ರೆಗಳಿಗೆ ಸಂಬಂಧಿಸಿದ ಒಂದು ಮಹತ್ವದ ಗ್ರಂಥವನ್ನು ಬರೆದಿದ್ದಾರೆ. ತುಷಾರಹಾರ, ಕಥಾಮಂಜರಿ ಇವು ಕಥಾಸಂಕಲನಗಳು, ಆತ್ಮಾರ್ಪಣ, ರಜತರೇಖೆ, ಭಾರತವೀರ ನಾಟಕಗಳು. ತ್ರಿಭುವನಮಲ್ಲ ಶ್ರೀಯುತರ ಏಕೈಕ ಕಾದಂಬರಿ. ಜಲಪಾತ, ಕರುಣಾಶ್ರಾವಣ, ಮಾನಸ ಸರೋವರ, ಕಲ್ಲೋಲಮಾಲೆ, ಮೊದಲು ಮಾನವನಾಗು, ವಿಕಾಸವಾಣಿ, ತುಪ್ಪಾರೊಟ್ಟಿಗೇ ಗೇ ಗೇ ಇವು ಕವನಸಂಕಲನಗಳು. ಹೀಗೆ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೃಷಿಗೈದಿರುವ ಸಿದ್ಧಯ್ಯ ಪುರಾಣಿಕರ ಹೆಸರು ಸಾಹಿತ್ಯ ಚರಿತ್ರೆಯಲ್ಲಿ ಸ್ಥಿರವಾದ ಸ್ಥಾನವನ್ನು ಗಳಿಸಿಕೊಂಡಿದೆ.

ಡಾ. ಸಿದ್ಧಯ್ಯ ಪುರಾಣಿಕರು ವೃತ್ತಿಯಿಂದ ಸರ್ಕಾರಿ ಸೇವೆಯನ್ನು ಸಲ್ಲಿಸಿದರೂ ಪ್ರವೃತ್ತಿಯಿಂದ ಸಾಹಿತ್ಯ ಸೇವೆಯನ್ನು ನಿರಂತರವಾಗಿ ಸಲ್ಲಿಸುತ್ತಿರುವವರು. ಇವರು ಸಾಹಿತ್ಯ ಕ್ಷೇತ್ರಕ್ಕೆ ಎಲ್ಲಿಂದಲೋ ಬಂದವರಲ್ಲ, ಸಾಹಿತ್ಯ ಕ್ಷೇತ್ರದಿಂದ ಎಲ್ಲಿಗೋ ಹೋದವರು. ಆದರೂ ಇವರು ತಮ್ಮ ಮೂಲನೆಲೆಯನ್ನು ಕಳೆದುಕೊಳ್ಳದೆ ಅದರ ಬೆಲೆಯನ್ನು ಹೆಚ್ಚಿಸಿದ್ದಾರೆ. ಹಲವಾರು ಭಾಷೆಗಳ ಪರಿಚಯ ಪರಿಶ್ರಮವುಳ್ಳ ಶ್ರೀಯುತರು ಹಲವು ಹತ್ತಾರು ಮುಖಗಳಲ್ಲಿ ಸಾಹಿತ್ಯಸೇವೆಯನ್ನು ಸಲ್ಲಿಸಿ ಅಮರಕೃತಿಗಳನ್ನು ರಚಿಸಿದ್ದಾರೆ. ಇವರಿಂದ ಇನ್ನೂ ಮಹತ್ವದ ಕೃತಿಗಳು ಬರುವಂತಾಗಲಿ ಇವರ ಬಾಳು ಭವ್ಯವಾಗಲಿ ದಿವ್ಯವಾಗಲಿ ಎಂದು ಹಾರೈಸುತ್ತೇನೆ. □

# ಸವ್ಯಸಾಚಿ ಸಾಹಿತಿ ಡಾ. ಸಿದ್ಧಯ್ಯ ಪುರಾಣಿಕ

● ಶ್ರೀ ಎಸ್. ಎಸ್. ಭೂಸರೆಡ್ಡಿ

'ಅರಿವೇ ಗುರು, ಗಗನವೇ ಲಿಂಗ, ಜಗವೇ ಜಂಗಮು,' 'ಕಾದಿ ಕ್ಷತ್ರಿಯನಾಗಿ, ಓದಿ ಬ್ರಾಹ್ಮಣನಾಗು– ಏನಾದರೂ ಆಗು ಮೊದಲು ಮಾನವನಾಗು ; 'ಏಕೆ ಕುಣಿವೆ ತಾಳತಪ್ಪಿ ಸಾಕು ಮಾಡು ಭೈರವ, ನಾಕಹೋಗಿ ನರಕವಾಯ್ತು ಕೈರವ', ಮೊದಲಾದ ವಿಚಾರ ಪ್ರಚೋದಕ ಕಾವ್ಯಸೌರಭ ಸೂಸುವ ಭಾವೈಕ್ಯದ ನುಡಿಗಳಿಂದ ಚಿರಪರಿಚಿತರಾದ ಡಾ. ಸಿದ್ಧಯ್ಯ ಪುರಾಣಿಕರು ವೃತ್ತಿಯಿಂದ ನಿವೃತ್ತರಾದರೂ, ಪ್ರವೃತ್ತಿಯಿಂದ ಸಾಹಿತಿಗಳಾಗಿ ನಾಡನುಡಿಯ ಸೇವೆಗೆ ಕಂಕಣಬದ್ಧರಾಗಿ ನಿಂತಿರುವುದು ಕನ್ನಡಿಗರ ಪುಣ್ಯವಿಶೇಷವೇ ಸರಿ. 'ವಚನೋದ್ಯಾನ' ಅವರ ಅಪಾರ ಅನುಭವದ ಅಮೃತಕುಂಡ. ಸಾಹಿತ್ಯವು ಜೀವನದ ಪ್ರತಿಬಿಂಬವೆಂಬ ವ್ಯಾಖ್ಯೆಗೆ ಸಾಕ್ಷಿ. ನಿರಂತರ ಚಿಂತನ-ಮಂಥನದ ಅಮರಫಲ. ಈ ಕೃತಿಗೆ ಇದೀಗ ಕಲಕತ್ತೆಯ ಭಾಷಾ ಪರಿಷತ್ತು ಹನ್ನೊಂದು ಸಾವಿರ ರೂಪಾಯಿಗಳ ಪ್ರಶಸ್ತಿ ಪ್ರಧಾನ ನೀಡಿ ಗೌರವಿಸಿದೆ. ಭಾರತೀಯ ದೇಶೀಭಾಷೆಗಳ ಅಭಿವೃದ್ಧಿಗಾಗಿ ಅಸ್ತಿತ್ವಕ್ಕೆ ಬಂದಿರುವ ಈ ಪರಿಷತ್ತು ತನ್ನ ಮೊದಲಹೆಜ್ಜೆಯಲ್ಲಿಯೇ ಕನ್ನಡದ ಶ್ರೇಷ್ಠ ಕೃತಿಯೊಂದಕ್ಕೆ ಪ್ರಶಸ್ತಿ ನೀಡಿರುವುದು ಆಧುನಿಕ ಕನ್ನಡ ಸಾಹಿತ್ಯ ಪ್ರಪಂಚದ ಇತಿಹಾಸದಲ್ಲಿ ವಿನೂತನ ದಾಖಲೆ. 'ಸ್ವತಂತ್ರಧೀರ ಸಿದ್ಧೇಶ್ವರ' ಅಂಕಿತದಲ್ಲಿ ಶಿವಶರಣರ ವಚನಗಳ ಮಾದರಿಯಲ್ಲಿ ಮೂಡಿಬಂದಿರುವ ಈ ಕೃತಿಯಿಂದ ಡಾ॥ ಸಿದ್ಧಯ್ಯ ಪುರಾಣಿಕರಿಗೆ ಆಧುನಿಕ ಶ್ರೇಷ್ಠ ವಚನಕಾರರಲ್ಲಿ ಒಂದು ವಿಶಿಷ್ಟಸ್ಥಾನ ದೊರಕಿದೆ. 'ಕಾವ್ಯಾನಂದ' ಕಾವ್ಯನಾಮದಿಂದ ಡಾ. ಸಿದ್ಧಯ್ಯ ಪುರಾಣಿಕರು ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೈಯಾಡಿಸಿ ತಮ್ಮ ಬಹುಮುಖ ವ್ಯಕ್ತಿತ್ವದ ಪರಿಚಯವನ್ನು ಕನ್ನಡಿಗರಿಗೆ ಚೆನ್ನಾಗಿ ಮಾಡಿಕೊಟ್ಟಿದ್ದಾರೆ. ಸರಕಾರದ ವಿವಿಧ ಉನ್ನತ ಹುದ್ದೆಗಳಲ್ಲಿ ಸಮರ್ಥ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತ ಸಾಹಿತ್ಯ ಸೃಷ್ಟಿಯತ್ತ ಗಮನಹರಿಸಿ ಅದರಲ್ಲಿಯೂ ತಮ್ಮ ಪ್ರತಿಭಾ ವಿಲಾಸ ಮೆರೆದಿದ್ದಾರೆ. ಗದ್ಯ-ಪದ್ಯಗಳೆರಡರಲ್ಲಿಯೂ ಸವ್ಯಸಾಚಿತ್ವ ಗಳಿಸಿಕೊಂಡಿದ್ದಾರೆ. ಕನ್ನಡಿಗರ ಹೃದಯುವನ್ನು ಗೆದ್ದುಕೊಂಡಿದ್ದಾರೆ. ಕನ್ನಡ ಡಿಂಡಿಮ ಬಾರಿಸಿದ್ದಾರೆ.

ರಾಯಚೂರು ಜಿಲ್ಲೆಯ ಕೊಪ್ಪಳ ತಾಲೂಕಿನ ದ್ಯಾಂಪೂರಲ್ಲಿ ದಿನಾಂಕ ೧೮-೬-೧೯೧೮ ರಂದು ಪಂ. ಕಲ್ಲಿನಾಥಶಾಸ್ತ್ರಿ ಮತ್ತು ದಾನಮ್ಮನವರೆಂಬ ಪುಣ್ಯ ದಂಪತಿಗಳ ಜೇಷ್ಠಪುತ್ರರಾಗಿ ಜನ್ಮವೆತ್ತಿದ ಡಾ. ಸಿದ್ಧಯ್ಯ ಪುರಾಣಿಕರು ಬಿ. ಎ. ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಸರಕಾರಿ ಸೇವೆಗೆ ಅಣಿಯಾದರು. ಅವರ ಇನ್ನೀರ್ವ ಸಹೋದರರಾದ ಶ್ರೀ ಅನ್ನದಾನಯ್ಯ ಪುರಾಣಿಕ ಮತ್ತು ಶ್ರೀ ಬಸವರಾಜ ಪುರಾಣಿಕರು ಸಾಹಿತಿಗಳಾಗಿರುವರು. ಚಿಕ್ಕವರಿರುವಾಗಲೇ ಮಹಾನುಭಾವ ರಾಷ್ಟ್ರಧರ್ಮ ದೃಷ್ಟಾರ ಲಿಂ. ಹರ್ಡೇಕರ ಮಂಜಪ್ಪನವರ ಗರಡಿಯಲ್ಲಿ ಬರೆವಣಿಗೆಯ ಹದವನ್ನು ಪಾಕಮಾಡಿಕೊಂಡ ಡಾ. ಸಿದ್ಧಯ್ಯ ಪುರಾಣಿಕರು ಪಾಂಡಿತ್ಯ-ಪ್ರತಿಭೆಗಳು ಸುಂದರ ಸಂಗಮ. ಅವರ ವಿಶಾಲ ಹೃದಯಕ್ಕೆ ಸಾಕ್ಷಿಯಾಗಿ ನಿಂತಿರುವ ಇನ್ನೊಂದು ಜನಪ್ರಿಯ ಕೃತಿ 'ಶರಣ ಚರಿತಾಮೃತ'. ಇದೊಂದು ಚಿರಂತನ ಬೆಲೆಬಾಳುವ ಅಮೂಲ್ಯಕೃತಿ. ಕನ್ನಡಿಗರು ನಿತ್ಯ ಪಾರಾಯಣ ಮಾಡುವ ಪವಿತ್ರಗ್ರಂಥ. ಇದೀಗ ಶ್ರಾವಣಮಾಸದ ಶುಭ ಸಂದರ್ಭದಲ್ಲಿ ಈ ಕೃತಿಯ ಪ್ರವಚನ ನಾಡಿನಾದ್ಯಂತ ನಡೆಯುತ್ತಿರುವುದೇ ಮೇಲಣ ಮಾತಿಗೆ ನಿದರ್ಶನ. ಸರಕಾರದ ಆರ್ಥಿಕ ಆಧೀನ ಕಾರ್ಯದರ್ಶಿ ಹುದ್ದೆಯಲ್ಲಿದ್ದಾಗ ಹೊರಬಂದ ಈ ಕೃತಿ (೧೯೬೪) ಇದೀಗ ಮತ್ತೆ ಎರಡನೆಯ ಆವೃತ್ತಿ ಕಂಡಿದೆ (೧೯೭೭). ಮಹಾನುಭಾವ ಮಾದಾರ ಚನ್ನಯ್ಯನಿಂದ ಹಿಡಿದು ಆಧುನಿಕ ಕಾಲದ ಅಥಣಿ ಮುರುಘೇಂದ್ರ ಮಹಾಶಿವಯೋಗಿಗಳ ವರೆಗಿನ ಸಮಗ್ರ ಸುಂದರ ಪುಣ್ಯ ಜೀವನಚರಿತ್ರೆಗಳು

ಪಂಡಿತ ಪಾಮರರೀರ್ವರನ್ನೂ ಸೆರೆಹಿಡಿಯಬಲ್ಲ ಆಕರ್ಷಕ ಶೈಲಿಯಲ್ಲಿ ಅರಳಿದೆ. ಹಾಗೆ ನೋಡಿದರೆ ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಸಿಗಬೇಕಿತ್ತು. ಮುನ್ನುಡಿಯ ತಿಲಕವಿಟ್ಟವರು 'ರಾಷ್ಟ್ರಕವಿ' ಕುವೆಂಪು 'ಸಾಧಕರಾಗಿ, ಶರಣರಾಗಿ, ಸಿದ್ಧರಾಗಿ, ಪರಮ ಶ್ರೇಯಸ್ಸಿನ ಮಹೋನ್ನತ ಶಿಖರ ಏರಿದ ರೋಮಾಂಚಕ ನಿದರ್ಶನಗಳಿಂದ ಈ ಕೃತಿ ಸಾಮಾನ್ಯ ಜನವರ್ಗಕ್ಕೆ ಆಶೆ, ಧೈರ್ಯ, ಆತ್ಮಗೌರವವನ್ನು ತಂದುಕೊಟ್ಟಿದೆ' ಎಂದು ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ. ೫೭೦ ಪ್ರಮಾಣಿತ ಆಕರಗಳಿಂದ ಸಿದ್ಧವಾದ ಈ ಕೃತಿಯು ಎರಡನೆಯ ಆವೃತ್ತಿಯು ಪರಿಷ್ಕೃತಗೊಂಡಿದ್ದರೆ ಇನ್ನೂ ಚೊಕ್ಕಚೆನ್ನವಾಗುತ್ತಿತ್ತು.

ಡಾ. ಸಿದ್ಧಯ್ಯ ಪುರಾಣಿಕರು ಸ್ನೇಹಶೀಲರು ; ಸದು ವಿನಯಿಗಳು. ಎಲ್ಲರೊಂದಿಗೆ ಮೃದು ಮಧುರ ಸಂಪರ್ಕ ವಿಟ್ಟುಕೊಂಡಿದ್ದಾರೆ. ಹಲವಾರು ಸಲ ಇವರೊಡನೆ ಸಮಕ್ಷಮ ಮಾತನಾಡುವ ಸುಸಂಧಿ ದೊರಕಿದ್ದುಂಟು. ಈಗಲೂ ಆಗಾಗ ಪತ್ರವ್ಯವಹಾರ ನಡೆದಿದೆ. ಕೂಡಲೇ ಸೂಕ್ತ ಚುಟುಕಾಗಿ ಉತ್ತರ ಬರೆಯುವ ಅವರ ಮನೋಧರ್ಮ ನನಗೆ ಬಹಳ ಹಿಡಿಸಿದೆ. ಎಂಥ ಸಂದಿಗ್ಧ ಸಮಯದಲ್ಲಿಯೂ ಸ್ಥಿತಪ್ರಜ್ಞೆ ಕಾಯ್ದುಕೊಂಡಿದ್ದಾರೆ. ಹಲವಾರು ಹಾಲುಹೃದಯದ ಸ್ನೇಹಿತರ ಸಹಕಾರದಿಂದ ಅನೇಕ ಗ್ರಂಥಗಳನ್ನು ಸಂಪಾದಿಸಿದ್ದಾರೆ ; ಈಗಲೂ ಸಂಪಾದಿಸುತ್ತಿದ್ದಾರೆ. ಇದೀಗ 'ಸಿದ್ಧಗಂಗಾ ಶ್ರೀ' ಸಂಭಾವನಾ ಬೃಹತ್ಕೃತಿ ಬಿಡುಗಡೆಗೆ ಸಿದ್ಧವಾಗಿದೆ. ಕನ್ನಡ ಪದ್ಯರತ್ನಾಕರ, ಶ್ರೀಕಾರ (೧೯೫೪) ಇದು ೬೨ ವಿವಿಧ ಕವಿಗಳ ಕವನ ಸಂಕಲನ. ಹಾಗೆಯೇ ಪ್ರಬಂಧಮಾಲೆ (೧೯೫೪) ಹತ್ತು ಪ್ರಬಂಧಗಳ ಸಂಕಲನ ಇವೆರಡು ಹೈದರಾಬಾದು ಕರ್ನಾಟಕ ಸಾಹಿತ್ಯ ಮಂದಿರದಿಂದ ಬೆಳಕಿಗೆ ಬಂದಿವೆ. ಶರಣಪ್ರಸಾದ, ಸುಬೋಧಸಾರ, ಮಹಾತ್ಮಾ ಕನಕದಾಸ ಪ್ರಶಸ್ತಿ ಇವುಗಳಲ್ಲಿ ಕೆಲವು ಇವರ ಕಾವ್ಯ ಸಂಕಲನಗಳು. ಜನಪ್ರಿಯತೆ ಗಳಿಸಿವೆಯೆಂಬುದಕ್ಕೆ ಎರಡನೆಯ ಆವೃತ್ತಿ ಕಂಡುದೇ ಸಾಕ್ಷಿ. ಜಲಪಾತ (ಪ್ರ: ೧೯೫೩ ದ್ವಿ :೧೯೬೪) ರಾಯಚೂರಿನ ಸಂಗಡಿಗರ ಸಮಿತಿಯಿಂದ ಪ್ರಕಾಶನಗೊಂಡ ೪೪ ಕವನಗಳ ಸಂಕಲನ. ಕರುಣಾಶ್ರಾವಣ (ಪ್ರ : ೧೯೫೫ ದ್ವಿ :೧೯೬೭) ಜನಪದ ಸಾಹಿತ್ಯ ಅಕಾಡಮಿಯಿಂದ ಹೊರಬಂದಿದೆ. ಶಾರದಾ ಪ್ರಕಟನಾಲಯದಿಂದ ಪ್ರಕಾಶಿತವಾದ ಮಾನಸ ಸರೋವರ (೧೯೫೯) ದಲ್ಲಿ ೪೫ ಕವನಗಳಿವೆ, ಕಲ್ಲೋಲ ಮಾಲೆ (೧೯೬೮), ಮೊದಲು ಮಾನವನಾಗು' ತುಪ್ಪಾರೊಟ್ಟಿ ಗೇಗೇಗೇ (ಮಕ್ಕಳ ಕವನಗಳು) ವಿಕಾಸವಾಣಿ, ಶ್ರೀಕಾರ (೧೯೫೪) ಮೊದಲಾದ ಕಾವ್ಯಸಂಕಲನಗಳು ಕಾವ್ಯಪ್ರೇಮಿಗಳ ಹೃದಯವನ್ನು ಗೆದ್ದಿವೆ. ಕಲ್ಲೋಲ ಮಾಲೆ ಅನುಭಾವ ಗೀತಗಳ ಸುಂದರ ಸಂಕಲನ. ಉಳಿದ ಕವನ ಸಂಗ್ರಹಗಳಿಂದ ತೀರ ಭಿನ್ನವಾದುದು. ಭಾವ ಭಾಷೆಗಳ ಬಂಧುರ ಹೊಂದಾಣಿಕೆಯಿಂದ ಕೂಡಿದೆ, ಚಿಕ್ಕ ಚಿಕ್ಕ ಕವನಗಳಿವೆ. ಕವೀಂದ್ರ ರವೀಂದ್ರರ 'Stray Birds', ಖಲೀಲ ಗಿಬ್ರಾನ್‌ನ ಸಂಗ್ರಹಗಳಲ್ಲಿ ಬರುವ ಚುಟುಕಗಳ ಮಾದರಿಯಲ್ಲಿದೆ. ಒಂದೊಂದು ಸಾಲು ಓದಿದಂತೆ ಒಂದೊಂದು ಘನವಾದ ವಿಚಾರ ಮಿಂಚಿನ ಸರಳಿನಂತೆ ಹೊಳೆಯುತ್ತದೆ. "ಒಮ್ಮೆ ಓದಿ ಕೆಳಗಿಡುವ ಕೃತಿಯಲ್ಲ. ಮತ್ತೆ ಮತ್ತೆ ಓದಿ ಮನನ ಮಾಡಬೇಕಾದ ಕವನಗಳು" ಎಂಬುದಾಗಿ ಕುಲಪತಿ ಶ್ರೀ ಸದಾಶಿವ ಒಡೆಯರ ಮುನ್ನುಡಿ ಯಥಾರ್ಥವಾಗಿದೆ.

ಉದಾಹರಣೆಗಾಗಿ ಕೆಲವು ಸಾಲುಗಳಿವು :

"ಮೆಲ್ಲಮೆಲ್ಲನೆ ಅರಳು ಜೀವನ
ಶೀಲ ಸೌರಭ ಸುರಿಯಲಿ
ಮೆಲ್ಲಮೆಲ್ಲನೆ ಅಪ್ಪು ಮರಣವೆ
ಜೀರ್ಣವಸನವು ಸರಿಯಲಿ"

ಹಾಗೆಯೇ

"ಎದೆಯ ಹೂ ಅರಳಿಹುದು
ಮುಡಿದುಕೊ ಮನದನ್ನೆ
ಕೀಟ ಕೊರೆಯುವ ಮುನ್ನ
ಹಿಮ ಸುರಿಯುವ ಮುನ್ನ
ಬಾಳು ಜೇನಾಗಿಹುದು ಬಾಯಿ ಸವಿ ಮಾಡಿಕೊ
ಮಳೆ ಸುರಿಯುವ ಮುನ್ನ
ಹುಳು ನೆರೆವ ಮುನ್ನ
ಜೀವನವು ದೊರೆತಿಹುದು
ದೇವನಾ ವರವಾಗಿ ॥

ಜೀವನದ ವಿರೋಧಾಭಾಸಗಳ ವಿಪರೀತ ವಿಪರ್ಯಾಸಗಳ ಮಧ್ಯದಲ್ಲಿ ಚೆಲುವಿದೆ ; ನಲುವಿದೆ. ಈ ಬಗೆಯಲ್ಲಿ ಮೂಡಿಬಂದ ಈ ಸಾಲುಗಳು ಆಪ್ಯಾಯಮಾನವಾಗಿವೆ.

"ಅತ್ತ ಗಿರಿ ಇತ್ತ ದರಿ
ನಡುವೆ ಕಾಲದಾರಿಯು
ಅತ್ತ ಮುಳ್ಳು ಇತ್ತ ಮುಳ್ಳು
ನಡುವೆ ಚೆಂಗುಲಾಬಿಯು"

ಇದು ಕವಿಯ ಸಂದೇಶ :

ನನಗೆ ಅಮೃತ ಬೇಕಿಲ್ಲ
ಮಡದಿ ಕಡೆದೀವ ಮಜ್ಜಿಗೆಯೆ ಸಾಕು !
ಕಲ್ಪವೃಕ್ಷದ ಹಣ್ಣು ಬೇಕಿಲ್ಲ
ನಾನೆ ದುಡಿದುಣುವ ಕಜ್ಜಾಯ ಸಾಕು.

ಒಳ್ಳೆಯ ಕಾವ್ಯದ ಲಕ್ಷಣಗಳು ಇಲ್ಲಿಯ ಪ್ರತಿಯೊಂದು ಸಾಲಿನಲ್ಲಿಯೂ ಒಡಮೂಡಿ ನಿಂತಿವೆ. ಅವರು ರಚಿಸಿದ 'ಮಳೆ' ಕವನವಂತೂ ರಮ್ಯ ಮನೋಹರ; ಸರಸ ಸುಂದರ.

"ಮೋಡಗಳ ಜಡೆ ಬಿಚ್ಚಿ ಮೈದೊಳೆದುಕೊಳುತಿಹಳು
ಬಯಲ ಭಾಮಿನಿ ಜಗದ ಮಹೆಯ ಮೇಲೆ,
ಕೇಶರಾಶಿಯ ನೀರು ತೊಟ್ಟಿಕ್ಕಿ ಸುರಿಯುತಿದೆ
ಇದಕೆ ಜಗವೆನ್ನುವುದು ಲೀಲೆ"

ಮಳೆಯ ಅದ್ಭುತ ರಹಸ್ಯವು ಇಲ್ಲಿ ಸ್ಫುಟವಾಗಿದೆ. ಭೂಮಿಗೆ ಮಧುವಾಗಿ, ಪರಿಣಯಕೆ ಸೇಸೆಯಾಗಿ, ವಿಶ್ವಲಿಂಗಕ್ಕೆ ಅಭಿಷೇಕವಾಗಿ ಮಳೆ ಸುರಿಯುತ್ತಿದೆ—ಎಂದು ಸುಂದರವಾಗಿ ವರ್ಣಿಸಲಾಗಿದೆ. ಮೋಡಗಳ ಜಡೆ ಬಿಚ್ಚಿ ಬಯಲ ಭಾಮಿನಿ ಮೈದೊಳೆದುಕೊಳುತಿಹಳು. ಆಕೆಯ ಕೇಶರಾಶಿಯ ನೀರೇ ಮಳೆ ಎಂಬುದಾಗಿ ವರ್ಣಿಸುವ ಕವಿಯ ಕಲ್ಪನೆ ಸೊಗಸಾಗಿದೆ. ಉತ್ತಮ ಸಂಸ್ಕೃತಿಯ ಒಲವು, ಸಮತೂಕದ ನಿಲವು, ಅವ್ಯಕ್ತ ಪ್ರಸನ್ನತೆ ಇವೇ ಇವರ ಕಾವ್ಯದ ಲಕ್ಷಣಗಳೆಂದು ವಿಮರ್ಶಕರು ಎತ್ತಿ ಹೇಳಿದ ಮಾತುಗಳು ಒಪ್ಪುವಂತಹವು. ಹೊಸ ಹೊಸ ಭಾವನೆಗಳನ್ನು ಕವನ ರೂಪದಲ್ಲಿ ಹೊರಹೊಮ್ಮಿಸುವ ಅಸಾಧಾರಣ ಕವಿತಾಶಕ್ತಿ ಇವರಿಗೆ ಒಲಿದು ಬಂದಿದೆ; ನಲಿದು ಬಂದಿದೆ. ಅವರ ಕವನ ಸಂಕಲನದಲ್ಲಿಯ ಅನೇಕ ಕವನಗಳು ಪಠ್ಯವಸ್ತುಗಳಾಗಿ ಆಯ್ಕೆಗೊಂಡಿವೆ. ಗದ್ಯದಲ್ಲಿ ಇನ್ನೊಂದು ಗಮನಾರ್ಹ ಕೃತಿ 'ಬಸವಣ್ಣನವರ ಜೀವನ ಮತ್ತು ಸಂದೇಶ' (೧೯೭೮), ಅದು ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ. ಹರ್ಡೇಕರ ಮಂಜಪ್ಪ (೧೯೭೯) ಗದುಗಿನ ವೀರಶೈವ ವಿದ್ಯಾಪೀಠದ ವೀರಶೈವ ಪುಣ್ಯಪುರುಷರ ಮಾಲಿಕೆಯಲ್ಲಿ ಪ್ರಕಟವಾಗಿದೆ. ಇದೊಂದು ಆತ್ಮೀಯ ಶೈಲಿಯಲ್ಲಿ ನಿರೂಪಿಸಿದ ಕಿರುಕೃತಿ. ಇವರು ಕಥೆಗಳನ್ನೂ ಬರೆದುದುಂಟು. 'ಕಥಾಮಂಜರಿ', 'ತುಷಾರಹಾರ' ಇವೇ ಅವರ ಕಥಾ ಸಂಕಲನಗಳು. ಭಾರತದ ಮೇಲೆ ಚೀನಾ ದಾಳಿಮಾಡಿದಾಗ ಇವರ ಸಿದ್ಧಹಸ್ತ ಲೇಖನಿಯಿಂದ 'ಭಾರತವೀರ' ಸಮಸ್ತ ಕನ್ನಡಿಗರನ್ನು ಬಡಿದೆಬ್ಬಿಸಿತು. ರಾಷ್ಟ್ರಾಭಿಮಾನವನ್ನು ಕೆರಳಿಸುವ ಈ ಕೃತಿ ಪುರಾಣಿಕರನ್ನು ಶ್ರೇಷ್ಠನಾಟಕಕಾರರನ್ನಾಗಿ ಮಾರ್ಪಡಿಸಿತು. 'ರಜತರೇಖೆ', 'ಆತ್ಮಾರ್ಪಣ' ಮೊದಲಾದ ನಾಟಕ ಸಂಕಲನಗಳು ಬಂದಿದೆ. 'ತ್ರಿಭುವನಮಲ್ಲ' ಎಂಬ ಕಾದಂಬರಿಯನ್ನೂ ಕನ್ನಡಿಗರ ಕೈಗೆ ಕೊಟ್ಟ ಕೀರ್ತಿ ಇವರದು.

'ವಚನೋದ್ಯಾನ' ೫೫೫ ವಚನಗಳ ಸಂಕಲನ. ಅವರ ಸ್ವತಂತ್ರ ಪ್ರವೃತ್ತಿ, ಧೀರ ಗುಣಗಳ ಅಭಿವ್ಯಕ್ತಿ ಈ ಕೃತಿಯಲ್ಲಿ ಕಾಣಬಹುದು. ಸ್ವತಂತ್ರ ಸಿದ್ಧಲಿಂಗೇಶ್ವರರೆಂಬ ವಚನಕಾರರೂ ಆಗಿ ಹೋಗಿದ್ದಾರೆ. ಅವರ ಹೆಸರು ಇಲ್ಲಿ ಸ್ಮರಣೆಗೆ ಬರುವಂತಿದೆ. ಈ ಗ್ರಂಥದ ಪರಿಚಯವನ್ನು ಡಾ. ಹಾ.ಮಾ. ನಾಯಕ ಅವರು ಮನೋಜ್ಞವಾಗಿ ಮಾಡಿದ್ದಾರೆ. ಇಪ್ಪತ್ತು ಪುಟಗಳ ವೈಚಾರಿಕ ವಿಶ್ಲೇಷಣೆ ಮನಂಬುಗುವಂತಿದೆ. 'ನಂಬಿದರೆ ನಂಬು, ನಂಬದಿದ್ದರೆ ಬಿಡು; ಓದುಗ–ನನಗೆ ವಚನಗಳನ್ನು ರಚಿಸಬೇಕೆಂಬ ಚಪಲ ಇರಲಿಲ್ಲ. ಆ ಬಾನೆತ್ತರದ ವ್ಯಕ್ತಿತ್ವದ ಸಾಗರೋಪಮ ಅನುಭವಶ್ರೀಯ ಅಂದಿನ ವಚನಕಾರರೆತ್ತ! ಈ ಮರವೆಯ ಮರುಳನೆಲ್ಲಿ! ಹೀಗಿದ್ದರೂ ಹವ್ಯಾಸವಿದು ಹಠಾತ್ತಾಗಿ ಹಾರಿ ಬಂದು ನನ್ನ ಹೆಗಲೇರಿ ಕುಳಿತಿತು' ಎಂಬ ಅವರ ಸೌಜನ್ಯ ಕರ್ನಾಟಕ ಸಂಸ್ಕೃತಿಯ ಪ್ರತೀಕವಾಗಿದೆ. ವಚನ ಸಾಹಿತ್ಯದ ಉಜ್ವಲ ಪರಂಪರೆಯನ್ನು ಇಂದಿಗೂ ಕಾಯ್ದುಕೊಂಡು ಬಂದ 'ವಚನೋದ್ಯಾನ' ಕೃತಿಗೆ ೧೯೭೭ ರ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿಯೂ ಬಂದಿರುವುದು. ಇವರ ಸಾಹಿತ್ಯ ಸೇವೆ ಮನ್ನಿಸಿ ಕರ್ನಾಟಕ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟು ಪದವಿ ನೀಡಿ ಗೌರವಿಸಿದೆ. ಕನ್ನಡ, ಉರ್ದು, ಆಂಗ್ಲಭಾಷೆಗಳಲ್ಲಿ ಪರಿಣತಮತಿಗಳೂ, ನಿಷ್ಣಾತರೂ ಆಗಿರುವ ಡಾ. ಸಿದ್ಧಯ್ಯ ಪುರಾಣಿಕರು, ಇದೀಗ ಬೆಂಗಳೂರಿನ ಬಸವ ಸಮಿತಿಯು ಪರವಾಗಿ ಪ್ರಕಟವಾಗುತ್ತಿರುವ 'ಬಸವ ಜರ್ನಲ್' ಆಂಗ್ಲ ತ್ರೈಮಾಸಿಕ

ಪತ್ರಿಕೆಗೂ, 'ಬಸವ ಪಥ' ಕನ್ನಡ ದ್ವೈಮಾಸಿಕ ಪತ್ರಿಕೆಗೂ ಪ್ರಧಾನ ಸಂಪಾದಕರಾಗಿದ್ದಾರೆ. ಕೆಲವು ಕಾಲ 'ಲೋಕ ವಾಣಿ' ದಿನಪತ್ರಿಕೆಯ ಸಂಪಾದಕರೆಂದೂ ಕಾರ್ಯ ಮಾಡಿದ್ದುಂಟು. ಹೀಗೆ ಸಮರ್ಥ ಪತ್ರಿಕಾ ಸಂಪಾದಕರಾಗಿ, ಶ್ರೇಷ್ಠ ಕವಿಯಾಗಿ, ಗಣ್ಯ ಗದ್ಯ ಪ್ರಬಂಧಕಾರರಾಗಿ, ಉತ್ತಮ ಚರಿತ್ರಕಾರರಾಗಿ, ಕಾದಂಬರಿಕಾರರಾಗಿ, ನಾಟಕಕಾರರಾಗಿ, ಕುಶಲ ಆಡಳಿತಗಾರರಾಗಿ ಹೆಸರುವಾಸಿಯಾದ ಡಾ. ಸಿದ್ಧಯ್ಯ ಪುರಾಣಿಕರ ಅಭಿನಂದನಾ ಗ್ರಂಥವನ್ನು ಹೊರತರುವ ಸಿದ್ಧತೆಯೂ ನಡೆದಿರುವುದು ಸೂಕ್ತವಾಗಿದೆ. ಅವರ ಹೃದಯದ ಆತ್ಮಗೀತವಿದು :

'ಆರಾರ ಬಾಳನ್ನುತಾಕಿ
ಆರಾರ ಜೀವನದಲ್ಲಿ ಜೀಕಿ
ಆರಾರ ಸಂಶಯಕ್ಕೆ ನೂಕಿ
ಕೊನೆಗೆಲ್ಲಿ ಪರ್ಯಾವಸಾನ ಹೊಂದುವದೋ
ನಾ ಕಾಣೆ'

ಇದೇ ಅಕ್ಟೋಬರ ೨ ರಂದು ಮಹಾತ್ಮಾಗಾಂಧೀಜಿಯವರ ಜಯಂತಿಯ ಶುಭ ಸಂದರ್ಭದಲ್ಲಿ ಕಲಕತ್ತೆಯಲ್ಲಿ ಜರುಗಲಿರುವ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕಾರ ಮಾಡಲಿದ್ದಾರೆ.

ಕನ್ನಡಂ ಗೆಲ್ಗೆ ; ಕನ್ನಡ ಬಾಳ್ಗೆ □

ಬಾಳ ಕಡಲಲಿ ಮುಳುಗಿ ಮೂರು ಮುತ್ತನು ತಂದೆ
'ಸ್ನೇಹ, ಸ್ಮೈರಣೆ, ಮಮತೆ' ಎಂದು ಕರೆದೆ !
ಬಾಳಬನದಲಿ ತಿರುಗಿ ಮೂರು ಫಲಗಳ ತಂದೆ
'ದಿಟ, ಚೆಲುವು, ಒಲವುಗಳು' ಎಂದು ಒರೆದೆ !

ಕಲ್ಲೋಲಮಾಲೆ, ಪು. 7

# ಹಿರಿಯಣ್ಣ ಕಾವ್ಯಾನಂದ

● ಶಂ. ಗು. ಬಿರಾದಾರ

ಕನ್ನಡ ಕಾವ್ಯಲೋಕದಲ್ಲಿ ಕಾವ್ಯಾನಂದರ ಹೆಸರು ಸುಪರಿಚಿತ. ಭಾವದುನ್ನತಿಕೆ, ಭಾಷೆಯ ಬೆಡಗು, ಶೈಲಿಯ ಸೊಗಸು, ಪದಲಾಲಿತ್ಯ, ಅರ್ಥವೈಶಾಲ್ಯಗಳಿಂದ ಇವರ ಕಾವ್ಯಪಥ ಕಮನೀಯವಾಗಿದೆ. ಕಾವ್ಯದಲ್ಲಿಯೇ ಆನಂದಪಡುವ ಕಾವ್ಯಾನಂದರು ತಮ್ಮ ಕೃತಿಗಳಿಂದ ನಮಗೂ ಆನಂದ ನೀಡುತ್ತಿದ್ದಾರೆ. ಸುಲಲಿತ ಕಾವ್ಯದಂತೆ ಸಣ್ಣಕತೆ, ನಾಟಕ, ವಚನ, ಮಕ್ಕಳಸಾಹಿತ್ಯ ಮೊದಲಾದ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿದ್ದಾರೆ. ಸುಮಾರು ಮೂರು ದಶಕಗಳಿಗೂ ಮಿಕ್ಕಿ ಕನ್ನಡ ಸಾರಸ್ವತ ಲೋಕಕ್ಕೆ ಅಮೂಲ್ಯ ಸೇವೆ ಸಲ್ಲಿಸಿದ ಕಾವ್ಯಾನಂದ ಅವರಿಗೆ ಅಭಿಮಾನಿಗಳು ಸಂಭಾವನಾಗ್ರಂಥವನ್ನು ಅರ್ಪಿಸಿ ಗೌರವಿಸಬೇಕೆಂದು ನಿರ್ಧರಿಸಿರುವುದು ಸಮಯೋಚಿತವಾಗಿದೆ. ಈ ಗ್ರಂಥಕ್ಕೆ ನನ್ನ ಹಾಗು ಡಾ. ಪುರಾಣಿಕರ ಸ್ನೇಹ ಕುರಿತು ಬರೆಯಬೇಕೆಂದು ಪ್ರಧಾನ ಸಂಪಾದಕರು ತಿಳಿಸಿದ ಮೇರೆಗೆ ಕೆಲ ನುಡಿಗಳನ್ನು ಬರೆದಿರುವೆ.

ಡಾ. ಸಿದ್ಧಯ್ಯ ಪುರಾಣಿಕರನ್ನು ನಾನು ಹಿರಿಯಣ್ಣನಂತೆ-ಗುರುವಿನಂತೆಕಂಡಿದ್ದೇನೆ. ಪುರಾಣಿಕರ ಪರಿಚಯ ಎರಡು ದಶಕಗಳ ಹಿಂದಿನದು. ಅವರ ಸಾಹಿತ್ಯ ಪರಿಚಯ ಅದಕ್ಕಿಂತಲೂ ಒಂದು ದಶಕ ಹಿಂದೆ. ಹೈದರಾಬಾದಿನ ಸುದ್ದಿ ಹಾಗು ಬಾನುಲಿ ಇಲಾಖೆಯವರು ಪ್ರಕಟಿಸಿದ 'ಒರೆಗಲ್ಲು' ಕಥಾಸಂಕಲನದಲ್ಲಿ ನನ್ನ 'ರುದ್ರವೀಣೆ' ಕಥೆ ಪ್ರಕಟವಾಗಿತ್ತು. ಆ ಸಂಕಲನದಲ್ಲಿಯ ಪುರಾಣಿಕರ ಕಥೆ ನನ್ನ ಗಮನವನ್ನು ಸೆಳೆಯಿತು. ಅದಕ್ಕೂ ಪೂರ್ವದಲ್ಲಿ ಅವರ ಕವನಗಳನ್ನು ಓದಿ ಮೆಚ್ಚಿಕೊಂಡಿದ್ದ ನಾನು ಪುರಾಣಿಕರು ಉತ್ತಮ ಕಥೆಗಾರರೆಂಬುದನ್ನೂ ಕಂಡುಕೊಂಡೆ.

ನಾನು ಪ್ರಥಮ ಸಲ ಅವರನ್ನು ಕಂಡು ಮಾತನಾಡಿದ್ದು ೧೯೬೨ ರಲ್ಲಿ; ಬೆಂಗಳೂರಿನ ಅವರ ಮನೆಯಲ್ಲಿ, ಮಕ್ಕಳ ಸಾಹಿತ್ಯ ರಚನಾಲಯ ತರಬೇತಿಗೆಂದು ಬೆಂಗಳೂರಿಗೆ ಬಂದಾಗ ಅವರನ್ನು ಕಾಣಲು ಹೋಗಿದ್ದೆ. ಜೊತೆಗೆ ಸ್ನೇಹಿತ 'ಸಿಸು' ಅವರೂ ಇದ್ದರು. ಎತ್ತರ ನಿಲುವಿನ, ತುಂಬಿದ ದೇಹದ, ದುಂಡುಮೊಗದ, ಶಾಂತ ಭಾವದ, ಆಕರ್ಷಕ ವ್ಯಕ್ತಿತ್ವದ ಪುರಾಣಿಕರನ್ನು ಕಂಡಾಗ ಗೌರವ ಭಾವನೆ ಇಮ್ಮಡಿಸಿತು. ಅವರ ಆತ್ಮೀಯತೆಯ ನುಡಿ ನನ್ನ ಅಂತರಂಗಕ್ಕಿಳಿದು ಅವರ–ನನ್ನ ನಡುವಣ ಚಿರಸಂಬಂಧವನ್ನು ಬೆಸುಗೆ ಮಾಡಿತು. ಅಂದು ಅವರು ಕೊಟ್ಟ 'ಕರುಣಾಶ್ರಾವಣ' ಕವನ ಸಂಕಲನ ನನ್ನ ಮನಸ್ಸನ್ನು ಸೆರೆಹಿಡಿಯಿತು. ಬೆಂಗಳೂರಿನಲ್ಲಿರುವ ಆರು ವಾರಗಳ ಕಾಲಾವಧಿಯಲ್ಲಿ ಅನೇಕ ಸಲ ಅವರನ್ನು ಕಾಣುವ ಪ್ರಸಂಗಗಳು ಒದಗಿದವು. ಒಮ್ಮೆ ಪುರಾಣಿಕರು ಡಾ. ದ. ರಾ. ಬೇಂದ್ರೆಯವರನ್ನು ತಮ್ಮ ಮನೆಗೆ ಬರಮಾಡಿಕೊಂಡು ಅವರ ಕಾವ್ಯವಾಚನ ಕಾರ್ಯಕ್ರಮವನ್ನೇರ್ಪಡಿಸಿದ್ದರು. ಆ ಕಾವ್ಯಾಮೃತ ಸವಿಯುವ ಸದವಕಾಶವನ್ನು ನಮಗೂ ಒದಗಿಸಿಕೊಟ್ಟರು.

ಶ್ರೀ ಎಸ್. ಎಂ. ಪಾಟೀಲ (ಆಗಿನ ಶಿಕ್ಷಣ ಸಚಿವರಾಗಿದ್ದ ಶ್ರೀ ಗಣಮುಖಿಯವರ ಆಪ್ತ ಕಾರ್ಯದರ್ಶಿ) ಅವರು ಶ್ರೀ ಸಿದ್ಧಯ್ಯ ಪುರಾಣಿಕರ ಆತ್ಮೀಯರಲ್ಲೊಬ್ಬರು, ಅವರು ಸಾಹಿತ್ಯದಲ್ಲಿ ತುಂಬ ಆಸಕ್ತರು. ಸಾಹಿತಿಮಿತ್ರರ ಬಗೆಗೆ ಅಪಾರ ಆದರ, ಅಭಿಮಾನ. ಒಮ್ಮೆ ಅವರು ಸಾಹಿತಿಮಿತ್ರರನ್ನೆಲ್ಲ ತಮ್ಮ ಮನೆಗೆ ಆಮಂತ್ರಿಸಿದ್ದರು. ದಿ. ಮಿರ್ಜಿ ಅಣ್ಣಾರಾಯ, ದಿ. ಭಾರತೀಸುತ, ಸಿದ್ದಣ್ಣ ಮಸಳಿ, ಶಾಂತರಸ. ಸಿಸು. ಸಂಗಮೇಶ, ವ್ಹಿ. ಸಿ. ಮಾಲಗತ್ತಿ, ಎನ್. ಆರ್. ಹಿರೇಮಠ ಅವರು

ಗಳೊಡನೆ ನಾನೂ ಆ ರಸ ಪ್ರಸಂಗದಲ್ಲಿ ಪಾಲ್ಗೊಂಡಿದ್ದೆ. ಅಲ್ಪೋಪಹಾರದನಂತರ ಪುರಾಣಿಕರ ಹಿರಿತನದಲ್ಲಿ ಸಾಹಿತ್ಯಿಕ ಸಮಾರಂಭ ನಡೆಯಿತು. ಬಿಚ್ಚು ಮನಸ್ಸಿನ ಮಾತುಕತೆ, ಚರ್ಚೆ-ಹರಟೆ ಏನೆಲ್ಲ ನಡೆದು ನಮ್ಮ-ಅವರ ಮಧುರ ಸಂಬಂಧ ಗಟ್ಟಿಗೊಂಡಿತು.

ರಚನಾಲಯದ ಸದಸ್ಯರೆಲ್ಲ ಕೂಡಿಕೊಂಡು ನಂದೀ ಬೆಟ್ಟಕ್ಕೆ ಹೋದಾಗ ಪುರಾಣಿಕರೂ ನಮ್ಮೊಡನಿದ್ದರು. ಬೆಟ್ಟದ ವಿಶಾಲವೃಕ್ಷದ ಕೆಳಗೆ ನಾವಿಬ್ಬರೇ ಕುಳಿತು ಮಾತನಾಡಿದ ನೆನಪು ಇನ್ನೂ ಹಚ್ಚ ಹಸುರಾಗಿಯೇ ಇದೆ. ಅವರು ನನ್ನ ಬಗೆಗೆ-ನನ್ನ ಕೃತಿಗಳ ಬಗೆಗೆ ಕೇಳಿ ತಿಳಿದುಕೊಂಡರು. ನಾನು ಭೆಟ್ಟಿಯಾದ ಅನೇಕ ಸಾಹಿತಿ ಮಿತ್ರರು ತಮ್ಮದನ್ನೇ ಹೇಳುತ್ತಿದ್ದರಲ್ಲದೆ ನನ್ನ ಸಾಹಿತ್ಯ ಕಾರ್ಯದ ಬಗೆಗೆ ವಿಚಾರಿಸುತ್ತಿರಲಿಲ್ಲ. ಪುರಾಣಿಕರು ನನ್ನ ಕೆಲಕವನಗಳನ್ನು ಓದಲು ಹೇಳಿ, ಓದಿದ ಕವನಗಳನ್ನು ಆಸಕ್ತಿಯಿಂದ ಕೇಳಿ ಮೆಚ್ಚುಗೆ ವ್ಯಕ್ತಪಡಿಸಿದರು. ಅವರ ವಿಶಾಲ ಮನೋಭಾವ, ಸಹೃದಯತೆಗಳಿಗೆ ಮಾರುಹೋದೆ. ಅಂದು ಹುಣ್ಣಿಮೆಯಾದ್ದರಿಂದ ನಂದೀಬೆಟ್ಟದ ಮೇಲೆ ಚಂದ್ರೋದಯದ ಸುಂದರ ದೃಶ್ಯವನ್ನು ಕಾಣುವ ಹಂಬಲ ವ್ಯಕ್ತಪಡಿಸಿದರು. ಚಂದ್ರೋದಯದ ಚೆಲುವನ್ನು ಕಂಡೇ ನಮ್ಮ ಬಸ್ಸು ಅಲ್ಲಿಂದ ಕೆಳಗಿಳಿಯಿತು.

"ನಂದೀಬೆಟ್ಟದಲ್ಲಿ ನಾನು ಕೆಲಕಾಲ ನಿಸರ್ಗದ ಮಡಿಲಲ್ಲಿ ಏಕಾಂಗಿಯಾಗಿ ಕುಳಿತು ಕವನ ರಚಿಸುವ ಹಂಬಲದಲ್ಲಿದ್ದೆ ; ಆದರೆ ಸ್ನೇಹಿತರು ನನ್ನನ್ನು ಬಿಟ್ಟಿರದೆ ಮಾತಿನಲ್ಲಿ ತೊಡಗಿದ್ದರಿಂದ ನನ್ನ ಬಯಕೆ ಈಡೇರಲಿಲ್ಲ"—ಎಂದು ಪುರಾಣಿಕರು ಮರಳಿ ಬರುವಾಗ ಬಸ್ಸಿನಲ್ಲಿ ಈ ಮಾತನ್ನು ಹೇಳಿದರು. ಅವರ ಕಾವ್ಯ ಸ್ಫೂರ್ತಿಗೆ ನಾವು ಅವಕಾಶ ಕೊಡಲಿಲ್ಲವೆಂಬ ಅರಿವು ಆಗ ಮೂಡಿತು.

ಪುರಾಣಿಕರ ಕಾವ್ಯ ಎಷ್ಟು ಸುಲಲಿತವೋ ಮಾತೂ ಅಷ್ಟೇ ಮಧುರ. ಆಳವಾದ ವಿಚಾರ, ಸೌಜನ್ಯಯುತ ತೂಕದ ಮಾತು ಎಂಥವರನ್ನೂ ತಲೆದೂಗಿಸದೆ ಇರಲಾರವು. ಒಮ್ಮೆ ಅವರನ್ನು ಕಂಡವರು ಅವರ ಸ್ನೇಹದ ಪರಿಧಿಯಲ್ಲಿ ಬೀಳಲೇಬೇಕು. ಬದುಕು-ಬರೆಹ ಒಂದೇ ತೆರನಾಗುವ ಸಾಹಿತಿಗಳು ತೀರ ವಿರಳ. ಕಾವ್ಯಾನಂದರ ಬರೆಹದಂತೆ ಬದುಕೂ ಪರಿಶುದ್ಧವಾದುದು - ಚೇತೋಹಾರಿಯಾದುದು. ಅನೇಕ ಹಿರಿಯ ಹುದ್ದೆಗಳಲ್ಲಿ ಕೆಲಸ ಮಾಡಿದರೂ ಅಧಿಕಾರದ ಅಹಂಭಾವ ಹತ್ತಿರ ಸುಳಿಯಲಿಲ್ಲ. ಸಾಹಿತ್ಯಕೃಷಿಯನ್ನು ಮರೆಯಲಿಲ್ಲ. ಹಿರಿ-ಕಿರಿಯ ಮಿತ್ರರನ್ನು ತೊರೆಯಲಿಲ್ಲ. ಬಡವರ-ದಲಿತರ-ಶೋಷಿತರ ಬಗೆಗೆ ಅನುಕಂಪವಿರುವ ಪುರಾಣಿಕರು ತಮ್ಮ ಅಧಿಕಾರಾವಧಿಯಲ್ಲಿ ದೀನ-ದಲಿತರಿಗೆ ತ್ವರಿತ ಗತಿಯಲ್ಲಿ ಸಹಾಯ ಸಿಕ್ಕುವಂತೆ ನೋಡಿಕೊಂಡರು. ಬೆಳಗಾಂವ ಜಿಲ್ಲಾಧಿಕಾರಿಗಳಾಗಿದ್ದ ಸಮಯದಲ್ಲಿ ಅನೇಕ ಶೋಷಿತರ, ನಿರಾಶ್ರಿತರ ರಕ್ಷಣೆಗೆ ನಿಂತು, ಅವರಿಗೆ ಸಕಾಲಿಕ ನೆರವು ನೀಡಿ 'ಬಡವರ ಬಂಧು' ಎಂಬ ಹೆಸರಿಗೆ ಪಾತ್ರರಾದರು.

ನಾನು ಬೆಂಗಳೂರಿಗೆ ಹೋದಾಗೊಮ್ಮೆ ಅವರನ್ನು ಕಂಡು ಮಾತನಾಡಿ ಬಂದರೇನೇ ಮನಸ್ಸಿಗೆ ಸಮಾಧಾನ. ಒಂದು ಸಲ ಅವರನ್ನು ಭೆಟ್ಟಿಯಾದಾಗ—

"ಹಿರಿಯ ಅಧಿಕಾರಿಗಳಾದ ನೀವು ಎಳ್ಳಷ್ಟೂ ಬಿಡುವಿರದ ಕಾರ್ಯಕಲಾಪಗಳಲ್ಲಿ ಕಾವ್ಯಾರಾಧನೆಯನ್ನೂ ಮುಂದುವರಿಸಿಕೊಂಡು ಬಂದಿರುವಿರಲ್ಲ, ಅದು ಹೇಗೆ ಸಾಧ್ಯ ?" ಎಂದು ಕೇಳಿದೆ. ಅದಕ್ಕವರು,

"ನೋಡಿ ಬಿರಾದಾರರೆ, ನಾನು ಮನುಷ್ಯನಾಗಿ ಉಳಿದಿದ್ದರೆ ಈ ಕಾವ್ಯಾರಾಧನೆಯ ಫಲವೇ, ಆಫೀಸಿನಿಂದ ನೇರವಾಗಿ ಮನೆಗೇ ಬರುತ್ತೇನೆ. ಈ ಸಾಹಿತ್ಯ-ಚಿಂತನೆಯಲ್ಲಿ ಮೈಮರೆಯುತ್ತೇನೆ ; ಬರೆಯುತ್ತೇನೆ. ಇಲ್ಲವಾದರೆ ನಾನೂ ನನ್ನ ಇನ್ನಿತರ ಗೆಳೆಯರೊಡನೆ ಕ್ಲಬ್ಬಿನಲ್ಲಿ ನಲ್ಲಿ ಏನೇನೋ ಮಾಡಬೇಕಾಗುತ್ತಿತ್ತು !" ಎಂದರು. ಅಂದು ಅವರಾಡಿದ ಮಾತು ನನ್ನ ಸ್ಮೃತಿಪಟಲದಲ್ಲಿ ಅಚ್ಚಳಿಯದೆ ಉಳಿದಿದೆ.

ಕಾವ್ಯಾನಂದರ "ತುಪ್ಪಾರೊಟ್ಟಿ ಗೇ ಗೇ ಗೇ" ಮಕ್ಕಳ ಕವನ ಸಂಕಲನ ತುಂಬ ಜನಪ್ರಿಯವಾಯಿತು. ಆದರೆ ಮುಂದೆ ಬಹುಕಾಲ ಅವರು ಮಕ್ಕಳ ಸಾಹಿತ್ಯ ರಚಿಸಲೇ ಇಲ್ಲ. ಮಕ್ಕಳ ಸಾಹಿತ್ಯ ಕುರಿತು 'ಜೀವನ ವಿಕಾಸ' ಪತ್ರಿಕೆಯಲ್ಲಿ ನಾನೊಂದು ಲೇಖನ ಬರೆದಿದ್ದೆ. ಅದರಲ್ಲಿ ಪುರಾಣಿಕರ ಹೆಸರನ್ನು ಎತ್ತಿ ಹಿರಿಯ ಸಾಹಿತಿಗಳು ಮಕ್ಕಳ ಸಾಹಿತ್ಯ ಕೃಷಿಯನ್ನು ಕೈಬಿಟ್ಟು ಹಿರಿಯರಿಗಾಗಿಯೇ ಬರೆಯುತ್ತಿರುವುದು ಒಳ್ಳೆಯದಲ್ಲ ಎಂದು ಸೂಚಿಸಿದ್ದೆ. ಅದನ್ನು ಗಮನಿಸಿದ ಪುರಾಣಿಕರು ಮತ್ತೆ ಮಕ್ಕಳ ಸಾಹಿತ್ಯ ಕಾರ್ಯದಲ್ಲಿ ತೊಡಗಿ 'ಗಿಲ್ ಗಿಲ್

ಗಿಲಗಚ್ಚಿ' ಮಕ್ಕಳ ಕವನ ಸಂಕಲನವೊಂದನ್ನು ನೀಡಿದರು. ಈ ವಿಷಯವನ್ನು ಅವರು ಈ ಪುಸ್ತಕದ ಮುನ್ನುಡಿಯಲ್ಲಿ ಬರೆದಿದ್ದಾರೆ. ಮಕ್ಕಳ ಸಾಹಿತ್ಯ ರಚನಾ ಕಾರ್ಯವನ್ನು ಮುಂದುವರಿಸಿದ್ದಾರೆ. 'ತಿರುಗಲೆ ತಿರುಗಲೆ ತಿರುಗು ಯ್ಯಾಲೆ' ಸದ್ಯ ಹೊರಬರುವ ಮಕ್ಕಳ ಕವನ ಸಂಕಲನ.

'ವಚನೋದ್ಯಾನ' ಇತ್ತೀಚಿನ ಅವರ ಅನುಭವದ ಅಮರಕೃತಿ. ಅವರಿತ್ತ ಆ ಕೃತಿಯ ಪ್ರತಿಯನ್ನು ತಂದು ಮನೆಯಲ್ಲಿಟ್ಟಿದ್ದೆ. ಅದನ್ನು ಓದಿ ಅಭಿಪ್ರಾಯ ಬರೆ ಯುವ ತವಕ ನನಗೆ. ಮುಂದೆ ಒಂದು ವಾರದ ನಂತರ ಅದನ್ನು ಕೈಗೆತ್ತಿಕೊಳ್ಳಲು ಹೋದೆ, ಆದರೆ ಅದು ಇಟ್ಟ ಸ್ಥಳದಿಂದ ಮಾಯವಾಗಿತ್ತು. ಕೊನೆಗೂ ಅದು ನನಗೆ ಸಿಕ್ಕಲೇ ಇಲ್ಲ. ಯಾವ ಪುಣ್ಯಾತ್ಮ ಅದನ್ನು ಅಪಹರಿ ಸಿದನೋ ತಿಳಿಯಲೇ ಇಲ್ಲ. ಅದರಿಂದ ನನಗೆ ತುಂಬ ಅಸಮಾಧಾನವಾಯಿತು.

ಪುರಾಣಿಕರು ಅಧಿಕಾರ ಸ್ಥಾನದಿಂದ ನಿವೃತ್ತರಾದರೂ ಅವರ ಸಾಹಿತ್ಯ ಸೇವಾಕಾರ್ಯಕ್ಕೆ ವಿರಾಮವಿಲ್ಲ. ಅದು ಇನ್ನೂ ವಿಶಾಲವಾಗಿದೆ. ಹಲವಾರು ಸಂಘ ಸಂಸ್ಥೆಗಳ ಮುಖ್ಯಸ್ಥರಾಗಿ—ಸಲಹೆಗಾರರಾಗಿ ಸಾಹಿತ್ಯ-ಸಂಸ್ಕೃತಿ ಕಾರ್ಯಗಳ ಕೇಂದ್ರಬಿಂದುವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ರಾಜ್ಯದ ಲೇಖಕರ ಸಹಕಾರಿ ಸಂಘವೊಂದನ್ನು ಕಟ್ಟ ಬೇಕು, ಆ ಮೂಲಕ ಉತ್ತಮ ಲೇಖಕರಿಗೆ ಪ್ರೋತ್ಸಾಹ ನೀಡಬೇಕು ಎಂಬ ಬಲವಾದ ಬಯಕೆ ಅವರದು. ಆ ದಿಸೆ ಯಲ್ಲಿ ಕಾರ್ಯ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಲೇಖಕರ ಕಾಲನಿ ಕಟ್ಟುವ ಕನಸು ತಾಳಿದ್ದಾರೆ. ಹೀಗೆ ಹಲವಾರು ಯೋಚನೆಗಳನ್ನು ನನ್ನೆದುರು ಬಿಚ್ಚಿಟ್ಟಿದ್ದಾರೆ. ಅವರ ಈ ಯೋಚನೆ-ಯೋಜನೆಗಳು ಕಾರ್ಯಗತವಾಗು ವಲ್ಲಿ ಒಳ್ಳೆಯ ಕಾರ್ಯಕರ್ತರ ಸಹಾಯ-ಸಹಕಾರ ಅವಶ್ಯವಾಗಿದೆ.

ಸಾಹಿತ್ಯಪಥದಲ್ಲಿ ಪುರಾಣಿಕರು ಸ್ವಂತಿಕೆಯನ್ನುಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ನವ್ಯ, ದಲಿತ, ಬಂಡಾಯ ಮೊದಲಾದ ಪಂಥ-ಪಂಗಡಗಳ ಗಾಳಿಗೆ ಸಿಲುಕದೆ ನೇರ ಮಾರ್ಗದಲ್ಲಿ ಮುನ್ನಡೆದಿದ್ದಾರೆ. ಯಾವ ಆಸೆ-ಆಮಿಷ ಗಳ ಸುಳಿಗೆ ಸಿಕ್ಕದೆ ಕೀರ್ತಿಕಾಮನೆಗೆ ಒಳಗಾಗದೆ, ಶರಣ ಜೀವನದ ಆದರ್ಶಪಥದಲ್ಲಿ ಮುನ್ನಡೆದ ಪುರಾಣಿಕರಿಗೆ ರಾಜ್ಯದ ಎಲ್ಲೆಡೆಯಲ್ಲಿ ಅನೇಕ ಸ್ನೇಹಿತರಿದ್ದಾರೆ. ಅವರ ಬಗೆಗೆ ಅಪಾರ ಗೌರವ ಭಾವನೆಯನ್ನಿರಿಸಿಕೊಂಡ ಸಾಹಿತ್ಯ ಪ್ರಿಯರಿದ್ದಾರೆ. ಅವರ ಪ್ರೀತಿ-ವಿಶ್ವಾಸಗಳಿಗೆ ಪಾತ್ರ ರಾದವರಲ್ಲಿ ನಾನೂ ಒಬ್ಬ. ನನ್ನ-ಪುರಾಣಿಕರ ಈ ಸಂಬಂಧ ಚಿರಂತನವಾಗಿರಲೆಂದು ಪ್ರಾರ್ಥಿಸುವೆ.

ಈ ಮೊದಲು ನಾವು ಕಾವ್ಯಾನಂದರನ್ನು ವಿಜಾಪುರಕ್ಕೆ ಬರಮಾಡಿಕೊಂಡು 'ಕಾವ್ಯಶ್ರೀ—ಕಾವ್ಯಾನಂದ' ಎಂಬ ಕಿರುಹೊತ್ತಗೆಯೊಂದನ್ನು ಅರ್ಪಿಸಿ-ಗೌರವಿಸಿ ನಮ್ಮ ಅಳಿಲು ಸೇವೆ ಪೂರೈಸಿದ್ದೇವೆ. ಈಗ ರಾಜ್ಯಮಟ್ಟದಲ್ಲಿ ಅವರನ್ನು ಗೌರವಿಸುವ ಕಾರ್ಯ ಕೈಗೆತ್ತಿಕೊಂಡಿರುವುದು ಅತ್ಯಂತ ಸಂತೋಷವನ್ನುಂಟುಮಾಡಿದೆ.

ಬದುಕಿನಾದರ್ಶವನು ಬರೆಹದಲಿ ತಂದ
ಕಾವ್ಯಕನ್ನಿಕೆಗಿತ್ತು ರೂಪ-ರಸ-ಗಂಧ
ಮನ್ನಣೆಯ ಪಡೆದಿರುವ ಕನ್ನಡದ ಕಂದ
ನಿಮಗಿದೋ ವಂದನೆಯು ಕವಿ ಕಾವ್ಯಾನಂದ □

ಮರದ ಬಾಯಿ ಬೇರು
ಬುದ್ಧಿಯ ಬಾಯಿ ಹೃದಯ
ಆ ಹೃದಯಸಮುದ್ರದಲ್ಲಿ ಮುಳುಗದ
ಬುದ್ಧಿಗೆ ಬೆಲೆಯೆಲ್ಲಿ ?
—ಕಲ್ಲೋಲಮಾಲೆ, ಪು. 69

# ಪುರುಷೋತ್ತಮ ಪುರಾಣಿಕರು

● ಮೃತ್ಯುಂಜಯ ಶಾಸ್ತ್ರೀಮಠ

ಓ ಉತ್ತಮೋತ್ತಮ
ಒಳಗಿನ ಪುರುಷೋತ್ತಮ
ಪ್ರಖರವಾಗಿ ಪ್ರಕಟವಾಗು
ನರನ ಮರೆಯ ನರೋತ್ತಮ
ಓ ಅಂತರಾತುಮ !

—ಕಾವ್ಯಾನಂದ

ಶ್ರೀಮಾನ್ ಸಿದ್ದಯ್ಯ ಪುರಾಣಿಕರವರು ನರನಾಗಿ ಜನ್ಮಿಸಿದರು. ನರೋತ್ತಮರಾಗಿ ಬೆಳೆದರು. ಉತ್ತಮೋತ್ತಮರೆನಿಸಿದರು. ಪುರುಷೋತ್ತಮರಾಗಿ ಪರಿವರ್ತನೆಗೊಂಡರು ! ಇದೆಲ್ಲ ಸ್ವಂತ ಸಾಧನೆಯಿಂದ. ವಿದ್ಯಾವಂತರಾದವರುಂಟು. ಬುದ್ಧಿವಂತರಾದವರುಂಟು. ಅಧಿಕಾರಿಗಳಾದವರುಂಟು. ದೊಡ್ಡವರಾದವರುಂಟು. ಆದರೆ ಈ ರೀತಿ ಬೆಳವಣಿಗೆ ಹೊಂದಿದವರು, ಘನತೆಯ ಪರಾಕಾಷ್ಠೆಯನ್ನು ಮುಟ್ಟಿದವರು ಲಕ್ಷಕ್ಕೊಬ್ಬರೋ ಕೋಟಿಗೊಬ್ಬರೋ ಸಿಗಬಹುದು. ಅತ್ಯಂತ ವೈಜ್ಞಾನಿಕವಾಗಿ ಅವರ ವ್ಯಕ್ತಿತ್ವ ಬೆಳೆಯುತ್ತಲೇ ಬಂದಿದೆ. ಕ್ರಮಬದ್ಧವಾಗಿ ಬೆಳೆದಿದ್ದಾರೆ. ಇದು ಜೀವನದ ಒಂದು ಶ್ರೇಷ್ಠ ಕಲೆ. ಒಂದು ಕೌಶಲ. ಇದಕ್ಕೆ ಯೋಗವೆಂದೂ ಕರೆಯಬಹುದು !

ದ್ಯಾಂಪುರದಲ್ಲಿ ಪುರಾಣಿಕರ ಮನೆತನ ಪಂಡಿತ ಪರಂಪರೆಯನ್ನೇ ಪಡೆದು ಪ್ರಸಿದ್ಧವಾಗಿದೆ. ಕೀರ್ತಿಶೇಷ ದ್ಯಾಂಪುರ ಚೆನ್ನಕವಿಗಳ ಹೆಸರನ್ನು ಕೇಳದವರು ವಿರಳ. ಯಾವ ಉನ್ನತ ವ್ಯಾಸಂಗದ ಸಂಸ್ಕಾರವೂ ಅವರಿಗಿರಲಿಲ್ಲ. ತಾವೇ ಗದ್ಯ ಪದ್ಯ ಗಣಿತ ಇತಿಹಾಸ ಭೂಗೋಲ ಓದಿಕೊಂಡು ಮಾಸ್ತರರಾಗಿದ್ದರು. ಪ್ರೌಢವಾದ ಭಾಷೆಯಲ್ಲಿ ಶಿವಯೋಗಿಗಳ ಚರಿತ್ರೆಗಳನ್ನೇ ಮಹಾಕಾವ್ಯಗಳನ್ನಾಗಿ ಜೀವನದುದ್ದಕ್ಕೂ ಬರೆದರು. ಅವರ ಮಾರ್ಗದಲ್ಲಿಯೇ ಮುನ್ನಡೆದು ಲಿಂ. ಪಂಡಿತ ಕಲ್ಲಿನಾಥ ಶಾಸ್ತ್ರಿಗಳು ಹಲವು ಉದ್ದಾಮ ಕೃತಿಗಳನ್ನು ರಚಿಸಿದ್ದಾರೆ. ಅವರೆಲ್ಲರೂ ಅತ್ಯುತ್ತಮವಾಗಿ ಉಪನ್ಯಾಸಮಾಡಬಲ್ಲವರು, ಪುರಾಣ-ಕೀರ್ತನ ಪಟುಗಳು. ವಾಗ್ದೇವತೆ ಅವರ ಜಿಹ್ವಾರಂಗದ ಮೇಲೆ ನಿರಂತರ ನರ್ತಿಸುತ್ತಿದ್ದಳು. ಇಂಥ ಶ್ರೀಮಂತ ವ್ಯಕ್ತಿತ್ವ ಪಡೆದ ಹಿರಿಯರ ಆಶೀರ್ವಾದ ಶ್ರೀ ಸಿದ್ಧಯ್ಯ ಪುರಾಣಿಕರಿಗೆ ದೊರೆಯಿತು.

ಶ್ರೀ ಪುರಾಣಿಕರು ಬಾಲಕರಿದ್ದಾಗ ಹೈದರಾಬಾದಿನ ನಿಜಾಮರು ದರ್ಪದಿಂದ ರಾಜ್ಯವಾಳುತ್ತಿದ್ದರು. ಕೊಪ್ಪಳ-ಯಲಬುರ್ಗಿ ಭಾಗವು ನವಾಬ ಸರ್ ಸಾಲಾರಜಂಗ ಬಹಾದ್ದೂರ ಅವರ ಜಾಗೀರ್ ಆಗಿದ್ದಿತು. ಎಲ್ಲೆಲ್ಲೂ ಉರ್ದು ಭಾಷೆಯ ವೈಭವ. ಕನ್ನಡಕ್ಕೆ ಯಾವ ಸ್ಥಾನಮಾನವೂ ಇರಲಿಲ್ಲ. ಸರಕಾರದ ಆಡಳಿತದಲ್ಲಿ ಕನ್ನಡದ ಆವಶ್ಯಕತೆ ಇರಲೇ ಇಲ್ಲ. ಕನ್ನಡ ಮಾತಾಡಿದರೆ, ಮಾತಾಡಿದವರ ಸ್ಥಾನಮಾನ ಕಡಿಮೆಯಾಗುತ್ತಿತ್ತು! ಇಂಗ್ಲಿಷಿಗೆ ಉಚ್ಚವರ್ಗದಲ್ಲಿ ಮಾತ್ರ ವಿಶೇಷ ಗೌರವ. ಹೆಚ್ಚಿನ ಅಭ್ಯಾಸಕ್ಕಾಗಿ ಅದರ ಉಪಯೋಗ, ಶಿಕ್ಷಣದ ಮಾಧ್ಯಮ ಉರ್ದು. ವ್ಯವಹಾರದ ಮಾಧ್ಯಮ ಉರ್ದು. ಅದರ ಜೊತೆಗೆ ಫಾರಸೀ ಅರಬ್ಬೀ ಭಾಷೆಗಳನ್ನು ಅರಿತವರು ಪಂಡಿತರೆನ್ನಿಸುತ್ತಿದ್ದರು.

ಶ್ರೀ ಪುರಾಣಿಕರು ದ್ಯಾಂಪುರ ಮತ್ತು ಕುಕನೂರುಗಳಲ್ಲಿ ಪ್ರಾಥಮಿಕ ಅಭ್ಯಾಸ ಮಾಡಿದರು. ಕುಕನೂರ 'ವಿದ್ಯಾನಂದ ಗುರುಕುಲ'ವು ಆಗ ಸಂಸ್ಥಾಪಿತವಾಗಿದ್ದಿತು. ಅದು ಮಹಾತ್ಮಾ ಗಾಂಧೀಜಿಯವರ ಆದರ್ಶದಲ್ಲಿ

ನಿರ್ಮಾಣವಾದ ರಾಷ್ಟ್ರೀಯ ಸಂಸ್ಥೆ. ಶ್ರೀ ರಾಘವೇಂದ್ರ ರಾವ್‌ದೇಸಾಯಿ ಅದರ ಸಂಸ್ಥಾಪಕರು. ಶ್ರೀ ಪಾಂಡು ರಂಗರಾವ್ ದೇಸಾಯಿ ಮತ್ತು ಇತರ ದೊಡ್ಡ ದೊಡ್ಡ ವ್ಯಕ್ತಿಗಳು ಅಲ್ಲಿ ಶಿಕ್ಷಕರು. ಉರ್ದು ಏಳನೆಯ ವರ್ಗದ ವರೆಗೆ ಅಲ್ಲಿ ಅಭ್ಯಾಸ. ಮುಂದೆ ೧೦ನೆಯ ವರ್ಗ (ಮ್ಯಾಟ್ರಿಕ್)ದ ವರೆಗೆ ಕೊಪ್ಪಳದಲ್ಲಿ ಸರಕಾರಿ ಶಾಲೆ ಇದ್ದಿತು. ಕಲಬುರ್ಗಿಯಲ್ಲಿ ಇಂಟರ್ ಮೀಡಿಯಟ್ ಕಾಲೇಜು ಉಚ್ಚ ಶಿಕ್ಷಣಕ್ಕಾಗಿ ಪ್ರಾರಂಭವಾಗುತ್ತಿದ್ದಿತು. ರಾಯಚೂರು, ಬೀದರ್ ಇತ್ಯಾದಿ ಸ್ಥಳಗಳಲ್ಲಿ ಯಾವ ಕಾಲೇಜೂ ಇರಲಿಲ್ಲ. ಪದವೀ ಪರೀಕ್ಷೆಗೆ ಹೈದರಾಬಾದಿನಲ್ಲಿಯೇ ಓದಬೇಕಾಗುತ್ತಿತ್ತು. ವಿದ್ಯಾನಂದ ಗುರುಕುಲದ ರಾಷ್ಟ್ರೀಯ ವಾತಾವರಣದಲ್ಲಿ ಬೆಳೆದು ಉಚ್ಚ ಶಿಕ್ಷಣವನ್ನು ಕಲಬುರ್ಗಿ ಮತ್ತು ಹೈದರಾಬಾದುಗಳಲ್ಲಿ ಪೂರೈಸಿದರು. ಆ ಭಾಗದಲ್ಲಿ ಓದುತ್ತಿದ್ದ ಕೆಲವೇ ಜನ ಯುವಕರಲ್ಲಿ ಶ್ರೀ ಸಿದ್ಧಯ್ಯನವರೂ ಒಬ್ಬರು. ಶಾಲೆ-ಕಾಲೇಜುಗಳಲ್ಲಿ ಯಾವಾಗಲೂ ಧೀಮಂತ ವಿದ್ಯಾರ್ಥಿ ಎಂದು ಅವರು ಪ್ರಸಿದ್ಧಿ ಪಡೆದಿದ್ದರು. ಉರ್ದು - ಇಂಗ್ಲಿಷ್ ಭಾಷೆಗಳಲ್ಲಿ ಅವರು ಬಹುಬೇಗ ಪ್ರಭುತ್ವ ಪಡೆದರು. ಪಠ್ಯ ಪುಸ್ತಕಗಳ ಜೊತೆಗೆ, ದೊರೆಯುವ ಇತರ ಸಾಹಿತ್ಯರಾಶಿಯನ್ನೆಲ್ಲ ಓದಿದರು. ಕಣ್ಣಿಗೆ ಬಿದ್ದ "ಲಾಯಬ್ರರಿ"ಗಳನ್ನೆಲ್ಲ ಸಂಪೂರ್ಣವಾಗಿ ಜೀರ್ಣಿಸಿಕೊಂಡರು. ಅವರ ಧೀಶಕ್ತಿ ಗಗನಗಾಮಿಯಾಗಿ ಹಾರುತ್ತಿತ್ತು. ಅದರ ರೆಕ್ಕೆಗಳು ವಿಶ್ವ ವಿಸ್ತಾರವನ್ನೆಲ್ಲ ಒಳಗೊಳ್ಳಹತ್ತಿದ್ದವು. ಕಲಬುರ್ಗಿಯಲ್ಲಿ ಪ್ರೊಫೆಸರ್ ತವಗ ಭೀಮಸೇನರಾವ್ ಮತ್ತು ಹೈದರಾಬಾದಿನಲ್ಲಿ ಪ್ರೊಫೆಸರ್ ಡಿ. ಕೆ. ಭೀಮಸೇನರಾವ್ ಅವರಂಥ ಶ್ರೇಷ್ಠ ವಿದ್ವಾಂಸರ ಮಾರ್ಗದರ್ಶನ ಇವರಿಗೆ ದೊರೆಯಿತು.

ಬಿ. ಎ. ಪರೀಕ್ಷೆಯ ಪರಿಣಾಮ ಹೊರಡುತ್ತಿರುವಾಗ ಹೈದರಾಬಾದು ಸಂಸ್ಥಾನದಲ್ಲಿ ಹದಿನಾರು ಜನ ತಹಸೀಲದಾರರ ಸ್ಥಳಗಳನ್ನು ನಿಜಾಮ ಸರಕಾರವು ತುಂಬಲಿತ್ತು. ಶ್ರೀ ಸಿದ್ಧಯ್ಯನವರು ಕೂಡಲೇ ಅದಕ್ಕಾಗಿ ಪ್ರಯತ್ನಿಸಿ ಯಶಸ್ವಿಯಾದರು. ನವಾಬ ಸರ್ ಸಾಲಾರಜಂಗ ಬಹಾದ್ದೂರ ಅವರು ಶ್ರೀ ಸಿದ್ಧಯ್ಯ ಪುರಾಣಿಕರ ಆಯ್ಕೆ ಆಗುವಂತೆ ತಮ್ಮ ಅಭಿಪ್ರಾಯ ಸೂಚಿಸಿದ್ದರು ಎಂದರೆ ಶ್ರೀ ಸಿದ್ಧಯ್ಯನವರ ಪ್ರತಿಭೆಗೆ ಎಂಥ ಮನ್ನಣೆ ದೊರೆಯಿತು ಎಂಬುದು ಅರ್ಥವಾಗದಿರದು. ರಾಜಾಶ್ರಯವನ್ನೇ ಪಡೆದು ಅವರು ಅಧಿಕಾರಿಗಳಾದರು! ಇದು ಎಲ್ಲರಿಗೂ ಸಿಗುವ ಗೌರವವಲ್ಲ. ದುರ್ಲಭವಾದುದು. ಭಗವತ್ ಕೃಪೆಯಿಂದ ಮಾತ್ರ ಸಾಧ್ಯವಾಗಬಲ್ಲುದು.

೧೯೪೦ನೆಯ ದಶಕದಲ್ಲಿ ಸ್ವಾತಂತ್ರ್ಯಪೂರ್ವದ ಆ ದಿನಗಳಲ್ಲಿ ತಹಸೀಲದಾರರ ಸ್ಥಾನಮಾನ ಬಹಳ ದೊಡ್ಡದು. ಅದರಲ್ಲಿಯೂ ನಿಜಾಮ ಪ್ರಭುಗಳ ರಾಜ್ಯದಲ್ಲಿ ಆ ಅಧಿಕಾರಕ್ಕೆ ಇನ್ನೂ ಹೆಚ್ಚಿನ ಬೆಲೆ ಇದ್ದಿತು. ತಹಸೀಲದಾರರು ನವಾಬರಂತೆಯೇ ಘನತೆಯನ್ನು ಹೊಂದಿರುತ್ತಿದ್ದರು. ಇಂದಿನ ಕಲೆಕ್ಟರರು, ಡಿವಿಜನಲ್ ಕಮೀಶನರರು ಅನುಭವಿಸುವ ಅಧಿಕಾರ ಮನ್ನಣೆಗಿಂತಲೂ ಹೆಚ್ಚಿನ ಮನ್ನಣೆಯನ್ನು ಆಗಿನ ತಹಸೀಲದಾರರು ಅನುಭವಿಸುತ್ತಿದ್ದರು. ಇಂಥ ಘನವಾದ ಸ್ಥಾನದಿಂದಲೇ ಶ್ರೀ ಪುರಾಣಿಕರ ಜೀವನ ಪ್ರಾರಂಭವಾಯಿತು. ಅದನ್ನು ಅವರು ಹೆಚ್ಚಿನ ಯೋಗ್ಯತೆಯಿಂದ ನಿರ್ವಹಿಸತೊಡಗಿದರು. ಶ್ರೇಷ್ಠ ತರಗತಿಯ ಭಾಷಾಪ್ರಭುತ್ವ, ಲೇಖನಶಕ್ತಿ, ಬುದ್ಧಿ ಕುಶಲತೆ, ವ್ಯವಹಾರ ಚಾತುರ್ಯ, ನಡೆನುಡಿಯಲ್ಲಿಯ ಘನತೆ ಎಲ್ಲವೂ ಅವರಿಗೆ 'ನಾ ಮುಂದೆ ತಾ ಮುಂದೆ' ಎಂದು ನೆರವಾದವು. ವಯಸ್ಸಿನಿಂದ ತುಂಬ ಚಿಕ್ಕವರು. ಇನ್ನೂ ಹುಡುಗ. ಷೇರವಾನಿ-ಪಾಯಜಾಮ ಧರಿಸುತ್ತಿದ್ದರು. ನಾಂದೇಡ-ಪರಭಣಿ ಜಿಲ್ಲೆಗಳಲ್ಲಿ ಬಹಳ ಸಮರ್ಥ ತಹಸೀಲದಾರರೆಂಬ ಖ್ಯಾತಿಯನ್ನು ಪಡೆದರು.

ಮುಂದೆ ಕಲಬುರ್ಗಿ-ಹೈದರಾಬಾದುಗಳಲ್ಲಿ ಲ್ಯಾಂಡ್ ರಿಕಾರ್ಡ್ ಆಫೀಸರರೆಂದೂ ಇತರ ಸ್ಥಾನಗಳಲ್ಲಿಯೂ ಅವರು ಕಾರ್ಯ ನಿರ್ವಹಿಸಿದರು. ನಿಜಾಮ ಕರ್ನಾಟಕದ ಭಾಗವಂತೂ ತನ್ನ ಹೆಮ್ಮೆಯ ಸುಪುತ್ರ ಎಂದು ಅಭಿಮಾನದಿಂದ ಇವರನ್ನು ಕಾಣುತ್ತಿತ್ತು. ತೆಲಂಗಾಣಾ ಮತ್ತು ಮರಾಠವಾಡಾ ಭಾಗದವರು ಅದಕ್ಕಿಂತಲೂ ಹೆಚ್ಚಿನ ಅಭಿಮಾನ-ಪ್ರೀತಿ-ವಿಶ್ವಾಸಗಳನ್ನು ಇವರ ಬಗೆಗೆ ವ್ಯಕ್ತಪಡಿಸಿದರು. ಸರಕಾರದಲ್ಲಿ ಗಣ್ಯರು. ಸಮಾಜದಲ್ಲಿ ಗಣ್ಯರು. ಮುಂಬಯಿ ಕರ್ನಾಟಕ, ಮದ್ರಾಸ್ ಕರ್ನಾಟಕ, ಕೊಡಗು, ಮೈಸೂರು ಸಂಸ್ಥಾನ ಮೊದಲಾದ ಪ್ರದೇಶದ ಹಿರಿಯರೆಲ್ಲರ ನಿಕಟ ಸಂಪರ್ಕವನ್ನು ಇವರು ಪಡೆದರಲ್ಲದೆ, ಸಾಹಿತಿಗಳ ಕವಿಗಳ ಮಧ್ಯದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿದರು.

ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿಯೂ, ಕರ್ನಾಟಕ ಏಕೀಕರಣಕ್ಕಾಗಿಯೂ ಉಜ್ವಲವಾದ ಹೋರಾಟ ನಡೆದ

ದಿನಗಳವು. ಅಂಥ ಸಂದರ್ಭದಲ್ಲಿ ಸಂಸ್ಥಾನವೊಂದರ ಉನ್ನತ ಅಧಿಕಾರ ಪಡೆದೂ ರಾಷ್ಟ್ರಭಕ್ತಿಯುಳ್ಳವರಾಗಿದ್ದರಲ್ಲದೇ, ಆಂದೋಲನದ ಪ್ರಮುಖರೆಲ್ಲರ ಸಂತತ ಸಂಪರ್ಕದಲ್ಲಿದ್ದರು. ಇದರಿಂದ ಶ್ರೀ ಪುರಾಣಿಕರ ವ್ಯವಹಾರ ಕುಶಲತೆಯು ದರ್ಶನ ನಮಗಾಗುವುದು. ಹೈದರಾಬಾದಿನ ಸ್ವಾತಂತ್ರ್ಯ ಹೋರಾಟ ತೀಕ್ಷ್ಣಸ್ವರೂಪವನ್ನು ಪಡೆದಾಗ ಹಿಂದೂ ಅಧಿಕಾರಿಗಳು ಪರಪ್ರಾಂತಗಳಿಗೆ ತೆರಳಿದುದುಂಟು. ಆದರೆ ಶ್ರೀ ಸಿದ್ಧಯ್ಯನವರು ಯಾವುದೇ ರೀತಿಯ ಅಸ್ತವ್ಯಸ್ತತೆಗೆ ಎಡೆಕೊಡದೆ ಸಂಸ್ಥಾನದಲ್ಲಿಯೇ ಕಾರ್ಯನಿರತರಾದುದು ಅವರ ವ್ಯಕ್ತಿತ್ವದ ಶ್ರೇಷ್ಠತೆಗೆ ನಿದರ್ಶನವಾಗಿದೆ. ಘೋರವಾದ ದಬ್ಬಾಳಿಕೆಯ ದಿನಗಳಲ್ಲಿ ಪಾರಾಗಿ ಅವರು ನಾಡಿನ ಸೇವೆಯನ್ನು ಯಥಾರೀತಿ ಸಲ್ಲಿಸಿದರು.

ಈ ಮಧ್ಯದಲ್ಲಿ ಎಲ್‌ಎಲ್. ಬಿ. ಪರೀಕ್ಷೆಯನ್ನೂ ಅವರು ಪಾಸಾದರು. ಅವರ ಶಿಕ್ಷಣವೆಲ್ಲ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ನಡೆಯಿತು.

ಹೈದರಾಬಾದು ಸಂಸ್ಥಾನವು ಪೋಲಿಸ್ ಕಾರ್ಯಾಚರಣೆಯ ನಂತರ ಸ್ವತಂತ್ರವಾಯಿತು. ಹಲವಾರು ಘಟನೆಗಳ ನಂತರ ಪ್ರಜಾರಾಜ್ಯ ಅಸ್ತಿತ್ವದಲ್ಲಿ ಬಂದಿತು. ಶ್ರೀ ಅಣ್ಣಾರಾವ್ ಗಣಮುಖಿ ಮತ್ತು ಡಾ. ಎಂ. ಚೆನ್ನಾರೆಡ್ಡಿ ಅವರು ಮಂತ್ರಿಗಳಾಗಿರುವಾಗ ಶ್ರೀ ಸಿದ್ಧಯ್ಯನವರು ಅವರ "ಖಾಸಗಿ ಕಾರ್ಯದರ್ಶಿ" ಕೆಲಸ ನಿರ್ವಹಿಸಿದರು. ಆ ನಂತರ ೧೯೫೪ರಲ್ಲಿ ತಾಂಡೂರಿನ ಡೆಪ್ಯೂಟಿ ಕಲೆಕ್ಟರರಾಗಿ ಬಂದರು. ಆಗ ಯಾದಗಿರಿ ವಿಭಾಗದ ಡೆಪ್ಯೂಟಿ ಕಲೆಕ್ಟರರೆಂದೂ ಇವರೇ ಕೆಲಸ ನೋಡಿಕೊಳ್ಳುತ್ತಿದ್ದರು. ಇಬ್ಬರು ಡೆಪ್ಯೂಟಿ ಕಲೆಕ್ಟರರು ಮಾಡಬೇಕಾದ ಕಾರ್ಯವನ್ನು ಎರಡು ಡಿವಿಜನ್ನುಗಳಲ್ಲಿ ಆಗ ಇವರೊಬ್ಬರೇ ನೋಡುತ್ತಿದ್ದರು ! ೧೯೫೬ರಲ್ಲಿ ಕರ್ನಾಟಕ ರಾಜ್ಯವು ರೂಪುಗೊಂಡಾಗ ಬೀದರ್, ಗುಲಬರ್ಗಾ, ರಾಯಚೂರ ಜಿಲ್ಲೆಗಳು ಬೇರ್ಪಟ್ಟವಷ್ಟೇ. ಆಗ ತೆಲಂಗಾಣಾ ಮತ್ತು ಕರ್ನಾಟಕ ಪ್ರದೇಶಗಳಲ್ಲಿಯ ಕಚೇರಿಗಳ ಫೈಲುಗಳನ್ನೂ ಇತರ ಕಾಗದ ಪತ್ರಗಳನ್ನೂ ಸುಸಂಬದ್ಧವಾಗಿ ಹಂಚುವ ಕಾರ್ಯಭಾರ ಇವರ ಮೇಲೆಯೇ ಬಿದ್ದಿತು. ಅದನ್ನು ಇವರು ತುಂಬ ದಕ್ಷತೆಯಿಂದ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ನಿರ್ವಹಿಸಿ ಎಲ್ಲರ ಪ್ರಶಂಸೆಯನ್ನು ಗಳಿಸಿದರು. ಈ ಸಂಗತಿಯು ಬಹಳ ಮಹತ್ವದ್ದಾಗಿದ್ದು ಎಲ್ಲರೂ ಗಮನಿಸಬೇಕಾದ ಅಂಶವಾಗಿದೆ.

ಕರ್ನಾಟಕ ರಾಜ್ಯ ನಿರ್ಮಾಣದ ನಂತರ ಇವರ ಸೇವೆಯನ್ನು ಈ ರಾಜ್ಯಕ್ಕೆ ಕೊಡಲಾಯಿತು. ಯಾದಗಿರಿಯಲ್ಲಿ ಕೆಲವು ವರ್ಷ ಇದ್ದು ಬೆಂಗಳೂರಿಗೆ ತೆರಳಿದರು. ವಿಧಾನ ಸೌಧದಲ್ಲಿ ಡೆಪ್ಯೂಟಿ ಸೆಕ್ರೆಟರಿಗಳಾಗಿಯೂ ಇತರ ಸ್ಥಾನಗಳಲ್ಲಿಯೂ ಕೆಲಸಮಾಡಿದರು. ದಕ್ಷತೆಗಾಗಿ ಐ. ಎ. ಎಸ್. ಅಧಿಕಾರಿಗಳೆಂದು ರಾಜ್ಯಸರಕಾರವು ಇವರಿಗೆ ಮನ್ನಣೆ ನೀಡಿತು. ಇವರ ಪಾಂಡಿತ್ಯವನ್ನು ಗಮನಿಸಿ ಕರ್ನಾಟಕ ವಿಶ್ವವಿದ್ಯಾಲಯವು ಡಿ.ಲಿಟ್. ಪ್ರಶಸ್ತಿಯನ್ನು ಕೊಡಮಾಡಿತು. ರಾಜ್ಯದ ಗೋಲ್ಡ್ ಕಂಟ್ರೋಲರ್ ಎಂದೂ, ಟ್ರ್ಯಾನ್ಸ್‌ಪೋರ್ಟ್ ಕಮೀಷನರ್ ಎಂದೂ, ಇನ್‌ಫಾರ್ಮೇಶನ್ ಮತ್ತು ಪಬ್ಲಿಸಿಟಿ ಇಲಾಖೆಯ ಡೈರೆಕ್ಟರರೆಂದೂ ಬಹಳ ಮಹತ್ವದ ಕಾರ್ಯಭಾರವನ್ನು ಇವರು ನಿರ್ವಹಿಸಿದರು. ಕೊಡಗು ಮತ್ತು ಬೆಳಗಾವಿ ಜಿಲ್ಲೆಗಳ ಬಹು ಸಮರ್ಥ ಡೆಪ್ಯೂಟಿ ಕಮೀಷನರರೆಂದು ಇತಿಹಾಸ ನಿರ್ಮಿಸಿದರಲ್ಲದೆ, ರಾಜ್ಯದ ಲೇಬರ್ ಕಮೀಷನರ್ ಆಗಿರುವಾಗ ಸರಕಾರಿ ಸೇವೆಯಿಂದ ನಿವೃತ್ತರಾದರು. ಡೆಪ್ಯೂಟಿ ಕಲೆಕ್ಟರರಾಗಿಯೂ, ಡೆಪ್ಯೂಟಿ ಕಮೀಷನರರಾಗಿಯೂ ಇದ್ದಾಗ ಸಾರ್ವಜನಿಕ ಚುನಾವಣೆಗಳಲ್ಲಿ ರಿಟರ್ನಿಂಗ್ ಆಫೀಸರರಾಗಿ ಎಡೆಬಿಡದೆ ಕಾರ್ಯನಿರತರಾಗಿದ್ದರು. ಎಲ್ಲ ರೀತಿಯಿಂದ ಸಮರ್ಥರೂ, ಬುದ್ಧಿಕುಶಲರೂ, ತಾವು ಪಡೆದ ಸ್ಥಾನಗಳಿಗೇ ಗೌರವ ತರುವಂಥ ವ್ಯಕ್ತಿತ್ವ ಉಳ್ಳವರೂ, ಘನತೆಯನ್ನು ಅನೂಚಾನವಾಗಿ ಕಾಯ್ದುಕೊಂಡು ಬಂದವರೂ ಆದ ಇಂಥ ಅಧಿಕಾರಿಗಳು ಪ್ರಭುತ್ವದ ಇತಿಹಾಸದಲ್ಲಿ ಬಹಳ ಕ್ವಚಿತವಾಗಿ ಕಾಣಿಸಿಕೊಂಡ ಉದಾಹರಣೆಗಳಿವೆ. ಇಂಥ ಅಪೂರ್ವ ವ್ಯಕ್ತಿತ್ವ ಇವರದಾಗಿದೆ.

ಶ್ರೀ ಸಿದ್ಧಯ್ಯಾ ಪುರಾಣಿಕರ "ಅಧಿಕಾರೀ ಜೀವನ" ಬಹಳ ದೊಡ್ಡದು. ಬಹಳ ದೊಡ್ಡವರೂ ವಿಖ್ಯಾತರೂ ಆದ ಬ್ರಿಟಿಷ್ ಅಧಿಕಾರಿಗಳನ್ನೂ, ಮುಸ್ಲಿಂ ಅಧಿಕಾರಿಗಳನ್ನೂ, ಹಿಂದೂ ಅಧಿಕಾರಿಗಳನ್ನೂ ಪ್ರಾರಂಭದಲ್ಲಿಯೇ ಕಂಡವರು. ಅವರಂತೆಯೇ ತಾವೂ ಬೆಳೆದು, ಎಲ್ಲರಿಗಿಂತಲೂ ಹೆಚ್ಚಿನ ಯೋಗ್ಯತೆಯನ್ನು ಪಡೆದವರೆಂಬ ಖ್ಯಾತಿಯನ್ನು ನಿರ್ಮಿಸಿದರು. ಇತ್ತೀಚೆಗೆ ಸುಲಭ ರೀತಿಯಲ್ಲಿ ಐ. ಎ. ಎಸ್. ಆಗಿ ಬೇಗ

ಬೇಗ ಮೇಲೆ ಮೇಲೆ ಏರುತ್ತಿರುವ ಚಿಕ್ಕವಯಸ್ಸಿನ ಅಧಿಕಾರಿಗಳ ಶಿಥಿಲ ವ್ಯಕ್ತಿತ್ವವನ್ನು ಗಮನಿಸಿದಾಗ, ಶ್ರೀ ಸಿದ್ಧಯ್ಯನವರು ಎಂಥ ದೊಡ್ಡ ಪರಂಪರೆಯಲ್ಲಿ ಎಷ್ಟೊಂದು ಘನತೆಯಿಂದ ಬೆಳೆದು ಬಂದರು ಎನ್ನುವ ಮಾತಿನ ಅರ್ಥ ಕಿಂಚಿತ್ತಾದರೂ ಹೊಳೆಯಬಹುದು. ಈ ಮಟ್ಟದ ಅಧಿಕಾರಿಗಳನ್ನು ಇನ್ನು ಮುಂದೆ ನಮ್ಮ ಸರಕಾರಗಳು ಪಡೆಯಬಹುದೇ ಎಂದು ನಾವು ಶಂಕಿಸ ಬೇಕಾಗುವುದು.

ಶ್ರೀ ಸಿದ್ಧಯ್ಯ ಪುರಾಣಿಕರ ಅಧಿಕಾರದ ಜೀವನದ ವೈಶಿಷ್ಟ್ಯ ಒಂದು ವಿಧವಾದರೆ ಅವರ ಸಾಹಿತ್ಯಿಕ ಜೀವನದ ಶ್ರೇಷ್ಠತೆ ಇನ್ನೂ ದೊಡ್ಡದು. ಒಂದಕ್ಕೊಂದು ಪೂರಕ ವಾಗಿಯೇ ಅವು ಬೆಳೆದುಬಂದಿವೆ. ಬಸವಣ್ಣನವರನ್ನು ಕುರಿತು ಅವರು ಪ್ರಾರಂಭದಲ್ಲಿಯೇ ಬರೆದ "ಆತ್ಮಾರ್ಪಣ" ವೆಂಬ ನಾಟಕ ರಸವತ್ಕಾವ್ಯದಂತೆ ಆಕರ್ಷಣೀಯವಾಗಿದೆ. ಅವರ ಗದ್ಯ-ಪದ್ಯಗಳೆರಡರ ಶೈಲಿಯೂ ಬಹಳ ಉನ್ನತ ಮಟ್ಟದ್ದಾಗಿದೆ. ಶರಣಚರಿತಾಮೃತ, ರಜತರೇಖೆ, ಭಾರತವೀರ, ಕಥಾಮಂಜರಿ, ತುಷಾರಹಾರ, ತ್ರಿಭುವನ ಮಲ್ಲ, ಪದ್ಯರತ್ನಾಕರ, ಶ್ರೀಕಾರ, ಪ್ರಬಂಧ ಮಾಲೆ, ಸುಬೋಧಸಾರ, ಮಹಾತ್ಮಾ ಕನಕದಾಸ, ವಿಕಾಸವಾಣಿ, ತುಪ್ಪಾರೊಟ್ಟಿ ಗೇಗೇಗೇ, ಜಲಪಾತ, ಕರುಣಾಶ್ರಾವಣ, ಮಾನಸ ಸರೋವರ, ಮೊದಲು ಮಾನವನಾಗು, ಕಲ್ಲೋಲಮಾಲೆ, ವಚನೋದ್ಯಾನ ಒಂದೊಂದೂ ಒಂದು ಮೈಲುಗಲ್ಲಾಗಿವೆ. ಉರ್ದು ಭಾಷೆಯ ಇಕ್ಬಾಲ್ ಮತ್ತು ಗಾಲಿಬ್ ಅವರ ಬಗೆಗೆ ಬರೆದ ಪುಸ್ತಿಕೆಗಳು, ಲೇಖನಗಳು ಅವರ ಅಭಿರುಚಿಯ ಪ್ರತೀಕ ವಾಗಿವೆ. ಅವರ ಪ್ರೌಢಪ್ರಬಂಧಗಳು ವಿದ್ವದಂಶಗಳಿಂದ ತುಂಬಿವೆ. ಅವರ ಲೇಖನದ ವ್ಯಾಪ್ತಿ ಅತ್ಯಂತ ವಿಸ್ತಾರ ವಾದುದು. ಇಂಗ್ಲಿಷ್, ಹಿಂದಿ, ಸಂಸ್ಕೃತ ಭಾಷೆ ಗಳಿಗೆ ಸಂಬಂಧಿಸಿದ ಲೇಖನಗಳನ್ನೂ ಅವರು ಬರೆದಿ ದ್ದಾರೆ. ಫಾರಸೀ, ಅರಬ್ಬೀ ಭಾಷೆಗಳನ್ನೂ ಬಲ್ಲರು. ತೆಲುಗು, ತಮಿಳುಗಳನ್ನೂ ಬಲ್ಲರು. ಇಂಗ್ಲಿಷಿನ ಮೂಲಕ ವಿಶ್ವಸಾಹಿತ್ಯವನ್ನೆಲ್ಲ ನುಂಗಿ ನೀರು ಕುಡಿದಿ ದ್ದಾರೆ. ಸರ್ವಧರ್ಮಗಳ ಸಮಸ್ತ ಗ್ರಂಥಗಳನ್ನೂ, ಭಾಷ್ಯಗಳನ್ನೂ, ಕಾಮೆಂಟ್ರಿಗಳನ್ನೂ ಆದ್ಯಂತವಾಗಿ ಅರಗಿಸಿಕೊಂಡಿದ್ದಾರೆ. ಜ್ಞಾನ-ವಿಜ್ಞಾನದ ಯಾವುದೇ ಮುಖವನ್ನು ಅವರು ಅರಿಯದೇ ಬಿಟ್ಟಿಲ್ಲ. ಒಮ್ಮೆ ಓದಿ ದುದನ್ನು ಮತ್ತೆಂದೂ ಅವರು ಮರೆಯುವುದಿಲ್ಲ! ಅವರ ಬರೆಹವೂ ಆಶ್ಚರ್ಯಕರವಾದುದು. ಕನ್ನಡ, ಇಂಗ್ಲಿಷ್, ಉರ್ದು, ಹಿಂದಿ ಮೊದಲಾದ ಭಾಷೆಗಳಲ್ಲಿ "ಕಂತ ಪತ್ರದ ಉಲುಹುಗೆಡದಗ್ಗಳಿಕೆ, ಪದವಿಟ್ಟಳುಪದೊಂದಗ್ಗ ಳಿಕೆ" ಅವರದು!

ವಚನ ಶಾಸ್ತ್ರವನ್ನು ಕುರಿತ ಅವರ ಅಧ್ಯಯನ ಬಹಳ ಆಳವಾದುದು. ಶಿವಶರಣರ ಬಗೆಗೆ ಅವರು "ಅಥಾರಿಟಿ" ಇದ್ದಂತೆ. ಈ ವ್ಯಾಸಂಗದ ಫಲವಾಗಿಯೇ "ಶರಣ ಚರಿತಾಮೃತ" ಮತ್ತು "ವಚನೋದ್ಯಾನ"ಗಳಂಥ ಶ್ರೇಷ್ಠ ಕೃತಿಗಳು ನಿರ್ಮಾಣವಾಗಿವೆ. ನಮ್ಮ ನಾಡಿನ ಅಸಂಖ್ಯ ಜನ ಪಂಡಿತರು ಶ್ರಾವಣಮಾಸದಲ್ಲಿ ಪ್ರತಿವರ್ಷ "ಶರಣ ಚರಿತಾಮೃತ"ವನ್ನು ಪುರಾಣಗಳಂತೆ ಮಠಗಳಲ್ಲಿ ಪ್ರವಚನ ಮಾಡುತ್ತಿದ್ದಾರೆ. ಇದಕ್ಕಿಂತ ಹೆಚ್ಚಿನ ಸಾರ್ಥಕತೆ ಇನ್ನೇನಿದೆ ಈ ಕೃತಿಗೆ!

ನಾಟಕಗಳನ್ನು ರಚಿಸಿದಂತೆಯೇ, ಶ್ರೇಷ್ಠ ನಟರೂ ಅವರಾಗಿದ್ದಾರೆ. 'ಆತ್ಮಾರ್ಪಣ' ನಾಟಕವನ್ನಾಡುವಾಗ ಬಸವಣ್ಣನವರ ಪಾತ್ರವನ್ನು ಇವರೇ ನಿರ್ವಹಿಸಿದ್ದರು. ತಾಂಡೂರಲ್ಲಿ ಇವರು ಡೆಪ್ಯೂಟಿ ಕಲೆಕ್ಟರರಾಗಿದ್ದಾಗಿನ ಒಂದು ಘಟನೆ. ಅಲ್ಲಿಯ 'ವಿಜಯ ವಿದ್ಯಾಲಯ'ದವರು "ಭೂದಾನ"ವೆಂಬ ನಾಟಕವನ್ನು ಕಲಿಯುತ್ತಿದ್ದರು. ದಿನಾಲು ರಾತ್ರಿ "ತಾಲೀಮು" ನಡೆಯುತ್ತಿತ್ತು. ಶ್ರೀ ಪುರಾಣಿಕರು ರಾತ್ರಿ ಜೀಪು ತೆಗೆದುಕೊಂಡು ತಾಲೀಮಿನ ಮನೆಗೆ ಬಂದು ಬಿಡುತ್ತಿದ್ದರು! ಎಲ್ಲರಿಗೂ ಬಹಳ ಆಶ್ಚರ್ಯ! ಅಲ್ಲಿಗೆ ಬಂದವರು ಸುಮ್ಮನೆ ನೋಡುತ್ತ ಕುಳಿತುಕೊಳ್ಳುತ್ತಿರಲಿಲ್ಲ. ಎದ್ದು ಮಾತು ಹೇಳುವವರ ಪಕ್ಕದಲ್ಲಿ ನಿಂತು ತಾವೂ ಮಾತು ಹೇಳಿ ಅದಕ್ಕೆ ತಕ್ಕ ಅಭಿನಯವನ್ನು ತಾವೇ ಮಾಡಿತೋರಿಸಿ ಅವರಿಗೆ ಕಲಿಸು ತ್ತಿದ್ದರು! ನಗರದ ಪ್ರಮುಖರೂ ಅಲ್ಲಿ ಉಪಸ್ಥಿತರಿದ್ದು ಆನಂದಾಶ್ಚರ್ಯಗಳನ್ನು ವ್ಯಕ್ತಮಾಡುತ್ತಿದ್ದರು! ಆ ನಾಟಕವನ್ನು ಸಾರ್ವಜನಿಕ ರಂಗಭೂಮಿಯ ಮೇಲೆ ಆಡುವಾಗ ಇವರೇ ಮುಖ್ಯ ಅತಿಥಿಗಳಾಗಿ ಆಮಂತ್ರಿತ ರಾಗಿದ್ದರು. ಪದ್ಧತಿಯ ಪ್ರಕಾರ ಇವರಿಂದ ಭಾಷಣ ಗಳಾದ ಮೇಲೆ ಇವರು ಪರದೆಯ ಹಿಂದೆ ಸ್ಟೇಜಿನ ಮೇಲೆ ಬಂದು ನಾಟಕ ಪುಸ್ತಕವನ್ನು ಹಿಡಿದು ಮರೆಯಲ್ಲಿ ನಿಂತು ನಟರಿಗೆ ಓದಿ ಹೇಳುತ್ತಿದ್ದರು! ಇಂಥ ಅಧಿಕಾರಿಯನ್ನು ಆ ನಗರ ಅದಕ್ಕಿಂತ ಮೊದಲಾಗಲೀ ಆನಂತರವಾಗಲೀ ಕಂಡುದಿಲ್ಲ!

ರೇಡಿಯೋ ರೂಪಕಗಳನ್ನು ಬರೆಯುವಲ್ಲಿ ಇವರು ಸಿದ್ಧಹಸ್ತರು. ಹೈದರಾಬಾದು, ಮೈಸೂರು, ಧಾರವಾಡ, ಬೆಂಗಳೂರು ಮೊದಲಾದ "ಆಖಿಲ ಭಾರತ ಆಕಾಶ ವಾಣಿ"ಯ ಕೇಂದ್ರಗಳಿಂದ ಇವರ ಕೃತಿಗಳು ಬಹು ಸಂಖ್ಯೆಯಲ್ಲಿ ಬಿತ್ತರಿಸಲ್ಪಟ್ಟಿವೆ.

ಹರಪನಹಳ್ಳಿ, ಮೈಸೂರು ಮೊದಲಾದ ಕಡೆಗೆ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಗಳ ವಿವಿಧ ಗೋಷ್ಠಿಗಳಿಗೆ ಅಧ್ಯಕ್ಷರಾಗಿದ್ದರು. ಹೈದರಾಬಾದು ಕರ್ನಾಟಕ ಸಾಹಿತ್ಯ ಪರಿಷತ್ತು ಮತ್ತು ಸಮ್ಮೇಳನಗಳ ಅಧ್ಯಕ್ಷರಾಗಿದ್ದರು. ರಾಯಚೂರು ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ನಾಡಹಬ್ಬ ಮತ್ತು ಇತರ ಸಂದರ್ಭಗಳಲ್ಲಿ ನಾಡಿನ ಉದ್ದಗಲಕ್ಕೂ ಸಂಚರಿಸಿ ಉಪನ್ಯಾಸಗಳನ್ನಿತ್ತಿರುವರು. ಲೆಕ್ಕವಿಲ್ಲದಷ್ಟು ಕವಿಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. ತಾಂಡೂರಲ್ಲಿ "ಪಂಚಭಾಷಾ ಕವಿ ಸಮ್ಮೇಳನ"ದ ಅಧ್ಯಕ್ಷರಾಗಿದ್ದರು. ಎಲ್ಲೆಲ್ಲಿಯೂ ಅವರ ವ್ಯಕ್ತಿತ್ವದ ವೈಶಿಷ್ಟ್ಯ ಎದ್ದು ಕಾಣುವುದು. ಅವರು ಭಾಷಣಮಾಡಲು ತೊಡಗಿದರೆ ಸಾಕ್ಷಾತ್ ಸರಸ್ವತಿಯೇ ನಿರರ್ಗಳವಾಗಿ ಮಾತನಾಡುವಳು. ಆ ವಾಕ್ ವಿಜೃಂಭಣೆ ಅದ್ಭುತವಾದುದು ! ತತ್ತ್ವಶಾಸ್ತ್ರ, ಸಾಹಿತ್ಯ, ಕಾವ್ಯ, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಇತ್ಯಾದಿ ಯಾವುದೇ ವಿಷಯವಿದ್ದರೂ ಸಮಾನ ಪ್ರಭುತ್ವದಿಂದ ಅವರು ಉಪನ್ಯಾಸ ಮಾಡುವರು.

'ಬಸವ ಸಮಿತಿ'ಯೊಡನೆ ಅವರು ಬಹಳ ಸಮೀಪದ ಸಂಬಂಧ ಹೊಂದಿರುವರು. ಅಲ್ಲಿಯ ಮುಖಪತ್ರಿಕೆಯೊಂದರ ಸಂಪಾದಕರೂ ಅವರಾಗಿರುವರು. ಬೆಂಗಳೂರಿನ ಪ್ರಸಿದ್ಧ ಕನ್ನಡ ದಿನಪತ್ರಿಕೆಯೊಂದರ ಸಂಪಾದಕರಾಗಿದ್ದರು. ಪತ್ರಿಕಾ ವ್ಯವಸಾಯದಲ್ಲಿ ಅವರ ಸೇವೆ ಗಮನಾರ್ಹವಾಗಿದೆ.

ಶ್ರೀಮಾನ್ ಪುರಾಣಿಕರ ಕೌಟುಂಬಿಕ ಜೀವನ ಸಮೃದ್ಧವೂ ಸಂತೃಪ್ತವೂ ಆಗಿದೆ. ಪಂಡಿತ ಕಲ್ಲಿನಾಥ ಶಾಸ್ತ್ರಿಗಳು ಮತ್ತು ಪೂಜ್ಯರಾದ ದಾನಮ್ಮನವರು ಎಲ್ಲ ರೀತಿಯಿಂದ ಹಿರಿಯರಾದ ತಂದೆ ತಾಯಿಗಳು. ಅವರು ಸದಾಚಾರ ಸಂಪನ್ನರು. ಧರ್ಮಭೀರುಗಳು. ದೇವರಲ್ಲಿ ಗುರುಗಳಲ್ಲಿ ಅಪಾರ ಭಕ್ತಿಯುಳ್ಳವರು. ಶ್ರೀ ಸಿದ್ಧಯ್ಯನವರ ವ್ಯಕ್ತಿತ್ವದ ಬೆಳೆವಣಿಗೆಗೆ ಅವರಿಬ್ಬರ ಸಂಪೂರ್ಣ ಆಶೀರ್ವಾದವೇ ಕಾರಣ. ಇವರ ಇಬ್ಬರು ತಮ್ಮಂದಿರು ಶ್ರೀ ಅನ್ನದಾನಯ್ಯ ಪುರಾಣಿಕರು ಮತ್ತು ಶ್ರೀ ಬಸವರಾಜ ಪುರಾಣಿಕರು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಬೆಳೆದು ಗಣ್ಯರಾಗಿದ್ದಾರೆ. ಒಬ್ಬರು ಬಿ. ಕಾಂ., ಎಲೆಲ್.ಬಿ. ಆಗಿ ಬೆಂಗಳೂರಲ್ಲಿ ಎಡ್ವೊಕೇಟ್‌ರಾಗಿರುವರು. ಇನ್ನೊಬ್ಬರು ಅಮೆರಿಕೆಯಲ್ಲಿ ಎಂಜಿನಿಯರಿಂಗ್‌ದಲ್ಲಿ ಉಚ್ಚ ಶಿಕ್ಷಣ ಪಡೆದುಬಂದು ಬಾಗಿಲುಕೋಟೆಯ ಬಸವೇಶ್ವರ ಎಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿರುವರು. ಇವರ ಸಹೋದರಿ ಶರಣಮ್ಮನವರು ತಮ್ಮ ಶ್ರೇಷ್ಠ ನಡೆನುಡಿಯಿಂದಲೂ ಅತ್ಯುತ್ತಮ ಕುಟುಂಬ ಜೀವನದಿಂದಲೂ ಇವರ ವಂಶಕ್ಕೆ ಕೀರ್ತಿಪ್ರಾಯರಾಗಿರುವರು. ಇವರ ಮಕ್ಕಳು ಶ್ರೀಮತಿ ವಿಜಯಲಕ್ಷ್ಮಿ, ಶ್ರೀಮತಿ ಶಿವಗೀತಾ, ಶ್ರೀಮತಿ ಭಾರತಿ ಮತ್ತು ಶ್ರೀ ಪ್ರಸನ್ನಕುಮಾರ ಅವರು ಉನ್ನತ ಪದವೀಧರರಾಗಿ, ದೊಡ್ಡ ಗೌರವದ ಕುಟುಂಬಗಳ ಒಡೆಯರಾಗಿ ಶೋಭಿಸುತ್ತಿದ್ದಾರೆ. ಈ ಎಲ್ಲ ಘನತೆಗೆ ಕಾರಣರಾದವರು ಪೂಜ್ಯರಾದ ಶ್ರೀಮತಿ ಗಿರಿಜಾದೇವಿಯವರು. ಶ್ರೀ ಪುರಾಣಿಕರು ಅಧಿಕಾರಿಗಳಾಗಿ ಸಾಹಿತಿಗಳಾಗಿ ಕವಿಗಳಾಗಿ ಯಶಸ್ಸು ಪಡೆಯಬೇಕಾದರೆ ಪೂಜ್ಯರಾದ ಅಕ್ಕನವರ ನಿರಂತರ ಪರಿಶ್ರಮವೇ ಕಾರಣ. ಅವರು ಧಾರವಾಡದವರು. ಸುಶಿಕ್ಷಿತರು. ವಿಹಾಹದ ನಂತರ ಅವರು ನಿಜಾಂ ಸ್ಟೇಟಿನ ಪರಿಸರಕ್ಕೆ ಹೊಂದಿಕೊಂಡರಲ್ಲದೆ, ಶ್ರೀ ಪುರಾಣಿಕರಂಥ ಮೇಧಾವಿಗಳ ಸರ್ವಾಂಗೀಣ ಅಭ್ಯುದಯಕ್ಕೆ ಬೆಂಬಲಿಗರಾದರು. ಕನ್ನಡ, ಇಂಗ್ಲಿಷ್, ಉರ್ದು, ಹಿಂದಿ, ತೆಲುಗು ಮತ್ತು ಇತರ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುವರು. ಆಯಾ ಸಾಹಿತ್ಯವನ್ನೂ ಆಳವಾಗಿ ಬಲ್ಲವರಾಗಿದ್ದಾರೆ. ಕೇಂದ್ರ ಮಂತ್ರಿಗಳಾಗಿದ್ದ ಶ್ರೀಮತಿ ಸರೋಜಿನಿ ಮಹಿಷಿ ಮೊದಲಾದವರು ಓದುವಾಗ ಇವರ ಒಡನಾಡಿಗಳು. ಹೀಗೆ ಸಮರ್ಪಕವಾದ ದಾಂಪತ್ಯ ಜೀವನವನ್ನು ಪಡೆದುದರಿಂದಲೇ ಶ್ರೀ ಸಿದ್ಧಯ್ಯ ಪುರಾಣಿಕರು "ಇಳೆಯುಗಲ ಮುಗಿಲಗಲ ಮಿಗೆಯಗಲ" ಬೆಳೆಯಲಿಕ್ಕೆ ಸಾಧ್ಯವಾಯಿತು. ಲೋಕಜೀವನದಲ್ಲಿ ಇಂಥ ಉದಾಹರಣೆಗಳು ಅಪೂರ್ವ.

ದ್ಯಾಂಪುರವು ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲೂಕಿನ ಒಂದು ಚಿಕ್ಕ ಹಳ್ಳಿ. ಅಲ್ಲಿ ಮತ್ತು ಇತರ ಕಡೆಗೆ ಇವರ ಬಂಧುಗಳು ಬಹಳ ಜನರಿದ್ದಾರೆ. ಚೆನ್ನಕವಿಗಳ ವಂಶಜರು, ಕಳಕಯ್ಯನವರ ಮನೆತನದವರು ಬಹಳ

ಮುಂದುವರಿದಿರುವರು. ಅವರಿಗೆ "ಕಳಕೆ ಒಡೆಯರ ಮಠ"ದವರೆಂದು ಕರೆಯುವರು. ಚೆನ್ನಕವಿಗಳ ಮಕ್ಕಳೊಬ್ಬರು ನೀಲಕಂಠಯ್ಯನವರು ಹುಬ್ಬಳ್ಳಿಯಲ್ಲಿ ಡಾಕ್ಟರರಾಗಿದ್ದಾರೆ. ಕಳಕಯ್ಯನವರ ಮತ್ತು ಚೆನ್ನಯ್ಯನವರ ಮಕ್ಕಳು ಜೋಡಬಸಯ್ಯನವರು, ಸಂಗಯ್ಯನವರು, ಮುರಿಗೆಯ್ಯನವರು, ವಿರೂಪಾಕ್ಷಯ್ಯನವರು, ಮಹಾರುದ್ರಯ್ಯನವರು ಬೇರೆ ಬೇರೆ ಸರಕಾರಿ ಕೆಲಸದಲ್ಲಿದ್ದಾರೆ. ಜೋಡಬಸವಯ್ಯನವರ ಮಗನೊಬ್ಬ ಪೋಲಿಸ್ ಇಲಾಖೆಯಲ್ಲಿ ಸಿ. ಐ. ಡಿ. ಅಧಿಕಾರಿ ಆಗಿದ್ದಾನೆ.

ಶ್ರೀ ಸಿದ್ಧಯ್ಯನವರ ಸಾಧನೆ ಸಿದ್ಧಿ ಇವುಗಳ ಹರಹು ಬಹಳ ದೊಡ್ಡದು. ಅವುಗಳನ್ನು ಚಿಕ್ಕಲೇಖನದಲ್ಲಿ ಅಳವಡಿಸುವುದು ಸಾಧ್ಯವೇ ಇಲ್ಲ. ತಮ್ಮ ಮನೆತನಕ್ಕೆ, ತಮ್ಮ ನಾಡಿಗೆ, ತಮ್ಮ ರಾಷ್ಟ್ರಕ್ಕೆ, ಮಾನವಕುಲಕ್ಕೆ ಗೌರವ ತರುವ ರೀತಿಯಲ್ಲಿ ಅವರು ಕಾರ್ಯ ಮಾಡಿದ್ದಾರೆ. ಶ್ರೀ ಪುರಾಣಿಕರು ಸುದೀರ್ಘ ಆಯುರಾರೋಗ್ಯ ಭಾಗ್ಯಗಳನ್ನು ಪಡೆಯಲಿ. ಅವರಿಂದ ಇನ್ನೂ ದೊಡ್ಡ ದೊಡ್ಡ ಸಾಹಿತ್ಯಿಕ ಕೃತಿಗಳು ಹೊರಬರಲಿ. ಇದೀಗ ಅವರು ಕಲ್ಕತ್ತೆಯ ಹನ್ನೊಂದು ಸಾವಿರ ರೂಪಾಯಿಗಳ ಬಹುಮಾನಗಳನ್ನು ಪಡೆದಿದ್ದಾರೆ. ಜ್ಞಾನಪೀಠಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಇತರ ಸರ್ವೋಚ್ಚ ಪ್ರಶಸ್ತಿಗಳು ಅವರಿಗೆ ಬೇಗ ಸಿಗಲಿ ಎಂದು ಪ್ರಾರ್ಥಿಸುತ್ತೇನೆ.

ಶಿವಮಸ್ತು ಸರ್ವಜಗತಾಂ
ಪರಹಿತ ನಿರತಾ ಭವಂತು ಭೂತಗಣಾಃ
ದೋಷಾಃ ಪ್ರಯಾಂತು ನಾಶಂ
ಸರ್ವತ್ರ ಸುಖೀ ಭವತು ಲೋಕಃ ॥ □

ಮಾನವರು ಕೆಟ್ಟಾರು
ಮಾನವತೆ ಉಳಿದೀತು !
ಕವಿ ದೇಹವಿಟ್ಟಾನು
ಕವಿತೆಯುಳಿದೀತು !
ಕೃತಿಗಿಳಿಯದಿದ್ದರೂ
ಕನಸೊಂದು ಉಳಿದೀತು !
ಅದನುಂಡೆ ಬರಲಿರುವ
ಮನಸು ಬೆಳೆದೀತು !

ಕಲ್ಲೋಲಮಾಲೆ, ಪು. 61

# ಸಿದ್ಧಯ್ಯ ಪುರಾಣಿಕ ದಂಪತಿಗಳು

● ಎ. ಪಂಕಜ

ತಹಸೀಲ್ದಾರರಾಗಿ, ಅಸಿಸ್ಟೆಂಟ್ ಕಮೀಷನರ್ ಆಗಿ, ಅಂಡರ್ ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿಗಳಾಗಿ, ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕರಾಗಿ, ಕೊಡಗಿನ ಡೆಪ್ಯುಟಿ ಕಮೀಷನರ್ ಆಗಿ, ಟ್ರಾನ್ಸ್‌ಪೋರ್ಟ್ ಕಮೀಷನರ್ ಆಗಿ, ಲೇಬರ್ ಕಮೀಷನರ್ ಆಗಿ, ಹಿರಿಯ ಕವಿ ಆಗಿ, ಸಾಹಿತಿ ಆಗಿ ಸಾರ್ಥಕ ಜೀವನವನ್ನು ನಡೆಸುತ್ತಿರುವವರು ಶ್ರೀ ಸಿದ್ಧಯ್ಯ ಪುರಾಣಿಕರು. ಅಧಿಕಾರದಲ್ಲಿದ್ದುಕೊಂಡು ಸಾಹಿತ್ಯಸೇವೆ ನಡೆಸುವುದು ಬಹಳ ಅಪರೂಪವಾದ ಸಂಗತಿ. ಇಷ್ಟೊಂದು ಹಿರಿಮೆ-ಗರಿಮೆಗಳು ಒಂದೇ ವ್ಯಕ್ತಿಯಲ್ಲಿ ಇರಲು ಸಾಧ್ಯವೆ? ಎಂಬ ಪ್ರಶ್ನೆ ಏಳುವುದೂ, ಅನುಮಾನ ಬರುವುದೂ ಸಹಜ. ಈ ಪ್ರತಿಭೆ ಹೇಗೆ ಸಾಧ್ಯವಾಯಿತು ಎಂದು ಅವರನ್ನು ಕೇಳಿದಾಗ, 'ನಾನು ಸಾಹಿತಿ ಆಗಿ ಬೆಳೆಯುವುದಕ್ಕೆ, ಮತ್ತು ಅಧಿಕಾರದಲ್ಲಿ ಪ್ರಾಮಾಣಿಕನಾಗಿ ಉಳಿಯಲಿಕ್ಕೆ, ಕಾರಣ ನನ್ನ ಹೆಂಡತಿಯೇ ಹೊರತು ಬೇರೆ ಯಾರೂ ಇಲ್ಲ. ನನ್ನ ಸಾಹಿತ್ಯಕ್ಕೆ ಸ್ಫೂರ್ತಿಯ ನೆಲೆ ಆಗಿ, ನನಗೆ ಶಕ್ತಿ ಆಗಿ ಬೆಂಬಲವಿತ್ತಿದ್ದಾಳೆ ಅವಳು. ನನ್ನ ಲೇಖನಿಗೆ ಚೈತನ್ಯ ತುಂಬಿದವಳೂ ಅವಳೆ. ನನ್ನ ಸರ್ಕಾರಿ ಕಛೇರಿಗಳ ಕೆಲಸವನ್ನು ನಿರ್ಯೋಚನೆ ನಡೆಸಿಕೊಂಡು ಹೋಗಲು ಸಹಕರಿಸಿದವಳೂ ಅವಳೆ' ಎಂದರು.

ಗೃಹಸ್ಥ ಜೀವನಕ್ಕೆ ಕಾಲಿಟ್ಟ ಹೊಸದರಲ್ಲಿ ಸಂಸಾರ ಸ್ವರ್ಗವಾಗಿರುತ್ತೆ. ಅದೇ ಸಂಸಾರ ಬೆಳೆದಂತೆ ಆರ್ಥಿಕ ಮುಗ್ಗಟ್ಟಿನಿಂದಲೇ ಪತಿಪತ್ನಿಯರು ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳದೆ ಆ ವೈಮನಸ್ಸಿನಿಂದಲೋ, ಸ್ವತಂತ್ರವಾಗಿದ್ದವನಿಗೆ ಈ ಸಂಸಾರದ ಬೇಡಿಯ ಬಂಧನ ಎಂದೋ ಬೇಸರ ತರುತ್ತೆ. ದಿನ ಬೆಳೆದಂತೆ, ಅವನು ಕರ್ತವ್ಯದ ಕರೆಗೆ ಓಗೊಟ್ಟು ಯಾಂತ್ರಿಕವಾಗಿ ಜೀವನ ನಡೆಸುತ್ತಾನೆ. ಇಲ್ಲಿ ಸ್ವರ್ಗದ ಸುಖಕ್ಕಿಂತ ಕಷ್ಟದ ನೋವುಗಳೇ ಹೆಚ್ಚು ಕಂಡುಬರುವುದು ಮಾಮೂಲು. ಇದಕ್ಕೆ ಹೊರತಾದವರ ಸಂಖ್ಯೆ ಅತಿ ವಿರಳ. ಅಂತಹ ವಿರಳರಲ್ಲಿ ಶ್ರೀ ಸಿದ್ಧಯ್ಯ ಪುರಾಣಿಕರೂ ಒಬ್ಬರಾಗಿದ್ದಾರೆ.

ಸರ್ವಜ್ಞ ಕವಿಯ 'ಇಚ್ಛೆಯನರಿತು ನಡೆವ ಸತಿ ಇದ್ದರೆ, ಸ್ವರ್ಗಕ್ಕೆ ಕಿಚ್ಚು ಹಚ್ಚು' ಎಂಬ ಕವಿತೆಯ ಸಾಲನ್ನೇ ಸಿದ್ಧಯ್ಯ ಪುರಾಣಿಕರು ಪುನರುಕ್ತಿ ಮಾಡಿದರೆ ಅದರಲ್ಲಿ ವಿಶೇಷವೇನೂ ಇರಲಾರದು. ಅವರ ಸಂಸಾರ ಅಷ್ಟು ಸುಂದರವಾಗಿದೆ.

ನನಗೆ, ಧರ್ಮಸ್ಥಳದ ಸಾಹಿತ್ಯ ಸಮ್ಮೇಳನಕ್ಕೆ ಹೊರಟಾಗ ಸಹಪ್ರಯಾಣಿಕರಾಗಿದ್ದ ಸಿದ್ಧಯ್ಯ ಪುರಾಣಿಕರ ಪರಿಚಯವಾಯಿತು. ಅದುವರೆಗೂ ಅವರ ಕಾವ್ಯ ರಸಾಸ್ವಾದನೆ ಮಾಡಿದ್ದ ನನಗೆ ಆ ಕವಿ, ನಾಟಕಕಾರ, ಸಾಹಿತಿ, ಮೇಲು ಅಧಿಕಾರಿಯ ಪ್ರತ್ಯಕ್ಷ ಪರಿಚಯವಾದಾಗ ಇವರು ಇಷ್ಟು ಸರಳರೇ ಎಂದು ಯೋಚಿಸುವಂತಾಯ್ತು. ನನ್ನ ಆರೋಗ್ಯ ಅಷ್ಟಾಗಿ ಸರಿ ಇಲ್ಲವೆಂದು ತಿಳಿದು, ನನಗೆ ಇಂತಹ ಔಷಧಿ ತೆಗೆದುಕೊಳ್ಳಿ, ಅದರಿಂದ ನಿಮಗೆ ಕೂಡಲೇ ಗುಣಮುಖವಾಗುತ್ತೆ ಎಂದ ಪುರಾಣಿಕರ ಸಹೃದಯ, ಸರಳ ನಡೆ-ನುಡಿ ನಿಜವಾಗಿಯೂ ಮೆಚ್ಚಿಕೊಳ್ಳುವಂಥಹದು.

ಇತ್ತೀಚೆಗೆ ಸಾಹಿತ್ಯ ಪರಿಷತ್ತಿನಲ್ಲಿ ಸಿದ್ಧಯ್ಯ ಪುರಾಣಿಕ ದಂಪತಿಗಳನ್ನು ಭೇಟಿ ಆದಾಗ ಶ್ರೀಮತಿ ಗಿರಿಜಾ ಪುರಾಣಿಕರನ್ನು ಮತ್ತೆ ಮತ್ತೆ ನೋಡಬೇಕು ಎನ್ನುವಂತಾಯ್ತು. ರೇಷ್ಮೆ ಸೀರೆ, ಕೈತುಂಬ ಬಳೆ, ಹಣೆಯಲ್ಲಿ

ದೊಡ್ಡ ಕುಂಕುಮ ಇವುಗಳಿಂದ ಶೋಭಿತರಾಗಿದ್ದರು ಗಿರಿಜಾದೇವಿ. ಆಗ ನನಗೆ ನಿಜವಾದ ಗೌರಮ್ಮನನ್ನು ಪ್ರತ್ಯಕ್ಷ ಕಂಡಂತೆ ಆಯಿತು.

ರಾಯಚೂರಿನ ಸಿದ್ಧಯ್ಯ ಪುರಾಣಿಕರು ೧೯೪೪ ರಲ್ಲಿ ಕನ್ಯಾರ್ಥಿ ಆಗಿ ಧಾರವಾಡಕ್ಕೆ ಹೋದಾಗ, ಅಲ್ಲಿನ ಅವರ ಪರಿಚಿತರಾದ ಮೃತ್ಯುಂಜಯ ಸ್ವಾಮಿಗಳು, 'ಹೇಗಿದ್ದರೂ ಬಂದಿರುವಿರಿ, ಈ ಹೆಣ್ಣನ್ನೂ ನೋಡಿಕೊಂಡು ಹೋಗಿ, ನಿಮಗೆ ಒಪ್ಪಿಗೆ ಆದರೆ ಮುಂದಿನ ಮಾತು' ಎಂದು ಹೇಳಿ ಗಿರಿಜೆಯನ್ನು ತೋರಿಸಿದರಂತೆ, ಪ್ರಥಮ ದರ್ಶನದಲ್ಲೇ ಸಿದ್ಧಯ್ಯ ಪುರಾಣಿಕರಿಗೆ, ಈ ಹೆಣ್ಣಾದರೆ ನನ್ನ ಬಾಳ ಸಂಗಾತಿ ಆಗಲು ಅರ್ಹಳು ಎಂಬ ಭಾವನೆ ಬಂತಂತೆ ಬೇರೆ ಯಾವ ಹೆಣ್ಣನ್ನೋ ನೋಡಲು ಹೋಗಿದ್ದ ಸಿದ್ಧಯ್ಯ ಪುರಾಣಿಕರು ಗಿರಿಜಳನ್ನು ಕೈಹಿಡಿಯಲು ಸಮ್ಮತಿಸಿದ್ದಾಗಿ ಹೇಳಿದರಂತೆ. ಮೂವತ್ತಾರು ವರ್ಷಗಳ ಹಿಂದಿನ ಘಟನೆಯನ್ನು ನೆನೆದು ಹೇಳಿದಾಗ ಆ ದಂಪತಿಗಳೀರ್ವರು ಹಿಂದಿನ ಮಧುರಸ್ಮೃತಿಯಲ್ಲಿ ಮೈಮರೆತು ಪುಲಕಿತರಾಗಿದ್ದರು. ಮದುವೆ ಆದ ದಿನದಿಂದ ನನ್ನ ಸಹಧರ್ಮಿಣಿ ಗಿರಿಜೆ ನನಗೆ ತಕ್ಕ ಸತಿ ಆಗಿ ನನ್ನ ಬಾಳನ್ನು ಬೆಳಗಿದ್ದಾಳೆ ಎಂಬ ಮಾತನ್ನು ಕಾವ್ಯಾನಂದರು ತಮ್ಮ ಕವನದ ಸಾಲುಗಳಲ್ಲೇ ಹೇಳಿಕೊಂಡಿದ್ದಾರೆ.

ಗಿರಿಜಾ ಪುರಾಣಿಕರಿಗೆ ಕಾರಣಾಂತರಗಳಿಂದ ಕಾಲೇಜಿನ ವ್ಯಾಸಂಗ ಪಡೆದು ಡಿಗ್ರಿಯೊಂದನ್ನು ತಮ್ಮ ಹೆಸರಿನೊಂದಿಗೆ ಸೇರಿಸಿಕೊಳ್ಳಲು ಆಗದೆ ಹೋಯಿತು. ಆದರೆ ಗೃಹಿಣಿಯ ಪಟ್ಟವೇರಿ, ಆ ಸಂಸಾರದ ಕಾಲೇಜಿನಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ ಶ್ರೀಮತಿ ಪುರಾಣಿಕರು, ಎಂದರೆ ತಪ್ಪಾಗಲಾರದು. ಸಿದ್ಧಯ್ಯ ಪುರಾಣಿಕರ ಅವಿಭಕ್ತಕುಟುಂಬದಲ್ಲಿ ಕಾಲಿಟ್ಟು ಅತ್ತಿಗೆ ನಾದಿನಿ, ಭಾವ, ಮೈದುನ, ಎಲ್ಲರ ವಿಶ್ವಾಸ ಗಳಿಸಿ ಕುಲೀನ ಮನೆತನದ ಹೆಣ್ಣು ಗಿರಿಜೆ ಎಂದು ಅತ್ತೆ ಮಾವಂದಿರಿಂದ ಹೊಗಳಿಸಿಕೊಂಡರು.

ನಿಮ್ಮ ದಾಂಪತ್ಯದಲ್ಲಿ ಎಂದಾದರೂ, ಏನಾದರೂ ಸಣ್ಣಪುಟ್ಟ ಕಲಹಗಳು, ವಿರಸದ ಘಟನೆಗಳು ಉಂಟೆ ಎಂದು ಪುರಾಣಿಕರನ್ನು ಕೇಳಿದಾಗ, ಅವರು ಅದಕ್ಕೆ ಮೌನವಾಗಿ ಸ್ವಲ್ಪಕಾಲ ಯೋಚಿಸಿದ ನಂತರ, "ಹುಂ, ಚಿಕ್ಕಮಕ್ಕಳನ್ನ ಬೆಳೆಸುವ ರೀತಿ ಸರಿಯಲ್ಲ, ಅವನ್ನು ಮುದ್ದುಮಾಡಿ ಹಾಳುಮಾಡ್ತಿ" ಎಂದು ಆಗಾಗ ಹೇಳುತ್ತಿದ್ದೆ. ಆದರೆ ಇವಳು, "ತೀರಾ ಸಣ್ಣವು, ಅವಕ್ಕೇನು ಈಗ ತಿಳಿದಾವು, ಮುಂದೆ ಬೆಳೆದು ದೊಡ್ಡವರಾಗುತ್ತಿದ್ದ ಹಂಗೆ, ಬುದ್ಧಿ ಬಂದರೆ ಎಲ್ಲಾ ಸರಿಹೋದೀತು" ಎಂತ ಹೇಳ್ತಿದ್ದಳು.ಆಕೆ ಹೇಳಿದಂತೆ ಈಗ ನಡೆದಿದೆ ನೋಡಿ. ಅವಳ ಮಾತು ಹುಸಿ ಆಗಲಿಲ್ಲ ಎಂದರು. ಅವರಿಗೆ ತಮ್ಮ ಹೆಂಡತಿಯ ಮೇಲಿನ ಅಭಿಮಾನದ ಆಳ ಎಷ್ಟು ಎನ್ನುವುದು ಇದರಿಂದ ಗೊತ್ತಾಗುತ್ತೆ.

ಸಿರಿ ಬಂತೆಂದು ಹಿಗ್ಗಿಲ್ಲ, ಕಷ್ಟ ಬಂದಾಗ ಕುಗ್ಗಿಲ್ಲ. ಏರುಪೇರಿಲ್ಲದ ಒಂದೇ ಸಮನೆ ಹರಿಯುವ ನೀರಿನಂತೆ ಗಿರಿಜಾದೇವಿಯವರ ಸ್ವಭಾವ ಅನ್ನುವುದಕ್ಕೆ ಅನೇಕ ದೃಷ್ಟಾಂತಗಳನ್ನು ಹೇಳಿದರು ಸಿದ್ಧಯ್ಯ ಪುರಾಣಿಕರು.

ರಜಾಕಾರರ ಹಾವಳಿಯ ಕಾಲದಲ್ಲಿ, ಗರ್ಭವತಿ ಆಗಿದ್ದ ಗಿರಿಜಾ ಅವರು, ಸಣ್ಣಮಕ್ಕಳನ್ನು ಇಟ್ಟುಕೊಂಡು ಒಂಟಿಯಾಗಿ ಪುಣೆಯಲ್ಲಿದ್ದುಕೊಂಡು ಗುಲ್ಬರ್ಗದಲ್ಲಿದ್ದ ಗಂಡನಿಗೆ ಧೈರ್ಯ ತುಂಬುತ್ತಿದ್ದರು. ಸಂಸಾರ ಎಂದೂ ಹೊರೆ ಆಗದಂತೆ ನಡೆಸಿಕೊಂಡು ಹೋದವರು ಶ್ರೀಮತಿ ಗಿರಿಜ. ಎಲ್ಲಾ ಜವಾಬ್ದಾರಿಯನ್ನು ತಾವು ಹೊತ್ತು ಸಾಹಿತ್ಯ ಸೃಷ್ಟಿಗೆ, ಕಾವ್ಯದ ರಸಗಂಗೆ ಹರಿಯಲು ಪತಿಗೆ ಅನುವು ಮಾಡಿಕೊಟ್ಟವರು ಗಿರಿಜಾದೇವಿ. ಆರ್ಥಿಕ ಮುಗ್ಗಟ್ಟಿದ್ದಾಗ ಹೊರಗಿನ ಸಮಾಜಕ್ಕೆ ಅದನ್ನು ತೋರಗೊಡದೆ, ಬಂದವರನ್ನು ಮರ್ಯಾದೆ ಮಾಡಿ ಆದರದಿಂದ ಉಪಚರಿಸಿ 'ಸೈ' ಎನಿಸಿಕೊಂಡವರೂ ಗಿರಿಜಾದೇವಿ. ಧಾರಾಳವಾದ ಮನಸ್ಸು, ಉದಾರ ಬುದ್ಧಿಯನ್ನು ಹೊಂದಿರುವ ಗಿರಿಜಾದೇವಿಯವರು ಎಂದೂ ತನಗಾಗಿ ಏನನ್ನೂ ಆಶಿಸಿದವರಲ್ಲ.

ನಿರಪೇಕ್ಷಿತ ಬುದ್ಧಿ, ಸೇವಾ ಮನೋಭಾವನೆಯನ್ನು ಹೊಂದಿರುವ ಶ್ರೀಮತಿ ಗಿರಿಜಾದೇವಿಯವರು ನಗು ನಗುತ್ತಲಿದ್ದು, ನೋವಿನ ನೆರಳೂ ತನ್ನ ಪತಿಗೆ ಸೋಕದಿರಲೆಂದು ಆಶಿಸಿದ್ದಾರೆ, ಅದಕ್ಕಾಗಿ ಪ್ರಯತ್ನಿಸಿ ಜಯಿಸಿದ್ದಾರೆ.

ಸಿದ್ದಯ್ಯ ಪುರಾಣಿಕ ದಂಪತಿಗಳಂತೆ ಆದರ್ಶ ದಂಪತಿಗಳು ಎಲ್ಲರ ಮನೆಯಲ್ಲೂ ಇರುವಂತಾದರೆ ಎಷ್ಟು ಚೆನ್ನ!

□

ಬೆಳೆವುದದು ಭೂಮಿಗುಣ
ಬೆಳೆದು ಬೆಳಕಾಗುವುದೆ ಬಾಳಗುಣವು
ಮೊಳೆವುದದು ಬೀಜಗುಣ
ಬೆಳೆದು ಸವಿಯಾಗುವುದೆ ಕಾಳಗುಣವು
ಉರಿವುದದು ಅಗ್ನಿಗುಣ
ಉರಿದು ಬೆಳಕಾಗುವುದೆ ಜ್ಯೋತಿಗುಣವು
ಸವಿಯಹುದು ನುಡಿಯಗುಣ
ಸವಿಯು ಬೆಳಕಾಗುವುದೆ ಗೀತಗುಣವು

—ಕಲ್ಲೋಲಮಾಲೆ, ಪು. 13

ಬಾಲ್ಯ—'ಹಣ್ಣು, ಹಣ್ಣು' ಎಂದಿತು ;
ತಾರುಣ್ಯ—'ಹೆಣ್ಣು, ಹೆಣ್ಣು' ಎಂದಿತು ;
ವಾರ್ಧಕ್ಯ—'ಹೊನ್ನು, ಹೊನ್ನು' ಎಂದಿತು ;
ಮುಪ್ಪು—'ಮಣ್ಣು, ಮಣ್ಣು' ಎಂದಿತು !
ಇದುವರೆಗು ನೀನು ತುಳಿದೆ ಮಣ್ಣನ್ನು
ಇನ್ನೇನು ಮಣ್ಣು ತುಳಿಯಲಿದೆ ನಿನ್ನನ್ನು !

—ಕಲ್ಲೋಲಮಾಲೆ, ಪು. 40

# ಮನೆಯವರ ಅನುಭವಗಳು

# ನೆನಪುಗಳೊಡನೆ ನೇಯ್ದ ಚಿತ್ರ

● ವಿಜಯಾ ನಂದೀಶ್ವರ

ಸುಮಾರು ಹತ್ತು ವರ್ಷಗಳ ಹಿಂದಿನ ಮಾತು. ಅಪ್ಪಾಜಿಯವರು ಬೆಳಗಾಂ ಜಿಲ್ಲಾಧಿಕಾರಿಗಳಾಗಿದ್ದರು. ನಾವು ಸೌದತ್ತಿಯಿಂದ ಬೆಂಗಳೂರಿಗೆ ವರ್ಗವಾಗಿ ರಾಜಾಜಿನಗರದಲ್ಲಿ ಮನೆ ಮಾಡಿದ್ದೆವು. ಪಕ್ಕದ ಮನೆಯಲ್ಲಿ ಬೆಳಗಾಂಕರ ದಂಪತಿಗಳು ವಾಸವಾಗಿದ್ದರು. ಬಂದ ಹೊಸದರಲ್ಲಿಯೇ ಅವರ ಪರಿಚಯುವಾಗಿತ್ತು. ಶ್ರೀ ಬೆಳಗಾಂಕರರ ತಂಗಿ ಲೀಲ ಕಿತ್ತೂರಿನಿಂದ ಅಣ್ಣನ ಮನೆಗೆ ಬಂದಿದ್ದರು. ಲೀಲಾಳಿಗೆ ಶ್ರೀಮತಿ ಬೆಳಗಾಂಕರವರು "ಸಿದ್ಧಯ್ಯ ಪುರಾಣಿಕರ ಮಗಳು ನಮ್ಮ ಪಕ್ಕದ ಮನೆಗೆ ಬಂದಿದ್ದಾರೆಂದು" ತಿಳಿಸಿದರು. ಅದಕ್ಕೆ ಲೀಲಾ "ವೈನಿ, ಬೆಳಗಾಂ ಜಿಲ್ಲಾಧಿಕಾರಿಯಾಗಿರುವ ಸಿದ್ಧಯ್ಯ ಪುರಾಣಿಕರ ಮಗಳೋ ಅಥವಾ ಸಾಹಿತಿ ಸಿದ್ಧಯ್ಯ ಪುರಾಣಿಕರ ಮಗಳೋ ?" ಎಂದು ಕೇಳಿದರು. ಇಬ್ಬರೂ ಒಬ್ಬರೇ ಎಂದು ವೈನಿ ಎಷ್ಟು ವಾದಿಸಿದರೂ ಲೀಲಾ ನಂಬಲಿಲ್ಲ. ಅದು ಅಸಾಧ್ಯವೆಂದೇ ಅವರ ಭಾವನೆ. ಕೊನೆಗೆ ಅತ್ತಿಗೆ ನಾದಿನಿ ತಮ್ಮ ತಮ್ಮ ವಾದ ಸಮರ್ಥಿಸಲು ನಮ್ಮ ಮನೆಗೆ ಬಂದರು. ಆಡಳಿತ ರಂಗದಲ್ಲಿ ಮತ್ತು ಸಾಹಿತ್ಯ ರಂಗದಲ್ಲಿ ಏಕಪ್ರಕಾರವಾಗಿ ಪ್ರಸಿದ್ಧರಾಗಿರುವ ವ್ಯಕ್ತಿ ಒಬ್ಬರೇ ಎಂದು ಲೀಲಾಗೆ ಮನವರಿಕೆಯಾದಾಗ ಆಶ್ಚರ್ಯಚಕಿತರಾಗಿ ನನ್ನನ್ನು ನೋಡಿದಾಗ ನನ್ನ ಹೆಮ್ಮೆಗೆ ಎಣೆಯುಂಟೆ ? ಜೀವನದಲ್ಲಿ ಒಂದು ಸಿದ್ಧಿಯನ್ನು ಸಾಧಿಸುವುದೇ ಅಪರೂಪವಾಗಿರುವಾಗ ಎರಡರಲ್ಲಿಯೂ ತಮ್ಮ ಹಿರಿಮೆಯುನ್ನು ತೋರಿ ತಮ್ಮ ಹೆಸರನ್ನು ಸಾರ್ಥಕಪಡಿಸಿಕೊಂಡಿರುವ ಅಪ್ಪಾಜಿಯವರನ್ನು ನೆನೆದಾಗಲೆಲ್ಲಾ ನನ್ನ ಹೃದಯ ತುಂಬಿ ಬರುತ್ತದೆ.

ಅವರ ಅಧಿಕಾರದ ಅವಧಿಯಲ್ಲಿ ಎಷ್ಟು ಇಲಾಖೆಗಳಲ್ಲಿ ಕೆಲಸ ಮಾಡಿದ್ದಾರೆಂದರೆ, ಬರೆಯುತ್ತ ಹೋದರೆ ಒಂದು ದೀರ್ಘ ವರದಿಯೇ ಆಗುತ್ತದೆ. ಯಾವ ಇಲಾಖೆಗೇ ಹೋಗಲಿ ಆ ಇಲಾಖೆಯ ಬಗ್ಗೆ ಲಭ್ಯ ಇರುವ ಮಾಹಿತಿಯನ್ನೆಲ್ಲಾ ಅರಿತುಕೊಂಡೇ ಕೆಲಸ ಪ್ರಾರಂಭ ಮಾಡುತ್ತಿದ್ದರು. ಜನರಿಗೆ ಅದರಲ್ಲಿಯೂ ಬಡವರಿಗೆ ಸಾಧ್ಯವಾದಷ್ಟು ಸಹಾಯುವಾಗುವಂಥ ಕೆಲಸಗಳಿಗೆ ಪ್ರಥಮ ಆದ್ಯತೆ ನೀಡುತ್ತಿದ್ದರು. ಕಾಯಕವೇ ಅವರ ಜೀವನದ ಉಸಿರಾಗಿದ್ದಿತು. ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ಅಪ್ಪಾಜಿ ಯಾರದೋ ಮುಂದೆ ತಮಾಷೆಯಾಗಿ ಹೇಳುತ್ತಿದ್ದುದು ಇನ್ನೂ ನೆನಪಿದೆ. "ನಾನು ಒಂದು ಕಸಬರಿಗೆ ಇದ್ದಂತೆ. ಯಾವ ಇಲಾಖೆಗೇ ಹೋಗಲಿ ಅಲ್ಲಿರುವ ಕೊಳೆಯನ್ನು ಶುದ್ಧಿ ಮಾಡುವುದೇ ನನ್ನ ಕಾಯಕವೆಂದು ನಂಬಿ ಕೆಲಸ ಪ್ರಾರಂಭ ಮಾಡುತ್ತೇನೆ." ಆ ಮಾತು ಕೇಳಿದಾಗ ನನ್ನ ಹುಡುಗುತನದ ಬುದ್ಧಿಗೆ ಅಪ್ಪಾಜಿ ತಮ್ಮನ್ನು ಕಸಬರಿಗೆಗೆ ಹೋಲಿಸಿಕೊಂಡರಲ್ಲಾ ಎಂದು ಕೋಪ ಬಂದಿತ್ತು. ಆದರೆ ಈಗ ಜೀವನದ ಅನುಭವಗಳಿಂದ ಮನಸ್ಸು ಪಕ್ವವಾಗುತ್ತಿರುವ ಸಮುಯದಲ್ಲಿ ಎಂಥ ಉದಾತ್ತಧ್ಯೇಯುವನ್ನು ಎಂಥ ಸುಲಭ ಶಬ್ದಗಳಲ್ಲಿ ವ್ಯಕ್ತಪಡಿಸಿದ್ದರು ಎಂದು ನೆನೆದಾಗ ನನ್ನ ಆಗಿನ ಕೋಪಕ್ಕೆ ನಾಚಿಕೆಯಾಗುತ್ತದೆ. ಅವರ ವಚನಗಳಲ್ಲಿ ಇದೇ ತತ್ವ

ವನ್ನು, ಇದೇ ಭಾವವನ್ನು, ಇದೇ ವಿಚಾರವನ್ನು ಅಳವಡಿಸಿಕೊಂಡಿರುವುದನ್ನು ಕಾಣಬಹುದು.

ಅಪ್ಪಾಜಿ ಕಾರ್ಮಿಕ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದಾಗಿನ ವಿಷಯವಿದು. ಒಮ್ಮೆ ಅನೇಕ ವರ್ಗಗಳ ಕಾರ್ಮಿಕರ ದಿನಗೂಲಿಯನ್ನು ಹೆಚ್ಚಿಸಿ ಮನೆಗೆ ಬಂದು ನಮ್ಮೆಲ್ಲರಿಗೂ ಈ ಸಂತೋಷದ ವಿಷಯ ತಿಳಿಸಿದರು. ಆಗ ನಾನು "ಅಪ್ಪಾಜಿ, ನೀವು ಇಷ್ಟು ಕಷ್ಟಪಟ್ಟು, ಉದ್ಯಮದಾರರ ವೈರ ಕಟ್ಟಿಕೊಂಡು ಈ ಕೆಲಸ ಸಾಧಿಸಿದಿರಿ. ಆದರೆ ಕಾರ್ಮಿಕರಿಗೆ ಇದು ನೀವು ಮಾಡಿದ ಕೆಲಸವೆಂದು ಹೇಗೆ ತಿಳಿಯುವುದು ? ಇದರ ಶ್ರೇಯಸ್ಸೆಲ್ಲಾ ಕಾರ್ಮಿಕ ನಾಯಕರಿಗೆ ಹೋಗುವುದರಿಂದ ನಿಮಗೆ ಬಂದ ಲಾಭವೇನು ?" ಎಂದು ಕೇಳಿದೆ. ಆಗ ಅಪ್ಪಾಜಿ "ಬಡವರು ಹಾಡಿ ಹೊಗಳಲಿ ಎಂದು ನಾನು ಈ ಕೆಲಸ ಮಾಡಲಿಲ್ಲ. ದೇವರು ಬಡವರಿಗೆ ಉಪಕಾರ ಮಾಡುವ ಅವಕಾಶವನ್ನು ನೀಡಿರುವಾಗ ಅದನ್ನು ವ್ಯರ್ಥಮಾಡಲಿಲ್ಲವೆಂಬ ಆತ್ಮತೃಪ್ತಿ ಸಿಕ್ಕಿದೆ. ಅಷ್ಟೇ ಸಾಕು ನನಗೆ" ಎಂದು ಹೇಳಿದರು. ಬಡವರಿಗಾಗಿ ಮಿಡಿಯುವ ಅವರ ಹೃದಯದ ತುಡಿತವನ್ನು ಅವರ ಹಲವಾರು ವಚನಗಳಲ್ಲಿ ಮತ್ತು ಅವರ ಸಾಹಿತ್ಯದಲ್ಲಿ ಕಾಣಬಹುದು.

ಸಾಹಿತಿಯ ಮಗಳಾದುದಕ್ಕೋ ಏನೋ ನನಗೆ ಮೊದಲಿನಿಂದಲೂ ಪುಸ್ತಕ ಕಂಡರೆ ಪ್ರಪಂಚವನ್ನೇ ಮರೆಯುವಂತಹ ಸ್ವಭಾವ. ಯಾವ ಪುಸ್ತಕ ನೋಡಿದರೂ ಓದುವ ಲಾಲಸೆ. ಅದಕ್ಕೆ ಅಪ್ಪಾಜಿ 'ವಿಜಯಾಳಿಗೆ ಒಂದು ರದ್ದಿ ಕಾಗದ ಸಿಕ್ಕರೂ ಓದದೇ ಬಿಡಳು' ಎಂದು ಆಗಾಗ ನನ್ನನ್ನು ರೇಗಿಸುತ್ತಿರುತ್ತಾರೆ. ಆಗಾಗ ಮನೆಯಲ್ಲಿ ನಡೆಯುತ್ತಿದ್ದ ಕವಿಗಳ ಮೇಳ, ಸಾಹಿತಿಗಳ ಸಂಗಮ ಮತ್ತು ಮನೆಯಲ್ಲಿದ್ದ ವಿಶಾಲವಾದ ಪುಸ್ತಕ ಭಂಡಾರ ಎಲ್ಲಾ ಸೇರಿ ನನ್ನ ಮೇಲೆ ಎಷ್ಟು ಪರಿಣಾಮ ಮಾಡಿದ್ದುವೆಂದರೆ ನಾನೂ ಸಾಹಿತಿ ಆಗಬೇಕೆಂಬ ಹಂಬಲ ಹಿಂದೊಮ್ಮೆ ನನ್ನಲ್ಲಿ ತಲೆದೋರಿತ್ತು. ಅಪ್ಪಾಜಿಯವರು ನಿಸರ್ಗಪ್ರಿಯರು. ನಿಸರ್ಗದ ಚೆಲುವು, ನಲಿವು, ಒಲವುಗಳನ್ನು ತೀರ ಹತ್ತಿರದಿಂದ ಕಂಡಿದ್ದಾರೆ. ನಿಮಿಷಕ್ಕೊಂದು ನವೀನತೆ ತೋರುವ, ದಿವಸಕ್ಕೊಂದು ನವಜನ್ಮ ತಾಳುವ ಪ್ರಕೃತಿಮಾತೆಯ ಮಡಿಲಿನಲ್ಲಿ ಮೈ ಮರೆತ ಕೂಸಾಗಿದ್ದಾರೆ ಅವರು. ದೇವರ ದಯದಿಂದ ಕೇವಲ ಭಾರತವನ್ನೇ ಅಲ್ಲಾ ಪಾಶ್ಚಾತ್ಯ ದೇಶಗಳನ್ನೆಲ್ಲಾ ಸಂದರ್ಶಿಸಿದ ಸುಯೋಗ ಅವರದಾಗಿದೆ. ಆದರೂ ಅವರ ನಿಸರ್ಗದ ಆರಾಧನೆ ಸ್ವಲ್ಪವೂ ತಗ್ಗಿಲ್ಲ. ಈಗಲೂ ಪ್ರವಾಸಕ್ಕೆ ಹೊರಟರೆ, ಯಾವುದಾದರೂ ಒಂದು ಸುಂದರ ದೃಶ್ಯದಿಂದ ಆಕರ್ಷಿತರಾದರೆ ಕಾರು ನಿಲ್ಲಿಸಿ ಎಲ್ಲಾ ಮರೆತು ನೋಡುತ್ತ ನಿಂತು ಬಿಡುತ್ತಾರೆ. ನಿಸರ್ಗದ ಚೆಲುವು ಕೇವಲ ಕಣ್ಣಿಗೆ ತಂಪು, ಮನಕೆ ಕಂಪು ಬೀರುವ ಮಾಧ್ಯಮವಾಗಿಲ್ಲ ಅವರಿಗೆ. ನಿಸರ್ಗದ ಪೂಜೆಯನ್ನು ಮನಃಪೂರ್ವಕವಾಗಿ ಮಾಡಿಕೊಂಡು ಬಂದಿದ್ದಾರೆ. ಅವರೊಡನೆ ಪ್ರವಾಸ ಮಾಡುವ ಯೋಗ ಒಂದು ರಸದೌತಣ. ಒಂದೊಂದು ಪ್ರವಾಸವೂ ಒಂದೊಂದು ಮಧುರ ಸ್ಮೃತಿ. ದಾರಿಯಲ್ಲಿ ಆಗಾಗ ದೃಶ್ಯಗಳ ವರ್ಣನೆ, ಅಥವಾ ಯಾವುದಾದರೂ ವಿಷಯದ ಬಗ್ಗೆ ದೀರ್ಘವಾದ ಚರ್ಚೆ, ಅದೂ ಬೇಜಾರಾದರೆ ಸಂಗೀತ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಅವರಿಗೆ ಸಂಗೀತದಲ್ಲಿ ಅಪಾರವಾದ ಅಭಿರುಚಿ ಇದೆ. ಅವರು ಹಾಡುವುದನ್ನು ನೀವು ಯಾರಾದರೂ ಕೇಳಿದ್ದೀರಾ ? ನಾವೆಲ್ಲ ಕೇಳಿ ಆನಂದಿಸಿದ್ದೇವೆ. ಅವರೊಡನೆ ನಾವೂ ಹಾಡಿ ನಲಿದಿದ್ದೇವೆ. ಪ್ರವಾಸದ ಒಂದು ಕ್ಷಣವೂ ವ್ಯರ್ಥವಾಗದಂತೆ ಅನುಭವಿಸಿದ್ದೇವೆ. ಯಾಕೆಂದರೆ ಹಿರಿಯ ಅಧಿಕಾರಿಯಾದ ಕಾರಣ ಕಾರ್ಯಬಾಹುಳ್ಯದಿಂದ ಅವರು ನಮ್ಮ ಕೈಗೆ ಸಿಕ್ಕುವುದೇ ಅಪರೂಪ. ಆದುದರಿಂದ ಪ್ರವಾಸ ಮಾಡುವಾಗ ಅವರೊಡನೆ ಕಳೆಯುವ ಒಂದೊಂದು ಕ್ಷಣವೂ ನಮ್ಮ ಪಾಲಿಗೆ ರಸನಿಮಿಷ. ಉರ್ದು ಕವಿ ಹಮೀದ ಅಲ್ಮಾಸರು ಒಂದೆರಡು ಸಾರಿ ನಮ್ಮೊಡನೆ ಪ್ರವಾಸ ಮಾಡಿದ್ದರು. ತಂದೆ ಮಕ್ಕಳು ಮಾಡುವ ಚರ್ಚೆ ಎಷ್ಟು ಕುತೂಹಲಕಾರಿ ಆಗಿರುತ್ತೆ ಎಂದರೆ ದಾರಿ ಸವೆದ ಅನುಭವವೇ ಆಗುವುದಿಲ್ಲವೆಂದರು.

ಅವರಿಗೆ ಯಾವಾಗ ಬರೆಯಲು ಸ್ಫೂರ್ತಿ ಬರುವುದೋ, ಯಾವಾಗ ಬರೆಯಲು ತೊಡಗುವರೋ ಎಂದು ಹೇಳುವುದು ಕಷ್ಟ. ಬೆಳಗಿನಿಂದ ರಾತ್ರಿಯವರೆಗೆ ಬಿಡುವಿಲ್ಲದಷ್ಟು ಕೆಲಸ. ರಾತ್ರಿ ಮನೆಗೆ ಬರುವಾಗ ಸಹ ಫೈಲುಗಳ ಸಮೇತವೇ ಬರುತ್ತಿದ್ದರು. ಆದರೆ ಕವಿಯ ಹೃದಯದ ತುಡಿತ ಸುಮ್ಮನಿರುವುದೇ ? ಏಕೀಕರಣಕ್ಕೆ ಮುಂಚೆ ನಾವು ಹೈದರಾಬಾದಿನಲ್ಲಿದ್ದೆವು. ಬಹುಶಃ ಆಗ ನಾನು ಎರಡನೆಯ ವರ್ಗದಲ್ಲಿದ್ದೆ. ಅಮ್ಮ ಅಪ್ಪಾಜಿ ಆಗ ತಾನೇ ಕಾಶ್ಮೀರ ಪ್ರವಾಸದಿಂದ ಹಿಂದಿರುಗಿದ್ದರು.

ನಾವೆಲ್ಲರೂ ಭಾನುವಾರದ ದಿನ "ಬಾಗ ಎ ಆಮ್" ತೋಟಕ್ಕೆ ಊಟ ಕಟ್ಟಿಕೊಂಡು ಹೋಗಿದ್ದೆವು. ಊಟ ಮುಗಿಸಿ ಸುಮ್ಮನೆ ಕೂಡಲಾರದೆ ನಾವೆಲ್ಲ ತೋಟ ಸುತ್ತಲು ಹೋದೆವು. ಅಪ್ಪಾಜಿ ನಮ್ಮೊಡನೆ ಬರದೆ ಯಾವುದೋ ಮರದ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ನಾವೆಲ್ಲ ಮರಳಿ ಬಂದಾಗ ಅವರ ಕೈಯಲ್ಲಿ ಕಾಗದ ಮತ್ತು ಲೆಕ್ಕಣಿಕೆ ಇದ್ದುವು. ಒಂದು ಹೊಸ ಕವನದ ಜನನವಾದುದು ತಿಳಿಯಿತು. ಕಾಶ್ಮೀರದ ಸೃಷ್ಟಿ ಸೌಂದರ್ಯದ ಬಗ್ಗೆ "ಕಾಶ್ಮೀರದಲ್ಲಿ ಕಾರ್ಗಾಲ" ಎಂಬ ಕವನ ಬರೆದಿದ್ದರು. ನಾವೆಲ್ಲ ಸುತ್ತು ಕುಳಿತುಕೊಂಡೆವು. ಸಂಜೆಯ ಪ್ರಶಾಂತ ವಾತಾವರಣದಲ್ಲಿ ಅವರ ಸುಂದರ ಕವಿತೆಯ ವಾಚನ ಶುರುವಾಯಿತು. ಅವರು ಓದುತ್ತ ಹೋದಂತೆ, ಕಾಶ್ಮೀರದ ಸೃಷ್ಟಿ ಸೌಂದರ್ಯಕ್ಕೋ, ಅಥವಾ ಶಬ್ದಗಳ ಲಾಲಿತ್ಯಕ್ಕೋ, ಅಥವಾ ಕವನದ ಭವ್ಯತೆಗೋ ನಾನು ಮಂತ್ರಮುಗ್ಧಳಾಗಿ ಕೇಳುತ್ತ ಕುಳಿತಿದ್ದೆ. ಪ್ರತಿಯೊಂದು ಶಬ್ದವೂ ನನ್ನ ಹೃದಯದ ಆಳಕ್ಕೆ ಇಳಿಯುತ್ತಿದ್ದಂತೆ ನಾನೂ ಒಂದು ಸಲ ಕಾಶ್ಮೀರ ನೋಡಲೇಬೇಕೆಂಬ ದೃಢ ನಿಶ್ಚಯ ಮಾಡಿದ್ದೆ. ನನ್ನ ಮದುವೆಯಾದ ಮೇಲೆ ಯಜಮಾನರೊಡನೆ ಕಾಶ್ಮೀರಕ್ಕೆ ಹೋದಾಗ ಅಲ್ಲಿಯ ಒಂದೊಂದು ಅಂಗುಲವೂ ನನಗೆ ಚಿರಪರಿಚಿತವೆನಿಸುತ್ತಿತ್ತು. ಕವನದ ಒಂದೊಂದು ಶಬ್ದವೂ ಹೃದ್ಗತವಾಗಿರುವಾಗ ಯಾವ ಸ್ಥಳಕ್ಕೆ ಹೋದರೂ ಹೊಸದೆಂಬ ಭಾವ ಬರಲಿಲ್ಲ. ನಾನು ಕಾಶ್ಮೀರ ನೋಡುತ್ತ ಹೋದಂತೆ ನಾನು ಕವನದ ಮೂಲಕ ಕಂಡ ಕಾಶ್ಮೀರವೇ ತುಂಬ ಚೆಲುವಾಗಿತ್ತು ಎಂದೆನಿಸತೊಡಗಿತು. ರವಿ ಕಾಣದ್ದನ್ನು ಕವಿ ಕಂಡ ಎಂಬ ಉಕ್ತಿಯನ್ನು ಸ್ವಲ್ಪ ಬದಲಾಯಿಸಿ ನಿಸರ್ಗ ಸೃಷ್ಟಿಸಲ ಸಾಧ್ಯವಾದುದನ್ನು ಕವಿ ಸೃಷ್ಟಿಸಬಲ್ಲನೇನೋ ಎಂದೆನಿಸಿತು.

ಎಂಥಹ ಪ್ರಸಂಗ ಬಂದರೂ ಅಪ್ಪಾಜಿ ಚಿತ್ತ ಸ್ವಾಸ್ಥ್ಯವನ್ನು ಕಳೆದುಕೊಳ್ಳುವುದಿಲ್ಲ. ಅವರ ಜೀವನದಲ್ಲಿ ಎಂಥೆಂಥ ದುರ್ಧರ ಪ್ರಸಂಗಗಳು ಜರುಗಿವೆಯೋ ಆ ದೇವರೇ ಬಲ್ಲ. ರಝಾಕಾರರ ಹಾವಳಿ, ಆಫೀಸಿನಲ್ಲಿ ಜರುಗುವ ಕಹಿ ಪ್ರಸಂಗಗಳು, ಆಪ್ತೇಷ್ಟರು ಮಾಡಿದ ದ್ರೋಹ, ಅವರಿಗೆ ಬಡ್ತಿ ದೊರೆಯದಂತೆ ಮಾಡಿದ ಕಿತಾಪತಿಗಳು, ಅನಾರೋಗ್ಯದಿಂದ ಹಲವಾರು ಸಾರಿ ಆಸ್ಪತ್ರೆ ಸೇರಬೇಕಾದಂಥ ಪ್ರಸಂಗ, ಒಂದೇ ಎರಡೇ ? ಎಲ್ಲವನ್ನೂ ವಿಷಕಂಠನಂತೆ ನುಂಗಿ ನಮಗೆಲ್ಲಾ ಅಮೃತವನ್ನೇ ಉಣಿಸಿದ್ದಾರೆ. ಜೀವನದಲ್ಲಿ ಸಿಕ್ಕಬಹುದಾದಂಥ ಸುಖ ಸೌಲಭ್ಯ, ಅನುಕೂಲತೆಗಳನ್ನೆಲ್ಲಾ ನಮಗೆ ಒದಗಿಸಿದ್ದಾರೆ. ಕಷ್ಟದ ಕಹಿಮುಖದ ಅರಿವಿಲ್ಲದಂತೆಯೇ ನಾವೆಲ್ಲ ಬೆಳೆದಿದ್ದೇವೆ. ಅಮ್ಮ ಯಾವಾಗಲಾದರು ಕೋಪಿಸಿಕೊಂಡರೆ ತಮ್ಮ ಹಾಸ್ಯದ ಚಟಾಕಿಯಿಂದ ಶಾಂತಿ ಮಾಡಿದ್ದಾರೆ. ಒಂದು ಸಾರಿ ಅಮ್ಮ ಯಾವುದೋ ವಿಷಯಕ್ಕೆ "ನಾನು ಮಾಡುವುದೇ ಸರಿ. ನನಗೆ ಯಾರ ಭಯವೂ ಇಲ್ಲ, ಭೀತಿನೂ ಇಲ್ಲ" ಎಂದು ಕೋಪದಿಂದ ನುಡಿದರು. ನಾವೆಲ್ಲ ಅಪ್ಪಾಜಿ ಏನೆನ್ನುವರೋ ಎಂದು ಸ್ತಬ್ಧರಾಗಿ ನಿಂತಿದ್ದೆವು. ಆದರೆ ತಕ್ಷಣ ಅಪ್ಪಾಜಿ "ಹೌದಾ ? ಹಾಗಾದರೆ ಪ್ರೀತಿನೂ ಇಲ್ವಾ ?" ಎಂದಾಗ ನಾವೆಲ್ಲ ನಗತೊಡಗಿದಾಗ ಅಮ್ಮ ಸಹ ನಮ್ಮೊಡನೆ ನಗಲೇಬೇಕಾಯಿತು. ಇನ್ನೊಂದು ಘಟನೆ. ಅವರ ವಿದೇಶಕ್ಕೆ ಹೋಗುವ ದಿನ ನಾವೆಲ್ಲ ವಿಮಾನ ನಿಲ್ದಾಣದಲ್ಲಿ ಮಾತನಾಡುತ್ತ ನಿಂತಿದ್ದೆವು. ನನಗೆ ತಕ್ಷಣ ಅಂದು ಅಮ್ಮ ಅಪ್ಪಾಜಿಯವರ ೩೦ನೆಯ wedding anniversary ಎಂದು ಜ್ಞಾಪಕವಾಯಿತು. ಅಪ್ಪಾಜಿಗೆ ನಾನು ವಿಷಯ ತಿಳಿಸಿ "ಅಪ್ಪಾಜಿ, ಅಮ್ಮಾಗೆ ಏನು ಉಡುಗೊರೆ ಕೊಡುವಿರಿ ?" ಎಂದು ಕೇಳಿದೆ. ಅವರಿಗೆ ವಿಷಯ ತಿಳಿದು ಮೊದಲು ಆಶ್ಚರ್ಯವಾದರೂ ತಕ್ಷಣ "ನಿಮ್ಮ ಅಮ್ಮನನ್ನು ವಿದೇಶಯಾತ್ರೆಗೆ ಕರೆದುಕೊಂಡು ಹೋಗುತ್ತಿದ್ದೇನೆ. ಇದಕ್ಕಿಂತ ಇನ್ನೆಂತಹ ಉಡುಗೊರೆ ಕೊಡಲಿ ?" ಎಂದರು. ಅಮ್ಮನನ್ನು ರೇಗಿಸಲು ಹೋಗಿ ನಾನೇ ಬೆಪ್ಪುತಕ್ಕಡಿಯಂತೆ ಸುಮ್ಮನಾಗಬೇಕಾಯಿತು.

ಮನೆಗೆ ಯಾರೇ ಬರಲಿ ಅವರ ಆತಿಥ್ಯಕ್ಕೆ ಕೊಂಚವೂ ಲೋಪವಾಗಬಾರದು. ಯಾರಾದರೂ ಬಂದಾಗ "ಬೇಬಿ ನಾಲ್ಕು ಕಪ್ಪು 1st class ಚಹ ಬರಲಿ" ಎನ್ನುತ್ತಾರೆ. ಅದಕ್ಕೆ ಅಮ್ಮ "ನಾವು ಯಾವಾಗಲೂ 3rd class ಚಹ ಮಾಡುತ್ತೇವೆಯೇ-ಬಂದವರಿಗೆ ಮಾತ್ರ 1st class ಕೊಡಲು ? ಎಂದು ಗೊಣಗುತ್ತಾರೆ. ಅಮ್ಮನನ್ನು ನೋಯಿಸಬೇಕೆಂಬ ದೃಷ್ಟಿಯಲ್ಲಿ ಅವರು ಹಾಗೆ ಹೇಳುವುದಿಲ್ಲ. ಬಂದವರಿಗೆಲ್ಲಾ ಅತ್ಯುತ್ತಮವಾದುದನ್ನೇ ಕೊಡಬೇಕೆಂಬ ಹಂಬಲದಿಂದ ಹಾಗೆ ಹೇಳುತ್ತಾರೆ. ಜನ

ರಿಗೆ ಸಹಾಯ ಮಾಡುವುದರಲ್ಲಿ ಸಿದ್ಧಹಸ್ತರು. ಯಾರೇ ಸಹಾಯ ಯಾಚಿಸಿ ಬರಲಿ ಅವರಿಗೆ ಅಭಯ ಹಸ್ತ ಸದಾ ಸಿದ್ಧ. ಆದರೆ ಅಮ್ಮ ಜೀವನವನ್ನು ವ್ಯವಹಾರಿಕ ದೃಷ್ಟಿ ಕೋನದಿಂದ ನೋಡುವವರು. ಅವರಿಗೆ ಅಪಾತ್ರ ದಾನವಾಗುವುದು ಸೇರುವುದಿಲ್ಲ. "ಸಿಕ್ಕ ಸಿಕ್ಕವರಿಗೆ ಸಹಾಯ ಮಾಡುವುದರ ಬದಲು ಅವರಿಗೆ ಅದರ ಅವಶ್ಯಕತೆ ಇದೆಯೋ ಇಲ್ಲವೋ ಎಂದು ಯೋಚಿಸಬಾರದೇ ?" ಎಂದು ಅಮ್ಮ ಆಕ್ಷೇಪಿಸಿದಾಗ ಅಪ್ಪಾಜಿ ರಾಗವಾಗಿ "ಸಬ್ ಕುಛ್ ಸೀಖಾ ಹಮನೆ, ನ ಸೀಖಿ ಹೋಷಿಯಾರಿ, ಸಚ್ ಹೈ ದುನಿಯಾ ವಾಲೋ ಕೆ ಹಮ್ ಹೈಂ ಅನಾಡಿ" ಎಂದು ಪ್ರಾರಂಭಿಸುತ್ತಾರೆ. ಇಂಥ ಅನೇಕ ಮೋಜಿನ ಸಂಗತಿಗಳ, ಸವಿನೆನಪುಗಳ ನಿಕ್ಷೇಪ ನನ್ನ ಹೃದಯದಲ್ಲಿ ಭದ್ರವಾಗಿದೆ.

ನಾನು ಕಾಲೇಜಿನಲ್ಲಿದ್ದಾಗ ನನ್ನೊಡನೆ ಹಾಸನದ ಕಾಫಿ ಪ್ಲಾಂಟರರ ಮಗಳು ಸಹಪಾಠಿಯಾಗಿದ್ದಳು. ಅವಳು ಅಪ್ಪಾಜಿಯವರನ್ನು ನೋಡ ಬಯಸಿದಾಗ ಮನೆಗೆ ಕರೆದುಕೊಂಡು ಹೋದೆ. ನಮ್ಮ ಮನೆಯನ್ನು ನೋಡಿ "ಸಾಹಿತಿಗಳೆಂದರೆ ತುಂಬಾ ಬಡವರು ಇರುತ್ತಾರೆ. ಒಂದು ಕೈಯಲ್ಲಿ ಸಿಗರೇಟೋ ಅಥವಾ ಮದ್ಯದ ಗ್ಲಾಸು ಹಿಡಿದುಕೊಂಡು, ಗಡ್ಡ ಬೆಳೆಸಿಕೊಂಡು ಬರೀತಾ ಇರುತ್ತಾರೆಂದು ನನ್ನ ಕಲ್ಪನೆಯಾಗಿತ್ತು. ಆದರೆ ನಿಮ್ಮ ತಂದೆಯವರನ್ನು ಮತ್ತು ನಿಮ್ಮ ಮನೆಯನ್ನು ನೋಡಿ ನನ್ನ ಅಭಿಪ್ರಾಯ ಬದಲಾಯಿಸಬೇಕಾಗಿ ಬಂದಿದೆ" ಎಂದು ಹೇಳಿದಾಗ ದೇವರೇ, ಸಧ್ಯ ಅಂಥಹ ಸಾಹಿತಿ ತಂದೆಯನ್ನು ನನಗೆ ದಯಪಾಲಿಸಲಿಲ್ಲ ಎಂದು ದೇವರಿಗೆ ಧನ್ಯವಾದಗಳನ್ನು ಅರ್ಪಿಸಿದೆ.

ಅಪ್ಪಾಜಿಗೆ ಕೋಪ ಬರುವುದು ಅಪರೂಪ. ಆದರೆ ಕೋಪ ಬಂದಾಗ ಮಾತ್ರ ನಾವು ಮಕ್ಕಳು ತಕ್ಷಣ ಅಲ್ಲಿಂದ ಪರಾರಿಯಾಗುತ್ತೇವೆ. ಅಂದರೆ ಕೋಪ ಬಂದಾಗ ನಮ್ಮನ್ನೆಲ್ಲಾ ಬೈಯ್ಯುತ್ತಾರೆ ಎಂಬ ಅರ್ಥದಲ್ಲಿ ನಾನು ಹೇಳುತ್ತಿಲ್ಲ. ಒಂದು ರೀತಿಯ ಬಿಗಿಯ ವಾತಾವರಣ ಉಂಟಾಗುತ್ತದೆ. ಆ ಬಿಗಿ ಯಾವಾಗ ಸಡಿಲವಾಗುವುದೋ ಎಂದು ಕಾತರದಿಂದ ಕಾಯುತ್ತೇವೆ. ಈಗ ಆ ಯೋಚನೆ ಇಲ್ಲ. ಮೊಮ್ಮಕ್ಕಳಿದ್ದಾರಲ್ಲ-ಅಂಥ ವಾತಾವರಣ ಉಂಟಾದಾಗ ಸಹ "ಅಜ್ಜಾ, ಕಬ್ಬನ್ ಪಾರ್ಕಿಗೆ ಹೋಗೋಣವೆಂತಲೋ ಅಥವಾ ಅಜ್ಜಾ, ಈ ಚಡ್ಡಿ ಹಾಕ್ತೀರಾ" ಎಂತಲೋ ಯಾರ ಮುಲಾಜು ಯಿಲ್ಲದೇ ಹೇಳುತ್ತಾರೆ. ಅಲ್ಲಿಂದ ಮುಂದೆ ಎಲ್ಲವೂ ಸುಲಲಿತವಾಗಿ ಸಾಗುತ್ತದೆ. ಆದರೆ ಅಪ್ಪಾಜಿಗೆ ಕೋಪ ಬರುತ್ತದೆ ಎಂದರೆ ಯಾರೂ ನಂಬುವುದಿಲ್ಲ. ಯಾವಾಗಲೂ ಹಸನ್ಮುಖಿ. ಎಷ್ಟೇ ಆಯಾಸವಾದರೂ ಬಂದವರೊಡನೆ ನಗುನಗುತ್ತ ಮಾತನಾಡಿ ಕಳಿಸಿ ಕೊಡುತ್ತಾರೆ. ನಮ್ಮ ಮನೆಗೆ ಬಂದಾಗ ಕೇವಲ ನನ್ನ ಮಗಳು ಪಲ್ಲವಿಯ ಅಜ್ಜನಾಗಿರದೇ ಅವಳ ಗೆಳತಿಯರಿಗೆಲ್ಲಾ ಪ್ರೀತಿಯ ಅಜ್ಜನಾಗಿದ್ದಾರೆ.

ನನ್ನ ತಮ್ಮ ಪ್ರಸನ್ನನ್ನ ಡಾಕ್ಟರ್‌ನನ್ನಾಗಿ ಮಾಡಬೇಕೆಂಬ ಹಂಬಲವಿತ್ತು ಅಪ್ಪನಿಗೆ. ಆದರೆ ಅವನು ಇಂಜಿನಿಯರನಾಗ ಬಯಸಿದಾಗ ತಮ್ಮ ಸಂಪೂರ್ಣ ಸಮ್ಮತಿಯನ್ನಿತ್ತರು. ಆದರೆ ಅವರ ಆಸೆ ಪೂರೈಸಲೋ ಎಂಬಂತೆ ತಂಗಿ ಶಿವಗೀತಾ ಡಾಕ್ಟರಾದಳು. ಮಕ್ಕಳಿಗಾಗಿ, ಮಕ್ಕಳ ಅಭಿವೃದ್ಧಿಗಾಗಿ ಯಾವ ತ್ಯಾಗಕ್ಕಾದರೂ ಸಿದ್ಧ. ಎಲ್ಲ ಮಕ್ಕಳಿಗೂ ಮದುವೆಯಾಗಿ ಎರಡು ಮಕ್ಕಳಾದರೂ ಇನ್ನೂ ಸಣ್ಣ ಮಕ್ಕಳೆಂದೇ ಅವರ ಭಾವನೆ. ಈಗಲೂ ನನ್ನ ಕಿರಿಯ ತಂಗಿ ಭಾರತಿ ಊರಿಗೆ ಹೊರಟಾಗ ಅಮ್ಮ ಅಪ್ಪಾಜಿ ಇಬ್ಬರ ಕಣ್ಣಿನಲ್ಲೂ ನೀರು.

ಅಪ್ಪಾಜಿಗೆ ಸಿನಿಮಾ ಎಂದರೆ ಬೇಜಾರು. "3 ಗಂಟೆ ಕತ್ತಲಲ್ಲಿ ಕುಳಿತುಕೊಳ್ಳಲು ಬೇಜಾರಾಗುವುದಿಲ್ಲವೇ ?" ಎಂದು ಸಿನೇಮಾಪ್ರಿಯರಾದ ನಮ್ಮನ್ನು ಕೇಳುತ್ತಾರೆ. ಯಾವುದಾದರೂ ಒಳ್ಳೆಯ ಸಿನೇಮಾ ಬಂದಾಗ ಬನ್ನಿ ಅಪ್ಪಾಜಿ ಎಂದು ನಾವು ಬಲವಂತ ಮಾಡಿದಾಗ ಅವರಿಗೆ ಸಮಯದ ಅಭಾವವಿರುತ್ತದೆ. ಅಥವಾ mood ಇರುವುದಿಲ್ಲ. ಅವರಿಗೆ ಒಂದೊಂದು ಸಾರಿ ಅಕಸ್ಮಾತ್ತಾಗಿ mood ಬಂದು ನಮ್ಮೊಡನೆ ಹೊರಟರೆ ಅವರ ಪಾಲಿಗೆ ದೊರೆತ ಸಿನೇಮಾಗಳೆಂದರೆ "Night in London" ಅಥವಾ "Evening in paris" ಅಥವಾ "ಶೋಲೆ" ಅಂಥಹದು ಎಂದ ಮೇಲೆ ಸಿನೇಮಾದ ಬಗ್ಗೆ ಒಳ್ಳೆಯ ಅಭಿಪ್ರಾಯ ಬರಲು ಹೇಗೆ ಸಾಧ್ಯ ?

ಅವರು ಮಕ್ಕಳಿಗಷ್ಟೇ ಅಲ್ಲ, ಸೊಸೆ ಲತಾಳಿಗೂ ಸಹ ಪ್ರೀತಿಯ ಅಪ್ಪಾಜಿ; ಅಳಿಯಂದಿರಾದ ನಂದೀಶ್ವರ, ಮೃತ್ಯುಂಜಯ, ಗಂಗಾಧರರಿಗೆ ಪ್ರೀತಿಯ ಮಾಮಾಜಿ ಆಗಿರುವ ಅವರಿಗಾಗಿ ಕಿರಿಯಂದಿರಾದ ನಾವುಗಳು ಏನು ಹಾರೈಸಲು ಸಾಧ್ಯ ? ಅವರ ಪ್ರಿಯ ಓದುಗರು ಮತ್ತು ಆಪ್ತಅಭಿಮಾನಿಗಳು ಅವರ ಸ್ಫೂರ್ತಿಯ ಸೆಲೆ ಬತ್ತದಂತೆ ನೋಡಿಕೊಳ್ಳಲೆಂಬುದೇ ನಮ್ಮೆಲ್ಲರ ಕೋರಿಕೆ. □

# ಅನುಭವ

## ಡಾ. ಸಿದ್ಧಯ್ಯ ಪುರಾಣಿಕರ ಜೊತೆಯಲ್ಲಿ ಕೆಲಸಮಾಡಿದವರಿಂದ

# ಕಾಯಕ ಯೋಗಿ

● ಬ. ದಾ. ಜತ್ತಿ

ನಾನು ಸಿದ್ಧಯ್ಯ ಪುರಾಣಿಕ ಅವರನ್ನು ಮೊದಲು ನೋಡಿದ್ದು ಕಲಬುರ್ಗಿಯಲ್ಲಿ: ಭೂಸುಧಾರಣಾ ಆಯೋಗದ ಅಧ್ಯಕ್ಷನಾಗಿ ಅಲ್ಲಿಗೆ ಹೋದಾಗ. ಆಗ ಅವರು ಯಾದಗಿರಿಯಲ್ಲಿ ಡೆಪ್ಯೂಟಿ ಕಲೆಕ್ಟರ್ ಆಗಿದ್ದರು. ಅನೇಕ ಜನಹಿತ ಕಾರ್ಯಗಳನ್ನು ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಮುಂದೆ ನಾನು ಮುಖ್ಯಮಂತ್ರಿಯಾದಾಗ ಅವರು ವಿದ್ಯಾ ಇಲಾಖೆಯ ಅಧೀನ ಕಾರ್ಯದರ್ಶಿಗಳಾಗಿಯೂ, ಉಪ ಕಾರ್ಯದರ್ಶಿಗಳಾಗಿಯೂ ಚಿರಸ್ಮರಣೀಯ ಕೆಲಸ ಮಾಡಿದರು. ಅವರ ಅಧಿಕಾರವಧಿಯಲ್ಲಿ ಆ ಇಲಾಖೆಯು ಎಲ್ಲ ರಂಗಗಳಲ್ಲಿಯೂ ಅಪೂರ್ವ ಪ್ರಗತಿ ಸಾಧಿಸಿತು.

ತಮ್ಮ ಕಾಯಕನಿಷ್ಠೆಯಿಂದಾಗಿ ಸಿದ್ಧಯ್ಯ ಪುರಾಣಿಕ ಅವರು ಸಮರ್ಥಅಧಿಕಾರಿಗಳೆಂದು ಹೆಸರು ಪಡೆದುಕೊಂಡರು. ಮುಂದೆ ನಾನು ಅರ್ಥಮಂತ್ರಿಯಾದಾಗ ಸಿದ್ಧಯ್ಯನವರನ್ನು ಅರ್ಥಶಾಖೆಯ ಉಪ ಕಾರ್ಯದರ್ಶಿ ಹಾಗೂ ಸುವರ್ಣ ನಿಯಂತ್ರಣ ಆಜ್ಞೆಯಿಂದ ಸಂತ್ರಸ್ತರಾದ ಅಕ್ಕಸಾಲಿಗರ ಸಮಸ್ಯೆಯನ್ನು ಕೇವಲ ಮೂರು ತಿಂಗಳುಗಳಲ್ಲಿ ಪರಿಹರಿಸಲು ನನಗೆ ನೆರವಾದರು. ಅರ್ಥಶಾಖೆಯಲ್ಲಿಯ ಜಡತೆ ತೊಲಗಿ ಅಲ್ಲಿಯ ಕಾರ್ಯಗಳು ತ್ವರಿತಗತಿಯಿಂದ ನಡೆಯುವಲ್ಲಿ ಸಹಾಯಕರಾದರು. ಮುಖ್ಯವಾಗಿ ಸಣ್ಣ ಉಳಿತಾಯ ಯೋಜನೆಯಲ್ಲಿ ಇವರ ಆಸಕ್ತಿಯಿಂದ ಅದ್ಭುತ ಪ್ರಗತಿಯಾಯಿತು. ಆ ತರುವಾಯ ಅವರು ಕೊಡಗಿನ ಜಿಲ್ಲಾಧಿಕಾರಿಗಳಾಗಿ, ಸಾರಿಗೆ ಕಮೀಷನರರಾಗಿ, ಬೆಳಗಾವಿ ಜಿಲ್ಲಾಧಿಕಾರಿಗಳಾಗಿ, ಕಾರ್ಮಿಕ ಕಮೀಷನರರಾಗಿ ಮಾಡಿದ ಕಾರ್ಯಗಳು ಚಿರಸ್ಮರಣೀಯವಾಗಿದೆ.

ಸಿದ್ಧಯ್ಯನವರು ಎಲ್ಲಿಗೆ ಹೋದರೂ, ಯಾವ ಇಲಾಖೆಯಲ್ಲಿ ಇದ್ದರೂ ಬಡವರ ಬಂಧುಗಳಾಗಿ ದುಡಿದು ದುರ್ಬಲರ ಕಲ್ಯಾಣಕ್ಕಾಗಿ ಶ್ರಮಿಸಿದರು. ಅವರು ಅನುಸರಿಸಿದ ಆಡಳಿತ ವಿಧಾನಗಳು ಅಚ್ಚರಿಯನ್ನುಂಟು ಮಾಡುವಷ್ಟು ಸಧರ್ಮದಿಂದ ಕೂಡಿದ್ದವು. ಅವರ ಆಡಳಿತಪದ್ಧತಿಗೆ 'ಪುರಾಣಿಕ ಪದ್ಧತಿ' ಎಂದು ಕರೆಯುವಷ್ಟು ವಿನೂತನ ರೀತಿಯಿಂದ ಅವರು ಹಳ್ಳಿಗರ ಹಾಗೂ ದುರ್ಬಲರ ಸೇವೆಗಾಗಿ ದುಡಿದರು. ಆಡಳಿತಗಾರರಾಗಿ ಅವರು ತೋರಿದ ಪ್ರಾಮಾಣಿಕತೆ, ನಿಸ್ಪೃಹತೆ, ಕರ್ತವ್ಯನಿಷ್ಠೆಗಳು, ಸಹನಶೀಲತೆಗಳು ಅನುಕರಣೀಯವಾದವು.

ಸಿದ್ಧಯ್ಯ ಪುರಾಣಿಕರು ಸಮರ್ಥ ಆಡಳಿತಗಾರರಾಗಿದ್ದಂತೆ ಒಬ್ಬ ಪ್ರತಿಭಾವಂತ ಕವಿ, ಸಾಹಿತಿ ಕೂಡ. ಇದಕ್ಕಿಂತ ಹೆಚ್ಚಾಗಿ ಅವರೊಬ್ಬ ನಿಷ್ಠಾವಂತ ಬಸವಭಕ್ತರು. ಬಸವಣ್ಣನವರನ್ನು ತಮ್ಮ ಅಂತರಂಗ ಹಾಗೂ ಬಹಿರಂಗಗಳ ಆರಾಧ್ಯನನ್ನಾಗಿ ಸ್ವೀಕರಿಸಿ ಅನುದಿನದ ಬದುಕಿನಲ್ಲಿ ಅವರ ತತ್ವಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಿರುವ ಒಬ್ಬ ಸಾತ್ವಿಕ 'ಕಾಯಕಯೋಗಿ'

ಬಸವಣ್ಣನವರ ಹೆಸರಿನಲ್ಲಿ ಚಿರಂತನವಾಗಿ ವಿಧಾಯಕ ಕಾರ್ಯಕ್ರಮಗಳು ನಡೆಯಬೇಕು ಎಂಬ ನನ್ನ ಆಶಯದ ಮೂರ್ತರೂಪವಾಗಿ ಜನ್ಮ ತಳೆದ 'ಬಸವ ಸಮಿತಿ'ಯ ಸಂಸ್ಥಾಪಕ ಸದಸ್ಯರಲ್ಲಿ ಸಿದ್ಧಯ್ಯ ಪುರಾಣಿಕರು ಒಬ್ಬರು. ಆರಂಭದಿಂದ ಇಲ್ಲಿಯವರೆಗೆ ಸಮಿತಿಯ ನಿಷ್ಠಾವಂತ

ಕಾರ್ಯಕರ್ತರಾಗಿ ಸೇವೆ ಸಲ್ಲಿಸಿದ್ದಾರೆ. ಬಸವ ಸಮಿತಿಯು ಬಸವಭವನ, ಅನುಭವಮಂಟಪದ ಕಟ್ಟಡಗಳಿಂದ ಬಾಹ್ಯ ಸೌಷ್ಠವನ್ನು ಪಡೆದರೆ, ಸಿದ್ಧಯ್ಯನವರ ವಾಙ್ಮಯ ಸೇವೆಯಿಂದ ಅಂತರಂಗದ ದೀಪ್ತಿಯನ್ನು ಪಡೆಯುತ್ತಿದೆ. ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ 'ಬಸವ ಪಥ' ಕನ್ನಡ ದ್ವೈಮಾಸಿಕ ಹಾಗೂ 'ಬಸವ ಜರ್ನಲ್' ಇಂಗ್ಲಿಷ್ ತ್ರೈಮಾಸಿಕ ಪತ್ರಿಕೆಗಳು ಈಗಾಗಲೇ ಸಾಕಷ್ಟು ಜನಮನ್ನಣೆಯನ್ನು ಗಳಿಸಿದ ಪತ್ರಿಕೆಗಳಾಗಿವೆ. ಈ ಪತ್ರಿಕೆಗಳಿಂದ ಶರಣರ ಜೀವನ, ಸಾಧನೆ, ಬೋಧನೆಗಳ ಕಾರ್ಯ ವ್ಯಾಪಕವಾಗಿ ನಡೆಯುತ್ತಿವೆ.

ಇದಲ್ಲದೆ ಪುರಾಣಿಕರು ಬಸವ ಸಮಿತಿಯ ಸಂಶೋಧನ ಹಾಗೂ ಪ್ರಕಟಣ ವಿಭಾಗಗಳ ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರ ನಿರ್ದೇಶನದಲ್ಲಿ ಹಲವಾರು ವಿಚಾರಸಂಕಿರಣಗಳು ಹಾಗೂ ಪ್ರಕಟಣಾ ಯೋಜನೆಗಳು ರೂಪ ತಳೆದಿವೆ. ತಮ್ಮ ವಿಶಿಷ್ಟವಾದ ಯೋಚನೆ ಹಾಗೂ ಯೋಜನೆಗಳಿಂದ ಬಸವ ಸಮಿತಿಯ ವಾಙ್ಮಯ ವಿಭಾಗಕ್ಕೆ ಡಾ. ಸಿದ್ಧಯ್ಯ ಪುರಾಣಿಕ ಅವರು ಹೊಸ ಮೆರುಗನ್ನು ತಂದುಕೊಟ್ಟಿದ್ದಾರೆ.

ಬಸವಾಭಿಮಾನಿಗಳಾಗಿ, ಬಸವ ಭಕ್ತರಾಗಿ, ಕನ್ನಡಿಗರ ಹೆಮ್ಮೆಯ ಸಾಹಿತಿಗಳಾಗಿ ಭಾರತದ ಸುಪುತ್ರರಲ್ಲೊಬ್ಬರಾಗಿ ಸೇವೆ ಸಲ್ಲಿಸುತ್ತಿರುವ ಸಿದ್ಧಯ್ಯನವರಿಂದ ನಮ್ಮ ನಾಡುನುಡಿಗಳಿಗೆ ಇನ್ನೂ ಹೆಚ್ಚಿನ ಸೇವೆ ಲಭ್ಯವಾಗುವುದು ಎಂಬ ಭರವಸೆ ನನಗಿದೆ. ಇದಕ್ಕಾಗಿ ಭಗವಂತನು ಅವರಿಗೆ ಆಯುರಾರೋಗ್ಯವನ್ನು ಕರುಣಿಸಲೆಂದು ಹಾರೈಸುತ್ತೇನೆ. □

ಕೆಡಕಿಗಿಹವು ನೂರು ದಾರಿ
ಒಳಿತಿಗೊಂದೆ ದಾರಿ
ಸುಳ್ಳಿಗಿಹವು ನೂರು ದಾರಿ
ಸತ್ಯಕೊಂದೆ ದಾರಿ
ಬುದ್ಧಿಗಿಹವು ನೂರು ದಾರಿ
ಹೃದಯಕೊಂದೆ ದಾರಿ
ಕರ್ಮಕಿಹವು ನೂರು ದಾರಿ
ಧರ್ಮಕೊಂದೆ ದಾರಿ

—ಕಲ್ಲೋಲಮಾಲೆ, ಪು 17.

# ಯಾವ ಕೆಲಸಕೆ ಕರೆದರೂ ಸಿದ್ಧಯ್ಯ

● ಬಿ. ಎ. ಸನದಿ

೧೯೬೨ರ ಜೂನ್ ತಿಂಗಳ ಒಂದು ದಿನ.

ಕರ್ನಾಟಕ (ಆಗ ಮೈಸೂರು) ಸರಕಾರದ ವಾರ್ತಾ ಇಲಾಖೆಯಲ್ಲಿ 'ಪಂಚಾಯಿತಿ ರಾಜ್ಯ' ಮಾಸ ಪತ್ರಿಕೆಯ ಸಹಸಂಪಾದಕನಾಗಿ ನನ್ನನ್ನು ನಿಯಮಿಸಿದ ವಾರ್ತೆ ಬಂದಾಗ ನನಗೆ ಏಕ ಕಾಲಕ್ಕೆ ಆನಂದ, ಆಶ್ಚರ್ಯ. ಆಗ ನಾನು ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನಲ್ಲಿ ಸಮಾಜ ಶಿಕ್ಷಣಾಧಿಕಾರಿಯಾಗಿದ್ದು ಐದು ವರುಷಗಳಾಗುತ್ತ ಬಂದಿತ್ತು. ಈ ಮಧ್ಯೆ ರಾಯಭಾಗದಿಂದ ಸವದತ್ತಿ ತಾಲೂಕಿಗೆ ನನ್ನ ವರ್ಗಾವಣೆಯಾದ ಆದೇಶ ಬಂದಾಗ ರಾಯಬಾಗ ತಾಲೂಕು ಅಭಿವೃದ್ಧಿ ಮಂಡಲಿಯವರು ಸೂಕ್ತಕ್ರಮವನ್ನನುಸರಿಸಿ ನನ್ನನ್ನು ಅಲ್ಲಿಯೇ ಉಳಿಸಿಕೊಂಡಿದ್ದರು. ಅದಾದ 3–4 ತಿಂಗಳಲ್ಲಿಯೇ ಬೆಂಗಳೂರಿಗೆ ವರ್ಗವಾದ ವಾರ್ತೆ ! ನನಗೇನೋ ರಾಯಭಾಗದಂಥ ಪ್ರದೇಶದಲ್ಲಿ ಸಮಾಜ ಶಿಕ್ಷಣ ಪ್ರಸಾರ ಮಾಡುವುದು ಪ್ರಿಯವಾದ ಕೆಲಸವೇ ಆಗಿತ್ತು. ಆದರೂ ಬೆಂಗಳೂರಿನ ಕಡೆಗೂ ನನ್ನ ಜೀವ ತುಡಿಯಲಾರಂಭಿಸಿತ್ತು. ನನಗೆ ಬರುವ ಸಂಬಳದಲ್ಲಿ ಬೆಂಗಳೂರು ನಗರದಲ್ಲಿ ನೆಮ್ಮದಿಯಿಂದ ಬದುಕಿರುವುದು ಕಷ್ಟವೆಂಬ ಕಲ್ಪನೆಯಿದ್ದರೂ, ರಾಯಬಾಗದಿಂದ ಬಿಡುಗಡೆ ಪಡೆದು ಕಾಲಬಾಗದ ಆ ಸೀಮೆಗೆ ನಾನು ಹೋಗಬೇಕೆಂದೇ ನಿರ್ಧರಿಸಿದೆ. ಈ ಎಳೆತಕ್ಕೆ ಮುಖ್ಯವಾದೊಂದು ಕಾರಣವೆಂದರೆ ಒಂದೆರಡು ವಾರಗಳ ಹಿಂದೆಯಷ್ಟೆ ನನಗೆ, ಬಹು ದಿನಗಳಿಂದ ಪರಿಚಿತರೂ ಆತ್ಮೀಯರೂ ಆಗಿದ್ದ ಶ್ರೀ ಸಿದ್ಧಯ್ಯ ಪುರಾಣಿಕರನ್ನು ವಾರ್ತಾ ಇಲಾಖೆಯ ನಿರ್ದೇಶಕರಾಗಿ ಸರಕಾರದವರು ನಿಯೋಜಿಸಿದ್ದರೆಂಬುದು ! ನಾನು ಬೆಂಗಳೂರಿಗೆ ಹೋದಾಗೊಮ್ಮೆ ಅವರನ್ನು ಕಂಡು ಮಾತನಾಡಿಸಿ ಬರುವುದು, ಆಗೊಮ್ಮೆ ಈಗೊಮ್ಮೆ ಪತ್ರಗಳನ್ನು ಬರೆಯುವುದು, ಪುಸ್ತಕಗಳನ್ನು ಕಳಿಸುವುದು–ಇತ್ಯಾದಿ ನಡದೇ ಇತ್ತು. ಈಗ ನೇರವಾಗಿ ಅವರ ಜೊತೆಗೇ ಕೆಲಸ ಮಾಡುವ ಯೋಗ ಒದಗಿ ಬಂದುದು ನನಗೆ ಆನಂದವನ್ನುಂಟು ಮಾಡಿತ್ತು.

೧೯೪೯–೫೨ರಲ್ಲಿ ನಾನು ಬೆಳಗಾವಿಯಲ್ಲಿನ್ನೂ ವಿದ್ಯಾರ್ಥಿಯಾಗಿದ್ದಾಗಲೇ ಹತ್ತು ಹತ್ತು ಸಲ ಓದಿದ ಕಾವ್ಯನಂದರ 'ಸಲಾಮ್‌ಸಾಬ್' ಮತ್ತು ನಂತರ ೧೯೫೯–೫೬ ರಲ್ಲಿ ನಾನು ಶಮನೇವಾಡಿಯಲ್ಲಿ ಶಿಕ್ಷಕನಾಗಿದ್ದಾಗ ಮಕ್ಕಳಿಗೆ ಕಲಿಸಿದ 'ಕಾಶ್ಮೀರದಲ್ಲಿ ಕಾರ್ಗಾಲ' ಎಂಬ ಕವನಗಳ ಗಾಢವಾದ ಪರಿಣಾಮ ನನ್ನ ಮನಸ್ಸಿನಲ್ಲಿತ್ತು. ಅಷ್ಟಲ್ಲದೆ, ಕಾವ್ಯಾನಂದರ ವೈಯಕ್ತಿಕ ಸಂಪರ್ಕಾನುಭವವೂ ಬೆಂಗಾವಲಾಗಿತ್ತು–ನಾನು ರಾಯಬಾಗದಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸುವುದಕ್ಕೆ, ವಿಧಾನಸೌಧದ ಪಾವಟಿಗೆ ತುಳಿಯುವುದಕ್ಕೆ.

ಬೆಂಗಳೂರು ಸೇರಿ, ವಾರ್ತಾ ಇಲಾಖೆಯ ನಿರ್ದೇಶಕರ ಕೋಣೆಯಲ್ಲಿ ಕಾಲಿಡುವಾಗ ನಾನು ಅವರ ಕೈಯಲ್ಲಿ ಕೆಲಸ ಮಾಡಲು ನಡೆದವನೆಂಬ ಎಚ್ಚರಿಕೆ, ಒಂದು ಬಗೆಯ ಮುಜುಗರ ಮನಸ್ಸಿನಲ್ಲಿತ್ತು. ಆದರೆ, ನಾನು ಒಳಗೆ ಹೋಗಿ ಶ್ರೀ ಸಿದ್ಧಯ್ಯ ಪುರಾಣಿಕರಿಗೆ ನಮಸ್ಕಾರ ಮಾಡುತ್ತಲೇ ತಮ್ಮ ಮೊದಲಿನ ಸ್ನೇಹಭಾವದಿಂದಲೇ ನನ್ನ ಕೈಕುಲುಕಿ ಬರಮಾಡಿಕೊಂಡರು. ಕಚೇರಿಯ ವಾತಾವರಣದಲ್ಲಿ ಎಷ್ಟು ಮಾತನಾಡಬಹುದಿತ್ತೋ ಅಷ್ಟನ್ನು ಮಾತಾಡಿ ಹೊರಬರುವಾಗ, ಅವರಿಗೆಂದೆ : "ಅಂತೂ ನಿಮ್ಮ ಕೈಯಲ್ಲಿ ದುಡಿಯುವ ಯೋಗ ನನಗೆ ಬಂದಿದೆ ; ಬೇಕಾದಂತೆ ದುಡಿಸಿಕೊಳ್ಳಿ". ಮುಗುಳು ನಗುತ್ತ ಅವರೆಂದರು–"ದುಡಿಸಿಕೊಳ್ಳೋದೇನು ಬಂತು ? ನಾವೂ ನೀವೂ ಕೂಡಿಯೇ ದುಡಿಯೋಣ". ನಾನು ಬೆಂಗಳೂರಿನಲ್ಲಿರುವವರೆಗೂ ಈ ಮಾತಿನ ಪ್ರತ್ಯಕ್ಷ ಅನುಭವ ನನಗೆ ಬಂತು–ವಿಶೇಷವಾಗಿ, ನಮ್ಮ ದೇಶದ ಮೇಲೆ ಚೀಣಾ ದುರಾಕ್ರಮಣ ನಡೆದ ಕಾಲದಲ್ಲಿ.

ನಾನು ಬೆಂಗಳೂರಿನಲ್ಲಿದ್ದದ್ದು, ಶ್ರೀ ಸಿದ್ಧಯ್ಯ ಪುರಾಣಿಕರೊಡನೆ ದುಡಿದದ್ದು ಎರಡು ವರ್ಷ ಮಾತ್ರ. ಸಿದ್ಧಯ್ಯನವರು ವಾರ್ತಾ ಇಲಾಖೆಯ ನಿರ್ದೇಶಕರೆಂದು ಅಧಿಕಾರ ವಹಿಸಿಕೊಂಡ ೧-೨ ವಾರಗಳಲ್ಲಿಯೇ ನಾನು ಆ ಇಲಾಖೆಗೆ ಹೋದದ್ದೊಂದು ಯೋಗವೆಂದೆನಷ್ಟೆ? ಅಂತೆಯೇ ಅವರು ವಾರ್ತಾ ಇಲಾಖೆಯಿಂದ ಹಣಕಾಸಿನ ಇಲಾಖೆಗೆ ವರ್ಗವಾದ ೧-೨ ವಾರಗಳಲ್ಲಿಯೇ ಭಾರತ ಸರಕಾರದ ವಾರ್ತಾ ಇಲಾಖೆಯಲ್ಲಿ ಕ್ಷೇತ್ರ ಪ್ರಚಾರಾಧಿಕಾರಿಯೆಂದು ನನ್ನ ಆಯ್ಕೆಯಾದುದೂ ಒಂದು ವಿಶೇಷ ಯೋಗವೆಂದೇ ಹೇಳಬೇಕು. ಕೆಲಕಾಲದ ಹಿಂದೆ ದೆಹಲಿಯಲ್ಲಿ ನಡೆದ ನಮ್ಮ ಸಂದರ್ಶನದ ಫಲಿತಾಂಶವನ್ನೂ ಮೊಟ್ಟಮೊದಲಿಗೆ ತಿಳಿಸಿ ನನ್ನನ್ನು ಅಭಿನಂದಿಸಿದ್ದರವರು. ಅದರ ನಂತರ ಕ್ರಮಪ್ರಾಪ್ತ ಆದೇಶದಂತೆ ನನಗೆ ಕಲಬುರ್ಗಿ ವಿಭಾಗಕ್ಕೆ–ಪುರಾಣಿಕರ ಪ್ರಾಸ್ತಾವಿಕ ಸೇವಾ ಭೂಮಿಗೆ – ನಿಯುಕ್ತಿಯಾದದ್ದು ನಮಗಿಬ್ಬರಿಗೂ ಆನಂದದ ಸಂಗತಿಯಾಗಿತ್ತು. ನಾನು ಬೆಂಗಳೂರಿಗೆ ಬಂದಾಗ ಅಭಿಮಾನದಿಂದ ಸ್ವಾಗತ ನೀಡಿದ ಸಿದ್ಧಯ್ಯನವರು ನಾನು ಕಲಬುರ್ಗಿಗೆ ಹೊರಟು ನಿಂತಾಗಲೂ ಆನಂದದಿಂದಲೇ ಬೀಳ್ಕೊಂಡರು. ನಾನು ಸಿದ್ಧಯ್ಯ ಪುರಾಣಿಕರ ಕಚೇರಿಯಲ್ಲಿ ಕೆಲಸ ಮಾಡಿ ಬಂದವನೆಂಬ ಸಂಗತಿಯಿಂದ ಕಲಬುರ್ಗಿಯ ನನ್ನ ಸೇವೆಯು 'ಕಣ'ಹದಗೊಳ್ಳಲು ಬಹಳಷ್ಟು ಸಹಾಯ ದೊರೆತಿತ್ತೆಂಬುದನ್ನು ನಾನೆಂದೂ ಮರೆಯುವಂತಿಲ್ಲ.

ನಾನು ಬೆಂಗಳೂರಿನಲ್ಲಿರುವನಿತು ಕಾಲವೂ ಶ್ರೀ ಸಿದ್ಧಯ್ಯನವರ ದುಡಿಮೆಯ ರೀತಿ–ನೀತಿಗಳನ್ನು ಅತ್ಯಂತ ಹತ್ತಿರದಿಂದ ಕಾಣುವುದು ಸಾಧ್ಯವಾಯಿತು. ವೈಯಕ್ತಿಕ ಜೀವನದಲ್ಲಿ ಹೇಗೋ, ಹಾಗೆ ಅವರ ಸರಕಾರಿ ಸೇವಾ ಜೀವನದಲ್ಲೂ ಕೊನೆಯತನಕ ಒಡೆದು ಕಂಡ ವೈಶಿಷ್ಟ್ಯವೆಂದರೆ-ಕಾಯಕನಿಷ್ಠೆ. ಈ ಕಾಯಕನಿಷ್ಠೆಯೆದುರು ವೈಯಕ್ತಿಕ ಬೇಕು–ಬೇಡಗಳೆಲ್ಲ ಗೌಣ ; ಊಟ–ನಿದ್ದೆಗಳಿಗಾಗಿ ತಡಬಡಿಸುವುದು ಸೇವಾಭಾವಕ್ಕೆ ಊನ. ಸರಕಾರಿ ಸೇವೆಯಲ್ಲೂ commitment ಎಂಬುದೊಂದಿರುವುದಾದರೆ ಅದಕ್ಕೆ ಸಾರ್ಥಕತೆವೊದಗಿಸಿದ ಕೆಲವೇ ಕೆಲವು ಅಧಿಕಾರಿಗಳ ಸಾಲಿನಲ್ಲಿ ಸಿದ್ಧಯ್ಯನವರ ಹೆಸರನ್ನೂ ಸೇರಿಸುತ್ತ 'May his tribe increase !' ಎನ್ನಬೇಕು.

1962ರ ಚೀಣಾ ದುರಾಕ್ರಮಣ ಕಾಲಾವಧಿಯಲ್ಲಿ ವಾರ್ತಾ ಇಲಾಖೆಗೊಂದು ಹೆಚ್ಚಿನ ಹೊಣೆಗಾರಿಕೆಯಿತ್ತು. ಜನತೆಗೆ ಸತ್ಯಾಂಶಗಳನ್ನು ತಿಳಿಸುವುದಲ್ಲದೆ, ರಾಷ್ಟ್ರರಕ್ಷಣೆ ಮತ್ತು ಅಭಿವೃದ್ಧಿಕಾರ್ಯಗಳಲ್ಲಿ ಜನತೆಯು ಸಕ್ರಿಯವಾಗಿ ಭಾಗವಹಿಸುವಂತೆ ಅವರ ನೈತಿಕಸ್ಥೈರ್ಯ–ಧೈರ್ಯಗಳಿಗೆ ಪ್ರೇರಣೆ ನೀಡುವ ಕೆಲಸವೂ ಅಗತ್ಯವಾಗಿತ್ತು. ಈ ಅವಧಿಯಲ್ಲಿ ವಾರ್ತಾ ಇಲಾಖೆಯ ಮುಖ್ಯಾಧಿಕಾರಿಯಾಗಿ, ಕಪ್ತಾನರಾಗಿ, ಸಿದ್ಧಯ್ಯನವರು ಸಲ್ಲಿಸಿದ ಅವಿರತ ಸೇವೆ ಅವಿಸ್ಮರಣೀಯವಾದದ್ದು–ತಾವು ಸ್ವತಃ ಊಟ–ನಿದ್ದೆಗಳ ಪರಿವೆಯಿಲ್ಲದೆ ದುಡಿಯುವುದಲ್ಲದೆ ತಮ್ಮ ಕೈಕೆಳಗೆ ದುಡಿವವರೆಲ್ಲರಿಗೂ ಬೆನ್ನು ತಟ್ಟಿ ಅವರವರ ಪಾಲಿನ ಹೊಣೆ ನಿರ್ವಹಿಸುವಂತೆ, ಎಲ್ಲರ ದುಡಿಮೆಯ ಪರಿಣಾಮವಾಗಿ ಇಲಾಖೆಯ ಉಪಯುಕ್ತತೆ ಹೆಚ್ಚುವಂತೆ ಹುರಿದುಂಬಿಸುತ್ತಿದ್ದರು. ಜನತೆ ಮತ್ತು ಸರಕಾರಗಳ ನಡುವಿನ ಸೇತುವೆಯಂತಿರುವ ವಾರ್ತಾ ಇಲಾಖೆ ಯುದ್ಧಕಾಲದಲ್ಲಿ ಸಲ್ಲಿಸಬಹುದಾದ ಸೇವೆಯ ಅನೇಕ ಪ್ರಾಯೋಗಿಕ ಪಾಠಗಳು ನನಗಾಗ ದೊರೆತವು.

ಇಲ್ಲಿ, ಮಾದರಿಗಾಗಿ ಒಂದು ಘಟನೆಯನ್ನು ಸ್ಮರಿಸಿಕೊಳ್ಳಬಹುದು :

ಚೀಣಾ ದುರಾಕ್ರಮಣಾವಧಿಯಲ್ಲಿ ರಾಷ್ಟ್ರರಕ್ಷಣಾನಿಧಿ ಸಂಗ್ರಹದ ಬಗೆಗೆ ಜನತೆಯನ್ನು ಜಾಗೃತಗೊಳಿಸುವುದೂ ವಾರ್ತಾ ಇಲಾಖೆಯ ಮುಖ್ಯ ಕಾರ್ಯಗಳಲ್ಲಿ ಒಂದೆನಿಸಿತ್ತು. ವಿವಿಧ ಸಂಪರ್ಕ ಮಾಧ್ಯಮಗಳ ಹೊರತಾಗಿ ಆ ಅವಧಿಯಲ್ಲಿ ನಡೆದ ಪ್ರತಿಯೊಂದು ಸಭೆ–ಸಮಾರಂಭದಲ್ಲಿಯೂ ಈ ವಿಷಯದ್ದೇ ಚರ್ಚೆ. ಒಂದು ದಿನ ಮೈಸೂರ ಹುಲಿ ಟಿಪ್ಪುಸುಲ್ತಾನನ ಪುಣ್ಯತಿಥಿ ಆಚರಣೆಯಲ್ಲಿ ಭಾಗವಹಿಸಲು ಸಿದ್ಧಯ್ಯನವರು ಹೋಗಬೇಕಿತ್ತು. ಅದೇ ದಿನ ಅವರಿಗೆ ಸಣ್ಣನೆಯ ಜ್ವರ. ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ನಿಜಲಿಂಗಪ್ಪನವರು ಆ ಉತ್ಸವದ ಮುಖ್ಯ ಅತಿಥಿಗಳು. ಪುರಾಣಿಕರು ನನ್ನನ್ನು ಕರೆದು 'ಈ ಹೊತ್ತು ಶ್ರೀರಂಗಪಟ್ಟಣಕ್ಕೆ ಹೋಗಿ ಅಲ್ಲಿಯ ಸಂಘಟಕರಿಗೆ ಭೆಟ್ಟಿಯಾಗಿ ನನಗೆ ಜ್ವರವಿರುವ ಬಗ್ಗೆ ಅವರಿಗೆ ತಿಳಿಸಿ, ನೀವೇ ಒಂದು ಕವನ ಹೇಳಿ ಬಂದು ಬಿಡಿ' ಎಂದರು. ನಾನೊಂದು ಕ್ಷಣ ಅಳುಕಿದೆ, ನಿಜ. 'ಒಲ್ಲೆ' ಎನ್ನಲಿಲ್ಲ. ಶ್ರೀರಂಗಪಟ್ಟಣಕ್ಕೆ ಹೋದೆ. ಟಿಪ್ಪುಸುಲ್ತಾನನ ಸಮಾಧಿಯ ಬಳಿಯೇ ಈ ಉತ್ಸವದ ವ್ಯವಸ್ಥೆಯಾಗಿತ್ತು. ಸಂಘಟಕರನ್ನು ಕಂಡು ವಿಷಯ

ತಿಳಿಸಿ, ನೀವು ಆಗಬಹುದೆಂದರೆ, ಎಲ್ಲ ಭಾಷಣಗಳು ಮುಗಿದ ನಂತರ ನಾನೊಂದು ಪದ್ಯ ಹೇಳುತ್ತೇನೆಂದು ಸೂಚಿಸಿ ವೇದಿಕೆಯ ಬದಿಗೆ, ಪತ್ರಿಕಾಕರ್ತರ ಸಾಲಿನಲ್ಲಿ ಕುಳಿತುಕೊಂಡೆ. ಪ್ರಾಸ್ತಾವಿಕ ಭಾಷಣಗಳಾಗಿ ಮುಖ್ಯಮಂತ್ರಿಗಳು ಭಾಷಣ ಮಾಡಲಾರಂಭಿಸಿದ ಕೆಲ ಕ್ಷಣಗಳಲ್ಲಿಯೇ ವಿದ್ಯುತ್ ಪೂರೈಕೆ ನಿಂತು ಹೋಯಿತು. ಬಲ್ಬುಗಳು ಆರಿದವು–ಮೈಕು ಮೌನಧಾರಣ ಮಾಡಿತು. ನಿಮಿಷಗಳು ಉರುಳಿದವು. ಸಂಘಟಕರು ಅತ್ತಿತ್ತ ಓಡಾಡಲಾರಂಭಿಸಿದರು. ಬೆಳ್ದಿಂಗಳ ರಾತ್ರಿಯೇನೋ ನಿಜ. ಆದರೆ ವಿದ್ಯುತ್ ಪೂರೈಕೆಯಿಲ್ಲದೆ ಸಭೆಯ ವ್ಯವಸ್ಥೆ ಮೆಲ್ಲನೆ ಅವ್ಯವಸ್ಥೆಯ ಅಂಚಿಗೆ ಬಂದು ನಿಲ್ಲುವಂತಾಗಿ ಮುಖ್ಯಮಂತ್ರಿಗಳ ಮತ್ತು ಶ್ರೋತೃಗಳ ತಾಳ್ಮೆಗೆಡುವ ಲಕ್ಷಣ ಕಂಡಾಗ ನಾನು ಮೆಲ್ಲನೇ ಎದ್ದು ಹೋಗಿ, ಮುಖ್ಯಮಂತ್ರಿಗಳ ಬಳಿ ಬಾಗಿ ಕೇಳಿದೆ : ನಾನು ವಾರ್ತಾ ಇಲಾಖೆಯಿಂದ ಬಂದಿದ್ದೇನೆ. ಮೈಕ್ ಬರುವವರೆಗೆ ಸಿದ್ಧಯ್ಯ ಪುರಾಣಿಕರ ಒಂದು ಯುದ್ಧ ಗೀತೆ ಹೇಳಬಹುದೇ ಸಾರ್?" "ಆಗಬಹುದು" ಎಂದರು. ಕವನದ ಸಂದರ್ಭ ಮತ್ತು ಕವಿಯ ಹೆಸರು ಹೇಳಿ ಹಾಡಲಾರಂಭಿಸಿದೆ : 'ಕೊಡು ಖಡ್ಗವ ಕೈಗೆ–ತಾಯೇ ಕೊಡು ಖಡ್ಗವ ಕೈಗೆ !' ಪ್ರಯತ್ನಪೂರ್ವಕವಾಗಿ ಎತ್ತರ ದನಿಯಲ್ಲಿ ಬಿತ್ತರಿಸಿದ ಆ ಹಾಡಿನ ಸಾಲುಗಳು ಕ್ರಮಕ್ರಮವಾಗಿ ಶ್ರೋತೃವೃಂದದ ಕದಡಿದ ನೆಮ್ಮದಿಯ ಮೇಲೆ 'ಕಬ್ಜಾ' ಸ್ಥಾಪಿಸಿದುದನ್ನು ಕಂಡು ಒಳಗೊಳಗೇ ನನಗಂತೂ ಅತ್ಯಂತ ಆನಂದವಾಗಿತ್ತು. ಯೋಗಾಯೋಗವೆಂಬಂತೆ ಹಾಡು ಮುಗಿಯುವ ಹೊತ್ತಿಗೆ ಸರಿಯಾಗಿ ವಿದ್ಯುತ್ ಪೂರೈಕೆಯೂ ಆರಂಭವಾಗಿ ಝಗ್ಗನೆ ಬಲ್ಬುಗಳು ಹೊತ್ತಿಕೊಂಡಾಗ ಜನಸ್ತೋಮದೊಳಗೆಲ್ಲ ಹಿಗ್ಗಿನ ಹೊಳೆ ಹೊರಸೂಸಿದಂತಾಗಿತ್ತು. ಮುಖ್ಯಮಂತ್ರಿಗಳು ಮತ್ತೆ ಎದ್ದು ನಿಂತು ಅದೇ ಹಾಡಿನ ಸಾಲುಗಳನ್ನು ಉದಾಹರಿಸಿ ತಮ್ಮ ಭಾಷಣ ಮುಂದುವರಿಸಿದಾಗ ಪುರಾಣಿಕರ ಪರವಾಗಿ ನಾನು ಪಟ್ಟ ಸಮಯೋಚಿತ ಶ್ರಮ ಸಾರ್ಥಕವಾದಂತೆನಿಸಿತು. ಮರುದಿನ ಪುರಾಣಿಕರಿಗೆ ಸಮಾಚಾರ ತಿಳಿಸಿದಾಗ, 'ವಾರ್ತಾ ಇಲಾಖೆಯ ಸೇವೆಯೆಂದರೆ ಹೀಗಿರಬೇಕು !' ಎಂದು ನಕ್ಕರು.

ವಾರ್ತಾ ಇಲಾಖೆಯ ಮುಖ್ಯಾಧಿಕಾರಿಯಲ್ಲದೆ, ಪುರಾಣಿಕರು ಪ್ರಸಿದ್ಧ ಕವಿಗಳೂ ಆದ ಕಾರಣ, ಅವರನ್ನು ಕಾಣಲು ಬಂದು ಹೋಗುವವರ ಸಂಖ್ಯೆಯೂ ದೊಡ್ಡದು. ಸ್ವಭಾವತಃ ಸ್ನೇಹಪರರಾದ ಸಿದ್ಧಯ್ಯನವರು ಯಾರ ಮನಸ್ಸನ್ನೂ ನೋಯಿಸುವವರಲ್ಲ. ಯಾವ ಸಂದರ್ಶಕರೇ ಬರಲಿ, ಅವರವರ ಸ್ನೇಹಕ್ಕೆ ತಕ್ಕ ಆದರಾತಿಥ್ಯ, ಮಾತುಕತೆ, ವಿಚಾರವಿನಿಮಯ ನಡೆಯತಕ್ಕುದೇ. ಒಮ್ಮೊಮ್ಮೆ ಇವರ ಸ್ನೇಹ–ಸೌಹಾರ್ದಗಳ ಮೇಲೆ 'ಸಲಿಗೆ'ಯ ಹಕ್ಕು ಸ್ಥಾಪಿಸುವ ಸಂದರ್ಶಕರು ಬಂದಾಗಲಂತೂ ಇವರ ಮೇಜಿನ ಮೇಲೆ ಕಟ್ಟಿಗೆಯ ಪಟ್ಟಿ ಮೇಲೆ ಬರೆದಿರಿಸಿದ 'ನಿಮ್ಮ ಕೆಲಸವಾದ ಮೇಲೆ ಮತ್ತೊಬ್ಬರಿಗೆ ಅವಕಾಶ ಕೊಡಿ' ಎಂಬ ಸೂಚನೆಯ ಸಾಲು ಮೂಕಸಾಕ್ಷಿಯಾಗಿ ಬಿದ್ದುಕೊಂಡಿರುತಿತ್ತು. ಹೀಗೆ ಜನಸಂಪರ್ಕ, ಪ್ರಕಟನೆಗಳು, ಪತ್ರಿಕಾವಾರ್ತೆಗಳು, ಪ್ರಚಾರ ಕಾರ್ಯಕ್ರಮಗಳು, ಸಭೆ–ಸಮಾರಂಭಗಳಾದಿಯಾಗಿ ಹಲವೊಂದು ಜವಾಬ್ದಾರಿಯ ಕೆಲಸಗಳು ಹೆಗಲ ಮೇಲಿದ್ದರೂ 'ಸದುವಿನಯವೇ ಸದಾಶಿವನ ಒಲುಮೆಯಯ್ಯಾ' ಎಂದು ನಂಬಿಕೊಂಡು ಜನತೆಯ ಸೇವೆ ಸಲ್ಲಿಸುವ ಕಾಯಕಪ್ರವೃತ್ತಿ ಇವರ ಮೈ–ಮನಗಳಲ್ಲಿ ತುಡಿಯುತ್ತದೆ; ಅವರ ಬರೆವಣಿಗೆಯೊಳಗೆಲ್ಲ ಮಾರ್ದನಿಗೊಳ್ಳುತ್ತದೆ. ಅಂತೆಯೇ 1964ರಲ್ಲಿ ಅವರನ್ನು ವಾರ್ತಾ ಇಲಾಖೆಯಿಂದ ಹಣಕಾಸಿನ ಇಲಾಖೆಗೆ ವರ್ಗಾಯಿಸಿದಾಗ ಏರ್ಪಡಿಸಿದ ಬೀಳ್ಕೊಡುವ ಸಮಾರಂಭದ ಸಲುವಾಗಿ ನಾನೊಂದು ಕವನ ಬರೆದದ್ದು, ಅದರೊಳಗಿನ ಒಂದು ನಿರ್ದಿಷ್ಟ ಸಾಲು ಸಭಿಕರೆಲ್ಲರ ಮೆಚ್ಚಿಕೆಗೆ ಪಾತ್ರವಾದದ್ದು ಮತ್ತೆ ಮತ್ತೆ ನೆನಪಾಗುತ್ತದೆ : 'ಯಾವ ಕೆಲಸಕೆ ಕರೆದರೂ ಸಿದ್ಧಯ್ಯ !' □

# ಶ್ರೀ ಸಿದ್ಧಯ್ಯ ಪುರಾಣಿಕರಲ್ಲಿ ನನಗೆ ತೋರಿದ ಒಂದೆರಡು ವಿಷಯಗಳು

● ಎನ್. ಎಸ್. ಭರತ್

ನನಗೆ ತಮ್ಮ ಪತ್ರವನ್ನು ನೋಡಿದಾಕ್ಷಣ ಹಿಂದಿನ ನೆನಪುಗಳು ಇಂದು ನಡೆದಂತೆಯೇ ನನ್ನ ಸ್ಮೃತಿಪಟಲದ ಮೇಲೆ ಹಾದು ಹೋದವು.

ನನಗೂ, ಸಿದ್ಧಯ್ಯ ಪುರಾಣಿಕರಿಗೂ ಅವರು ನಾನಿದ್ದ ಅರ್ಥಶಾಖೆಗೆ ಬರುವ ಮೊದಲೇ ಸ್ವಲ್ಪಮಟ್ಟಿನ ಪರಿಚಯವಿತ್ತು. ಆದರೆ ಅವರನ್ನು ಅರಿಯುವ ಸದವಕಾಶ ಸಿಕ್ಕಿದ್ದು ನಮ್ಮ ಶಾಖೆಗೆ ವರ್ಗವಾದಾಗ. ನಾನು ಸಾಮಾನ್ಯವಾಗಿ ಯಾರಲ್ಲೂ ಅತಿಯಾದ ಸಂಬಂಧ ಬೆಳೆಸುವವನಲ್ಲ. ಆದರೆ ಅವರು ನನ್ನ ಮೇಲೆ ವಿಶೇಷವಾದ ವಿಶ್ವಾಸವಿಟ್ಟಿದ್ದರು. ನಾನು ಒಬ್ಬಿಬ್ಬ ವ್ಯಕ್ತಿಗಳ ಮಾತಿನಂತೆ ಐ. ಎ. ಎಸ್.ಗೆ ಹೋಗದೆ ನಮ್ಮ ಸರಕಾರಕ್ಕೆ ದುಡಿಯುತ್ತಿದ್ದುದರಿಂದ ಅವರಿಗೆ ನನ್ನ ವಿಷಯದಲ್ಲಿ ಸಹಾನುಭೂತಿಯಿತ್ತು.

ಅವರು ಅರ್ಥಶಾಖೆಗೆ ಹೊಸಬರಿದ್ದರೂ ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ ನೋಡುತ್ತಿದ್ದರು. ಶ್ರದ್ಧೆಯಿಂದ, ಜನಸಾಮಾನ್ಯರಿಗೆ ನೋವಾಗದಂತೆ ಅವರ ಹಿತಕ್ಕಾಗಿ ಕಾರ್ಯನಿರ್ವಹಿಸುತ್ತಿದ್ದರು. ನಾವು ಅನೇಕ ಸಲ ಎಷ್ಟೋ ವಿಷಯಗಳ ಬಗ್ಗೆ ಚರ್ಚೆಮಾಡುತ್ತಿದ್ದೆವು. ಒಂದು ಸಲ ಅವರು ಒಬ್ಬರ ಬಗ್ಗೆ ಒಂದು ಪುಸ್ತಕ ಬರೆಯುವುದು ಎಷ್ಟು ಕಷ್ಟ ಎಂಬುದಾಗಿ ವಿವರಿಸುತ್ತಿದ್ದುದು–ಇನ್ನೂ ನೆನಪಿದೆ. ಸ್ವಾಮಿವಿವೇಕಾನಂದರ ಜನ್ಮಶತಾಬ್ದಿಯ ಸಮಯದಲ್ಲಿ ಅವರ ವಿರುದ್ಧವಾಗಿ ಒಂದು ದೊಡ್ಡಪತ್ರಿಕೆ ಅಪಪ್ರಚಾರ ಮಾಡಿದುದನ್ನು ನನಗೆ ತೋರಿಸಿದರು. ನಾನು ಆಗ ಸ್ವಾಮಿವಿವೇಕಾನಂದರ ನಿದರ್ಶನವನ್ನೇ ಅವರಿಗೆ ಹೇಳಿದೆ. ವಿವೇಕಾನಂದರ ಕಾಲದಲ್ಲಿ ನಮ್ಮವರಿಂದ ಮತ್ತು ಅನ್ಯರಿಂದ ಅವರ ಬಗ್ಗೆ ಅಪ ಪ್ರಚಾರ ನಡೆದಿತ್ತು. ಆದರೂ ಅವರು ಎದೆಗುಂದದೆ ಹಿಂದೂ ಧರ್ಮವನ್ನೂ, ನಮ್ಮ ನಾಡಿನ ವೈಶಿಷ್ಟ್ಯವನ್ನೂ ಎತ್ತಿ ಹಿಡಿದರು. ಇದು ಎಲ್ಲಾ ಕಾಲದಲ್ಲೂ ಇದ್ದದ್ದೇ. ಯೇಸು, ಕೃಷ್ಣ, ರಾಮ, ಬುದ್ಧ, ಬಸವಣ್ಣ, ರಾಮಾನುಜ, ಶಂಕರ, ಮಧ್ವಾಚಾರ್ಯ, ಗಾಂಧಿ–ಇವರನ್ನು ಜನ ತೆಗಳದೆ ಬಿಟ್ಟರೆ? ಎಂದು ಮೊದಲಾಗಿ ವಾದಮಾಡಿದೆ. ಪುರಾಣಿಕರು ನನ್ನ ಮಾತನ್ನು ಒಪ್ಪಿದರು. ಕೆಲವು ದಿನಗಳ ನಂತರ ಕ್ಷಮಾಯಾಚನೆ ಬಂದುದನ್ನೂ ತೋರಿಸಿದರು.

ನಮ್ಮ ಉಪನಿಷತ್ತಿನಲ್ಲಿ ಹೇಳಿರುವ ಒಂದೇ ಆಕಾರ ರಹಿತ ಮತ್ತು ಇಂದ್ರಿಯರಹಿತ ಶಕ್ತಿಯನ್ನು ಹಿಡಿದಿದ್ದರೆ ಬೇರೆ ದೇಶದವರು ನಮ್ಮ ದೇಶದ ಒಂದು ಪ್ರಾಂತವನ್ನು ತೆಗೆದುಕೊಳ್ಳಲು ಆಗುತ್ತಿರಲಿಲ್ಲ. ಆದರೆ ಕರ್ಮದ ಪ್ರಕಾರ ನಾಲ್ಕು ವರ್ಗಗಳು ಅನೇಕ ಜಾತಿಯಾಗಲು ರಾಜಕೀಯಕ್ಕೆ ಅನುಕೂಲವಾಯಿತು ಎಂದುಕೊಂಡೆವು.

ಒಮ್ಮೆ ಅವರ ಮನೆಗೆ ಹೋಗಿದ್ದೆ. ಅವರು ಅತ್ಯಂತ ಆದರದಿಂದ ಬರಮಾಡಿಕೊಂಡು ಉಪಚರಿಸಿದರು. ಮಾತಿಗೆ ಮಾತು ಬಂದು ಕೆಲಜನ ಸಿರಿವಂತರಿದ್ದು ದೊಡ್ಡ ದೊಡ್ಡ ಮಾತನಾಡುತ್ತಾರೆ. ಜೇಬಿನಿಂದ ಒಂದು ಪೈಸಾ ಕೂಡ ತೆಗೆಯುವುದಿಲ್ಲವೆಂದದ್ದು ನನಗಿನ್ನೂ ಜ್ಞಾಪಕವಿದೆ.

ಪುರಾಣಿಕರ ಧಾರಾಳ ಮನಸ್ಸಿಗೆ ಒಂದು ಉದಾಹರಣೆಯನ್ನು ಕೊಡುವುದಾದರೆ ಅವರು ಕೊಡಗಿನ ಜಿಲ್ಲಾಧಿಕಾರಿಯಾಗಿದ್ದಾಗ ಎಲ್ಲಿಲ್ಲದ ಕ್ಷಾಮ ಬಂತು. ಪುರಾಣಿಕರು ಪಂಪ್‌ಸೆಟ್‌ಗಳನ್ನು, ಹಣ ಒದಗಿಸುವ ಮುಂಚೆಯೇ, ತರಿಸಿ ನೀರನ್ನೊದಗಿಸಿದ್ದರು. ನಂತರ ನಾನು ಬಜೆಟ್‌ನಿಂದ ಹಣ ಒದಗಿಸಿದೆ. ಅನಂತರ ಕೊಡಗು ಜನತೆಯ ಪರವಾಗಿ ಅವರಿಗೆ ಮೆಚ್ಚಿಗೆ ಸೂಚಿಸಿದೆ.

ಹೀಗೆ ಅನೇಕ ಸಂದರ್ಭಗಳಲ್ಲಿ ಪುರಾಣಿಕರೂ ನಾನೂ ಹೊಂದಿಕೊಂಡು ಕೆಲಸ ಮಾಡಿದ್ದೇವೆ. ಅವುಗಳನ್ನೆಲ್ಲಾ ಬರೆಯುತ್ತಾ ಹೊರಟರೆ ಎಷ್ಟಾದರೂ ಮುಗಿಯು

ವಂತೆಯೇ ಇಲ್ಲ! ಅಲ್ಲದೆ ಇಂಗ್ಲಿಷ್ ನನ್ನ ಮೊದಲ ಭಾಷೆಯಾಗಿದ್ದು ಕನ್ನಡ ನನಗೆ ಸರಿಯಾಗಿ ಬರದು. ನನ್ನ ಅನಿಸಿಕೆಗಳನ್ನು ಸರಿಯಾಗಿ ಹೇಳಲಾರೆ.

ಸಾಮಾನ್ಯರಂತೆಯೇ ಪುರಾಣಿಕರೂ ಕೂಡ ಸಂಸಾರಿ. ಆದರೆ ಅವರು ಶಾಂತಿ ಸಹನೆಯ ಮೂರ್ತಿ. ಅವರಿಗೆ ಅಳು–ನಗು, ಹೊಗಳಿಕೆ–ತೆಗಳಿಕೆ ಎಲ್ಲಾ ಒಂದೇ. ಯಾವ ದಿನವೂ ಅವರು ಕೋಪ ಮಾಡಿಕೊಂಡದ್ದು ನನಗೆ ಜ್ಞಾಪಕವಿಲ್ಲ. ನಮ್ಮ ಶಾಖೆಯಲ್ಲಿ ಸಾಮಾನ್ಯವಾಗಿ ತಲೆ ಬಿಸಿ ಮಾಡಿಕೊಂಡು ಅವರಿವರ ಮೇಲೆ ಕೂಗಾಡು ವುದು ಜಾಸ್ತಿ. ಆದರೆ ಅವರು ಆ ರೀತಿ ಮಾಡಿದ್ದನ್ನು ನಾನೆಂದೂ ಕಂಡಿಲ್ಲ.

ಎಷ್ಟೇ ಗಾಢಾಂಧಕಾರವಿದ್ದರೂ ಒಂದು ಜ್ಯೋತಿ ಬೆಳಕನ್ನು ಹರಡಿ ಕತ್ತಲೆಯನ್ನು ಹೊಡೆದಟ್ಟಿ ಭೂಮಿ ಯನ್ನು ದೂಡಿ ಸುಜ್ಞಾನದ ಪ್ರಕಾಶವನ್ನು ಚೆಲ್ಲುತ್ತದೆ. ಹಾಗೆ ಪುರಾಣಿಕರೂ ಕೂಡ ತಾವು ಹೋದಲೆಲ್ಲಾ ತಮ್ಮ ಸುಪ್ರಸನ್ನತೆಯಿಂದ ಇತರರನ್ನು ಅರ್ಥಮಾಡಿಕೊಳ್ಳಬಲ್ಲ ವರೂ ಆಗಿದ್ದರು; ಇತರರಿಗೂ ಕೂಡ ಸುಲಭಸಾಧ್ಯರೂ ಆಗಿದ್ದರು. ಅಂತೆಯೇ ಅಂಧಕಾರದಲ್ಲಿದ್ದವರನ್ನು ಬೆಳಕಿನತ್ತ ಕೊಂಡೊಯ್ಯುವ ಶಕ್ತಿ ಅವರಿಗಿದೆ. ಇಂಥ ಧೀಮಂತ ವ್ಯಕ್ತಿಗೆ ನನ್ನ ಧನ್ಯವಾದಗಳು. ಅವರಿಗೆ ಭಗವಂತನು ಆಯಸ್ಸು, ಐಶ್ವರ್ಯ, ಆರೋಗ್ಯಾದಿ ಗಳನ್ನು ಕೊಟ್ಟು ಕಾಪಾಡಲೆಂದು ಮೊರೆಯಿಡುತ್ತೇನೆ. □

ನದಿಯೆ ಬತ್ತಿರುವಾಗ
ನೀರ್–ಬೀಳು ಎಲ್ಲಿಯದಯ್ಯಾ ?
ನೀರ್–ಬೀಳೆ ನಿಂತಿರುವಾಗ
ವಿದ್ಯುದುತ್ಪಾದನೆ ಎಲ್ಲಿಯದಯ್ಯಾ ?
ಸ್ವತಂತ್ರ ಧೀರ ಸಿದ್ಧೇಶ್ವರಾ
ಮಾನವ್ಯವೇ ಮೃತವಾದಾಗ
ನಲ್–ಬಾಳು ಎಲ್ಲಿಯದಯ್ಯಾ

—ವಚನೋದ್ಯಾನ, ಪು. 407.

# ಸರ್ಕಾರದ ಮುಖಾಂತರ

# ಸಾಮಾನ್ಯರ ಸೇವೆ

● ಜಯತೀರ್ಥ ರಾಜಪುರೋಹಿತ

ಸರ್ಕಾರ ಒಂದಿಲ್ಲೊಂದು ಸ್ವರೂಪದಲ್ಲಿ ಬಹುಕಾಲದಿಂದ ನಮ್ಮ ಸಮಾಜವ್ಯವಸ್ಥೆಯಲ್ಲಿ ಕಾಣುತ್ತ ಬಂದಿದೆ. 'ಸಾಮಾನ್ಯ' ಅದಕ್ಕೂ ಮುಂಚಿನಿಂದಲೂ ಇದ್ದಾನೆ. ಒಂದು ವಿಧದಲ್ಲಿ ಈ ಸಾಮಾನ್ಯರೇ ಸರ್ಕಾರದ ಕಲ್ಪನೆಗೆ, ಹುಟ್ಟಿಗೆ, ಬದಲಾವಣೆಗೆ ಕಾರಣರಾಗುತ್ತ ಬಂದಿರುವುದು ಸಮಾಜಶಾಸ್ತ್ರ, ರಾಜ್ಯಶಾಸ್ತ್ರಗಳ ಇತಿಹಾಸದಿಂದ ತಿಳಿದು ಬರುತ್ತದೆ. ಇತ್ತೀಚಿನ ವರ್ಷಗಳಲ್ಲಿಯಂತೂ ಈ 'ಸಾಮಾನ್ಯ'ನಿಗೆ 'ಶ್ರೀ'ಮಂತಿಕೆ ಬಂದು ಶ್ರೀಸಾಮಾನ್ಯನಾಗಿ ಪ್ರಾಧಾನ್ಯ ಪಡೆದಿದ್ದಾನೆ. ಅವನ ಹೆಸರಿನ ಸದುಪಯೋಗ ಅಥವಾ ದುರುಪಯೋಗದಷ್ಟು ಬೇರಾವ ಪದದ ಉಪಯೋಗವೂ ಆಗಿಲ್ಲವೆಂದು ಹೇಳಬಹುದು. ಎಲ್ಲವೂ ಸಾಮಾನ್ಯನ ಹೆಸರಿನಲ್ಲೇ ನಡೆಯುತ್ತದೆ. ಹೀಗಿದ್ದರೂ ಎಲ್ಲವನ್ನೂ ಸಾಮಾನ್ಯರಿಗಾಗಿ ಮಾಡುವೆವೆಂದು ಹೇಳುವವರು, ಮಾಡುತ್ತಿರುವವರು ಯಾವಾಗಲೂ ಅಸಾಮಾನ್ಯರೇ. ಇದು ಐತಿಹಾಸಿಕ ಸತ್ಯ.

ನಿರಂಕುಶ ರಾಜಸತ್ತೆ ಇದ್ದಾಗಲೂ ರಾಜನ ಪ್ರತಿಜ್ಞಾವಿಧಿ ಪ್ರಜಾಕ್ಷೇಮವನ್ನೇ ವಿಧಿಸುತ್ತಿತ್ತು. ಪ್ರಜಾ "ರಂಜಕತ್ವಾತ್" ರಾಜಾ ಎಂದೇ ವ್ಯಾಖ್ಯಾನಿಸುತ್ತಿದ್ದರು. ಪ್ರಜಾರಂಜನೆ ರಾಜನ ಮುಖ್ಯ ಪ್ರಾತಿನಿಧಿಕ ಕಾರ್ಯವೆಂದೆನಿಸಿದಾಗ ರಾಜಸೇವೆ ಅಥವಾ ರಾಜಕಾರ್ಯವೆಂದರೆ ಪ್ರಜಾಸೇವೆ ಅಥವಾ ಸಾಮಾನ್ಯರ ಕೆಲಸವೆಂಬ ಗ್ರಹಿಕೆಯುಂಟಾಗುವುದು ಸಹಜ. ಉತ್ತಮ ಜನೋಪಯೋಗಿ ಸೇವೆಸಲ್ಲಿಸಿದ ಅಧಿಕಾರಿಗಳಿಗೆ "ರಾಜಕಾರ್ಯ ಪ್ರವೀಣ", "ರಾಜಸೇವಾಸಕ್ತ" ಇತ್ಯಾದಿ ಬಿರುದುಗಳನ್ನು ನೀಡುತ್ತಿದ್ದ ಸಂಪ್ರದಾಯದ ಹಿಂದಿದ್ದ ಭಾವ ಇದೇ ಆಗಿರಬಹುದು. ಆದರೂ ಸಾಮಾನ್ಯನ ಸೇವೆಯನ್ನು ನೇರವಾಗಿ ಗುರುತಿಸದೆ "ರಾಜ"ನ ಮೂಲಕ "ರಾಜಸೇವೆ" ಯೆಂದು ಗುರುತಿಸುವಲ್ಲಿ ರಾಜ್ಯವ್ಯವಸ್ಥೆಯ ದೋಷ ಎದ್ದು ಕಾಣುವುದಲ್ಲವೆ ? ಅಂದರೆ ನಿರಂಕುಶ ರಾಜ್ಯವ್ಯವಸ್ಥೆಯಲ್ಲಿ ಸಾಮಾನ್ಯನಿಗೆ ರಾಜನ ಹೊರತಾದ ಸ್ವಂತ ಅಸ್ತಿತ್ವವಿರಲಿಲ್ಲವೆಂದೇ ಹೇಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಫ್ರಾನ್ಸಿನ ಚಕ್ರವರ್ತಿ ಹದಿನಾಲ್ಕನೇ ಲುಯಿ "I am the State"–"ನಾನೇ ರಾಜ್ಯ" ಎನ್ನುತ್ತಿದ್ದುದು ಅರ್ಥಪೂರ್ಣವಾಗಿ ಆಗಿನ ರಾಜ್ಯ ವ್ಯವಸ್ಥೆಯನ್ನು ಧ್ವನಿಸುತ್ತದೆ.

ರಾಜ್ಯವ್ಯವಸ್ಥೆಗಳು ಬದಲಾದವು. ಆಳುವ ರೀತಿಗಳಲ್ಲಿ ವೈವಿಧ್ಯ ಕಂಡವು. ಚುನಾವಣೆಯ ಪದ್ಧತಿಗಳಲ್ಲಾದ ಬದಲಾವಣೆಗಳು ಆಳುವ ವ್ಯವಸ್ಥೆಯಲ್ಲಿ ಸಾಮಾನ್ಯನ ಧ್ವನಿಗೆ ದೊರೆತ ಪ್ರಾಶಸ್ತ್ಯದ ಫಲವೆಂದೇ ಹೇಳಬಹುದು. ಆದರೂ ವಾಸ್ತವವಾಗಿ ಆಳುವವನು ಸಾಮಾನ್ಯನೇ ? ಎಂಬ ಪ್ರಶ್ನೆ ಇನ್ನೂ ಉಳಿದೇ ಇದೆ. ಇದನ್ನೇ ಸಮರ್ಥಿಸಲೆಂಬಂತೆ ಇಂದಿನ ವ್ಯವಹಾರವೆಲ್ಲ "On India Govt Service" "ಭಾರತ ಸರ್ಕಾರದ ಸೇವೆಯಲ್ಲಿ"ಎಂದು ನಡೆಯುತ್ತಿರುವುದು ಸೋಜಿಗವಲ್ಲವೆ? ಸರ್ಕಾರಿ ಅಧಿಕಾರಿಗಳಿಗೆ — Public Servants ಸಾರ್ವಜನಿಕ ಸೇವಕರೆಂದಾಗಲೀ – ಅವರ ವರ್ಗಾವರ್ಗಿಗಳನ್ನು In the interest of Public Service "ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ" ಎಂದಾಗಲೀ ಆಗಾಗ ಬಳಸುವೆವಾದರೂ ಸರ್ಕಾರಿ ಸೇವೆಯಲ್ಲಿ ಇರುವವರು–ಸಾಮಾನ್ಯರ ಸೇವಕರೆಂಬ ಭಾವನೆ ಮತ್ತು

ತಾದಾತ್ಮ್ಯ, ಸರ್ಕಾರಿ ಸೇವಕರಲ್ಲಿಯೂ ಮತ್ತು ಸಾಮಾನ್ಯರಲ್ಲಿಯೂ ಇನ್ನೂ ಪೂರ್ತಿ ಮೂಡಿಲ್ಲ.

ಪ್ರಜಾಸತ್ತೆಯಲ್ಲಿ ಸರ್ಕಾರ ಮತ್ತು ಸಾಮಾನ್ಯ ಒಂದೇ ಎಂಬುದನ್ನು ತಾತ್ವಿಕವಾಗಿ ಒಪ್ಪಿಕೊಂಡಿರುವೆವಾದರೂ ವಸ್ತುಸ್ಥಿತಿಯಲ್ಲಿ ಸರ್ಕಾರ ಮತ್ತು ಸಾಮಾನ್ಯರ ನಡುವೆ ಪರಂಪರಾಗತವಾಗಿ ಬೆಳೆದು ಬಂದಿರುವ ಬಿರುಕನ್ನು ಬೆಸೆಯುವಲ್ಲಿ ಸಫಲರಾಗಿದ್ದೇವೆಯೆ ? ಎಂದು ನಾವು ನಮ್ಮನ್ನೇ ಕೇಳಿಕೊಳ್ಳಬೇಕು. ಏಕಾಧಿಪತ್ಯ ಅಥವಾ ಮುಖಂಡಾಧಿಪತ್ಯದ ಕಾಲದಿಂದ 'ಸರ್ಕಾರ' ಎಂಬ ಸಂಸ್ಥೆಯ ಸುತ್ತ ಬೆಳೆದು ಬಂದ ಅಧಿಕಾರ, ದರ್ಪ, ವೈಭವ-ಪ್ರೇಮಗಳು ಸಾಮಾನ್ಯರನ್ನು ಕಡೆಗಣಿಸಿದವು. ಆಗಿನಿಂದ 'ಸರ್ಕಾರ' ಎಂದರೆ ಬೆದರಿ ದೂರ ನಿಂತ ಸಾಮಾನ್ಯನೊಂದಿಗೆ ಇಂದಿನ ಅಧಿಕಾರಿಗಳಾದ ನಾವು ಎಷ್ಟು ಬೆರೆಯಬಲ್ಲೆವು ಎಂಬುದೇ ನಮ್ಮ ಸೇವಾಭಾವದ ಒರೆಗಲ್ಲು.

ಮಲೆನಾಡಿನಲ್ಲಿ ಒಂದು ಜಾನಪದ ವಚನವನ್ನು ನಾನೊಮ್ಮೆ ಕೇಳಿದೆ:

"ಸರಕಾರವು ಬಕ್ಕು। ಸರಕು ಮುಚ್ಚಿಡಕ್ಕೂ

ಹರಕುಪಂಚೆ ಉಡಕ್ಕು। ಮುರುಕು ಮನೆ ತೋರಕ್ಕು"

ಸರ್ಕಾರದ ಬಗ್ಗೆ ಸಾಮಾನ್ಯನ ಕಲ್ಪನೆ ಈಗಲೂ ಈ ರೀತಿ ಉಳಿದಿದ್ದರೆ ಇದಕ್ಕೆ ಸರ್ಕಾರದ ಅಧಿಕಾರಿಗಳಾದ ನಾವೇ ಕಾರಣರಲ್ಲದೆ ಇನ್ನಾರು ?

ಸರ್ಕಾರ ಇರುವುದೇ ಸಾಮಾನ್ಯರ ಸೇವೆಗಾಗಿ ಎಂದಾಗ "ಸರ್ಕಾರದ ಮೂಲಕ ಸಾಮಾನ್ಯರ ಸೇವೆ" ಎಂಬ ಶೀರ್ಷಿಕೆಗೆ ವಿಶೇಷ ಅರ್ಥ ಕಂಡುಬರುವುದಿಲ್ಲ. ಆದರೆ ಸಾಮಾನ್ಯರ ಸೇವೆ ಮಾಡ ಹೊರಟ ಹಲವು ಸೇವಾಸಂಸ್ಥೆಗಳೂ ಇವೆ. ಸಾಮಾನ್ಯರ ಸೇವೆಯೇ ಉಪಜೀವನದ ಉದ್ಯೋಗ ಮಾಡಿಕೊಂಡಿರುವ ನಿರುದ್ಯೋಗಿಗಳೂ ನಮ್ಮಲ್ಲಿ ಇದ್ದಾರೆ. ಸರ್ಕಾರದ ಮೂಲಕ ಮಾಡುವ ಸಾಮಾನ್ಯರ ಸೇವೆಯನ್ನು ಬಹುಶಃ ಅಂಥ ಸೇವೆಗಳಿಂದ ಪ್ರತ್ಯೇಕಿಸಿ ನೋಡಬೇಕಾಗುತ್ತದೆ.

ಸರ್ಕಾರದ ಮೂಲಕ ಸಾಮಾನ್ಯರ ಸೇವೆಗೆ ಇರುವಷ್ಟು ಅವಕಾಶ ಬೇರೆ ಯಾವ ಕಡೆಗೂ ಸಿಗಲಾರದು. "ಕೆರೆಯ ನೀರನು ಕೆರೆಗೆ ಚೆಲ್ಲಿ" ಪುಣ್ಯಗಳಿಸಿಕೊಳ್ಳುವ ಸೌಲಭ್ಯವದು. "ವೇದಾಭ್ಯಾಸ ಜಡ" ಎಂಬುದೊಂದು ಮಾತು ಇದೆ. ಅಂದರೆ ವ್ಯಾವಹಾರಿಕ ಉಪಕಾರಕ ದೃಷ್ಟಿಯಿಲ್ಲದ ಕರ್ಮಠ ಪಂಡಿತ ಎಂದರ್ಥ. ಕಾಯದೆ ಮತ್ತು ನಿಯಮಗಳು ಇರುವುದು ಜನಸಾಮಾನ್ಯರ ಒಳಿತಿಗಾಗಿ ಎಂಬ ಮೂಲತತ್ವದಲ್ಲಿ ಶ್ರದ್ಧೆ ಇದ್ದು ಜನಸಾಮಾನ್ಯರ ಬಗ್ಗೆ ಅನುಕಂಪವಿರುವ ಅಧಿಕಾರಿ ನಿಯಮಗಳಿಗೆ ಜನಾನುಕೂಲಕರವಾದ ವಿವರಣೆ ನೀಡಿ ಸಹಾಯ ಮಾಡಬಲ್ಲ ಅನೇಕ ಸಂದರ್ಭಗಳು ಸೇವಾ ಅವಧಿಯಲ್ಲಿ ಬರುತ್ತವೆ. ಅಂಥ ಅನುಕಂಪವಿಲ್ಲದ ಮನುಷ್ಯ ಕರ್ಮಠಪಂಡಿತನಂತೆ ಕಾಯದೆಯ ಶಬ್ದಕ್ಕಂಟಿಕೊಂಡು ಏನೂ ಮಾಡದೇ ಅಥವಾ ಅನಾನುಕೂಲವುಂಟುಮಾಡಿಯೂ ಕರ್ತವ್ಯ ನಿರ್ವಹಿಸಿದೆನೆಂದು ತೃಪ್ತಿಪಟ್ಟುಕೊಳ್ಳಬಹುದು.

ಈಗಿನ ವ್ಯವಸ್ಥೆಯಲ್ಲಿ ಅವರೂ ಸಲ್ಲುತ್ತಾರೆ, ಇವರೂ ಸಲ್ಲುತ್ತಾರೆ. ಆದರೆ ನಮಗೊಂದು ಆತ್ಮಸಾಕ್ಷಿ, ವಿವೇಕವೆಂಬುದು ಇದೆ ಎಂಬ ಅರಿವೂ ನಮಗೂ ಇರುತ್ತದೆ. ಜನರೂ ತಿಳಿದಿರುತ್ತಾರೆ. ಇದಲ್ಲದೆ ನಾವು ಮಾಡುವ ಕೆಲಸಕ್ಕೆ ಎಂಥದೋ ಪ್ರತಿಫಲ ಸಿಗುವುದೆಂದಾದರೂ, ಮಾಡಿದ ಕೆಲಸದಲ್ಲಿ ತೃಪ್ತಿಯುಂಟಾದಾಗ ಆಗುವ (Job satisfaction) ಆನಂದ ಯಾವ ವೇತನ, ಪ್ರತಿಫಲಗಳಿಂದಲೂ ಸಿಗಲಾರದು. ನಮ್ಮ ಸೇವೆಯಿಂದ, ಕೆಲಸದಿಂದ ತೃಪ್ತಿಪಡೆದ ನಾಲ್ಕು ಸಾಮಾನ್ಯ ಜೀವಿಗಳು ಆನಂದಿಸುವುದನ್ನು ಕಂಡು ಆನಂದಿಸುವುದರಲ್ಲಿಯೂ ಒಂದು ಧನ್ಯತೆ ಇರುತ್ತದೆ.

ಸರ್ಕಾರಿ ಸೇವೆಯಲ್ಲಿ ಈ ದೃಷ್ಟಿಯನ್ನಿಟ್ಟುಕೊಂಡ ಕೆಲವರು ಹಿರಿಯರನ್ನು ಕಂಡಿದ್ದೇನೆ. ಅವರಲ್ಲಿ ಗೆಳೆಯರಾದ ಶ್ರೀ ಕಾವ್ಯಾನಂದರೂ ಒಬ್ಬರೆಂದು ಹೆಮ್ಮೆಪಟ್ಟಿದ್ದೇನೆ. □

ಉರ್ದು ಮೂಲ :
● ಹಮೀಡ ಅಲ್ಮಾಸ್
ಅನುವಾದ :
● ಡಾ. ಹೆಚ್. ಚಂದ್ರಶೇಖರ

# ನಾ ಕಂಡ ಕಾರ್ಮಿಕ ಕಮೀಷನರ್ ಡಾ. ಸಿದ್ಧಯ್ಯ ಪುರಾಣಿಕ

ಹಲವಾರು ವರ್ಷಗಳಿಂದ ನನಗೆ ಸಾಹಿತಿ ಡಾ. ಸಿದ್ಧಯ್ಯ ಪುರಾಣಿಕರ ಪರಿಚಯವಿತ್ತು. ಕರ್ನಾಟಕ ಉದಯ ವಾಗುವುದಕ್ಕಿಂತ ಪೂರ್ವದಲ್ಲಿ, ಹೈದರಾಬಾದಿನಲ್ಲಿ ಅವರ ಕನ್ನಡ ಕಾವ್ಯದ ಬಗ್ಗೆ ಹಾಗೂ ಉರ್ದು ಸಾಹಿತ್ಯಾಭಿ ರುಚಿಯ ಬಗ್ಗೆ ಹಲವಾರು ಸಂಗತಿಗಳು ನನಗೆ ಗೊತ್ತಿದ್ದವು. ಆಗ ಅಲ್ಲಿ ಅವರ ಭಾಷಣಗಳು ಬುದ್ಧಿ ಮತ್ತು ಹೃದಯಗಳ ದ್ವಾರಗಳನ್ನು ತೆರೆಯಿಸುತ್ತವೆ ಎಂಬ ಖ್ಯಾತಿಯೂ ಇತ್ತು. ಆದರೆ ೧೯೫೮ರ ವರೆಗೆ ನನ್ನ ಮತ್ತು ಅವರ ಮುಖತಃ ಪರಿಚಯವಾಗಿರಲಿಲ್ಲ. ಆ ವರ್ಷ ಮೈಸೂರಿನ ದಸರೆಯ ಕವಿ ಸಮ್ಮೇಳನದಲ್ಲಿ ನನ್ನ ಮತ್ತು ಅವರ ಪರಸ್ಪರ ಭೇಟಿಯಾದಾಗ ನನ್ನ ಹೃದಯ ತುಂಬಿ ಬಂತು. ಅಲ್ಲಿಂದೀಚೆಗೆ ನಾನು ಅವರನ್ನು ತುಂಬಾ ಸಮೀಪದಿಂದ ನೋಡಿದ್ದೇನೆ ಹಾಗೂ ಅವರ ಬಹುಮುಖ ಪ್ರತಿಭೆಯ ವ್ಯಕ್ತಿತ್ವವನ್ನು ಕಂಡಿದ್ದೇನೆ ಹಾಗೂ ಆ ವ್ಯಕ್ತಿತ್ವದಿಂದ ಪ್ರಭಾವಿತನಾಗಿದ್ದೇನೆ.

೧೯೬೪ ರಲ್ಲಿ ನನ್ನನ್ನು ಬೆಂಗಳೂರಿಗೆ ವರ್ಗಾಯಿಸಲಾಯಿತು. ನಾನು ಅವರ ಮನೆಯ ಹತ್ತಿರದಲ್ಲೇ ವಾಸಿಸುತ್ತಿದ್ದರಿಂದ ನಮ್ಮಿಬ್ಬರ ಮಧ್ಯದ ಭೌಗೋಳಿಕ ಅಂತರ ಕಡಿಮೆಯಾಗಿ ಪರಸ್ಪರ ಭೇಟಿ ಮತ್ತು ಚರ್ಚೆಗೆ ತುಂಬಾ ಸಹಕಾರಿಯಾಯಿತು. ಅವರ ಮನೆಗೆ ಹಲವಾರು ಸಲ ಹೋಗಿಬರುತ್ತಿದ್ದೆ. ಪ್ರತಿ ಭೇಟಿಯಲ್ಲೂ ನಮ್ಮ ಹರಟೆಯಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಇತ್ಯಾದಿ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸುತ್ತಿದ್ದೆವು. ನನ್ನ ಆ ಭೇಟಿಗಳಿಂದಾಗಿ ಡಾ. ಪುರಾಣಿಕರ ಮಡದಿ ಮಕ್ಕಳಿಗೆ ಕೊಂಚ (ಬಹುಶಃ ಹೆಚ್ಚೇ ಇರಬೇಕು) ತೊಂದರೆಯಾಗಿರಬಹುದು. ಅವರ ಹಲವಾರು ಪ್ರೋಗ್ರಾಂಗಳಿಗೆ ಬಾಧೆಯಾಗಿರಬಹುದು. ಆದರೆ ಡಾ. ಸಿದ್ಧಯ್ಯ ಪುರಾಣಿಕರಿಗೆ, ಸಾಹಿತಿಗಳೊಂದಿಗೆ ಮಾತುಕತೆ ಮತ್ತು ಸಾಹಿತ್ಯದ ಚರ್ಚೆಯಲ್ಲಿ ತಮ್ಮ ಗೃಹ ಮತ್ತು ಗೃಹಕೃತ್ಯಗಳ ನೆನಪೇ ಇರುವುದಿಲ್ಲ. ನನ್ನ ಹಲವಾರು ಭೇಟಿಗಳಿಂದ ಅವರ ಮನೆಯವರಿಗೆ ತೊಂದರೆಯಾದದ್ದೇನೋ ನಿಜ; ಆದರೆ ಅದರ ಪೂರ್ಣಲಾಭ ಮಾತ್ರ ನನಗೆ. ಪ್ರತಿಸಲವೂ ಅವರ ಮನೆಯಿಂದ ಹಿಂತಿರುಗುವಾಗ, ಒಂದೇ ಬಾರಿಗೆ ಹಲವಾರು ಉಪಯುಕ್ತ ಹಾಗೂ ವಿದ್ವತ್ಪೂರ್ಣ ಗ್ರಂಥಗಳನ್ನೋದಿದಷ್ಟು ಜ್ಞಾನ ನನಗೆ ಸಿಕ್ಕ ಅನುಭವವಾಗುತ್ತಿತ್ತು. ಒಬ್ಬರ ಅನಾನುಕೂಲ, ಇನ್ನೊಬ್ಬರ ಆನಂದ. ಬಹುಶಃ ಇದು ಪ್ರಕೃತಿ ನಿಯಮವೇನೋ !

ಸ್ವಲ್ಪ ಕಾಲಾನಂತರ ಕಲ್ಬುರ್ಗಿಗೆ ನನ್ನ ವರ್ಗವಾಯಿತು. ಪುರಾಣಿಕರು ಬೆಳಗಾಂವಿಗೆ ಜಿಲ್ಲಾಧಿಕಾರಿಯಾಗಿ ಹೋದರು. ೧೯೭೦ರ ಅಕ್ಟೋಬರ್ ತಿಂಗಳಲ್ಲಿ ನಾನು ಪುನಃ ಬೆಂಗಳೂರಿಗೆ ಬಂದೆ ಮತ್ತು ಸರಿಯಾಗಿ ಒಂದು ವರ್ಷದ ನಂತರ ಸಿದ್ಧಯ್ಯನವರು ನಾನು ಕೆಲಸದಲ್ಲಿರುವ ಇಲಾಖೆಯ ಮುಖ್ಯಾಧಿಕಾರಿ—ಕಾರ್ಮಿಕ ಕಮೀಷನರ್ ಆಗಿ ಬೆಂಗಳೂರಿಗೆ ಹಿಂತಿರುಗಿದರು. ಅವರು ಅಧಿಕಾರ ವಹಿಸಿಕೊಂಡ ನಂತರ ನಮ್ಮ ಆಫೀಸಿನಲ್ಲಿ ಕೆಲಸ ಮಾಡುವವರೆಲ್ಲರೂ ಅವರನ್ನು ಅವರ ಕೋಣೆಯಲ್ಲಿ (Chamber) ಭೇಟಿಯಾದರು. ಆದರೆ ನಾನು ಹೋಗಲಿಲ್ಲ. ಆಗ ನಾನೊಂದು ವಿಚಿತ್ರ ಒಳತೋಟಿಯಲ್ಲಿ ತೊಳಲಾಡುತ್ತಿದ್ದೆ. ಈಗ ಅವರು ನಮ್ಮ ಇಲಾಖೆಯ ಮುಖ್ಯಸ್ಥರಾಗಿರುವುದರಿಂದ, ನಮ್ಮಲ್ಲಿ ಇದುವರೆಗೆ ಬೆಳೆದಿರುವ ಸಾಹಿತ್ಯದ ಸುಮಧುರ ಬಾಂಧವ್ಯ ಬಹುಶಃ ಕಮರಿ

ಹೋಯಿತು ಎಂಬ ವ್ಯಥೆಭರಿತ ಭಯ ನನ್ನೆದೆಯಲ್ಲಿತ್ತು. ನಂತರ ಅವರು ಆಫೀಸಿನ ಪ್ರತಿ ಕೋಣೆಗೂ ಬಂದರು. ನನ್ನ ಕೋಣೆಗೆ ಬಂದಾಗ ನನ್ನನ್ನು ಕಂಡು ಅಚ್ಚರಿಯಿಂದ "ನೀವೂ ಇಲ್ಲಿಯೇ ಇದ್ದೀರಾ" ಎಂದು ನುಡಿದರು. ನಂತರ ನಾನು ಅವರ ಆಪ್ತಸಹಾಯಕನಾಗಿ ನೇಮಕ ಗೊಂಡಾಗ, ನನ್ನ ಆ ಭಯಕ್ಕೆ ನೆಲೆಯಿಲ್ಲ ಎನಿಸಿತು. ಅವರು ತಮ್ಮ ವೇಳೆ ಮತ್ತು ಶಕ್ತಿಯನ್ನು ಸರ್ಕಾರಿ ಕೆಲಸಕ್ಕಾಗಿ (ಕಾಯಕವೆಂದರೆ ಸರಿಯಾದೀತು) ಮತ್ತು ಸಾಹಿತ್ಯಕ್ಕಾಗಿ ಬೇರೆ ಬೇರೆಯಾಗಿ ನಿಗದಿಪಡಿಸಿದ್ದರೆಂಬುದನ್ನು ನಾನು ನಾಲ್ಕು ವರ್ಷಗಳ ಕಾಲ ಅವರ ಆಪ್ತ ಸಹಾಯಕನಾಗಿ ಮತ್ತು ಉರ್ದು ಕವಿಯಾಗಿ ಕಂಡುಕೊಂಡಿದ್ದೇನೆ. ಇದಕ್ಕೆ ಸಾಕ್ಷಿಯಾಗಿ ಒಂದೆರಡು ಘಟನೆಗಳನ್ನು ಮಾತ್ರ ಈ ಲೇಖನದಲ್ಲಿ ಉದಾಹರಿಸುತ್ತೇನೆ.

ಕಾರ್ಮಿಕ ಕಮೀಷನರ್ ಆಗಿ ಸಿದ್ಧಯ್ಯನವರು, ಸುಮಾರು ನಾಲ್ಕು ವರ್ಷಗಳ ಕಾಲ ಅಧಿಕಾರದಲ್ಲಿದ್ದರು. ಹಾಗೂ ಅಲ್ಲಿಯೇ ಸರ್ಕಾರಿಸೇವೆಯಿಂದ ನಿವೃತ್ತರಾದರು. ಸಿದ್ಧಯ್ಯನವರು ಆಫೀಸಿನ ವೇಳೆಯಲ್ಲಿ ಕೇವಲ ಆಫೀಸಿನ ಕೆಲಸಕ್ಕೆ ತಮ್ಮೆಲ್ಲ ಸಮಯ ಮತ್ತು ಶಕ್ತಿಯನ್ನು ವಿನಿಯೋಗಿಸುತ್ತಿದ್ದರು ; ಶರಣರ ಪಾರಿಭಾಷಿಕ ಶಬ್ದವನ್ನು ಬಳಸಿ ಹೇಳುವುದಾದರೆ ಕಾಯಕನಿಷ್ಠರಾಗಿರುತ್ತಿದ್ದರು. ಒಂದು ಸಲ ನಾನು ಅವರ ಒಂದು ರೇಡಿಯೋ ಭಾಷಣದ ಬಗ್ಗೆ ಚರ್ಚಿಸಲು (ಆಫೀಸಿನಲ್ಲಿ ಕೊಂಚ ಬಿಡುವೆಂದು ನನಗೆ ಅನಿಸಿದಾಗ) ಮುಂದಾದೆ. ಆಗ ಅವರು ಈ ಬಗ್ಗೆ ಸಾಯಂಕಾಲ ೫–೩೦ರ ನಂತರ ಮಾತನಾಡೋಣ ಎಂದು ಹೇಳಿದರು. ಈ ಅವಧಿಯಲ್ಲಿ ಮಹಾನುಭಾವ ಬಸವಣ್ಣನವರ ವಚನಗಳನ್ನು ನಾನು ಉರ್ದು ಭಾಷೆಗೆ ಭಾಷಾಂತರಿಸುತ್ತಿದ್ದೆ. ಒಂದು ದಿನ ಒಂದು ವಚನದ ಬಗ್ಗೆ ನನ್ನ ಸಂದೇಹ ಪರಿಹರಿಸಿಕೊಳ್ಳಲು ಮತ್ತು ಆ ವಚನದ ಭಾಷಾಂತರದ ಬಗ್ಗೆ ಅವರ ಅಭಿಪ್ರಾಯ ಕೇಳಿದೆ. ಆಗಲೂ ಅವರು "ಆಫೀಸಿನ ವೇಳೆ ಮುಗಿದ ನಂತರ ಚರ್ಚಿಸೋಣ" ಎಂದರು. ಅವರು ತಮ್ಮ ಕಾಯಕಕ್ಕೆ ಯಾರಿಂದಲೂ ಯಾವ ಕಾರಣಕ್ಕೂ ಬಾಧೆಯಾಗದಂತೆ ಎಚ್ಚರ ವಹಿಸುತ್ತಿದ್ದರು. ಈ ಎರಡು ಘಟನೆಗಳು ಅವರ ಕರ್ತವ್ಯ ನಿಷ್ಠೆಗೆ ಸಾಕ್ಷಿ.

ಆಫೀಸಿನ ವೇಳೆ ಮುಗಿದ ನಂತರ ಅವರು ಕನ್ನಡದ ಸಾಹಿತಿ ಸಿದ್ಧಯ್ಯನವರು, ನಾನು ಉರ್ದುಕವಿ ಹಮೀದ ಅಲ್ಮಾಸ್. ಈ ಅವಧಿಯಲ್ಲಿಯೇ ನಾನು ಬಸವಣ್ಣನವರ ವಚನಗಳನ್ನು ಉರ್ದು ಭಾಷೆಗೆ ಅನುವಾದಿಸಿದೆ. ಸಿದ್ಧಯ್ಯನವರು ನನ್ನ ಅನುವಾದವನ್ನು ಓದಿ ಅಲ್ಲಲ್ಲಿ ತಿದ್ದಿದರು. ಈ ಕೃತಿಗೆ ಸಿದ್ಧಯ್ಯನವರು ಉರ್ದುವಿನಲ್ಲಿ ಒಂದು ವಿದ್ವತ್ಪೂರ್ಣವಾದ ಮುನ್ನುಡಿಯ ಸುಂದರ ತಿಲಕವನ್ನಿಟ್ಟಿದ್ದಾರೆ. ಉರ್ದು ಭಾಷೆಯ ಮೇಲಿರುವ ಅವರ ಪ್ರಭುತ್ವಕ್ಕೆ ಹಾಗೂ ನಮ್ಮಿಬ್ಬರ ಮಧ್ಯೆ ಇರುವ ವ್ಯವಹಾರಿಕ ಸಂಬಂಧವನ್ನು ಮೀರಿ ಬೆಳೆದಿರುವ ಸಾಹಿತ್ಯಿಕ ಸುಮಧುರ ಬಾಂಧವ್ಯಕ್ಕೆ ಸಾಕ್ಷಿ—ಅವರು ಬರೆದಿರುವ ಈ ಮುನ್ನುಡಿ. ಕರ್ನಾಟಕದ ಸಾಹಿತ್ಯದ ಹಾಗೂ ಸಾಮಾಜಿಕ ಇತಿಹಾಸದಲ್ಲಿ ಮನ್ವಂತರವನ್ನು ಸಾಧಿಸಿದ ಕ್ರಾಂತಿಕಾರಿ ಹಾಗೂ ದ್ರಷ್ಟಾರ ಮತ್ತು ಜಗತ್ತಿನ ಮಹಾಪುರುಷರಲ್ಲಿ ಒಬ್ಬರಾದ ಬಸವಣ್ಣನವರ ವ್ಯಕ್ತಿತ್ವವನ್ನು ಅವರ ವಚನಗಳ ಮೂಲಕವೇ ನನಗೆ ದರ್ಶನ ಮಾಡಿಸಿದವರು ಸಿದ್ಧಯ್ಯನವರು. ಈ ಕೃತಿಯು ತುಂಬಾ ಜನಪ್ರಿಯವಾಗಿ ಪ್ರತಿಗಳೆಲ್ಲವೂ ಮಾರಾಟವಾಗಿ ನನಗೆ ಕೀರ್ತಿಯನ್ನು ಧನವನ್ನೂ ನೀಡಿದೆ ಎಂದು ನಮ್ರನಾಗಿ ಇಲ್ಲಿ ಹೇಳಬಯಸುತ್ತೇನೆ. ಇಷ್ಟೆಲ್ಲಕ್ಕೂ ಡಾ. ಸಿದ್ಧಯ್ಯನವರು ಕಾರಣರು. ಇಂಥವರಿಗೆ ನಾನು ಋಣಿ ಎಂದರೆ ತುಂಬಾ ಸಪ್ಪೆಯಾದೀತು. ನನ್ನ ಕೃತಜ್ಞತಾಭಾವಕ್ಕೆ ಸಮಾನವಾದ ಶಬ್ದಗಳಿಲ್ಲ.

ತುಂಬಾ ಜವಾಬ್ದಾರಿಯುತ ಹಾಗೂ ನಾಜೂಕಿನ ಸ್ಥಾನವಾದ ಕಾರ್ಮಿಕ ಕಮೀಷನರ್ ಹುದ್ದೆಯನ್ನು ಸಿದ್ಧಯ್ಯನವರು ತುಂಬಾ ಚಾಕಚಕ್ಯತೆಯಿಂದ ನಿರ್ವಹಿಸಿ ತಮ್ಮ ಕಾಯಕನಿಷ್ಠೆಯಿಂದ ಆ ಸ್ಥಾನಕ್ಕೆ ಮರ್ಯಾದೆ ತಂದರು. ಇಲಾಖೆಯಲ್ಲಿ ಶಿಸ್ತು ಮತ್ತು ಸಂತಸವನ್ನೂ ನೆಲೆಗೊಳಿಸಿದರು. ಅವರು ತಮ್ಮ ಇಲಾಖೆಯ ಬಡ ಗುಮಾಸ್ತರ ವೈಯಕ್ತಿಕ ಹಾಗೂ ಆಫೀಸಿನ ಸಮಸ್ಯೆಗಳಿಗೆ ಕಾನೂನಿನ ಚೌಕಟ್ಟಿನೊಳಗೆ ತಮ್ಮಿಂದಾದ ಸಹಾಯವನ್ನು ಸಮಯಕ್ಕೆ ಸರಿಯಾಗಿ ನೀಡಿದ್ದಾರೆ. ಅವರ ಅಧಿಕಾರಾವಧಿಯಲ್ಲಿ ಹಲವಾರು ಕಾರ್ಮಿಕ ಸಮಸ್ಯೆಗಳನ್ನು ಬಗೆಹರಿಸಿದರು. ಒಂದು ವಿಚಿತ್ರ ಸಂಗತಿಯೆಂದರೆ, ಅವರ ಮೇಲೆ ಕಾರ್ಖಾನೆಯ ಮಾಲೀಕರೂ, ಕಾರ್ಮಿಕ ನಾಯಕರೂ ವಿಶ್ವಾಸವನ್ನಿಟ್ಟಿದ್ದರು. ಎರಡು ಪರಸ್ಪರ ವಿರೋಧಾಸಕ್ತಿಯುಳ್ಳ ಗುಂಪಿನ ವಿಶ್ವಾಸಕ್ಕೆ

ಪಾತ್ರರಾಗುವುದು ತೀರಾ ಅಪರೂಪ. ಅಂಥ ಅಪರೂಪದ ಶ್ರೇಯಸ್ಸನ್ನು ಪಡೆಯಲು ಕಾರ್ಮಿಕ ಕಮೀಷನರ್ ಅವರಿಗೆ ಸಾಹಿತಿ ಸಿದ್ಧಯ್ಯನವರ ಪ್ರಭಾವ ಸಹಕಾರಿಯಾಯಿತೆಂದು ನನ್ನ ಅನಿಸಿಕೆ.

ಇಲ್ಲಿ ಒಂದು ಘಟನೆ ನನ್ನ ನೆನಪಿಗೆ ಬರುತ್ತದೆ. ಬೆಂಗಳೂರಿನ ಒಂದು ಕಾರ್ಖಾನೆಯು ಸುಮಾರು ೩೦ ವರ್ಷಗಳಿಂದ ಕಾರ್ಮಿಕರಿಗೆ ಕಾನೂನಿನ ಪ್ರಕಾರ ನೀಡಬೇಕಾದ ಸೌಕರ್ಯಗಳನ್ನು ನೀಡಿರಲಿಲ್ಲ. ಇಲಾಖೆಯ ಹಲವಾರು ಆದೇಶಗಳು, ಪತ್ರಗಳು, ಎಚ್ಚರಿಕೆಗಳು ಫಲ ನೀಡಿರಲಿಲ್ಲ. ಈ ವಿವಾದ ಸಿದ್ಧಯ್ಯನವರ ಗಮನಕ್ಕೆ ಬಂದಾಗ ಸಂಬಂಧಪಟ್ಟವರೆಲ್ಲರ ಸಭೆಯನ್ನು ಕರೆಯಲು ಒಂದು ದಿನವನ್ನು ನಿಷ್ಕರ್ಷಿಸಲಾಯಿತು. ಮಾಮೂಲಿನಂತೆ ಮಾಲೀಕರು ಸಭೆಗೆ ಬರಲಿಲ್ಲ. ಸಿದ್ಧಯ್ಯನವರು ನಿರಾಶರಾಗಲಿಲ್ಲ. ಇನ್ನೊಂದು ದಿನವನ್ನು ಸಭೆಗಾಗಿ ನಿರ್ಧರಿಸಲಾಯಿತು. ಈ ಎರಡನೇ ಸಭೆಗೆ ಸಿದ್ಧಯ್ಯನವರು ಆ ಕಾರ್ಖಾನೆಯ ಮಾಲೀಕರು ಬರುವಂತೆ ಮಾಡಿದರು. ಅಷ್ಟೇ ಅಲ್ಲ, ಸುಮಾರು ಮೂರು ದಶಗಳ ಕಾಲ ನೀಡದೆ ಇದ್ದ ಸೌಕರ್ಯಗಳನ್ನು ಕಾರ್ಮಿಕರಿಗೆ ನೀಡುವಂತೆ ಕಾರ್ಖಾನೆಯ ಮಾಲೀಕರ ಮನವೊಲಿಸಿ, ಕಾರ್ಮಿಕರ ಕೃತಜ್ಞತೆಗೆ ಪಾತ್ರರಾದರು ; ಹಾಗೆಯೇ ಮಾಲೀಕರೂ ಸಂತುಷ್ಟರಾದರು. ಇಂಥ ಚತುರತೆ ಅವರದು.

ಡಾ. ಸಿದ್ಧಯ್ಯನವರು ಸುಮಾರು ನಾಲ್ಕು ವರ್ಷಗಳ ಕಾಲ ಕಾರ್ಮಿಕ ಕಮೀಷನರ್ ಆಗಿದ್ದಾಗ ನಾನು ಅವರ ವ್ಯಕ್ತಿತ್ವದ ಹಲವಾರು ಮುಖಗಳನ್ನು ನೋಡಿದ್ದೇನೆ. ಅವರ ಶಾಂತಸ್ವಭಾವವನ್ನು ಮತ್ತು ತುಂಬಾ ಅಪರೂಪದ ರೌದ್ರಾವತಾರವನ್ನೂ ಅವರ ಶಿಶುಸದೃಶವಾದ ಮುಗ್ಧತೆಯನ್ನೂ ಮತ್ತು ಆಡಳಿತಾತ್ಮಕ ಚತುರತೆಯನ್ನೂ ಹಾಗೂ ಅಂತರಂಗ ಮತ್ತು ಬಹಿರಂಗ ಶುದ್ಧಿಯನ್ನು ಕಂಡಿದ್ದೇನೆ ; ಕಂಡು ನಾನು ಮಾರುಹೋಗಿದ್ದೇನೆ.

ಒಂದು ಸಲ ಅವರು ತುಂಬಾ ಅನಾರೋಗ್ಯದಿಂದ ಬಳಲುತ್ತಿದ್ದರು. ನಾನು ಪುರಾಣಿಕರ ಅಣತಿಯಂತೆ ಔಷಧಿಗಳನ್ನು ತರಲು ಒಂದು ಔಷಧಿ ಅಂಗಡಿಗೆ ಹೋದೆ. ಆಗ ಅಂಗಡಿಯವನು "ಹಿಂದೆ ಅವರ ಪರವಾಗಿ ಒಬ್ಬರು ಬಂದು ಹೆಚ್ಚಿಗೆ ಬಿಲ್ ಹಾಕಿಸಿಕೊಂಡು ಹೋದರು. ಈಗ ನಾನೆಷ್ಟು ಬರೆಯಲಿ" ಎಂದು ಕೇಳಿದಾಗ ನನಗೆ ಶಾಕ್ ಹೊಡೆದಂತಾಯಿತು. ಅಂಗಡಿಯವನಿಗೆ ನಾನು "ಸರಿಯಾದ ಬಿಲ್ ಹಾಕಿ, ಸಿದ್ಧಯ್ಯನವರಿಗೆ ಹಿಂದೆ ಯಾರೋ ಮೋಸ ಮಾಡಿರಬಹುದು ನಾನು ಅಂಥವನಲ್ಲ" ಎಂದು ಹೇಳಿದೆ. ಇಂಥ ಒಂದೆರಡು ಘಟನೆಗಳನ್ನು ನಾನು ಅವರ ಗಮನಕ್ಕೆ ತಂದಾಗ ಸಿದ್ಧಯ್ಯನವರು ದೊಡ್ಡ ಹೃದಯದಿಂದ ಅಂಥವರನ್ನು ಕ್ಷಮಿಸಿದರು ; ಅಂಥ ಘಟನೆಗಳನ್ನು ಮರೆತರೂ ಕೂಡ. ಇದು ಅವರ ದೊಡ್ಡಸ್ತಿಕೆ ; ಆದರೆ ನನ್ನ ದೃಷ್ಟಿಯಲ್ಲಿ ಇದು ಒಂದು ದೌರ್ಬಲ್ಯ.

ಇನ್ನೊಂದು ಘಟನೆ ಇವರ ಅಪರೂಪದ ರೌದ್ರಾವತಾರಕ್ಕೆ ಸಾಕ್ಷಿ. ಹೊಸಪೇಟೆಯ ಬಳಿ, ಗಣಿ ಕಾರ್ಮಿಕರಿಗಾಗಿ, ಇಲಾಖೆಯ ವತಿಯಿಂದಲೇ ಹಲವಾರು ಕಷ್ಟಗಳನ್ನೆದುರಿಸಿ ಒಂದು ಆಸ್ಪತ್ರೆಯನ್ನು ಕಟ್ಟಿಸಲಾಯಿತು. ಕವಿಹೃದಯದ ಸಿದ್ಧಯ್ಯನವರು ಈ ಬಗ್ಗೆ ತುಂಬಾ ಆಸ್ಥೆ ವಹಿಸಿದ್ದರು. ಅಂದಿನ ಉಪರಾಷ್ಟ್ರಪತಿ ಮಾನ್ಯ ಬಿ. ಡಿ. ಜತ್ತಿಯವರು ಅದರ ಉದ್ಘಾಟನೆಗೆಂದು ಬರುವವರಿದ್ದರು. ಸಿದ್ಧಯ್ಯನವರು ೩–೪ ದಿನಗಳಿಗೆ ಪೂರ್ವದಲ್ಲಿ ಹೊಸಪೇಟೆಗೆ, ಅಲ್ಲಿಯ ಪೂರ್ಣ ಜವಾಬ್ದಾರಿಯನ್ನು ಹೊರಲು ಮತ್ತು ಕೆಲಸಗಳನ್ನು ನಿರ್ದೇಶಿಸಲು ಹೋದರು. ಉದ್ಘಾಟನೆಯ ಸಮಾರಂಭದ ವ್ಯವಸ್ಥೆಯಲ್ಲಿ ಹಗಲಿರುಳು ದುಡಿದರು. ಉದ್ಘಾಟನೆಯ ದಿನ ಅಲ್ಲಿ ಸೇರಿದ ಕೆಲವು ತುಂಟ ಹುಡುಗರು ಸೇರಿ ವ್ಯವಸ್ಥೆಯನ್ನು ವಿರೂಪಗೊಳಿಸಲು ಪ್ರಯತ್ನಿಸಿದರು. ಅಲ್ಲಿಯೇ ಇದ್ದ ಸಿದ್ಧಯ್ಯನವರಿಗೆ ಕೋಪವೆಲ್ಲಿಂದ ಬಂತೋ ಕಾಣೆ, ಒಬ್ಬ ಹುಡುಗನನ್ನು ಹಿಡಿದು ನಾಲ್ಕೇಟು ಬಾರಿಸಿದರು. ತುಂಟ ಹುಡುಗರು ಮಾಯವಾದರು. ಕೆಲವೊಂದು ವೇಳೆ, ತೀರ ಶಾಂತಸ್ವಭಾವದ ವ್ಯಕ್ತಿಯೂ ಮಾನವ ಸಹಜವಾದ ಕೋಪದಿಂದ ಮುಕ್ತನಲ್ಲವೇನೋ !

ಅವರೊಡನೆ ಪ್ರವಾಸಮಾಡುವುದೊಂದು ಅಪರೂಪದ ಆನಂದದ ಅನುಭವ. ಪ್ರವಾಸದಲ್ಲಿ ಸಾಹಿತಿ ಸಿದ್ಧಯ್ಯ ವಿಜೃಂಭಿಸುತ್ತಿದ್ದರು. ನಮ್ಮ ಚರ್ಚೆಯಲ್ಲಿ ತಮ್ಮ ಅಪಾರ ಅನುಭವ ಮತ್ತು ಜ್ಞಾನದ ಹಿನ್ನೆಲೆಯಲ್ಲಿ ನನಗೆ ಹಲವಾರು ವಿಷಯಗಳನ್ನು ಹೇಳುತ್ತಿದ್ದರು. ಒಂದು ಸಲ ಉರ್ದು ಮಹಾಕವಿ ಗಾಲಿಬ್‌ನ ಬಗ್ಗೆ ಮಾತನಾಡುತ್ತಾ ಬೆಂಗಳೂರಿನಿಂದ ಬಳ್ಳಾರಿಯವರೆಗೆ ಹೇಗೆ ದೂರ ಕ್ರಮಿಸಿದೆವು ಎಂಬುದೇ ನನಗೆ ಹೊಳೆಯಲಿಲ್ಲ.

ವಿದ್ವತ್ಪೂರ್ಣವಾದ ಅವರ ಮಾತಿನ ಮೋಡಿಯಲ್ಲಿ ಪ್ರವಾಸದ ಆಯಾಸವಾಗಲೀ, ಬಿಸಿಲಿನ ಬೇಗೆಯಾಗಲೀ ನಮ್ಮ ಬಳಿಸಾರಲಿಲ್ಲ. ಪ್ರವಾಸದಲ್ಲಿದ್ದಾಗ ಆಯಾ ಸ್ಥಳಗಳ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ವಿಷಯಗಳ ಬಗ್ಗೆ ಹೇಳುತ್ತಿದ್ದರು. ಸಿದ್ಧಯ್ಯನವರಿಗೆ ಈ ನಾಡಿನ ಬಗ್ಗೆ ತುಂಬಾ ಅಭಿಮಾನ ಹಾಗೂ ಅಷ್ಟೇ ಆಳವಾದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಜ್ಞಾನವೂ ಇದೆ ಎಂಬುದನ್ನು ನಾನು ಹಲವಾರು ಪ್ರವಾಸಗಳಲ್ಲಿ ಕಂಡುಕೊಂಡೆ. ಒಂದು ಸಲ ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸದಲ್ಲಿದ್ದಾಗ, ರಾತ್ರಿ ಒಂದು ಗಂಟೆಯಲ್ಲಿ ಕಾರನ್ನು ನಿಲ್ಲಿಸಿ ಒಂದು ಸಣ್ಣ ಹಳ್ಳಿಯಲ್ಲಿದ್ದ ಬಸವಣ್ಣ ನವರ ಮೂರ್ತಿಯನ್ನು ಬ್ಯಾಟ್ರಿಯ ಬೆಳಕಿನಲ್ಲಿ ತೋರಿಸಿ ಅದರ ಐತಿಹಾಸಿಕ ವಿವರಗಳನ್ನು ಹೇಳಿದರು. ಕರ್ನಾಟಕದ ಪರಂಪರೆಯ ಬಗ್ಗೆ ಅಷ್ಟು ಅಭಿಮಾನ ಅವರಿಗೆ.

ಪ್ರವಾಸದಲ್ಲಿದ್ದಾಗ ತಮ್ಮ ಜ್ಞಾನದ ಬುತ್ತಿಯನ್ನು ಬಿಚ್ಚುತ್ತಿದ್ದರು. ಇವರು ಕೇವಲ ಕನ್ನಡ ಸಾಹಿತ್ಯವನ್ನು ಮಾತ್ರವಲ್ಲ ಇತರ ಭಾಷಾ ಸಾಹಿತ್ಯಗಳನ್ನೂ ಅಭ್ಯಸಿಸಿ ದವರು. ಇವರ ಓದಿಗೆ ಗಡಿಗೆರೆಗಳಿಲ್ಲ ; ತುಂಬಾ ವಿಸ್ತಾರ ವಾದುದು. ಸಾಹಿತ್ಯ, ಇತಿಹಾಸ, ಸಂಸ್ಕೃತಿ, ವಿಜ್ಞಾನ, ಧರ್ಮ, ರಾಜನೀತಿಶಾಸ್ತ್ರ, ಸಮಾಜಶಾಸ್ತ್ರ ಇತ್ಯಾದಿ ಜೀವನಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಬಂದಿರುವ ಹಲವಾರು ಭಾಷೆಗಳಲ್ಲಿರುವ ಗ್ರಂಥಗಳನ್ನು ಓದುತ್ತಾರೆ. ಆದ್ದರಿಂದಲೇ ಅವರ ಮಾತಿನಲ್ಲಿ ಬೆಳಕು ಇರುವುದು. ಬಹುಶಃ ಇದಕ್ಕಾಗಿಯೇ ಅವರ ಕಾವ್ಯವು ತುಂಬಾ ಶಕ್ತಿ ಶಾಲಿಯೂ ಅರ್ಥಪೂರ್ಣವೂ ಆಗಿದೆ. ಇವರ ಒಡನಾಟ ದಲ್ಲಿ ನಾನು ಹಲವಾರು ಪಾಠಗಳನ್ನು ಕಲಿತೆ. ನನ್ನ ಓದು ಮತ್ತು ಬರವಣಿಗೆ ಇವರಿಂದ ಪ್ರಭಾವಿತಗೊಂಡಿವೆ ಎಂದು ಅಭಿಮಾನಪೂರ್ವಕವಾಗಿ ಹೇಳುತ್ತೇನೆ.

ಡಾ. ಸಿದ್ಧಯ್ಯನವರು ಸಹಜವಾಗಿಯೇ ತುಂಬಾ ವಿನಯಶೀಲರು. ಕೃತ್ರಿಮತೆ ಇವರಲ್ಲಿಲ್ಲ. ತಾವು ಸರ್ಕಾರದ ದೊಡ್ಡ ಐ. ಎ. ಎಸ್. ಅಧಿಕಾರಿ ಎಂಬ ಅಹಂಕಾರವು ಇವರ ಬಳಿ ಸುಳಿಯಲಿಲ್ಲ. ಇವರ ಮಗಳು ಕಾಯಿಲೆ ಬಿದ್ದಾಗ ಅವಸರದಲ್ಲಿ ಔಷಧಿ ಅಂಗಡಿಗೆ ಹೋಗಿ ದೊಡ್ಡ ಮೊತ್ತದ ಔಷಧಿಗಳನ್ನು ಖರೀದಿಸಿದರು. ಅಂಗಡಿಯವನು ಬಿಲ್ ಬರೆದನಂತರ ಜೇಬಿನಲ್ಲಿ ತಡಕಾಡಿ ದರೆ ಅಷ್ಟು ಹಣವಿರಲಿಲ್ಲ. ನನಗೆ ಫೋನ್ ಮಾಡಿ ಅವರ ಮನೆಯಿಂದ ಹಣ ತರಲು ಹೇಳಿದರು. ನಾನು ಅವರಿಗೆ ಬೇಕಾದಷ್ಟು ಹಣ ತರುವವರೆಗೆ, ಆ ಅಂಗಡಿಯಲ್ಲಿ ಕೈಕಟ್ಟಿ ಒಂದು ಬಗೆಯ ತಪ್ಪಿತಸ್ಥ ಮನೋಭಾವವನ್ನು ಮುಖದಲ್ಲಿ ಹೊತ್ತು ಕುಳಿತಿದ್ದರು. ನಾನು ಹಣ ಅವರ ಕೈಯಲ್ಲಿಟ್ಟಾಗಲೇ, ಅವರು ಅಂಗಡಿಯವನ ಹಣ ಮುಟ್ಟಿಸಿ ಹೊರಬಂದರು. ಅಲ್ಲಿಯವರೆಗೆ ಅಂಗಡಿಯವ ನಿಗೆ ಇವರು ಐ. ಎ. ಎಸ್. ಅಧಿಕಾರಿ ಎಂದು ತಿಳಿದಿರ ಲಿಲ್ಲ. ಅವರು ಅಂಗಡಿಯವನಿಗೆ ತಾವು ಕಾರ್ಮಿಕ ಕಮೀಷನರ್ ಎಂದು ಹೇಳಿ ಹೊರಬರಬಹುದಿತ್ತು. ಆದರೆ ಅವರು ಶ್ರೀಸಾಮಾನ್ಯನಂತೆ ನಡೆದುಕೊಂಡರು. ಇದು ಅವರ ಸದ್ವರ್ತನೆಗೆ ಸಾಕ್ಷಿ.

ನಾನು ಇನ್ನೊಂದು ಘಟನೆ ಹೇಳಿ ಈ ಲೇಖನ ಮುಗಿಸುತ್ತೇನೆ. ನಾನು ಮತ್ತು ಪುರಾಣಿಕರು ಉತ್ತರ ಕರ್ನಾಟಕದ ಪ್ರವಾಸದಿಂದ ಹಿಂತಿರುಗುವಾಗ ಚಳ್ಳಕೆರೆಗೆ ಬರುವಷ್ಟರಲ್ಲಿ ರಾತ್ರಿ ಸುಮಾರು ೧೧ ಗಂಟೆಯಾಗಿತ್ತು. ಆಯಾಸ ಪರಿಹಾರಕ್ಕೆಂದು, ಕೊಂಚ ಹೊತ್ತು ಕಾರನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿ, ಸಮೀಪದ ಹೋಟೆಲ್ ಒಂದ ರಲ್ಲಿ ಲೇಬರ್ ಕಮೀಷನರ್ ಕಾರಿನಲ್ಲಿದ್ದಾರೆ ಒಂದೆರಡು ಚಹಾ ಕಳಿಸುತ್ತೀರಾ ಎಂದು ನಾನು ಕೇಳಿದೆ. ಅದಕ್ಕೆ ಹೋಟೆಲ್‌ನವನು "ಸ್ವಾಮಿ ಹಾಲಿಲ್ಲ ಕ್ಷಮಿಸಿ" ಎಂದನು. ಆಗ ನಾನು "ಹೇಗಾದರೂ ಮಾಡಿ ಸಿದ್ಧಯ್ಯ ಪುರಾಣಿಕರು ದಣಿದಿದ್ದಾರೆ ಆದ್ದರಿಂದ ಎಲ್ಲಿಂದಲಾದರೂ ಚಹದ ವ್ಯವಸ್ಥೆ ಮಾಡಿ" ಎಂದಾಗ ಹೋಟೆಲಿನ ಯಜಮಾನ "ಸಿದ್ಧಯ್ಯ ಪುರಾಣಿಕರು ಅಂತ ಮೊದಲೇ ಯಾಕೆ ಹೇಳಲಿಲ್ಲರಿ, ಈಗ ಮನೆಯಿಂದ ಹಾಲನ್ನು ತರಿಸಿ ಚಹ ಮಾಡಿಸುತ್ತೇನೆ. ಕೊಂಚ ತಡೆಯಿರಿ" ಎಂದು ತುಂಬಾ ಆದರ ಮತ್ತು ಅಕ್ಕರೆ ತುಂಬಿದ ದನಿಯಲ್ಲಿ ಹೇಳಿದನು. ಕೆಲನಿಮಿಷಗಳಲ್ಲಿ ರುಚಿಯಾದ ಬಿಸಿ ಬಿಸಿ ಚಹಾ ಸವಿದೆವು. ಹೋಟೆಲ್ ಮಾಲೀಕನ ಈ ನಡೆವಳಿಕೆ ಡಾ. ಸಿದ್ಧಯ್ಯ ಪುರಾಣಿಕರು ಸಾಹಿತಿಯಾಗಿ ನಮ್ಮ ನಾಡಿನ ಜನಮನದಲ್ಲಿ ಗಳಿಸಿಕೊಂಡಿರುವ ಸ್ಥಾನಕ್ಕೆ ಸಾಕ್ಷಿ.

ಒಬ್ಬ ವ್ಯಕ್ತಿಗೆ ಇದಕ್ಕಿಂತ ಹೆಚ್ಚಿನ ಸ್ಥಾನ ಬೇಕೆ ?

# ಡಾ. ಸಿದ್ಧಯ್ಯ ಪುರಾಣಿಕರು -ಒಂದು ನೆನಪು

● ಎಸ್. ಎಂ. ಶಂಕರಗೌಡ

ಶ್ರೀ ಪುರಾಣಿಕರ ಹೆಸರು ಕೇಳಿದ್ದೆ. ಅವರ ಕೃತಿಗಳನ್ನು ಓದಿದ್ದೆ. ಆ ಕೃತಿಗಳಲ್ಲಿ ಚಿಮ್ಮುವ 'ಕಾವ್ಯಾನಂದ'ವನ್ನು ಸವಿದಿದ್ದೆ. ಆದರೂ ಅವರನ್ನು ಕಣ್ಣಾರೆ ಕಂಡಿರಲಿಲ್ಲ. ನನ್ನ ಪುಣ್ಯವೋ ಏನೋ, ಅವರು ಕಾರ್ಮಿಕ ಇಲಾಖೆಗೆ ಕಮೀಷನರ್ ಆಗಿ ಬಂದರು. ಆಗ ನಾನು ಸಹಾಯಕ ಕಾರ್ಮಿಕ ಕಮೀಷನರ್ ಆಗಿದ್ದೆ. ನನ್ನ ಸೇವೆಯನ್ನು ಎರವಲು ಕೊಟ್ಟಿದ್ದರಿಂದ ಸರ್ಕಾರವೇ ನಡೆಸುತ್ತಿದ್ದ ಪಿಂಗಾಣಿ ಕಾರ್ಖಾನೆಯಲ್ಲಿ ಪರ್ಸೊನೆಲ್ ಮ್ಯಾನೇಜರ್ ಆಗಿದ್ದೆ.

ಒಂದು ದಿನ ನಾನು ಗೌರವ ಸೂಚಿಸಲು ಶ್ರೀ ಪುರಾಣಿಕರನ್ನು ಹೋಗಿ ಕಂಡೆ. ಅವರ ದರ್ಶನ ಅದೇ ಮೊದಲು. ತುಂಬು ದೇಹದ, ತುಂಬು ಮುಖದ ವ್ಯಕ್ತಿ ಅವರು. ನಾನು ಹೋಗುತ್ತಿದ್ದಂತೆ ಹಸನ್ಮುಖಿಯಾಗಿ 'ಬನ್ನಿ' ಎಂದು ಕೈಕುಲುಕಿದರು. ಹಿರಿಯ ಅಧಿಕಾರಿಗಳೂ, ಖ್ಯಾತಿವೆತ್ತ ಲೇಖಕರೂ, ಕವಿಗಳೂ ಆದ ಅವರ ಹಸ್ತಸ್ಪರ್ಷದಿಂದ ಪುಲಕಿತನಾದೆ. ಅಪರಿಚಿತನನ್ನು ಚಿರಪರಿಚಿತನಂತೆ ಕಂಡು ನಗುಮೊಗದಿಂದ ಸ್ವಾಗತಿಸಿದ ಅವರ ಸೌಜನ್ಯಕ್ಕೆ ಬೆರಗಾಗಿ ಹೋದೆ; ಅವರ ಸರಳತೆಗೆ ಶರಣಾಗಿ ಹೋದೆ.

ನಂತರ ಕಾರ್ಮಿಕರ ಕುಂದುಕೊರತೆಗಳ ವಾಮಕ್ಷೇಮಗಳ ಬಗ್ಗೆ ಮಾತನಾಡಿದೆವು. ಅವರು ತಿಳಿಗನ್ನಡದಲ್ಲಿ ಮಾತನಾಡಿದ ದಾಟಿ ನನ್ನನ್ನು ಬೆರಗುಗೊಳಿಸಿತು. ನಾನೂ ಕನ್ನಡದ ವಿದ್ಯಾರ್ಥಿ. ಅವರ ಪ್ರಶ್ನೆಗಳಿಗೆ ನಾನು ಕನ್ನಡದಲ್ಲಿ ಉತ್ತರವಿತ್ತೆ. ಕಾರ್ಮಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸಿದೆ. ನನ್ನ ಉತ್ತರಗಳಿಂದ ಬಹುಶಃ ತೃಪ್ತರಾದಂತೆ ತೋರುತ್ತದೆ. "ನೋಡಿ ನಮ್ಮ ಕಾರ್ಮಿಕರು ಬಹುಪಾಲು ಅವಿದ್ಯಾವಂತರು. ಇಂಗ್ಲಿಷಿನ ಗಂಧವರಿಯದವರು. ಆದರೆ ನಮ್ಮ ಕಾನೂನೆಲ್ಲಾ ಇಂಗ್ಲಿಷಿನಲ್ಲಿದೆ. ನಿಮ್ಮಂತೆ ಕನ್ನಡ ಬಲ್ಲವರು ಒಂದು ಕಾರ್ಖಾನೆಯಲ್ಲಿ ಕುಳಿತರೆ ಸಾಲದು. ಇಲಾಖೆಗೆ ವಾಪಸ್ಸು ಬರಬೇಕು. ನಿಮ್ಮ ಸೇವಾಕ್ಷೇತ್ರ ವಿಶಾಲವಾಗಬೇಕು" ಎಂದರು. ಹಾಗೆ ಅಂದಿದ್ದು ಮಾತ್ರವಲ್ಲ. ಕೆಲವೇ ದಿನಗಳಲ್ಲಿ ಡೆಪ್ಯುಟಿ ಲೇಬರ್ ಕಮೀಷನರ್ ಹುದ್ದೆಗಳು ಖಾಲಿಯಾದಾಗ ನನಗೆ ಬಡ್ತಿ ದೊರೆಯಿತು. ನನ್ನನ್ನು ಕಾರ್ಖಾನೆಯಿಂದ ವಾಪಸ್ಸು ಕರೆಸಿಕೊಂಡರು. ಬೆಂಗಳೂರು ವಲಯದ ಡೆಪ್ಯುಟಿ ಲೇಬರ್ ಕಮೀಷನರ್ ಆಗಿ ಅಧಿಕಾರ ವಹಿಸಿಕೊಂಡೆನು.

ಬೆಂಗಳೂರಿನಲ್ಲಿ ಕೆಲಸ ಮಾಡುವ ಅಧಿಕಾರಿಯೆಂದರೆ ಅಗಸರ ಮನೆಯ ಕತ್ತೆಯಿದ್ದಂತೆ. ದಿನದ ಇಪ್ಪತ್ತುನಾಲ್ಕು ಗಂಟೆಗಳೂ ಸಾಲವು. ಒಂದು ಕಾರ್ಖಾನೆಯ ವಿವಾದವನ್ನು ಬಗೆಹರಿಸಿ ನಿಟ್ಟುಸಿರು ಬಿಡುವುದರೊಳಗೆ, ಇನ್ನೊಂದು ಕಾರ್ಖಾನೆಯಲ್ಲಿ ಜಗಳ, ಮತ್ತೊಂದು ಕಾರ್ಖಾನೆಯಲ್ಲಿ ಮುಷ್ಕರ, ಹೀಗೆ ಪ್ರತಿ ದಿನವೂ ಏನಾದರೊಂದು ಇರುತ್ತಿತ್ತು. ಒಬ್ಬ ದಾಸಯ್ಯನನ್ನು ಮಣ್ಣುಗೂಡಿಸುವುದರಲ್ಲಿ ಮತ್ತೊಬ್ಬ ದಾಸಯ್ಯನ ಹೆಣ ಸಿದ್ಧವಾಗಿರುತ್ತಿತ್ತು. ಕಾರ್ಮಿಕರನ್ನೂ, ಮಾಲೀಕರನ್ನೂ ಸಮಾಧಾನಪಡಿಸಿ ಒಂದು ಒಪ್ಪಂದ ಮಾಡಿಸಬೇಕಾದರೆ ಹೆಣ ಬಿದ್ದು ಹೋಗುತಿತ್ತು. ಉದ್ರೇಕಗೊಂಡ ಪಾರ್ಟಿಗಳನ್ನು ಶಾಂತಗೊಳಿಸಲು ಉದ್ದುದ್ದ ಭಾಷಣ ಬಿಗಿಯುತ್ತಿದ್ದೆ; ಗಾದೆಗಳನ್ನು ಬಳಸುತ್ತಿದ್ದೆ; ಶರಣರ ವಚನಗಳನ್ನು ಹೇಳುತ್ತಿದ್ದೆ. ಮಧ್ಯೆ ಮಧ್ಯೆ ಕಾವ್ಯಪುರಾಣಗಳಿಂದ ದೃಷ್ಟಾಂತ

ಗಳನ್ನು ಆಯ್ದು ಹರಿಕಥೆ ಮಾಡುತ್ತಿದ್ದೆ. ಬಹುಶಃ ನನ್ನ ಬೈರಿಗೆಯನ್ನು ತಡೆಯಲಾರದೆ ಪಾರ್ಟಿಗಳು ಒಪ್ಪಂದಕ್ಕೆ ಬರುತ್ತಿದ್ದರೋ ಏನೊ ? ಅಂತೂ ಇಂತೂ ವಿವಾದಗಳು ಬಗೆಹರಿಯುತ್ತಿದ್ದುವು.

ನನ್ನ ಈ ರೀತಿಯ ಶರಸಂಧಾನ ಪುರಾಣಿಕರಿಗೆ ಮೆಚ್ಚಿಗೆಯಾದಂತೆ ತೋರುತ್ತದೆ. ಬೆನ್ನು ತಟ್ಟಿ ಪ್ರೋತ್ಸಾಹವೀಯುತ್ತಿದ್ದರು. ಒಂದು ದಿನ "ನೀವು ಇಷ್ಟು ಚೆನ್ನಾಗಿ ಮಾತನಾಡುತ್ತೀರಾ, ಮಾತಿನ ಕಲೆಯೊಂದಿಗೆ ಲೇಖನ ಕಲೆಯನ್ನು ಏಕೆ ಬೆಳೆಸಿಕೊಳ್ಳಬಾರದು" ಎಂದರು. ಇದಕ್ಕೆ ಉತ್ತರ ಏನೆಂದು ಹೇಳುವುದು ? ಬರೆಯುವ ಅಭ್ಯಾಸವಿತ್ತು. ಬರೆದಿದ್ದೂ ನಿಜ. ಆದರೆ ಅದನ್ನು ಪ್ರಕಟಿಸುವವರ್ಯಾರು ? ಪ್ರಕಾಶಕರಲ್ಲಿ ? ಮದುವೆಯಾಗದ ಹೆಣ್ಣುಮಕ್ಕಳಂತೆ ನನ್ನ ಬರಹಗಳು ಪೆಟ್ಟಿಗೆಯಲ್ಲೇ ಬಿದ್ದಿದ್ದವು. ನನ್ನ ಮನದಳಲನ್ನು ಪುರಾಣಿಕರು ಗ್ರಹಿಸಿದರು. "ಏನಾದರೂ ಬರೆದಿದ್ದರೆ ತಂದು ಕೊಡಿ" ಎಂದರು. ಲಘು ಬರಹಗಳ ಒಂದು ಸಂಕಲನವನ್ನು ಅವರಿಗಿತ್ತೆ. ಅವರ ವಿದ್ವತ್ತಿನ ಮುಂದೆ ಇದು ಬಾಲಭಾಷಿತವೆಂಬ ಸಂಕೋಚದಿಂದಲೇ ಕೊಟ್ಟೆ. ಹಾಗೆ ಕೊಡುವಾಗ ಇವರು ಉಪಚಾರಕ್ಕೆ ಹೀಗೆ ಹೇಳಿದ್ದಾರೆ ಎಂಬ ಉದಾಸೀನವೂ ಇತ್ತು.

ಒಂದು ದಿನ ಅವರಿಂದ ಫೋನ್ ಬಂತು. "ನಾಳೆ ಹನ್ನೊಂದು ಗಂಟೆಗೆ ಆಫೀಸಿನ ಹತ್ತಿರ ಬನ್ನಿ" ಎಂದು ಹೇಳಿದರು. ನಾಳೆ ಎಂದರೆ ಭಾನುವಾರ. ಬಿಡುವಿನ ದಿನದಲ್ಲಿ ಇನ್ನೆಂತಹ ಮಹಾಕಾರ್ಯ ; ಕೊಳ್ಳೆಹೋಗುವಂತಹದೇನಿದೆ ? ಇದೇನು ಗ್ರಹಚಾರ ಎಂದು ಗೊಣಗಿಕೊಂಡೇ ಭಾನುವಾರ ಆಫೀಸಿಗೆ ಹತ್ತೂವರೆ ಗಂಟೆಗೆ ಹೋದೆ. ಸಾಹೇಬರ ರೂಮಿನ ಬಾಗಿಲು ಮುಚ್ಚಿತ್ತು. ಅವರ ಪಿ. ಎ. ಅವರನ್ನು ವಿಚಾರಿಸಿದೆ. ಪಿ. ಎ. ಅವರು "ಒಂಬತ್ತೂವರೆ ಗಂಟೆಗೇ ಬಂದರು ಸಾರ್, ಬಾಗಿಲು ಮುಚ್ಚಿಕೊಂಡು ಏನೋ ಬರೆಯುತ್ತಿದ್ದಾರೆ" ಎಂದರು. ಬೇಸರದಿಂದಲೇ ಆಫೀಸಿಗೆ ಹೋಗಿದ್ದೆ, ಆಗ ಮತ್ತಷ್ಟು ಬೇಸರವಾಯಿತು. ಸ್ವಲ್ಪ ಸಮಯ ಪಿ. ಎ ಅವರ ಜೊತೆ ಮಾತನಾಡುತ್ತಾ ಕುಳಿತೆ.

ಟೆಲಿಫೋನ್ "ಟ್ರಣ್" ಎಂದಿತು. ಪಿ. ಎ ಫೋನ್ ಎತ್ತಿಕೊಂಡರು.

"ಗೌಡರು ಬಂದಿದ್ದಾರಾ"
"ಹೌದು ಸರ್ ಬಂದಿದ್ದಾರೆ"
"ಒಳಕ್ಕೆ ಕಳಿಸಿ"

ನಾನು ಅವರ ರೂಮಿಗೆ ಹೋದೆ. ಕುಳಿತುಕೊಳ್ಳಿ ಎಂದು ಕುರ್ಚಿಯ ಕಡೆ ಕೈ ತೋರಿಸಿದರು.

"ನಾನು ನಿಮ್ಮ ಕೃತಿಯನ್ನು ಓದಲು ವೇಳೆಯೇ ಸಿಗಲಿಲ್ಲ. ಆದುದರಿಂದ ಭಾನುವಾರವನ್ನು ಆರಿಸಿಕೊಂಡೆ. ನಿಮ್ಮ ಈ ಪ್ರಬಂಧ ಸಂಗ್ರಹವನ್ನು ಓದಿದೆ. ನಿಜಕ್ಕೂ ಈ ತರದ ಕೃತಿಗಳು ಕನ್ನಡದಲ್ಲಿ ಬಹಳಷ್ಟು ಇಲ್ಲ. ಈ ಲೇಖನಗಳಲ್ಲಿ ನಯವಾಗಿ ಹರಡಿರುವ ತಿಳಿಹಾಸ್ಯವನ್ನು ಸವಿದು ಸಂತೋಷಗೊಂಡಿದ್ದೇನೆ. ಆ ಸಂತೋಷದಲ್ಲಿ ನನಗೆ ಅನಿಸಿದ ನಾಲ್ಕು ಮಾತುಗಳನ್ನು ಮುನ್ನುಡಿಯ ರೂಪದಲ್ಲಿ ಬರೆದಿದ್ದೇನೆ. ನಿಮ್ಮ ಲೇಖನ ಕಲೆ ಇನ್ನೂ ಬೆಳೆಯಲಿ" ಎಂದು ನನ್ನ ಹಸ್ತಪ್ರತಿಯನ್ನೂ, ಅವರು ಬರೆದ ಮುನ್ನುಡಿಯನ್ನೂ ನನ್ನ ಕೈಗಿತ್ತರು.

ವಾರಕ್ಕೊಂದೇ ಭಾನುವಾರ. ರಜ ಹಾಳಾಯಿತು ಎಂದು ಗೊಣಗಿಕೊಂಡೇ ಆಫೀಸಿಗೆ ಹೋಗಿದ್ದೆ. ನನ್ನ ಬರಹಕ್ಕೊಂದು ಮುನ್ನುಡಿ ಬರೆದು ಹರಸಿದುದನ್ನು ಕಂಡು ನನ್ನ ಮನಸ್ಸು ಹೇಗಾಗಿರಬೇಕು. ನೀವೇ ಯೋಚಿಸಿ.

ಕಸ್ತೂರಿಯ ಮೃಗ ಸುಳಿಯಿತ್ತಯ್ಯ
ಸಕಲ ವಿಸ್ತಾರದ ರೂಹು ಬಂದು ನಿಂದಿತ್ತಯ್ಯ
ಆವ ಗ್ರಹ ಬಂದು ಸೋಂಕಿತ್ತೆಂದರಿಯೆನಯ್ಯ
ಆವ ಗ್ರಹ ಬಂದು ಹಿಡಿಯಿತ್ತೆಂದರಿಯೆನಯ್ಯ

ಎಂಬ ಅಲ್ಲಮನ ವಚನ ನೆನಪಿಗೆ ಬಂತು. ಶಬ್ದ ಮುಗ್ಧನಾಗಿ ವಂದಿಸಿ ಹೊರಬಂದೆ.

ಮುನ್ನುಡಿ ಭಿಕ್ಷೆಗಾಗಿ ಹಿರಿಯ ಸಾಹಿತಿಗಳ ಮನೆ ಬಾಗಿಲಿಗೆ ಸುತ್ತಿಸುತ್ತಿ ಬೇಸತ್ತ ಕಿರಿಯ ಲೇಖಕರಿದ್ದಾರೆ. ಮುನ್ನುಡಿಗೆಂದು ಕೊಟ್ಟ ಹಸ್ತಪ್ರತಿಯನ್ನು ಮೂಲೆಯಲ್ಲಿ ಮುಚ್ಚಿಟ್ಟು ಎಂದೋ ಒಂದು ದಿನ ನಾಲ್ಕು ಮಾತು ಬರೆದು ಕೈ ಕಳಚಿಕೊಳ್ಳುವ ಹಿರಿಯರೂ ಉಂಟು. ಕೆಲವು ಹಿರಿಯ ಸಾಹಿತಿಗಳಂತೂ ಕಿರಿ ವಯಸ್ಸಿನಲ್ಲಿ ತಾವು ಪಟ್ಟ ಕಷ್ಟವನ್ನು ಮರೆತಿರುತ್ತಾರೆ. ಪ್ರಪಂಚ ಹೀಗಿರುವಾಗ ಭಾನುವಾರದ ಬಿಡುವನ್ನು ಹಾಳು ಮಾಡಿಕೊಂಡು ನನ್ನ ಹಸ್ತಪ್ರತಿಯನ್ನು ಸುಮಾರು ಒಂದೂವರೆ ತಾಸಿನ

ಕಾಲ ಆಮೂಲಾಗ್ರವಾಗಿ ಓದಿ ಮುನ್ನುಡಿ ಬರೆದು ಆಶೀರ್ವದಿಸಿದ ಶ್ರೀ ಪುರಾಣಿಕರ ಸಹನೆ, ಸೌಜನ್ಯ, ಕಿರಿಯರ ಮೇಲಿನ ವಾತ್ಸಲ್ಯ ಎಷ್ಟು ಜನರಿಗಿದೆ ?

"ಕಟ್ಟಿಯುಮೇನೊ ಮಾಲೆಗಾರನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೆ" ಎಂದು ಮುನ್ನೊಂದು ಜನ್ನಕವಿಯಂತವನೇ ಹೇಳಿದ ಮೇಲೆ ಇನ್ನು ಸಾಮಾನ್ಯ ಲೇಖಕರ ಪಾಡೇನು ? ಜನಾಬ್ ಹಮೀದ ಅಲ್ಮಾಸ್ ಎಂಬುವರು ಪುರಾಣಿಕರಿಗೆ ಪಿ. ಎ. ಆಗಿದ್ದರು. ಅವರಿಗೆ ಕವನ ಕಲೆ ಒಲಿದಿತ್ತು. ಉತ್ತಮ ಕವನಗಳನ್ನು ಉರ್ದುವಿನಲ್ಲಿ ರಚಿಸಿದ್ದರು. ಆದರೆ ಅವರ ಕವನ ಕಲೆಯನ್ನು ಗುರುತಿಸುವವರು ಯಾರು ? ಯಾವ ಪ್ರಕಾಶಕರ ದೃಷ್ಟಿಯೂ ಈ ತರುಣ ಕವಿಯತ್ತ ಹರಿಯಲಿಲ್ಲ. ಪುರಾಣಿಕರು ಉರ್ದುವಿನಲ್ಲಿಯೂ ವಿದ್ವಾಂಸರು. ಅಲ್ಮಾಸರ ಕವನಗಳನ್ನು ಓದಿ ಅವರ ಬೆನ್ನು ತಟ್ಟಿದರು. ತತ್ಫಲವಾಗಿ ಅಲ್ಮಾಸರ ಕವನ ಸಂಗ್ರಹ ಹೊರಬಿತ್ತು. ಆ ಕೃತಿಗೆ ಉತ್ತರ ಪ್ರದೇಶ ಸರ್ಕಾರದ ಪ್ರಶಸ್ತಿಯೂ ಲಭಿಸಿತು. ಒಂದು ವೇಳೆ ಪುರಾಣಿಕರ ಆಶೀರ್ವಾದವಿಲ್ಲದೆ ಇದ್ದಿದ್ದರೆ ಅಲ್ಮಾಸರು ಅಜ್ಞಾತರಾಗಿ ವನಸುಮದಂತೆ ಇರುತ್ತಿದ್ದರು. ವನಸುಮ ವನ್ನು ಜನಸುಮವನ್ನಾಗಿ ಮಾಡಿದ ಪುಣ್ಯಾತ್ಮರು ಪುರಾಣಿಕರು.

ಶ್ರೀ ಪುರಾಣಿಕರಿಗೆ ಕರ್ನಾಟಕ ವಿಶ್ವವಿದ್ಯಾನಿಲಯ 'ಡಾಕ್ಟರೇಟ್' ಪದವಿಯನ್ನಿತ್ತು ಗೌರವಿಸಿತು. ಆಗ ನಾನು ಬೆಳಗಾವಿ ವಲಯದಲ್ಲಿದ್ದೆ. ಆ ಸಂದರ್ಭದಲ್ಲಿ ನಾವು ಕೆಲವು ಗೆಳೆಯರು ಸೇರಿ ಒಂದು ಸಣ್ಣ ಸಮಾರಂಭ ವನ್ನು ಏರ್ಪಡಿಸಿದ್ದೆವು. ಆಗ ಪುರಾಣಿಕರು ಹೇಳಿದ ಒಂದು ಮಾತು ನನ್ನ ಹೃದಯದಲ್ಲಿ ಮುದ್ರೆಯೊತ್ತಿ ದಂತೆ ನೆಲೆಸಿದೆ. "ವಿಶ್ವವಿದ್ಯಾನಿಲಯದವರೇನೋ ನನಗೆ ಪದವಿಯಿತ್ತರು. ಆದರೆ ಶಿವನ ವಿದ್ಯಾಲಯ ದಲ್ಲಿ ಪದವಿ ಲಭಿಸುವುದೆಂದು" ಎಂದು ಹೇಳಿದರು. ಎಂತಹ ಮಾತು. ಅದೆಂತಹ ಪ್ರಾರ್ಥನೆ. ಈ ಮಾತನ್ನೇ ಅಳವಡಿಸಿಕೊಂಡು ಅವರು ರಚಿಸಿದ ವಚನವನ್ನು ನೋಡಿ—

ಪದವಿದಾನ ಸಮಾರಂಭಕ್ಕೆ ಕರೆದಿರುವರಯ್ಯಾ—
ಮತ್ತೊಂದು ಪದವಿಯ ಕೊಡುವರಂತೆ !
ನಿನ್ನ ಪದಭಕ್ತನಾಗಿಹುದೇ ಪರಮ ಪದವಿ ನನಗೆ—
................
ಮತ್ತೇಕೆ ಕೊಡುವರೋ ಮತ್ತೊಂದು ಪದವಿಯನು
ಹೊಸದೊಂದು ಉಪಾಧಿಯನು
ಬಯಸದೆ ಬಂದ ಲಿಂಗಭೋಗವಿದ
ಬಿಡುವಂತೆಯೂ ಇಲ್ಲ, ಹಿಡಿಯುವಂತೆಯೂ ಇಲ್ಲ !
ನನ್ನ ಮೂಲಕ ನಿನ್ನವರಿಗೆ ಸಲ್ಲಿಸಿದೆನು—
ಸ್ವತಂತ್ರಧೀರ ಸಿದ್ಧೇಶ್ವರಾ !

ಶ್ರೀ ಪುರಾಣಿಕರ ನಡೆನುಡಿಯಲ್ಲಿ ಒಂದು ಅಂಶ ಎದ್ದು ಕಾಣುತಿತ್ತು—ಅದು ಮಾನವೀಯತೆ. ನಾವು ಮನುಷ್ಯ ರಂತೆ ವರ್ತಿಸಬೇಕು, ನಮ್ಮ ವ್ಯವಹಾರ ನೀತಿಯುತ ವಾಗಿರಬೇಕು, ನಮ್ಮ ನಡೆಯೆಲ್ಲ ಧರ್ಮಬದ್ಧವಾಗಿರ ಬೇಕು, ಹಿರಿದಾದುದನ್ನು ಗೌರವಿಸಬೇಕು, ನಮ್ಮ ಕೃತಿ ಶಿವಸಮ್ಮತವಾಗಿರಬೇಕು- ಇದು ಅವರ ಜೀವನ ಸೂತ್ರ. ಹೀಗೆಂದ ಮಾತ್ರಕ್ಕೆ ಅವರು ಧರ್ಮದ ಗೊಡ್ಡು ಎಂದಲ್ಲ. ದಿನದಿನಕ್ಕೆ ನವನವರೂಪವನ್ನು ತಾಳುವ ಪ್ರಪಂಚಕ್ಕೆ ವಿಮುಖರು ಎಂದಲ್ಲ. ಬದಲಾವಣೆಯ ಅಗತ್ಯವನ್ನು ಮನಗಂಡಿದ್ದರು. ನವೀನತೆಯಲ್ಲಿ ಆಸೆಯಿಟ್ಟಿದ್ದರು. ಆದರೆ ಈ ಬದಲಾವಣೆ, ನವೀನತೆ ಶಿವಪ್ರಿಯವಾಗಿಲ್ಲ ವೆಂಬುದು ಅವರಿಗಿದ್ದ ಕೊರಗು. "ನವೀಕರಣದೊಂದಿಗೆ ಮಾನವೀಕರಣವೂ ಆಗುವಂತೆ ಮಾಡು" ಎಂಬುದೇ ಅವರ ಪ್ರಾರ್ಥನೆ.

ಸಾಮಾನ್ಯವಾಗಿ ಸಾಹಿತಿಗಳಿಗೆ ವ್ಯವಹಾರ ಜಾಣ್ಮೆ ಸಾಲದು. ಪುರಾಣಿಕರೂ ಈ ಮಾತಿಗೆ ಹೊರತಲ್ಲ. ಸೂಜಿ ಹಾಕಿ ದಬ್ಬಳ ತೆಗೆಯುವ ಚಾಕಚಕ್ಯತೆಯಾಗಲಿ, ನಾಲ್ಕು ಅಕ್ಕಿ ಕಾಳು ಹಾಕಿ ಪಾರಿವಾಳವನ್ನು ಹಿಡಿಯುವ ಕೌಶಲ್ಯ (ಕೌಟಿಲ್ಯ) ವಾಗಲಿ, ಗಾಳಿ ಬೀಸುವಾಗ ತೂರಿ ಕೊಳ್ಳುವ ತವಕವಾಗಲಿ ಅವರಿಗಿರಲಿಲ್ಲ. ಹೀಗಾಗಿ ಕೆಲವು ಸುಯೋಗಗಳಿಂದ ವಂಚಿತರಾದುದೂ ಉಂಟು. ಆದರೆ ಅವರೆಂದೂ ಧೃತಿಗೆಡಲಿಲ್ಲ; ನಿರಾಶೆಪಡಲಿಲ್ಲ. "ಅರಸಿ ತೊಳಲಿದರಿಲ್ಲ, ಹರಸಿ ಬಳಲಿದರಿಲ್ಲ, ಬಯಸಿ ಹೊಕ್ಕರಿಲ್ಲ, ತಪವ ಮಾಡಿದರಿಲ್ಲ, ಅದು ತನ್ನ ತಾನಹ ಕಾಲಕ್ಕಲ್ಲದೆ ಸಾಧ್ಯವಾಗದು, ಶಿವನೊಲಿದಲ್ಲದೆ ಕೈ ಗೂಡದು" ಎಂಬ ಅಕ್ಕನ ಮಾತಿನಲ್ಲಿ ಅವರಿಗೆ ಅಚಲ ನಂಬಿಕೆ. ಆ ನಂಬಿಕೆಯೇ ಅವರ ಊರುಗೋಲು. ನರರನ್ನು ನಂಬಿ ಕೆಡುವುದಕ್ಕಿಂತ ಹರನನ್ನು ನಂಬಿ ಕೆಡು ವುದೇ ಲೇಸೆಂದು ಆಗಾಗ್ಗೆ ಹೇಳುತ್ತಿದ್ದರು.

ಮನುಷ್ಯ ಎಷ್ಟೇ ಶಾಂತ ಸ್ವಭಾವದವನಾದರೂ ಜೀವನದಲ್ಲಿ ಒಮ್ಮೊಮ್ಮೆ ಆಗ್ರಹಗೊಳ್ಳುವ ಪ್ರಸಂಗಗಳು ಬರುತ್ತವೆ. ಸಾಮಾನ್ಯರು ಆಗ್ರಹಗೊಂಡರೆ ಉಗ್ರರಾಗುತ್ತಾರೆ. ತಾಪಸರ ಆಗ್ರಹ ಸತ್ಯಾಗ್ರಹವಾಗುತ್ತದೆ. ಶಾಂತಸ್ವಭಾವದ ಪುರಾಣಿಕರು ಒಮ್ಮೆ ಆಗ್ರಹಗೊಂಡ ರೀತಿಯನ್ನು ನೋಡಿ :

ಒಬ್ಬ ಸಹಾಯಕ ಲೇಬರ್ ಕಮೀಷನರ್ ಉಚಿತವಲ್ಲದ ರೀತಿಯಲ್ಲಿ ವರ್ತಿಸಿದನೆಂದು ಕಾಣುತ್ತದೆ. ಮನಸ್ಸು ಮಾಡಿದ್ದರೆ ಪುರಾಣಿಕರು ಆ ಅಧಿಕಾರಿಯನ್ನು ಬಲಿಹಾಕಬಹುದಾಗಿತ್ತು. ಆಗ ತುರ್ತುಪರಿಸ್ಥಿತಿ ಇದ್ದುದರಿಂದ ಬಲಿಹಾಕುವುದು ಸುಲಭವೂ ಆಗಿತ್ತು. ಆದರೆ ಪುರಾಣಿಕರು ಆ ಅಧಿಕಾರಿಯನ್ನು ಶಿಕ್ಷಿಸುವ ಗೋಜಿಗೆ ಹೋಗಲಿಲ್ಲ. "ಅವನ ಮುಖ ನೋಡುವುದಿಲ್ಲ. ಅವನ ಕ್ಷೇತ್ರ (jurisdiction) ದಲ್ಲಿ ಒಂದು ತೊಟ್ಟು ನೀರು ಕುಡಿಯುವುದಿಲ್ಲ" ಎಂದು ತಮ್ಮ ಕೋಪವನ್ನು ಪ್ರಕಟಿಸಿದರು. ಇದು ಆ ಅಧಿಕಾರಿಗೆ ವಿಧಿಸಿದ ಶಿಕ್ಷೆ. ಆರು ತಿಂಗಳಾದಮೇಲೆ ಈ ವಿಷಯ ನನಗೆ ತಿಳಿಯಿತು. ಆ ಅಧಿಕಾರಿ ನನ್ನ ಕೈಕೆಳಗೆ ಕೆಲಸ ಮಾಡುತ್ತಿದ್ದನು. "ಭೃತ್ಯಾಪರಾಧಃ ಸ್ವಾಮಿನೋ ದಂಡಃ" ಎಂಬುದೊಂದು ನ್ಯಾಯಸೂತ್ರವಿದೆ. ನನ್ನ ಕೈಕೆಳಗಿನವರು ಮಾಡಿದ ತಪ್ಪಿಗೆ ಶಿಕ್ಷೆ ನನಗೂ ಆಗಬೇಕಲ್ಲವೆ? ಆ ಅಧಿಕಾರಿಯ ಪರವಾಗಿ ಕ್ಷಮೆ ಬೇಡಿದೆ. ಕ್ಷಮೆಯೂ ದೊರಕಿತು, ಆ ಅಧಿಕಾರಿಯೂ ತನ್ನ ವರ್ತನೆಯನ್ನು ತಿದ್ದಿಕೊಂಡ.

ಪುರಾಣಿಕರು ಎಂದೂ ತಮ್ಮ ಅಧಿಕಾರ ದರ್ಪವನ್ನು ತೋರಲಿಲ್ಲ. ತಾವು ಉತ್ತಮ ಸಾಹಿತಿಗಳೆಂದು ಬೀಗಲಿಲ್ಲ. ಕೀರ್ತಿಶನಿಯ ಬೆನ್ನು ಹತ್ತಲಿಲ್ಲ. ತುಂಬು ದೇಹದ ಅವರು ತುಂಬಿದ ಕೊಡದಂತಿದ್ದರು.

ಫಲವಿತ್ತ ರೆಂಬೆ ಬಾಗುತ್ತದೆ  
ಗೊನೆ ಹೊತ್ತ ಬಾಳೆ ಬಾಗುತ್ತದೆ  
ತೆನೆ ಹೊತ್ತ ದಂಟು ಬಾಗುತ್ತದೆ  
ಏನೇನೋ ಇಲ್ಲದುದು  
ಬೀಗುತ್ತದೆ ನೋಡಾ—  
ಸ್ವತಂತ್ರಧೀರ ಸಿದ್ಧೇಶ್ವರಾ !

ಪುರಾಣಿಕರ ಈ ವಚನ ಅವರ ವ್ಯಕ್ತಿತ್ವದ ವಿಮರ್ಶೆಯೆಂದರೆ ತಪ್ಪಾಗದು.

ಈಗ ಅವರಿಗೆ ಅರವತ್ತೆರಡು ವರ್ಷ. ನಾವು ಅವರಿಗೆ ಸನ್ಮಾನ ಮಾಡಿ ಗೌರವಿಸುತ್ತಿದ್ದೇವೆ. ಅಲ್ಲ—ಸನ್ಮಾನದ ಮೂಲಕ ನಮ್ಮನ್ನು ನಾವೇ ಗೌರವಿಸಿಕೊಳ್ಳುತ್ತೇವೆ. ಶ್ರೀ ಪುರಾಣಿಕರು ಹಲವಾರು ವರ್ಷ ಬಾಳಲಿ, ಹೆಚ್ಚಿನ ಸಾಹಿತ್ಯಸೇವೆ ಮಾಡಲಿ ಎಂದು ಸ್ವತಂತ್ರಧೀರ ಸಿದ್ಧೇಶ್ವರನನ್ನು ಪ್ರಾರ್ಥಿಸೋಣ. □

ನನಗೆ ಅಮೃತ ಬೇಕಿಲ್ಲ—  
ಮುದದಿ ಕಡೆದೀವ ಮಜ್ಜಿಗೆಯೆ ಸಾಕು !  
ಕಲ್ಪವೃಕ್ಷದ ಹಣ್ಣು ಬೇಕಿಲ್ಲ—  
ನಾನೆ ದುಡಿದುಣುವ ಕಜ್ಜಾಯ ಸಾಕು !  
ಸ್ವರ್ಗ, ನಂದನ, ಅಲಕ ಬೇಕಿಲ್ಲ—  
ಒಲ್ಮೆಯುಕ್ಕುವ ಮುರುಕು ಮನೆಯೆ ಸಾಕು !  
ಸುಧೆಯೆ ಬೇಕೆನುವ ಸುರಸುಂದರಿಯು ಬೇಕಿಲ್ಲ  
ರೊಟ್ಟಿ ತಟ್ಟುವ ಸರಳ ಸತಿಯೆ ಸಾಕು !

—ಕಲ್ಲೋಲಮಾಲೆ, ಪು. 67

# ಸ್ನೇಹಶೀಲ, ವಿಚಾರವಂತ ಡಾ. ಪುರಾಣಿಕರು

● ಹೆಚ್. ಆರ್. ದಾಸೇಗೌಡ

ಸುಪ್ರಸಿದ್ಧ ಸಾಹಿತಿಗಳು, ಹೆಸರಾಂತ ಕವಿಗಳು ಮತ್ತು ದಕ್ಷ ಆಡಳಿತಗಾರರು ಆಗಿ ಕರ್ನಾಟಕ ಸರ್ಕಾರದ ಸೇವೆಯಿಂದ ನಿವೃತ್ತರಾದ ಸನ್ಮಾನ್ಯ ಡಾ. ಸಿದ್ಧಯ್ಯ ಪುರಾಣಿಕರು ನಾಡಿನ ಪ್ರತಿಭಾವಂತ, ಸ್ನೇಹಶೀಲ, ಗುಣವಂತ ವ್ಯಕ್ತಿಗಳಲ್ಲಿ ಒಬ್ಬರು. ಬಹುಮುಖ ಪ್ರತಿಭೆಯುಳ್ಳ ಡಾ. ಸಿದ್ಧಯ್ಯ ಪುರಾಣಿಕರ ನೇತೃತ್ವದಲ್ಲಿ ಅನೇಕ ಸಾಂಸ್ಕೃತಿಕ, ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಸೇವೆ ಸಲ್ಲಿಸಿದ ನನಗೆ ಡಾ. ಪುರಾಣಿಕರಲ್ಲಿರುವ ಪ್ರತಿಭೆ, ಸ್ನೇಹತ್ವ, ಸಹಕರಿಸುವ ಗುಣಗಳ ಪ್ರತ್ಯಕ್ಷ ಅನುಭವ. ನಾಡು ನುಡಿಗೆ ಅವರು ಸಲ್ಲಿಸಿರುವ, ಸಲ್ಲಿಸುತ್ತಿರುವ ಸೇವೆ ಅಪಾರವಾದುದು. ಇಂತಹ ಮಹಾನ್ ವ್ಯಕ್ತಿಯನ್ನು ಸನ್ಮಾನಿಸುವುದು ಮತ್ತು ಸಂಭಾವನಾ ಗ್ರಂಥ ವನ್ನು ಅರ್ಪಿಸುವುದು ನನಗೆ ಅತ್ಯಂತ ಹರ್ಷದ ವಿಷಯ. ಆ ಸಮಾರಂಭದ ಸವಿನೆನಪಿಗಾಗಿ ಹೊರಡುವ ಸಂಸ್ಮರಣ ಸಂಚಿಕೆಗೆ ಡಾ. ಪುರಾಣಿಕರ ಬಗೆಗೆ ಒಂದು ಲೇಖನವನ್ನು ಬರೆದು ಕಳುಹಿಸಬೇಕೆಂದು ಕೋರಿಕೆ ಬಂದಾಗ ನನಗೆ ಸಖೇದಾಶ್ಚರ್ಯವೂ ಹಾಗೂ ಮುಜ ಗರವೂ ಆಯಿತು. ಬರಹಗಾರರಲ್ಲಿ ಅತ್ಯಂತ ಸಾಮಾನ್ಯ ವರ್ಗಕ್ಕೆ ಸೇರಿದ ನಾನು ಸಾಹಿತ್ಯಕ್ಷೇತ್ರದ ಉತ್ತುಂಗ ಶಿಖರದಲ್ಲಿರುವ ಹಿರಿಯ ವ್ಯಕ್ತಿಯ ಬಗ್ಗೆ ಬರೆಯುವುದು ಸಾಧುವೆ? ಎಂಬ ಶಂಕೆ ಉಂಟಾಯಿತು. ಆದರೂ ಒಂದು ಸ್ತುತ್ಯಕಾರ್ಯವನ್ನು ವಹಿಸಿದಾಗ ನನಗಿರುವ ಅತ್ಯಲ್ಪ ಸಾಮರ್ಥ್ಯದ ಚೌಕಟ್ಟಿನೊಳಗೆ ನಿಷ್ಠೆಯಿಂದ ಮಾಡಲು ತುಂಬು ಮನಸ್ಸಿನಿಂದ ಒಪ್ಪಿಕೊಂಡು ಈ ನಾಲ್ಕು ಮಾತುಗಳನ್ನು ಬರೆಯಲೆತ್ನಿಸಿದ್ದೇನೆ. ಅತ್ಯಂತ ಹತ್ತಿರದವರ ಬಗೆಗೆ ಬರೆಯುವುದು ಅಷ್ಟು ಸುಲಭದ ಕೆಲಸವಲ್ಲ. ಅದರಲ್ಲೂ ಸಂಪಾದಕರು ನೀಡಿರುವ "ಡಾ. ಪುರಾಣಿಕರನ್ನು ನಾನು ಕಂಡಂತೆ" ಎನ್ನುವ ವಿಷಯದ ಮೇಲೆ ಬರೆಯುವುದು ಖಂಡಿತವಾಗಿಯೂ ಸೂಕ್ಷ್ಮವಾದದ್ದು. ಆದರೂ ನನಗೆ ಅತ್ಯಂತ ಪ್ರಿಯ ರಾದ ಪುರಾಣಿಕರ ಸನ್ಮಾನ ಗ್ರಂಥಕ್ಕೆ ನನ್ನ ಪುಟ್ಟ ಕಾಣಿಕೆಯನ್ನು ಗೌರವ ಪೂರ್ವಕವಾಗಿ ಅರ್ಪಿಸಲು ಈ ಪ್ರಯತ್ನ.

ಡಾ. ಸಿದ್ಧಯ್ಯ ಪುರಾಣಿಕರ ವ್ಯಕ್ತಿತ್ವದ ಬಗ್ಗೆ ನನಗೆ ಅಪಾರ ಗೌರವವಿದೆ. ಕಾರಣ ಅವರು ವ್ಯಕ್ತಿಗಳನ್ನು ನಡೆಸಿಕೊಳ್ಳುತ್ತಿದ್ದ ರೀತಿ ಬೇರೆಯವರಿಗೆ ಮೇಲ್ಪಂಕ್ತಿ ಯಾಗಬಲ್ಲದು. ಡಾ. ಪುರಾಣಿಕರ ಕಾರ್ಯಕೌಶಲ್ಯ ಸರ್ವಜನಾದರಣೀಯ. ಅವರು ಹೇಳಬೇಕಾದ ಮಾತು ಗಳನ್ನು ನಿಧಾನವಾಗಿ, ಗಂಭೀರವಾಗಿ, ಯಾವುದೇ ಮುಚ್ಚುಮರೆಯಿಲ್ಲದೆ ನಿರ್ಭಯವಾಗಿ ಹೇಳುತ್ತಿದ್ದುದು ಅವರ ವ್ಯಕ್ತಿತ್ವದ ಬಗ್ಗೆ ನನಗೆ ಅಪಾರ ಮೆಚ್ಚಿಗೆ ಮೂಡಿಸಿತು. ಅವರಲ್ಲಿರುವ ಗಂಭೀರ ನಡತೆ ಎಂಥವ ರಲ್ಲೂ ಅವರ ಬಗ್ಗೆ ಭಯಮಿಶ್ರಿತ ಗೌರವವನ್ನು ಉಂಟು ಮಾಡುತ್ತದೆ. ಮೇಲ್ನೋಟಕ್ಕೆ ಅವರ ವ್ಯಕ್ತಿತ್ವ ಗಂಭೀರ ವಾಗಿ ಕಾಣಿಸಿದರೆ ಅವರಿಗೆ ತುಂಬಾ ಸನಿಹವಾದಾಗ ಇವರು ಎಷ್ಟು ಮೆದು ಹಾಗೂ ಸ್ನೇಹಶೀಲರೆಂಬುದನ್ನು

ಗಮನಿಸಬಹುದಾಗಿದೆ. ಇದು ನನಗೆ ಚೆನ್ನಾಗಿ ಮನದಟ್ಟಾದದ್ದು ಕಳೆದ ವರ್ಷ ಬೆಂಗಳೂರಿನಲ್ಲಿ ರಾಷ್ಟ್ರಕವಿ ಕುವೆಂಪುರವರ 75ನೇ ಹುಟ್ಟುಹಬ್ಬದ ಸಮಾರಂಭವನ್ನು ಆಚರಿಸಿದಾಗ. ಈ ಹುಟ್ಟುಹಬ್ಬ ಸಮಾರಂಭ ಸಮಿತಿಯಲ್ಲಿ ಕಾರ್ಯದರ್ಶಿಯಾಗಿದ್ದ ಅವರು ಕಿರಿಯನಾದ ನನ್ನ ಜೊತೆಯಲ್ಲಿ ಅಹರ್ನಿಶಿ ದುಡಿದುದಲ್ಲದೆ ಆ ಸಮಾರಂಭದ ಕಾರ್ಯಗಳ ನಿಯೋಜನೆಗೆ ಅಗತ್ಯವಾದ ಮಾರ್ಗದರ್ಶನ ನೀಡಿ ಸಮಾರಂಭದ ಯಶಸ್ಸಿಗೆ ಕಾರಣರಾದರು. ಡಾ. ಸಿದ್ಧಯ್ಯ ಪುರಾಣಿಕರು ಯಾವುದೇ ಕ್ಲಿಷ್ಟ ಸನ್ನಿವೇಶ ಒದಗಿದಾಗಲೂ ಶಾಂತರಾಗಿದ್ದುಕೊಂಡು ಉತ್ತಮ ಮಾರ್ಗದರ್ಶನ ನೀಡಿ ಬೆಂಗಳೂರಿನ ಮಹಾಜನತೆ ರಾಷ್ಟ್ರಕವಿಯ ಹುಟ್ಟುಹಬ್ಬದ ಸವಿಯನ್ನು ಅನುಭವಿಸಲು ಕಾರಣರಾದರು. ಡಾ. ಪುರಾಣಿಕರ ಕಾರ್ಯದಕ್ಷತೆ ರಾಷ್ಟ್ರಕವಿಗಳಿಂದ ಪ್ರಶಂಸಿಸಲ್ಪಟ್ಟಿತು.

ಡಾ. ಸಿದ್ಧಯ್ಯ ಪುರಾಣಿಕರು ಬಹುಮುಖ ಪ್ರತಿಭೆಯುಳ್ಳವರು. ಇವರು ಹಲವಾರು ಕ್ಷೇತ್ರಗಳಲ್ಲಿ ದುಡಿದವರು. ಕನ್ನಡ ನಾಡು ನುಡಿಗಾಗಿ ಸಾಕಷ್ಟು ಸೇವೆ ಮಾಡಿದ್ದಾರೆ ಹಾಗೂ ಮಾಡುತ್ತಿದ್ದಾರೆ. ಈ ಸೇವೆಗಳ ಹಿನ್ನೆಲೆಯಲ್ಲಿ ಡಾ. ಪುರಾಣಿಕರನ್ನು ಗಮನಿಸುವುದು ಅತ್ಯಂತ ಸೂಕ್ತವಾದದ್ದು. ಕನ್ನಡ ಭಾಷೆಯು ಹಲವಾರು ಮಹನೀಯರ ಅವಿಶ್ರಾಂತ ಹೋರಾಟದ ಫಲವಾಗಿ ಇಂದು ಆಡಳಿತಭಾಷೆಯಾಗಿದೆ. ಈ ಹೋರಾಟಗಾರರಲ್ಲಿ ಡಾ. ಪುರಾಣಿಕರೂ ಒಬ್ಬರು. ಡಾ. ಪುರಾಣಿಕರು ಅನೇಕ ಸ್ತರಗಳಲ್ಲಿ ಈ ಹೋರಾಟಕ್ಕೆ ಬೆಂಬಲವಾಗಿ ನಿಂತವರು. ಇಂದು ಕನ್ನಡಭಾಷೆ ನಮ್ಮ ನಾಡಿನ ಆಡಳಿತಭಾಷೆಯಾಗಿದೆ. ಆದರೆ ಸಂಪೂರ್ಣವಾಗಿ ನಮ್ಮ ಆಡಳಿತ ಭಾಷೆ ಕನ್ನಡವಾಗಿಲ್ಲ. ಇದಕ್ಕಾಗಿ ಡಾ. ಪುರಾಣಿಕರು ತಮ್ಮ ನಿವೃತ್ತಜೀವನದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ವ್ಯವಹಾರ ಕನ್ನಡದಲ್ಲಿ ನಡೆಸಲು ಡಾ॥ ದೇಜಗೌ ಅವರ ಜೊತೆ ಸತ್ಯಾಗ್ರಹವನ್ನು ಮಾಡಿದುದಲ್ಲದೆ, ರಾಜ್ಯಸರ್ಕಾರ ಈ ಬಗ್ಗೆ ತುರ್ತು ಆಜ್ಞೆ ಹೊರಡಿಸಲು ಕಾರಣರಾದರು. ವಿಶ್ರಾಂತಿ ಪಡೆಯುವುದನ್ನು ಬಿಟ್ಟು ಹೋರಾಟ ಸಾಗಿಸಿದ್ದಾರೆ. ಅನೇಕ ಹೋರಾಟಗಾರರ ಜೊತೆಯಲ್ಲಿ ಹೆಗಲು ಕೊಟ್ಟಿದ್ದಾರೆ. ಇಂತಹ ಹೋರಾಟ ಮನೋಭಾವದ ವ್ಯಕ್ತಿತ್ವವನ್ನು ಹೊಂದಿದವರು ಡಾ. ಪುರಾಣಿಕರು.

ಡಾ. ಸಿದ್ಧಯ್ಯ ಪುರಾಣಿಕರು ಕಾರ್ಮಿಕ ಕಮಿಷನರ್ ಆಗಿದ್ದರು. ಜಿಲ್ಲಾಧಿಕಾರಿಗಳಾಗಿ ದುಡಿದವರು. ಇವರು ಶ್ರೇಷ್ಠ ಆಡಳಿತಗಾರರಾಗಿದ್ದವರು. ದಕ್ಷ ಆಡಳಿತಗಾರರಾಗಿದ್ದ ಸಿದ್ಧಯ್ಯ ಪುರಾಣಿಕರು ನಮ್ಮ ನಾಡಿನ ಆಡಳಿತಕ್ಷೇತ್ರದಲ್ಲಿ ಬಹಳಷ್ಟು ಸೇವೆ ಸಲ್ಲಿಸಿದ್ದಾರೆ. ಕಾರ್ಮಿಕ ಕಮಿಷನರ್ ಆಗಿದ್ದ ಕಾಲದಲ್ಲಿ ಕಾರ್ಮಿಕರ ಹಿತಾಸಕ್ತಿಗಳ ಬಗ್ಗೆ ಕಳಕಳಿ ಇಟ್ಟುಕೊಂಡು ದುಡಿದವರು. ಇವರು ಉನ್ನತ ಹುದ್ದೆಗಳಲ್ಲಿ ಇದ್ದಾಗಲೂ ಸರಳವಾದ, ನಿರ್ಮಲವಾದ ಜೀವನವನ್ನು ನಡೆಸಿದವರು. ಇಂತಹ ವ್ಯಕ್ತಿಗಳು ನಮ್ಮ ಆಡಳಿತಕ್ಷೇತ್ರದಲ್ಲಿ ದೊರೆಯುವುದು ವಿರಳ. ಈ ಕಾರಣಗಳಿಂದಾಗಿ ಇವರು ಇಂದು ನಿವೃತ್ತವಾಗಿದ್ದರೂ ಅನೇಕ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ. ಎಲ್ಲಾ ಅಧಿಕಾರಿಗಳನ್ನು ಅವರು ಅಧಿಕಾರದಲ್ಲಿದ್ದಾಗ ಗೌರವವಾಗಿ ನೋಡುವುದು ನಮ್ಮ ಸಮಾಜದಲ್ಲಿ ನಡೆದು ಬಂದ ರೀತಿ. ಆದರೆ ಅಧಿಕಾರಿ ನಿವೃತ್ತರಾದಾಗ ಸಮಾಜ ಅವರನ್ನು ಗೌರವವಾಗಿಯೇ ನಡೆಸಿಕೊಂಡರೆ ಆ ಅಧಿಕಾರಿಯು ಅಧಿಕಾರದಲ್ಲಿ ನಿರ್ವಹಿಸಿದ ಒಳ್ಳೆಯ ಕೆಲಸಗಳಿಗಾಗಿ ಮಾತ್ರ. ಈ ಮಾತಿನ ಹಿನ್ನೆಲೆಯಲ್ಲಿ ಡಾ. ಪುರಾಣಿಕರು ಇಂದೂ ನಮ್ಮ ಸಮಾಜದ ಪ್ರೀತಿಗೆ ಪಾತ್ರರಾಗಿರುವುದನ್ನು ಗಮನಿಸಿದರೆ ಅವರು ಅಧಿಕಾರದಲ್ಲಿ ಮಾಡಿದ ಒಳ್ಳೆಯ ಕಾರ್ಯಗಳು ಹಾಗೂ ದಕ್ಷತೆಗೆ ಸಿಕ್ಕಿದ ಅರ್ಹತಾ ಪತ್ರವೆಂಬುದು ಸ್ಪಷ್ಟವಾಗುತ್ತದೆ.

ಡಾ. ಸಿದ್ಧಯ್ಯ ಪುರಾಣಿಕರು ಅನೇಕ ಸಂಘ ಸಂಸ್ಥೆಗಳಲ್ಲಿ ದುಡಿದವರು ಹಾಗೂ ದುಡಿಯುತ್ತಿರುವವರು. ಸಾಹಿತ್ಯಿಕ, ಸಾಂಸ್ಕೃತಿಕ ಬೆಳವಣಿಗೆಗಾಗಿ ಸಂಘ ಸಂಸ್ಥೆಗಳಲ್ಲಿ ಕೆಲಸಮಾಡುತ್ತಿದ್ದಾರೆ. ಬಸವ ಸಮಿತಿ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಇತ್ಯಾದಿ ಸಾಹಿತ್ಯಿಕ ಸಂಸ್ಥೆಗಳ ಕಾರ್ಯದಲ್ಲಿ ಇಂದೂ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. 'ಬಸವಜರ್ನಲ್'ನ ಸಂಪಾದಕರಾಗಿದ್ದಾರೆ. ಡಾ. ಶಂ.ಬಾ. ಜೋಶಿಯವರ ಸನ್ಮಾನ ಸಮಾರಂಭದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದೂ ಉಂಟು. ಹೀಗೆ ಹಲವಾರು ಸಂಘ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪುರಾಣಿಕರು ಈಗಲೂ ನಾಡು – ನುಡಿಗಾಗಿ ದುಡಿಯುತ್ತಿರುವುದು ಕನ್ನಡದ ಜನತೆಗೆ ಅತೀವ ಸಂತಸದ ವಿಷಯ. ಕನ್ನಡದ ಬಗೆಗಿನ ಇವರ ದುಡಿಮೆ ಕಂಡಾಗ ಹರ್ಷವಾಗುತ್ತದೆ.

ಡಾ. ಪುರಾಣಿಕರು ಧರ್ಮಪರಾಯಣರು. ಧಾರ್ಮಿಕತ್ವದಲ್ಲಿ ನಂಬಿಕೆಯಿರುವವರು, ಸಾತ್ವಿಕರು. ಧರ್ಮ ಶ್ರದ್ಧೆಯುಳ್ಳ ಇವರು "ಮಾನವ ಧರ್ಮ" ದಲ್ಲೂ ನಂಬಿಕೆಯುಳ್ಳವರು ಹಾಗೂ ಸರ್ವಧರ್ಮಸಹಿಷ್ಣುಗಳು. ರಾಷ್ಟ್ರಕವಿಗಳ ವಿಶ್ವಧರ್ಮದ ಬಗ್ಗೆ ಇವರಿಗೆ ಅಪಾರ ಒಲವು. ಅಲ್ಲದೆ ರಾಷ್ಟ್ರಕವಿಗಳ ಸಂದೇಶಗಳ ಪ್ರಸಾರಕ್ಕೆ ಅತ್ಯಂತ ಆದ್ಯತೆ ನೀಡಿ ಅವುಗಳ ಪ್ರಸಾರದಲ್ಲಿ ತುಂಬಾ ಆಸಕ್ತರಾದವರು. ಜಾತಿ ಮತ ಪಂಥಗಳ ದುರಭಿಮಾನ ಇವರಿಗಿಲ್ಲ. ಇವರು ಎಂದೂ ಜಾತಿವಾದಿಯಾಗಿ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡವರಲ್ಲ. ಇವರನ್ನು ಎಲ್ಲಾ ಜಾತಿಯವರು ಸಮಾನವಾಗಿ ಗೌರವಿಸುವುದನ್ನು ಗಮನಿಸಿದರೆ ಈ ನನ್ನ ಮಾತಿನ ಸತ್ಯತೆಯನ್ನು ಸರ್ವರೂ ಅರಿಯಬಹುದು. ವ್ಯಕ್ತಿಗಳಲ್ಲಿರುವ ಸಾತ್ವಿಕತೆ, ಬುದ್ಧಿಮತ್ತೆ, ಸ್ನೇಹಶೀಲತೆ, ಚತುರತೆಗಳಿಗೆ ಮಾತ್ರ ಗೌರವ ನೀಡುವ ಮಹತ್ವಗುಣವನ್ನು ಬೆಳೆಸಿಕೊಂಡವರು ಡಾ. ಪುರಾಣಿಕರು. ವೈಜ್ಞಾನಿಕಯುಗದಲ್ಲೂ ಜಾತಿಯ ರೋಗದಿಂದ ಇಂದೂ ನಮ್ಮ ಸಮಾಜವು ನರಳುತ್ತಿರುವ ಹಿನ್ನೆಲೆಯಲ್ಲಿ ಡಾ. ಪುರಾಣಿಕರಂತೆ ಸರ್ವರೂ ಸರ್ವ ಜಾತಿಯವರನ್ನು ಗೌರವಿಸುವ ಗುಣವನ್ನು ಹೊಂದಿದರೆ ಈ ಜಾತಿರೋಗಕ್ಕೆ ದಿವ್ಯಔಷಧವಾಗಬಹುದೆಂದು ಕಾಣುತ್ತದೆ. ಆದರೆ ದುರದೃಷ್ಟವಶಾತ್ ಇಂದೂ ಈ ಜಾತಿವಾದದ ರೋಗ ವಿದ್ಯಾವಂತರಲ್ಲೇ ಹೆಚ್ಚಾಗಿ ಹಬ್ಬುತ್ತಿದೆ. ಇದರ ಬಗ್ಗೆ ಪುರಾಣಿಕರು ಅನೇಕ ಬಾರಿ ನೊಂದು ನನ್ನೊಡನೆ 'ಇದು ಸರಿಯಲ್ಲ' ವೆಂದು ಹೇಳಿದ್ದುಂಟು. ಇಂತಹ ವ್ಯಕ್ತಿಗಳು ಇಂದು ನಮ್ಮಲ್ಲಿ ತೀರಾ ವಿರಳವೆಂದು ನನ್ನ ಭಾವನೆ.

ಡಾ. ಸಿದ್ಧಯ್ಯ ಪುರಾಣಿಕರು ಸಾಹಿತ್ಯಕ್ಷೇತ್ರದಲ್ಲೂ ಅನುಪಮವಾದ ಕೃಷಿ ಮಾಡಿದವರು. ಇವರು ಕವಿಗಳು, ಲೇಖಕರು, ಸಂಪಾದಕರೂ ಆಗಿದ್ದಾರೆ. "ಕಾವ್ಯಾನಂದ" ಎನ್ನುವ ಕಾವ್ಯನಾಮದಲ್ಲಿ ಸಾಕಷ್ಟು ಕವನ ಸಂಕಲನಗಳನ್ನು ಹೊರತಂದಿದ್ದಾರೆ. ಅನೇಕ ಉತ್ಕೃಷ್ಟಮಟ್ಟದ ಲೇಖನಗಳನ್ನು ಬರೆದಿದ್ದಾರೆ. ಇವರು ಬರೆದ ವಚನಗಳ ಸಂಗ್ರಹಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇವರು ನಾಟಕಗಳನ್ನು ಬರೆದಿದ್ದಾರೆ. ಹೀಗೆ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ ಹಾಗೂ ಇನ್ನೂ ಮಾಡುತ್ತಿದ್ದಾರೆ.

ಡಾ. ಪುರಾಣಿಕರು ಒಳ್ಳೆಯ ಭಾಷಣಕಾರರು. ಇವರ ಉಪನ್ಯಾಸಗಳಲ್ಲಿ ಹೊಸ ಹೊಸ ಸಂಶೋಧನೆಯ ವಿಷಯಗಳಿರುತ್ತವೆ. ಇವರು ಅರ್ಥಪೂರ್ಣವಾಗಿ ವಿಚಾರಲಹರಿಯನ್ನು ಮಂಡಿಸುತ್ತಾರೆ. ಇವರ ಉಪನ್ಯಾಸಗಳು ವಿಚಾರಗಳನ್ನು ತಿಳಿಯಬೇಕೆಂಬ ಸಭಿಕರಿಗೆ ಅತ್ಯಂತ ಮಹತ್ವ ಪೂರ್ಣವೆನಿಸುತ್ತವೆ.

ಡಾ. ಸಿದ್ಧಯ್ಯ ಪುರಾಣಿಕರು ಪತ್ರಿಕಾಕ್ಷೇತ್ರದಲ್ಲೂ ದುಡಿದವರು. ಇವರು ಲೋಕವಾಣಿ ದಿನಪತ್ರಿಕೆಯ ಸಂಪಾದಕರಾಗಿದ್ದರು. ಹರಿತವಾದ ಸಂಪಾದಕರ ವಾಣಿಗಳನ್ನು ಆ ಪತ್ರಿಕೆಯಲ್ಲಿ ಸುರಿಸಿದರು. ಡಾ. ಪುರಾಣಿಕರು ದುಡಿಯದ ಸಾಹಿತ್ಯ ಕ್ಷೇತ್ರವಿಲ್ಲ ಎನ್ನಬಹುದು.

ಆತ್ಮೀಯರಾದ ಸಿದ್ಧಯ್ಯ ಪುರಾಣಿಕರ ಬಗ್ಗೆ ಹೆಚ್ಚು ಬರೆದರೆ ಹೊಗಳುವಿಕೆಯೇ ಅಪಾರವಾಗುವುದು ಸಹಜ. ಆದರೆ ಇವೆಲ್ಲಾ ಸತ್ಯವಾದದ್ದು ಹಾಗೂ ನನ್ನ ಅನುಭವಕ್ಕೆ ಬಂದವುಗಳು. ಇವರ ವ್ಯಕ್ತಿತ್ವವನ್ನು ಗೌರವಿಸುವ ನನಗೆ ಅವರ ಮಾರ್ಗದರ್ಶನವು ಸಾಕಷ್ಟು ಒಳ್ಳೆಯ ಕಾರ್ಯ ಮಾಡುವುದಕ್ಕೆ ಸಹಾಯಕವಾಗಿದೆ. ಇವರಿಗೆ ದೇವರು ಆಯುರಾರೋಗ್ಯ ಸಂಪತ್ತನ್ನು ದಯಪಾಲಿಸಿ ಕನ್ನಡಮ್ಮನ ಸೇವೆಗೆ ಇನ್ನೂ ಹೆಚ್ಚು ಹೆಚ್ಚು ಅವಕಾಶವಾಗಲೆಂದು ಹಾರೈಸುತ್ತೇನೆ. □

ನನ್ನ ಬಾಳಿನ ಬಾನಲ್ಲಿ
ಬುದ್ಧಿಯೇ ಭಾನು, ಶ್ರದ್ಧೆಯೇ ಶಶಿಯಾಗಲಯ್ಯಾ ;
ಶ್ರದ್ಧೆ ಸೂರ್ಯನಾಗಿ ಬುದ್ಧಿ ಚಂದ್ರನಾಗದಿರಲಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

—ವಚನೋದ್ಯಾನ, ಪು. 91.

# ಕೊಡಗಿನ ಜನಮನದಲ್ಲಿ...

● ಡಿ. ಜೆ. ಪದ್ಮನಾಭ

ಆಡಳಿತ ದಕ್ಷತೆ ಮತ್ತು ಸಾಹಿತ್ಯಾಸಕ್ತಿಯ ರಸಿಕತೆ ಒಂದಡೆ ಸಮಾವೇಶಗೊಳ್ಳುವುದು ಒಂದು ಅಪೂರ್ವ ಯೋಗಾಯೋಗ. ಕೇವಲ ವ್ಯಕ್ತಿಯಾಗಿ ಮಾತ್ರವಲ್ಲ ಕನ್ನಡ ನಾಡಿನ ಮಹಾಶಕ್ತಿಯಾಗಿ ನಾಡು, ನುಡಿ ಮತ್ತು ಭಾರತೀಯ ಸಂಸ್ಕೃತಿಯ ಪ್ರಚಾರ ಕೈಂಕರ್ಯದ ದೀಕ್ಷೆ ತೊಟ್ಟ ಸಿದ್ಧಯ್ಯ ಪುರಾಣಿಕರ ಬದುಕೇ ಒಂದು ಸುಂದರ ಕಾವ್ಯ. ಕನ್ನಡ–ಸಂಸ್ಕೃತ–ಉರ್ದು–ಆಂಗ್ಲಭಾಷೆಗಳಲ್ಲಿ ಅವರೊಬ್ಬ ಉದ್ದಾಮ ವಿದ್ವಾಂಸರು ; ನುರಿತ ವಾಗ್ಮಿಗಳು. ವೃತ್ತಿಯಲ್ಲಿ ಜನಾನುರಾಗ ಗಳಿಸಿ ಉದಯೋನ್ಮುಖರಾಗಿ ಬೆಳಗಿದ ದಿವ್ಯಚೇತನ.

ಕೊಡಗಿನಲ್ಲಿ ಶ್ರೀ ಸಿದ್ಧಯ್ಯ ಪುರಾಣಿಕರು ಜಿಲ್ಲಾಧಿಕಾರಿಗಳಾಗಿ ಬಂದುದರ ಪರಿಣಾಮ ನಾನಾ ಕ್ಷೇತ್ರಕ್ಕೆ ಒಂದಿಷ್ಟು ಏಳಿಗೆಯ ಕಾಲವಾಯಿತು. ನಾನು ಅವರನ್ನು ನಮ್ಮ ವಿರಾಜಪೇಟೆ ಕರ್ನಾಟಕ ಸಂಘದ ವಾರ್ಷಿಕೋತ್ಸವಕ್ಕೆ ಮುಖ್ಯಅತಿಥಿಗಳನ್ನಾಗಿ ಆಹ್ವಾನಿಸಲು ಮಡಿಕೇರಿಯಲ್ಲಿ ಅವರ ಕಾರ್ಯಾಲಯದಲ್ಲಿ ಸಂದರ್ಶಿಸಿದಾಗ ಮೊದಲ ಬಾರಿಗೆ ಅವರ ಪರಿಚಯವಾಯಿತು.

ಪರಭಾಷಾ ವ್ಯಾಮೋಹದ ಈ ಕೊಡಗಿನಲ್ಲಿ, ವಿಶೇಷತಃ ಗಡಿನಾಡಾದ ವೀರಾಜಪೇಟೆಯಲ್ಲಿ ಕನ್ನಡಾಭಿಮಾನದ ಸನ್ನಿವೇಶವು ತಲೆದೋರಲೂ, ಒಂದು ಲಕ್ಷ ವೆಚ್ಚದ ನಮ್ಮ ಸಂಘದ ಕಟ್ಟಡವು ಇಲ್ಲಿ ಕನ್ನಡತನದ ಭದ್ರಕೋಟೆಯಂತೆ ತಲೆಯೆತ್ತಿ ನಿಲ್ಲಲೂ ಮೂಲತಃ ಶ್ರೀ ಸಿದ್ಧಯ್ಯ ಪುರಾಣಿಕರ ಮಾರ್ಗದರ್ಶನವೇ ಕಾರಣವಾಗಿದೆ. ಇದರ ಪರಿಣಾಮವಾಗಿಯೇ ಕೊಡಗಿನಲ್ಲಿ ಕನ್ನಡದ ಬಗ್ಗೆ ಜನ ಜಾಗೃತಿಯುಂಟಾಗಿದೆ.

ಆಂಗ್ಲಸಂಸ್ಕೃತಿಯ ವಿಶೇಷ ಪ್ರಭಾವಕ್ಕೆ ಒಳಪಟ್ಟು ಕನ್ನಡತನವು ಕೊಂಚ ಮಟ್ಟಿಗೆ ಹಿಂದೆ ಸರಿದಿದ್ದ ಈ ಕೊಡಗಿಗೆ ಶ್ರೀ ಸಿದ್ಧಯ್ಯ ಪುರಾಣಿಕರು ಜಿಲ್ಲಾಧಿಕಾರಿಗಳಾಗಿ ಬಂದದ್ದು ಒಂದು ವಿಧದ ದೈವಾನುಗ್ರಹವೇ ಸರಿ. ಇಲ್ಲಿ ಬಂದ ಇತರ ಎಲ್ಲಾ ಜಿಲ್ಲಾಧಿಕಾರಿಗಳನ್ನು ಮೀರಿಸಿ ಇವರು ಈ ಪುಟ್ಟ ಜಿಲ್ಲೆಯಲ್ಲಿ ನಾನಾ ಅಭಿವೃದ್ಧಿ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ತಮ್ಮ ಆಡಳಿತದ ಅವಧಿಯಲ್ಲಿ ಅವರು ಬಡವರೊಡನೆ ಬಡವರಾಗಿ, ಶ್ರೀಮಂತರೊಡನೆ ಶ್ರೀಮಂತರಾಗಿ, ಕಾರ್ಮಿಕರೊಡನೆ ಕಾರ್ಮಿಕರಾಗಿ ಸಮನ್ವಯ ದೃಷ್ಟಿಯನ್ನು ತಾಳಿ ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಂಡೇ ಜನಾನುರಾಗಿಗಳಾಗಿ ದುಡಿದಿದ್ದರು. ಇವರು ವರ್ಗವಾಗಿ ಬೇರೆಡೆಗೆ ತೆರಳುವಾಗ ಜಿಲ್ಲೆಯಾದ್ಯಂತ ನಾನಾ ಕಡೆಗಳಲ್ಲಿ ಸಂಘ ಸಂಸ್ಥೆಗಳಿಂದ ಬೀಳ್ಕೊಡುಗೆ ಸಮಾರಂಭವು ಜರುಗಿದ್ದುದು ಅವರ ಜನಪ್ರಿಯತೆಗೆ ಹಿಡಿದ ಕೈಗನ್ನಡಿಯಾಗಿತ್ತು.

ರೈತರ ಬದುಕಿನ ಸಮಸ್ಯೆಗಳೇ ಒಂದು ರೀತಿ ಇರುತ್ತವೆ. ಈ ಕೊಡಗಿನಲ್ಲಿ ಎರಡನೇ ಬೆಳೆಯನ್ನು ತೆಗೆಯಲು ಸಾಧ್ಯವಿಲ್ಲ ಎಂದು ಕುರುಡು ಭಾವನೆಯಿಂದ ಕೆಲವರು ವಾದಿಸುತ್ತಿದ್ದ ಸನ್ನಿವೇಶದಲ್ಲಿ ಶ್ರೀಯುತರು ರೈತರ ಮನೆ ಬಾಗಿಲಿಗೇ ಸಾರಿ ಅದು ಸಾಧ್ಯವಿದೆಯೆಂದು ಕಾರ್ಯತಃ ತೋರಿಸಿಕೊಟ್ಟು ಕೀರ್ತಿಗೆ ಪಾತ್ರರಾಗಿದ್ದಾರೆ. ರೈತರಿಗೆ ಅಗತ್ಯವಿದ್ದ ಪಂಪ್‌ಸೆಟ್‌ಗಳನ್ನು ಒದಗಿಸಿ ಕೊಟ್ಟು ಸೂಕ್ತ ಮಾರ್ಗದರ್ಶನವನ್ನು ನೀಡಿ ಅಧಿಕ ಫಸಲಿನ ಮೂಲಕ ಹಸಿರುಕ್ರಾಂತಿಯ ಸಂದೇಶವನ್ನು ರಾಷ್ಟ್ರಕ್ಕೆ ನೀಡಿದ ದೊಡ್ಡಸ್ತಿಕೆ ಇವರದಾಗಿದೆ.

ಕಳೆದ ಹಲವಾರು ವರ್ಷಗಳಿಂದ ನನಗೆ ಅವರೊಡನೆ ನಿಕಟ ಸಂಪರ್ಕವಿತ್ತು. ಕೊಡಗಿನಲ್ಲಿ ಕನ್ನಡತನವನ್ನು

ಊರ್ಜಿತದಲ್ಲಿರಿಸಲೂ, ಅಧಿಕಾಧಿಕವಾಗಿ ಬೆಳೆಸಲೂ ಕಾರ್ಯಸಾಧ್ಯವಾದ ಎಲ್ಲ ಪ್ರಯತ್ನಗಳನ್ನು ಕೈಕೊಳ್ಳಬೇಕೆಂದು ಭೇಟಿಯಾದಾಗಲೆಲ್ಲ ಅವರು ನನಗೆ ಹಿತವಚನಗಳನ್ನು ನೀಡುತ್ತಿದ್ದರು. ವಿಶೇಷತಃ ಗಡಿಭಾಗವಾದ ವಿರಾಜಪೇಟೆಯಲ್ಲಿ ವಲಸೆಗಾರರಾದ ಅನ್ಯಭಾಷಿತರ ಪ್ರಭಾವವನ್ನು ತಗ್ಗಿಸಲೂ ಕನ್ನಡಿಗರನ್ನು ಸಂಘಟಿಸಲೂ ಅವರು ನಮಗೆ ಕಿವಿ ಮಾತನ್ನು ಹೇಳುತ್ತಿದ್ದುದುಂಟು.

ಸ್ಥಳೀಯರ ಆಸಕ್ತಿಯನ್ನು ಶ್ರೀಯುತರು ಚೆನ್ನಾಗಿಯೇ ಮನಗಂಡವರು ಮತ್ತು ಆ ಕುರಿತು ಸೂಕ್ತ ಪ್ರಯತ್ನವನ್ನು ಕೈಗೊಂಡವರು. ಕೊಡಗು ಸೈನಿಕರ ನಾಡು. ಜನರಲ್ ತಿಮ್ಮಯ್ಯ, ಜನರಲ್ ಕಾರಿಯಪ್ಪನವರಂತಹವರನ್ನು ರಾಷ್ಟ್ರಕ್ಕೆ ನೀಡಿದ ಈ ನಾಡನ್ನು ರಾಷ್ಟ್ರದ ಜನತೆ ಗುರುತಿಸಬೇಕೆಂಬ ದೂರಾಲೋಚನೆಯಿಂದ ಶ್ರೀಯುತರು ಕುಶಾಲನಗರದ ಬಳಿ ಸೈನಿಕಶಾಲೆಯೊಂದನ್ನು ತೆರೆಯಬೇಕೆಂದು ಸರಕಾರವನ್ನು ಒತ್ತಾಯಿಸಿದುದಲ್ಲದೆ ಅದಕ್ಕೆ ಅಗತ್ಯವಿದ್ದ ಜಮೀನನ್ನು ತಮ್ಮ ಅಧಿಕಾರಾವಧಿಯಲ್ಲೇ ಮಂಜೂರು ಮಾಡಿದ್ದರು. ಅವರು ವರ್ಗವಾದರು. ಅನಂತರದವರ ನಿರಾಸಕ್ತಿಯೋ ಏನೊ–ಹೆಚ್ಚಿನ ಪ್ರಗತಿ ಕಾಣದೆ ಆ ನಿವೇಶನವು ಇಂದು ಬರಿದಾಗಿಯೇ ಉಳಿದಿದೆ.

ದಕ್ಷಿಣ ಭಾರತದ ಜನತೆಯ ಸಕಲ ಸೌಭಾಗ್ಯಗಳಿಗೂ ಮೂಲಾಧಾರಳೆನಿಸಿದ ಕಾವೇರಿಯು ಉಗಮವಾಗುವ ತಲಕಾವೇರಿಗೆ ಒಂದು "ಮಾಸ್ಟರ್‌ಪ್ಲಾನ್" ಸಿದ್ಧಗೊಳಿಸಿ ಸರಕಾರದ ಕಡೆಯಿಂದ ಹಾಗೂ ಕೊಡಗಿನ ಮತ್ತು ರಾಷ್ಟ್ರದ ನಾನಾ ಕಡೆಯ ಜನತೆಯಿಂದ ಧನ ಸಂಗ್ರಹಿಸಿ ಜನರಿಗೆ ಅಲ್ಲಿ ಬಂದು ತಂಗಲು ಸೌಕರ್ಯವಾಗುವಂತೆ ಛತ್ರವನ್ನು ಏರ್ಪಡಿಸಿದರು. ಅಂತೆಯೇ ಬೆಟ್ಟವನ್ನೇರಲು ಮೆಟ್ಟಿಲುಗಳನ್ನು, ವಿದ್ಯುದ್ದೀಪಗಳ ಬೆಳಕನ್ನು, ಇನ್ನೂ ಹಲವು ವಿಧದ ಸೌಕರ್ಯಗಳನ್ನು ಒದಗಿಸಿಕೊಟ್ಟು ನಮ್ಮ ರಾಷ್ಟ್ರದ ಸೌಕರ್ಯಸಜ್ಜಿತ ಪುಣ್ಯಕ್ಷೇತ್ರಗಳಲ್ಲಿ ಒಂದಾಗಿ ಅದು ಪರಿಗಣಿತವಾಗುವಂತೆ ಮಾಡಿದ ಶ್ರೇಯಸ್ಸು ಇವರದಾಗಿದೆ.

ಕೀರ್ತಿಕಾಮನೆಯಿಂದ, ಬಹಿರಾಡಂಬರದಿಂದ ಮತ್ತು ಒಣಜಂಭದಿಂದ ಶ್ರೀ ಸಿದ್ಧಯ್ಯ ಪುರಾಣಿಕರು ಬಲುದೂರ ಉಳಿದವರು. ಮಾತಿಗಿಂತ ಕೃತಿ ಲೇಸು ಎಂದು ಸರಳ ಜೀವಿಯಾಗಿ ಉದಾತ್ತ ಚಿಂತನೆ ನಡೆಸಿದವರು, ತನ್ನ ಕಾರ್ಯಗಳನ್ನು ಜನರು ಹೊಗಳಬೇಕೆಂದಾಗಲಿ, ತನಗೆ ಸನ್ಮಾನಗಳು ಜರುಗಬೇಕೆಂದಾಗಲಿ ಇವರು ಭಾವಿಸಿದವರೇ ಅಲ್ಲ. "ಕರ್ತವ್ಯ ನಿನ್ನದು ಫಲನೀಡಿಕೆ ನನ್ನದು" (ಗೀತೆ) ಎಂಬ ಭಗವತ್ ಸಂಕಲ್ಪವನ್ನು ಚೆನ್ನಾಗಿ ಮನದಟ್ಟು ಮಾಡಿ ಅನುಸರಿಸಿದವರು ಶ್ರೀ ಸಿದ್ಧಯ್ಯ ಪುರಾಣಿಕರು.

ಕುಶಾಲನಗರದ ಸಮೀಪ ಮಾದಲಪುರ ಎಂಬ ಒಂದು ಹಳ್ಳಿಯಿದೆ. ಅಲ್ಲಿನ ಗದ್ದೆಗಳು ಭೂಸಾರ ಸಂಪನ್ನವಾಗಿದ್ದರೂ ನೀರಿನ ಅಭಾವದಿಂದಾಗಿ ರೈತರಿಗೆ ಫಸಲು ದೊರಕುತ್ತಿದ್ದಿಲ್ಲ. ಗದ್ದೆಗಳೆಲ್ಲಾ ಬರಡಾಗಿದ್ದುವು. ಇದನ್ನು ಗಮನಿಸಿದ ಸಿದ್ಧಯ್ಯ ಪುರಾಣಿಕರು "ಲಿಫ್ಟ್ ಇರಿಗೇಶನ್" ಸಂಸ್ಥೆಯನ್ನು ಸ್ಥಾಪಿಸಿ, ಈಗ ಅಲ್ಲಿನ ರೈತರು ವರ್ಷಕ್ಕೆ ಮೂರು ಬೆಳೆಯನ್ನು ತೆಗೆದು ಸುಗಮ ಬಾಳುವೆ ನಡೆಸಲು ಸಾಧ್ಯವಾಗಿದೆ.

ಇವರ ಮಾರ್ಗದರ್ಶನ, ಪರಿಶ್ರಮಗಳನ್ನು ಮೆಚ್ಚಿಕೊಂಡ ಸ್ಥಳೀಯರು ಮಾದಲಪುರ ವೃತ್ತ (ಸರ್ಕಲ್)ಕ್ಕೆ ಶ್ರೀಯುತರ ಹೆಸರನ್ನಿಡಬೇಕೆಂದು ಒಮ್ಮತದಿಂದ ತೀರ್ಮಾನಿಸಿ ಇವರ ಒಪ್ಪಿಗೆಯನ್ನು ಕೇಳಿದಾಗ ಶ್ರೀಯುತರು ಆ ರೈತರ ಅಭಿಮಾನಕ್ಕೆ ವಂದಿಸಿ ವಿನಯದಿಂದಲೇ ಒಲ್ಲದೆ ಉಳಿದರು. ಬಿನ್ನವತ್ತಳೆಗಳು, ಸನ್ಮಾನ ಸಮಾರಂಭಗಳ ಕುರಿತೂ ಅವರು ನಿರಾಸಕ್ತರೇ ಆಗಿದ್ದರು. ಕೊಡಗಿನಿಂದ ವರ್ಗವಾಗಿ ಹೋಗುವಾಗ ನೆನಪಿನ ಕಾಣಿಕೆಯಾಗಿ ಜನತೆ ನೀಡಿದ್ದ ಬೆಳ್ಳಿಯ ಕರಂಡಕವನ್ನು ಸೌಜನ್ಯದಿಂದಲೇ ಸ್ವೀಕರಿಸದಾದರು. ಇದು ಅವರ ನಿಸ್ಪೃಹ ಜೀವನಕ್ಕೆ ಉತ್ತಮ ಉದಾಹರಣೆ.

ಅಧಿಕಾರಿಗಳ ಆಗಮನ ನಿರ್ಗಮನಗಳು ನಡೆಯುವುದರಲ್ಲಿ ವಿಶೇಷತೆಯೇನೂ ಇರುವುದಿಲ್ಲ. ಯಾವ ಅಧಿಕಾರಿ ಎಲ್ಲಿ ಏನು ಜನೋಪಯೋಗಿ ಸತ್ಕಾರ್ಯಗಳನ್ನು ಎಷ್ಟು ಸಮರ್ಥವಾಗಿ ಹೇಗೆ ನಿರ್ವಹಿಸಿದ–ಎಂಬುದು ಆವನ ಬದುಕನ್ನು ರೂಪಿಸುತ್ತದೆ; ಸ್ಥಳೀಯರ ಬದುಕಿಗೂ ದಾರಿದೀಪವಾಗುತ್ತದೆ. ಈ ದೃಷ್ಟಿಯಿಂದ ಪರಿಗಣಿಸಿದರೆ ಶ್ರೀ ಸಿದ್ಧಯ್ಯ ಪುರಾಣಿಕರ ಅಧಿಕಾರಾವಧಿಯು ಈ ಕೊಡಗಿನಲ್ಲಿ ಚಿರಕಾಲ ನೆನೆಯುವಂತಹದು, ಇತರರಿಗೆ ಮಾರ್ಗದರ್ಶಿಯಾಗಿ ಉಳಿಯುವಂತಹದು ಕೂಡ.

ಉತ್ತಮ ಸಾಹಿತ್ಯ ನಿರ್ಮಾಣ, ದಕ್ಷ ಆಡಳಿತ ಮತ್ತು ಜನಾನುರಾಗದ ಗುಣಗಳಿಂದ ಅವರ ಬಾಳುವೆಯು ಚಿರಕಾಲ ಜನಮನದಲ್ಲಿ ಉಳಿಯುವಂತಹದಾಗಿದೆ. □

'ಕಾವ್ಯಾನಂದ'ರಿಗೆ

# ಕವನ ಮಾಲೆ

## ಷಡಕ್ಷರಿ ಮಂತ್ರ

ಸದ್ವಿನಯವೆಂಬ ಹಣತೆಯಲ್ಲಿ
ಸುಜ್ಞಾನವೆಂಬ ಎಣ್ಣೆ ಹಾಕಿ
ಕಾಯಕವೆಂಬ ಬತ್ತಿಯನಿಟ್ಟು
"ಕಾವ್ಯಾನಂದ"ವೆಂಬ ಕಿಡಿಯ ಹಚ್ಚಿದರೆ
"ಸ್ವತಂತ್ರ ಧೀರ ಸಿದ್ಧೇಶ್ವರ"ನೆಂಬ ಬೆಳಕು ಹರಡಿತ್ತು
ಆ ಬೆಳಕಿನಲ್ಲಿ—
"ಕನ್ನಡ-ಬಸವ" ಎಂಬ ಷಡಕ್ಷರಗಳು
ಸಿದ್ಧಯ್ಯನೆದೆಯಲ್ಲಿ ಒಡೆದು ಕಾಂಬ ಪರಿಗೆ
ನಾ ಮಾರುವೋದೆ

● ಡಾ. ಹೆಚ್. ಚಂದ್ರಶೇಖರ

## ಕಾವ್ಯಾನಂದರಿಗೆ ಕಿರುಕಾಣಿಕೆ

ಕಾವ್ಯಾನಂದ ಸ್ವನಾಮದೆ ಕವಿತೆಯೊಳ್
ಆನಂದ ತಂದ ಧೀಮಂತ !
ಸರಳ ಗದ್ಯದೊಳು ಪದ್ಯದಾಡಂಬರ
ಮೆರೆಸಿದ ಶಬ್ದ ಶ್ರೀಕಾಂತ !
ಶರಣರ ಕರುಣಾರಸ ಗಂಗೆಯ ಪರಿ
ಹರಿವ ಧೀರವಾಣಿಯನು
ಧರೆಗಿಳಿಸಿದ ಭಗೀರಥರಿವರೆಂದೆನೆ
ನುಡಿ ಮೆರೆಸಿತ್ತು ಸತ್ಯವನು ! ॥೧॥

ಅವಿದ್ಯೆ ಅಧರ್ಮ ಅಜ್ಞಾನಾಂಧಕಾರದ
ತೆರೆಮುಸಗಿರಲು ನಿಸ್ತೇಜ,
ನಿಷ್ಕ್ರಿಯವಾಗೆ ನಿರಂಕುಶಪ್ರಭುತೆಗೆ
ಬಲಿಯಾಗಿರಲು ಸಮಾಜ
ಕಾಯಕತತ್ವದ ಹಿರಿಮೆಯ ಬೋಧಿಸಿ
ಕಳೆದು ಬಾಳ್ವಿಕೆಯ ಸ್ವಚ್ಛಂದ
ಕಾರಣರಾಗುತೆ ಜೀತನದುದಯಕೆ
ಬೆಳಕ ತಂದ ಕಾವ್ಯಾನಂದ ! ॥೨॥

ನಿಮ್ಮ ಪುರಾಣಿಕ ವಂಶಗೌರವವ
ಬೆಳಗುತೆ ವಾಗ್ವಿಭವದಲಿ
ತತ್ವದರ್ಶನದೆ ವಿಶ್ವಾದರ್ಶವ
ಕಾಣಿಸಿದಿರಿ ಶ್ರೋತೃಗಳಲ್ಲಿ
ಗದ್ಯಪದ್ಯದಲಿ ಸಿದ್ಧಿಯ ಪಡೆದಿರೆ
ಸಿದ್ಧಯ್ಯ ಹೆಸರ ಸಾರ್ಥಕತೆ,
ಎಲ್ಲೆಡೆ ಹರಡಲಿ ತನ್ನ ಪರಿಮಳವ
ನಿಮ್ಮಯ ನಿರುಪಮ ಕೀರ್ತಿಲತೆ ॥೩॥

● ಬಿ. ಪುಟ್ಟಸ್ವಾಮಯ್ಯ

## ಸಿದ್ಧಯ್ಯಾರ್ಯರ್ಗೆ ಶುಭಾಶಯ

ಕಾವ್ಯಾವಲೋಕನರತಂ ।
ಕಾವ್ಯರಸಾನುಭವ ಪರಮಸುಖ ಸಂತೃಪ್ತಂ ॥
ಕಾವ್ಯಾನಂದ ಸುಸಿದ್ಧಂ ।
ಕಾವ್ಯವಿರಚನಾ ಪವಿತ್ರಕಾರ್ಯಾನಂದಂ ॥

ಬಸವನ ನುಡಿ ನುಡಿಯೊಳಿರಲ್ ।
ಬಸವನ ನಡೆಯನುದಿನ ನಡೆಯುವ ನಡೆಯೊಳಿರಲ್ ॥
ಬಸವಾಯತ ಮತಸಿದ್ಧಂ ।
ಬಸವಧ್ಯಾನ ನಿರತಂ ದುರಾಶಾ ವಿರತಂ ॥

ಶರಣರ ವಚನಾಮೃತಮಂ ।
ಪರತರ ಸದ್ಭಕ್ತಿಯಿಂದಲೀಂಟಿದ ಸುಖದೊಳ್ ॥
ಪರಮಾನಂದ ಸುಸಿದ್ಧಂ ।
ವಿರಚಿಸಿದನಭಿನವ ವಚನ ಸುಮಘನವನಮಂ ॥

ನವಸುಮ ವಚನೋದ್ಯಾನದ
ಸುವಿಮಲ ಸುರುಚಿರ ಸುಗಂಧ ಕನ್ನಡನಾಡೊಳ್ ॥
ಪ್ರವಹಿಸಿ ಮೇರೆಯ ಮೀರುತ ।
ಪ್ರವಹಿಸಿದುದು ಬುಧರು ಮೆಚ್ಚೆ ಭಾರತಾದ್ಯಂತಂ ॥

ಘನ ವಿದ್ವಾಂಸಂ ವಿಬುಧಂ ।
ಘನ ಕವಿವರನೆಂದು ಮೆಚ್ಚೆ ಘನ ವಿದ್ವಾಂಸರ್ ॥
ವಿನುತ ಪುರಾಣಿಕ ವಂಶದ ।
ವಿನಯಶ್ರೀಯಂ ಪಡೆದಿಹ ಸಿದ್ಧಯ್ಯಾರ್ಯಂ ॥

ಮಿನುಗುತಿರಲ್ ಸೌಭಾಗ್ಯಂ
ವಿನಯಂ ಸುಖ ಶಾಂತಿ ಮಂದಹಾಸಂ ಮೊಗದೊಳ್
ಘನ ವಿಬುಧ ಸಿದ್ಧವಾರ್ಯಂ
ಗನವರತಂ ದೊರೆಗೆ ಆಯುರಾರೋಗ್ಯ ಸುಖಂ ॥

● ಟಿ. ಎಸ್. ಮಲ್ಲಪ್ಪ

## ಮಾನೋನ್ನತ ಕವಿ ಕಾವ್ಯಾನಂದ

ಭುವನದ ಭಾಗ್ಯದೊಳವತರಿಸಿದ ಕವಿ
ಸುವಿವೇಚನೆಯಿಂ ಲಿಖಿಸುವವ
ಭವತಾರಕದಽ ಗ್ರಂಥವ ಸೃಜಿಸಿದ
ಶಿವಶರಣರ ಚರಿತಾಮೃತವ

ಚೆನ್ನಕವಿಗಳಾ ಮೊಮ್ಮಗನಲ್ಲವೆ
ಮನ್ನೆಯ ಕಲ್ಲೀನಾಥಜನು
ಉನ್ನತ ವಚನೋದ್ಯಾನಕೆ ಲಭಿಸಿತು
ಕನ್ನಡ ಭಾಷಾ ಪ್ರಶಸ್ತಿಯದು

ಕೃತಿಗಳ ರಚಿಸುವ ಕಾವ್ಯಾನಂದರು
ಅತಿಶಯ ಕಾಯಕವೆಸಗಿದರು
ಮತಿಯುತ ವಿದ್ಯಽ–ವಿನಯ ಸಂಪನ್ನರು
ಖತಕನವರತವು ದುಡಿಯುವರು
ಪಂಡಿತ ಸಮತೆಯ ದರ್ಶಿಪನೆನ್ನುವ
ಖಂಡಿತ ವಾಕ್ಯವು ಸಮನಿಸಿದೆ
ಚಂಡ–ಪ್ರಚಂಡರ ಹೃದಯವ ಸೆಳೆಯುವ
ಪಿಂಡವು ಸಿದ್ಧಿಯ ಸಾಧಿಸಿದೆ

* * *

ಮಾನವೀಯತೆಯನ್ನೆ ಹಾಸುಹೊಕ್ಕಾಗಿಸಿದ
ಮಾನೋನ್ನತರು ಹಿರಿಯ ಕವಿಗಳಿವರು
ಸಾನುರಾಗದಿ ಕಿರಿಯರಿಗೆ ಮಾರ್ಗದರ್ಶನವ
ಊನವಿಲ್ಲದೆ ಗೈದು ತೋರಿಸಿದರು.

● ಪಂ. ಕೆ. ಪಿ. ಶಿವಲಿಂಗಯ

## ಬೆಲೆಯುಳ್ಳ ಮಾಣಿಕ

ಶರಣತತ್ತ್ವದ ಸಾರ ಸಾಗರದಿ ಈಜಾಡಿ,
ಉದ್ದಾಮ ಸಾಹಿತ್ಯಕೊಳದಿ ಓಕುಳಿಯಾಡಿ,
ಮಾನವೀಯತೆಯ ನೊರೆತೆರೆಯಲ್ಲಿ ತೇಲಾಡಿ,
ಕಾವ್ಯದಾನಂದದ ರಸಾಬ್ಧಿಯಲಿ ಓಲಾಡಿ,
ಸಾಹಿತ್ಯಜ್ಞಾನಭಾಂಡಾರವನೆ ಸೂರಾಡಿ,
ದಕ್ಷ, ಧೀಮಂತ ಆಡಳಿತದಲಿ ಹೆಸರಾಗಿ,
ಹೃದಯ, ಬುದ್ಧಿಯ ಸಿದ್ಧಿ ಪಡೆದ ಶ್ರೀ ಸಿದ್ಧಯ್ಯ;
ತತ್ತ್ವ, ಸಾಹಿತ್ಯ, ಆಡಳಿತದಿ ಪ್ರಬುದ್ಧಯ್ಯ;
ಸಜ್ಜನಿಕೆ, ಸದ್ಗುಣದ ನಿಧಿ ಸತ್ವಶುದ್ಧಯ್ಯ;
ಸನ್ಮತಿ, ಸದಾಚಾರ, ಉತ್ತುಂಗ ಸುವಿಚಾರ,
ಆದರ್ಶ ಮನುಜತೆಯ ಮೌಲ್ಯಗಳ ಸಾಕಾರ-
ವೆನಿಸಿ ಮೆರೆದಿಹಿರಿ ನೀವ್ ಪುರಾಣಿಕ ಸಿದ್ಧಯ್ಯ.

ಬಹುಮುಖದ ಪ್ರತಿಭೆಯಲಿ, ಬಹುವಿಧದ
ಅನುಭವದಿ,
ಶರಣರನುಭಾವದಾಧ್ಯಾತ್ಮ ದರ್ಶನದಲ್ಲಿ,
ಮಾನವೀಯ ಉದಾತ್ತ ಮೌಲ್ಯಚಿಂತನೆಯಲ್ಲಿ,
ಭಾವನೆಯ ಔನ್ನತ್ಯ, ಪರಿಣತಿಯ ಪಾಂಡಿತ್ಯ,
ತುಂಬಿ ಹೊಮ್ಮಿದೆ ನಿಮ್ಮ ಉದ್ದಾಮ ಸಾಹಿತ್ಯ.
"ಏನಾದರಾಗು ನೀ ಮೊದಲು ಮಾನವನಾಗು"
ಎಂದು ಉದ್ಘೋಷಿಸುವ ಮಹಾಮಾನವವಾದಿ ;
ಬಹುಭಾಷೆ ಸಾಹಿತ್ಯಗಳ ಬಲ್ಲ ಬಹುವೇದಿ ;
ಕಮನೀಯವಾದ "ಕಾವ್ಯಾನಂದ" ನಾಮದಲಿ
ಕಾವ್ಯರಸದಿಂ ವಿಶ್ವಸಮರಸದ ಸಂವಾದಿ.

ನಿಮ್ಮ ಸಾಹಿತ್ಯ ಪ್ರತಿಭೆಗೆ ಕಳಸವಿಟ್ಟಂತೆ
ನಿಮ್ಮ ಸಾಹಿತ್ಯಕೃಷಿ ಶ್ರೇಷ್ಠಫಲ ಕೊಟ್ಟಂತೆ
ಮೂಡಿದ ಮಹಾಕೃತಿಯೆ ನಿಮ್ಮ "ವಚನೋದ್ಯಾನ"
ಚಿಂತನದ ಚೇತನವು ವಿಹರಿಸುವ ಮೈದಾನ,
ಜನಜೀವನಕೆ ಮಿಡಿವ ನಿಮ್ಮ ಹೃದಯದ ಗಾನ,
ಅದರೊಳಡಗಿದೆ ಸಕಲ ಸುಜ್ಞಾನ ವಿಜ್ಞಾನ,
ಮಾನವನ ಜೀವನದ ಸುವಿವೇಕ ಸುಯಿದಾನ ;
ಅಖಿಲ ಭಾರತ ಸಂಸ್ಥೆ ನೀಡಿರುವ ಬಹುಮಾನ
ಸಾಹಿತ್ಯಕೃತಿಯ ಶ್ರೇಷ್ಠತೆಯ ಅಳತೆಯ ಮಾನ
ಕನ್ನಡದ ಕಾವ್ಯದೇವಿಗೆ ಶ್ರೇಷ್ಠ ಸನ್ಮಾನ.

ಕೀರ್ತಿಪ್ರಶಸ್ತಿಗಳು, ಗೌರವ ಪ್ರಶಂಸೆಗಳು
ತಾವಾಗಿಯೇ ನಿಮ್ಮನೊಲಿದೊಲಿದು ಬರುತಿಹವು.
ಜೀವನದಿ ಪಡೆಯಬೇಕಾದುದೆಲ್ಲವ ಪಡೆದು
ಅತುಲ ಸಾರ್ಥಕವಾಯ್ತು ನಿಮ್ಮ ಜೀವನಗೆಯ್ಮೆ.
ಎತ್ತರಕೆ ಚಿಮ್ಮಲೈ ನಿಮ್ಮ ಚೇತನಚಿಲುಮೆ,
ಬಿತ್ತರಕೆ ಹಬ್ಬಲೈ ನಿಮ್ಮ ಕೀರ್ತಿಯ ಬಲುಮೆ.
ಪುಣ್ಯಪುರುಷರು ನೀವು ಸಿದ್ಧಯ್ಯ ಪುರಾಣಿಕ,
ಕನ್ನಡಮ್ಮನ ಕೊರಳ ಬೆಲೆಯುಳ್ಳ ಮಾಣಿಕ.

● ನ. ಮ. ಕೊ. ಸೋಗಿ

## ನಿನಗಿದೋ ನಮನ

ಸಿದ್ಧಹಸ್ತನಿವನಯ್ಯ ಸಾಹಿತ್ಯಸೃಷ್ಟಿಯಲಿ
ಬುದ್ಧನಿವನಯ್ಯ ಪುರಾಣಾದಿ ಧರ್ಮಶಾಸ್ತ್ರ
ವಚನಂಗಳಲಿ

ಬದ್ಧವಾಗಿಹುದಯ್ಯ ಇವನ ಜೀವನ
ಬಹುಭಾಷಾ ಸಾಹಿತ್ಯಸೇವೆಯಲಿ
ಶುದ್ಧನಿವನಯ್ಯ ತ್ರಿಕರಣಂಗಳಲಿ
ಮುಗ್ಧಗೊಳಿಸುವನಯ್ಯ ಸರಳ ಸೌಜನ್ಯತಮ
ನಡೆ-ನುಡಿಯಲಿ

ಸಿದ್ಧರೊಡೆಯ ಶಿವನು ಇವಗೆ
ದೀರ್ಘಾಯುರಾರೋಗ್ಯವನು ಕರುಣಿಸಲಿ
ಸಿದ್ಧಲಿಂಗನ ಭಕ್ತ ಕನ್ನಡಾಂಬೆಯ ಪುತ್ರರತ್ನ
ಸಿದ್ಧಯ್ಯ ಪುರಾಣಿಕ ನಿನಗಿದೊ ನಮನ.

● 'ಸತ್ಯಶೀಲ'
(ಸಿ. ಎಸ್. ನಾರಾಯಣ)

ಆಯುಷ್ಯವೆಲ್ಲ ಅನಾರೋಗ್ಯವನ್ನು ಸಹಿಸಿದೆ,
ಬೆಂಕಿಯಲ್ಲದ ಬೆಂಕಿಯಲ್ಲಿ ದಹಿಸಿದೆ,
ಅನಾರೋಗ್ಯವೂ ನಿನ್ನ ದಾನವೆಂದು ಗ್ರಹಿಸಿದೆ,
ನೀನಿತ್ತ ಕಾಯಕವನ್ನು ಕೈಲಾದನಿತು ನಿರ್ವಹಿಸಿದೆ !
ಇನ್ನೇನ ಮಾಡಲಾಪೆನಯ್ಯ ನಾನು ?
ಓದುವ ಹುಚ್ಚನ್ನಿತ್ತು ಬಿಡುವಿಲ್ಲದಂತೆ ಮಾಡಿದೆ;
ಬರೆವ ಹುಚ್ಚನ್ನಿತ್ತು ಹೊತ್ತು ಸಿಕ್ಕದಂತೆ ಮಾಡಿದೆ ;
ಸೇವೆಯ ಹುಚ್ಚನ್ನಿತ್ತು ಸ್ವಾಸ್ಥ್ಯವಿಲ್ಲದಂತೆ ಮಾಡಿದೆ !
ನಿನಗೇ ಇಷ್ಟವಿಲ್ಲದಿರೆ ನನಗಾವ ನಷ್ಟ ?
ಸಾಧನೆಗೆ ಸಾಧ್ಯತೆ ಇಲ್ಲವಾದುದೇ ಕರಕಷ್ಟ !
ಒಂದು ಮಾತ್ರ ಸ್ಪಷ್ಟ
ನೀನಿತ್ತುದರಲ್ಲಿಯೇ ನಾನು ತುಷ್ಟ
ಸ್ವತಂತ್ರಧೀರ ಸಿದ್ಧೇಶ್ವರಾ

ವಚನೋದ್ಯಾನ-508

# ಕಾವ್ಯಾನಂದರ ಕೃತಿ ಪರಿಚಯ

# ಮಾನಸ ಸರೋವರ :

## ಒಂದು ವಿಶ್ಲೇಷಣೆ

● ಮೊರಬದ ಮಲ್ಲಿಕಾರ್ಜುನ

'ಮಾನಸ ಸರೋವರ' ಕಾವ್ಯಾನಂದರ ಒಂದು ಕವನದ ಹಾಗೂ ಕವನಸಂಕಲನದ ಹೆಸರು. ಒಂದು ಕವನದ ಮಿತಿ ಹಾಗೂ ಕವನಸಂಕಲನದ ವ್ಯಾಪ್ತಿ ಈ ಹೆಸರಿಗಿದೆ. ಮಿತವಾದ ಅರ್ಥದಲ್ಲಿ 'ಮಾನಸ ಸರೋವರ' ಒಂದು ಮನಸ್ಸಿನ ಸೃಜನಕ್ರಿಯೆಯನ್ನು ಕುರಿತದ್ದಾದರೆ, ವ್ಯಾಪಕಾರ್ಥದಲ್ಲಿ ಇಡೀ ಮನುಷ್ಯಕೋಟಿಯನ್ನು ಕುರಿತ ಅಭಿವ್ಯಕ್ತಿಯಾಗುತ್ತದೆ. ಇಲ್ಲಿ 'ಮಿತಿ' ಮತ್ತು 'ವ್ಯಾಪ್ತಿ' ಎಂಬ ಪದಗಳನ್ನು ಬಳಸಿದ್ದು ಕವಿಯ ಅಭಿವ್ಯಕ್ತಿಯಲ್ಲಿರುವ ಇತಿ-ಮಿತಿಗಳನ್ನು ಸೂಚಿಸುವದಕ್ಕಾಗಿ ಅಲ್ಲ ; ಕವಿ ಅಭಿವ್ಯಕ್ತಿಯ ಹಂತದಲ್ಲಿ ತನ್ನ ವ್ಯಕ್ತಿತ್ವದ ಕೇಂದ್ರ ಬಿಂದುವಿನಿಂದ ಮೊದಲುಗೊಂಡು ಮನುಷ್ಯ ಬದುಕಿನ ಅನಂತತೆಯನ್ನು ವ್ಯಾಪಿಸುವ ಕ್ರಿಯಾಪ್ರಸರಣವನ್ನು ಗಮನಿಸುವುದಾಗಿದೆ.

ಇಂತಹ ಅವಲೋಕನ ಬಹಳಷ್ಟುಸಲ ಶ್ಲೇಷೆಗೀಡಾಗುವ ಸಾಧ್ಯತೆಯಿದೆ. ಇದು ನಮ್ಮ ನವೋದಯ ಕಾವ್ಯ ಹಾಗೂ ವಿಮರ್ಶೆಯ ದೌರ್ಬಲ್ಯ ಕೂಡ. ಆದರೆ ಇಷ್ಟು ಮಾತ್ರ ಹೇಳಿ ಸುಮ್ಮನಾದರೆ ಸಾಲದು. ನಾವು ಇಂದು ಯಾವ ಅಂಶಗಳನ್ನು ನವೋದಯ ಕಾವ್ಯದ ದೌರ್ಬಲ್ಯಗಳೆಂದು ಗ್ರಹಿಸಿರುವೆವೋ ಅವೇ ಅಂದಿನ ಕವಿಸಮೂಹ ಎದುರಿಸಿದ ಸವಾಲುಗಳು ಹಾಗೂ ವೈಶಿಷ್ಟ್ಯಗಳಾಗಿವೆ. ಈ ದೃಷ್ಟಿಯಿಂದ ನಾವಿಂದು ನವೋದಯ ಕಾವ್ಯವನ್ನು ತೀರಾ ಎಚ್ಚರಿಕೆಯಿಂದ ಗಮನಿಸಬೇಕಾಗಿದೆ. ಹಾಗೆ ನೋಡಿದರೆ ಬಹಳಷ್ಟು 'ನವೋದಯ ಕವಿ'ಗಳಿಗೆ ಸರಿಯಾದ 'ವಿಮರ್ಶಾನ್ಯಾಯ' ದೊರೆತೇ ಇಲ್ಲ. ಇದಕ್ಕೆ ಕಾರಣ ; ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ ಇತ್ಯಾದಿ ಸಾಹಿತ್ಯಿಕ ಚಳುವಳಿಗಳು. ಈ ಚಳುವಳಿಗಳು ನಮ್ಮ ವಿಮರ್ಶಾ ದೃಷ್ಟಿಕೋನಕ್ಕೆ ಕಾಲದ ಮಿತಿಯನ್ನು ಒದಗಿಸುತ್ತಾ ಬಂದವು. ಹೀಗಾಗಿ ಒಂದು ಕಾಲಮಿತಿಯ ಆಚೆ-ಈಚೆ ಬಂದ ಕೃತಿಗಳು 'ಅಪ್ರಸ್ತುತ' ಎಂಬ ಭ್ರಮೆಗೆ ಒಳಗಾಗಿ ವಿಮರ್ಶೆಯ ಗಂಭೀರ ಪರಿಗಣನೆಗೆ ಒಳಗಾಗದೆ ಹೋದವು.

ಕಾವ್ಯಾನಂದರ 'ಮಾನಸ ಸರೋವರ' ೧೯೫೯ರಲ್ಲಿ ಪ್ರಕಟವಾದ ಕೃತಿ. ಇದಕ್ಕಿಂತ ಮೊದಲು 'ಜಲಪಾತ' (೧೯೫೩) ಹಾಗೂ 'ಕರುಣಾ ಶ್ರಾವಣ' (೧೯೫೫) ಕವನ ಸಂಕಲನಗಳ ಮೂಲಕ ಸಾಕಷ್ಟು ಒಳ್ಳೆಯ ಕವನಗಳನ್ನು ನೀಡಿ ಕಾವ್ಯಪ್ರೇಮಿಗಳ ಗಮನ ಸೆಳೆದಿದ್ದಾರೆ. ನಾನು ಮತ್ತು ನನ್ನ ಸರೀಕರಂತೂ ಕಾವ್ಯಾನಂದ ಎಂಬ ಹೆಸರು ಗೊತ್ತಿಲ್ಲದೆಯೇ 'ಅಜ್ಜನ ಕೋಲಿದು ನನ್ನಯ ಕುದುರೆ' ಎಂದು ಹೇಳಿಕೊಂಡು ಕುಣಿದವರು. ಹೆಸರು ಗೊತ್ತಾದ ಮೇಲೆಯೂ ಅದನ್ನು ಅಷ್ಟಾಗಿ ಗಮನಿಸದೆ, 'ಕಾಲಭೈರವ' 'ಕಾಡಿನ ಹಾಡುಗಾರರು' 'ಪೂರ್ವಾಂಗನೆ ಪಶ್ಚಿಮಾಂಗನೆಗೆ' ಇತ್ಯಾದಿ ಪದ್ಯಗಳನ್ನು ಗುಣಗುಣಿಸಿಕೊಂಡು ಬೆಳೆದವರು. ಕೃಷ್ಣವರ್ಣದ ಹುಡುಗ-ಹುಡುಗಿಯರಿಗಂತೂ ಕಾವ್ಯಾನಂದರು ಮಾಡಿದ ಉಪಕಾರ ಅಷ್ಟಿಷ್ಟಲ್ಲ. ಶ್ವೇತ ವರ್ಣದವರೆದುರು ತಲೆತಗ್ಗಿಸದ ಹಾಗೆ ಅವರಿಗೆ ಅಗಾಧವಾದ 'ಧ್ವನಿ'ಯನ್ನು ನೀಡಿದ್ದಾರೆ. ಅಲ್ಪಸ್ವಲ್ಪ ಪಾಠಾಂತರಗಳೊಂದಿಗೆ ಬಹಳಷ್ಟು ಹುಡುಗ-ಹುಡುಗಿಯರು ಏರುದನಿಯಲ್ಲಿ ಹೇಳುವ ಹಾಡು : 'ನಾ ಕರಿಯಳೆ(ನೆಂ)ದು ನೀ ಜರೆಯಬೇಡ ಬಿಳಿಗೆಳತಿ(ಳೆಯ) ಗರ್ವದಿಂದ.'

'ಮಾನಸ ಸರೋವರ' ಕಾವ್ಯಾನಂದರ ಆ ಮೊದಲಿನ ಹಾಗೂ ನಂತರದ ಕವನಸಂಕಲನಗಳಿಗಿಂತ ವಿಶಿಷ್ಟ

ವಾದುದು. ಕವಿ ಈ ಸಂಕಲನದ ಮೂಲಕ ಧೋರಣಾತ್ಮಕವಾಗಿ ಹೊಸ ತಿರುವನ್ನು ಪಡೆದಿದ್ದಾರೆ. ಪ್ರಕೃತಿ ಸಹಜವಾಗಿ ನಮ್ಮ ನವೋದಯ ಕವಿಗಳನ್ನು ಆಕರ್ಷಿಸಿದ ಸಮ್ಮೋಹಕ ಶಕ್ತಿ. ಕಾವ್ಯಾನಂದರೂ ಸಹ ಆ ಆಕರ್ಷಣೆಗೆ ಒಳಗಾಗಿಯೇ ಕಾವ್ಯರಚನೆಗೆ ತೊಡಗಿದವರು. ಆದರೆ ಪ್ರಕೃತಿಯ ರಮ್ಯಮನೋಹರತೆಯಲ್ಲಿ ಮಾತ್ರ ರಮಿಸಿ ತೃಪ್ತರಾಗದೆ, ಅಲ್ಲಿಂದ ಮನುಷ್ಯ ಪ್ರಕೃತಿಯ ಸೂಕ್ಷ್ಮಾವಲೋಕನಕ್ಕೆ ತೊಡಗಿದ್ದು ಈ ಸಂಕಲನದ ವೈಶಿಷ್ಟ್ಯವಾಗಿದೆ. ಮನುಷ್ಯ ಪ್ರಕೃತಿಯ ಸೂಕ್ಷ್ಮಾತಿಸೂಕ್ಷ್ಮಗಳನ್ನು ಗಮನಿಸಿದ ಕವಿಗೆ ನಿಸರ್ಗದ ಕ್ರಿಯೆಯೂ ಕೂಡ ಮನುಷ್ಯನ ಭಾವಸಾಮ್ರಾಜ್ಯದ ಕ್ರಿಯೆಯಾಗಿಯೇ ಗೋಚರಿಸುತ್ತದೆ. ನಿಸರ್ಗದ ಸಹಜಕ್ರಿಯೆಗಳು ಕವಿಯ ಭಾವದೀಪ್ತಿಯ ಮೂಲಕ ಆಧ್ಯಾತ್ಮಿಕ ದೀಕ್ಷೆಯನ್ನು ಪಡೆದುಕೊಳ್ಳುತ್ತವೆ. 'ವಿಂಧ್ಯಾದ್ರಿಯಲ್ಲಿ ಚಂದ್ರೋದಯ' ಕವನದಲ್ಲಿ ಇದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಕವಿ ಇಲ್ಲಿ 'ಭೌತಿಕ'ದ ಮೂಲಕವೇ 'ಭೌತಾತೀತ'ಕ್ಕೆ ಹೆಜ್ಜೆ ಇಡುತ್ತಿದ್ದಾನೆ. ಇದೊಂದು ರೀತಿಯಲ್ಲಿ ತರ್ಕಬದ್ಧ ಬೆಳವಣಿಗೆ ಕೂಡ. ಆದರೆ ತರ್ಕದಿಂದ ಕಾವ್ಯ ಸಾಧಿತವಾಗಿಲ್ಲ. ಕಾವ್ಯದ ಹಿಂದೆ ತರ್ಕದ ಸೂಕ್ಷ್ಮ ಎಳೆಗಳಿವೆ ಎಂಬುದು ತೀರಾ ಮುಖ್ಯ.

'ಭೌತ' ಮತ್ತು 'ಭೌತಾತೀತ'ಗಳ ಮಧ್ಯೆ ನಮ್ಮ ಇಡೀ ಬದುಕು ಹರಡಿಕೊಂಡಿದೆ. ಕವಿಚೇತನ ಈ ಬದುಕಿನ ಎಲ್ಲ ಸ್ತರಗಳನ್ನು ಶೋಧಿಸುತ್ತಾ ಹೋಗುತ್ತದೆ. ಬದುಕಿನ ಅಳು-ನಗು, ತಳಮಳ-ತಾಕಲಾಟಗಳು, ಒಲವು-ಗೆಲವುಗಳು ಎಲ್ಲವಕ್ಕೂ ಕವಿಯ ಅಭಿವ್ಯಕ್ತಿಯಲ್ಲಿ ಸ್ಥಾನವುಂಟು. ಅಂತೆಯೇ ಕಾವ್ಯಾನಂದರ ಕವನಗಳಲ್ಲಿ ನಲ್ಲೆ ನಕ್ಕದ್ದು, ಅತ್ತದ್ದು ಎರಡೂ ಒಂದೊಂದು ಕವನಗಳಾಗಿವೆ. ಚಿಕ್ಕಂದಿನೊಳಾಡಿದ 'ಕಣ್ಣು-ಮುಚ್ಚಾಲೆ' ಕೂಡ ಕವನದ ಅಭಿವ್ಯಕ್ತಿ ಪಡೆದಿದೆ. ಆದರೆ ಈ ಯಾವ ಕವನಗಳೂ ಕೇವಲ ಸಾಮಾನ್ಯ ಅರ್ಥದಲ್ಲಿ ಪರ್ಯವಸಾನವಾಗಿಲ್ಲ, ಯಾವುದೋ ಅಮೂರ್ತ ತುಡಿತ ಅವುಗಳಲ್ಲಿದೆ.

ಈ ಸಂಕಲನದಲ್ಲಿಯ 'ನಾನಾರು ?'* ಎಂಬುದು ಮೇಲ್ನೋಟಕ್ಕೆ ತೀರ ಸಾಮಾನ್ಯವಾದ ಕವನ. ಹೆಣ್ಣೊಬ್ಬಳಿಗೆ ಮುಂಜಾನೆ ಆಕೆಯ ಕಂದ, ಮಧ್ಯಾಹ್ನ ಆಕೆಯ ಗೆಳತಿ, ಸಂಜೆ ಆಕೆಯ ಗಂಡ ಬಂದು ಕಣ್ಮುಚ್ಚಿ 'ನಾನಾರು, ನಾನಾರು, ನಾನಾರು ?' ಎಂದು ಕೇಳುತ್ತಾರೆ. ಒಂದು ಸಾಮಾನ್ಯ ಕುಟುಂಬದಲ್ಲಿ ಪ್ರತಿದಿನ ಘಟಿಸಬಹುದಾದ ತೀರ ಸಾಮಾನ್ಯ ಘಟನೆ. ನಾಲ್ಕು ಪದ್ಯಗಳ ಕವನದಲ್ಲಿ ಮೊದಲಿನ ಮೂರು ಪದ್ಯಗಳು ಮೇಲಿನ ವಿವರವನ್ನು ಒಳಗೊಂಡಿವೆ. ಇದ್ದಕಿದ್ದಂತೆ ನಾಲ್ಕನೆಯ ಪದ್ಯ, ಕವನಕ್ಕೆ ಹೊಸ ತಿರುವನ್ನು ತಂದು ಕೊಡುತ್ತದೆ.

> "ಯಾರಾರಿಗುತ್ತರವ ಹೇಳಲೌ, 'ನಾನಾರು ?'
> ಎಂಬ ಪ್ರಶ್ನೆಗೆ ತಾಯಿ, ಸಾಕಾಯಿತು !
> 'ನಾನಾರು ?' ಎನ್ನುವರು 'ನೀನಾರು ?' ಎಂದಿಲ್ಲ
> ಈ ಹಿಗ್ಗು ಕಡೆತನಕ ಬೇಕಾಯಿತು !"

ಇಲ್ಲಿ 'ಹೆಣ್ತನ'ವೆಂಬುದು ಕಂದನ ಮುಗ್ಧಭಾವ, ಗೆಳತಿಯ ಸ್ತ್ರೀಭಾವ ಹಾಗೂ ಗಂಡನ ಪುರುಷಭಾವಗಳಿಗೆ ಸಾಕ್ಷೀಪ್ರಜ್ಞೆಯಾಗಿ ನಿಲ್ಲುತ್ತದೆ. ಮಾತೃಸ್ವರೂಪಿಯಾದ ಹೆಣ್ಣು ಉಳಿದೆಲ್ಲ ಭಾವಗಳಿಗೆ 'ನಾನಾರು ?' ಎಂಬುದನ್ನು ಕಂಡುಕೊಳ್ಳುವ ಕನ್ನಡಿಯಾಗುತ್ತಾಳೆ. ತನ್ನೆಲ್ಲ ಅರಿವನ್ನು ಧಾರೆಯೆರೆದು ಪೋಷಿಸುವ ಆಕೆಗೆ 'ನೀನಾರು ?' ಎಂದು ಪ್ರಶ್ನಿಸಿಲ್ಲವಲ್ಲ ಎಂಬ ಹಿಗ್ಗೇ ದೊಡ್ಡದಾಗಿದೆ. ಈ ಕ್ಷೇಮ ಭಾವ ಹೆಣ್ತನದ್ದು ಮಾತ್ರವಲ್ಲ, ಕವಿಯದು ಕೂಡ.

ಕಾವ್ಯಾನಂದರು 'ಕವನ ಜನನ' ಎಂಬ ಕವನದಲ್ಲಿ ತಮ್ಮ ಕಾವ್ಯಾಭಿವ್ಯಕ್ತಿಯ ಬಗೆಯನ್ನು ಕುರಿತು ಹೇಳಿದ್ದಾರೆ :

> "ಬಗೆಯ ಬಾನಲಿ ಬಣ್ಣವೇಳರ
> ಬಿಲ್ಲ ದಿಬ್ಬಣ ಸಾಗಿದೆ
> ಎಲ್ಲೊ ಒಂದೆಡೆ ಭಾವ ಬುದ್ಧಿಯು
> ಹಸೆಗೆ ನಿಲ್ಲುವ ಹಾಗಿದೆ"

ಭಾವ ಮತ್ತು ಬುದ್ಧಿಯ ಸಂಗದಿಂದ ಕವನ ಜನ್ಮತಾಳುತ್ತದೆ. ಕವಿ ಅದರ ಮಂಗಳ ಕಾರ್ಯವನ್ನು ಸಂಭ್ರಮಿಸುತ್ತಿದ್ದಾನೆ. ಇಡೀ ನಿಸರ್ಗವೇ ಅದರಲ್ಲಿ ಪಾಲ್ಗೊಳ್ಳುತ್ತಿದೆ. ಆಶ್ಚರ್ಯವೆಂದರೆ ವಧು ಮತ್ತು ವರ ಇಬ್ಬರೂ ಕವಿಯೇ

* ಈ ಕವನವನ್ನು ಕುರಿತು ಭಾರತೀಯ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಶ್ರೀ ಉಮಾಶಂಕರ ಜೋಶಿಯವರು ರಸಗ್ರಹಣ ರೂಪದ ವಿಮರ್ಶೆ ಬರೆದಿದ್ದಾರೆ. ನೋಡಿ : 'ನಾನಾರು ?' ಕವಿತೆಯ ರಸಗ್ರಹಣ, ಕಾವ್ಯಾನಂದ, ಸಂ. ಮಿರ್ಜಿ ಅಣ್ಣಾರಾಯ ಕೃಷ್ಣ ಕೊಲ್ಹಾರಕುಲಕರ್ಣಿ, ಶ್ರೀ ಚಂದ್ರಗಂಗಾಜ್ಞಾನಪೀಠ, ಶೇಡಬಾಳ (೧೯೭೩).

ಆಗಿದ್ದಾರೆ. ಕವಿಯ 'ಪ್ರಕೃತಿ ಭಾವ' ವಧುವಾದರೆ, 'ಮನುಷ್ಯಬುದ್ಧಿ' ವರ. ಅವೆರಡರ ಸಂಗದಿಂದ ಕವಿ 'ಮಾನಸ ಮಗು'ವನ್ನು ಪಡೆಯುತ್ತಾರೆ. 'ಮಾನಸ ಸರೋವರ' ಎಂಬ ಹೆಸರು ಹಾಗೂ ಈ ಸಂಕಲನದ ಬಹಳಷ್ಟು ಕವನಗಳು ಈ ತೆರನಾದ ಸಂಯೋಗವನ್ನು ಸೂಕ್ಷ್ಮವಾಗಿ ಧ್ವನಿಸುತ್ತವೆ.

ಹೀಗೆಂದ ಮಾತ್ರಕ್ಕೆ ಕವಿ ನಮ್ಮ ಸಮಾಜದ ಸುತ್ತಣ ಆಗು-ಹೋಗುಗಳಿಗೆ ಕಣ್ಮುಚ್ಚಿ ಕೇವಲ 'ಆತ್ಮರತಿ'ಯಲ್ಲಿ ತೊಡಗಿದ್ದಾರೆ ಎನ್ನಲಾಗದು. ಪ್ರಕೃತಿಯ 'ಬಯಲಾಟ' ವನ್ನು ಬಣ್ಣಿಸಿದ ಕವಿ ನಮ್ಮ ನಾಡಿನ 'ಜಮಾ-ಖರ್ಚ'ಗೂ ಕೂಡ ತೊಡಗಿದ್ದಾರೆ. ಸ್ವತಂತ್ರ ಭಾರತದ ಪ್ರಜೆಗಳಾದ ನಾವು ಗಳಿಸಿದ್ದೆಷ್ಟು? ಕಳೆದುದೆಷ್ಟು? – ಎರಡರ ಚಿತ್ರವನ್ನೂ ಕಣ್ಮುಂದೆ ತಂದುಕೊಟ್ಟ ಕವಿ:

"ಬಂದದ್ದು ಹೋದುದೆಷ್ಟು
ಯಾವುದಕೆ ಬೆಲೆಯು ಹೆಚ್ಚು
ನೀನೊಮ್ಮೆ ಮಾಡಿ ನೋಡೋ
ಈ ನಾಡ ಜಮಾ-ಖರ್ಚು!"

ಎನ್ನುತ್ತಾರೆ. 'ಸ್ವಾತಂತ್ರ್ಯದ ಸಪ್ತ ವರ್ಷಗಳು' ಕವನದಲ್ಲಿ ಸ್ವಾತಂತ್ರ್ಯಾನಂತರ ಭಾರತದಲ್ಲಿ ಉಂಟಾದ ಹಿಗ್ಗು, ಹುಮ್ಮಸ್ಸು, ಉತ್ಸಾಹ; ಅವುಗಳ ಹಿಂದೆಯೇ ಒತ್ತರಿಸಿ ಬಂದ ದೇಶದ ವಿಭಜನೆ, ದ್ವೇಷದ ಧಗೆ, ಸಾವು, ನೋವು; ಇವುಗಳ ಮಧ್ಯೆಯೇ ದೇಶವನ್ನು ಕಟ್ಟುವ, ಅಭಿವೃದ್ಧಿಪಥದತ್ತ ಮುನ್ನಡೆಯಿಸುವ – ಇತ್ಯಾದಿ ಸಂಭ್ರಮ-ಸಂಕಷ್ಟಗಳ ಸಂಕ್ರಮಣದ ಚಿತ್ರವಿದೆ.

'ಸರದಾರಗೆ ಶ್ರದ್ಧಾಂಜಲಿ' ಹಾಗೂ 'ನಮನ' ಕವನಗಳಲ್ಲಿ ಸರದಾರ್ ವಲ್ಲಭಭಾಯಿ ಪಟೇಲ ಹಾಗೂ ಪ್ರೊ. ಶಿ. ಶಿ. ಬಸವನಾಳ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವದರ ಮೂಲಕ ಅವರ ಬದುಕಿನ ಭವ್ಯಚಿತ್ರವನ್ನು ಒಡಮೂಡಿಸಿದ್ದಾರೆ. 'ಕೋವಿಯ ಕೋರಿಕೆ' ಕವನದಲ್ಲಿ ಗಾಂಧೀಜಿಯನ್ನು ಆಹುತಿಗೊಂಡ ಕೋವಿಯ ಆತ್ಮವ್ಯಥೆ ಇದೆ. ಇದು ಅದಕ್ಕಿಂತ ಹೆಚ್ಚಾಗಿ, ಕವಿಯ ಆತ್ಮವ್ಯಥೆಯೇ ಆಗಿದೆ. 'ಏತಕ್ಕಿಲ್ಲ?' ಎಂಬುದು ಚಾರಿತ್ರಿಕ ಪ್ರಜ್ಞೆಯಿಂದ, ಇನ್ನೂ ಮುಖ್ಯವಾಗಿ, ಒಬ್ಬ ವ್ಯಕ್ತಿಯ ಉನ್ನತ ಬದುಕಿನ ಸಾಕ್ಷ್ಯವನ್ನು ನಾಡ ನೆಲದಲ್ಲಿ ಕಾಣುವ ಹಂಬಲದಿಂದ ಉಂಟಾದದ್ದು. 'ಮೆರೆದ ಜಗತ್ಪತಿಯ ಸತಿ, ಜಗದ್ವಂದ್ಯೆ ವಿಮಲಮತಿ, ಅಧ್ಯಾತ್ಮದ ಅಮಲಲತೆ'ಯಾದ ಮಹಾದೇವಿಯಕ್ಕನ ಬದುಕಿನ ಕುರುಹನ್ನು ಕಾಣದ ಕವಿಚೇತನ ಈ ನಾಡಿನ ಕಣಕಣದಲ್ಲೂ 'ಏತಕ್ಕಿಲ್ಲ?' ಎಂಬ ಪ್ರಶ್ನೆ ಧ್ವನಿಸುವುದನ್ನು ಚಿತ್ರಿಸಿದ್ದಾರೆ.

'ಜಗವೆ ಕೂಡಲ ಸಂಗಮ' ಬಸವಣ್ಣನವರ ಅಂಕಿತಕ್ಕೆ ಬರೆದ ಭಾಷ್ಯದಂತಿದೆ. ಅವರ ವಚನಗಳುದ್ದಕ್ಕೂ ಹಬ್ಬಿ ಹಸರಿಸಿರುವ ಶಿವಪರವಾದ ತುಡಿತ ಈ ಕವನದಲ್ಲಿ ತುಂಬಾ ಚೆನ್ನಾಗಿ ವ್ಯಕ್ತವಾಗಿದೆ. ಈ ಕವನದಲ್ಲಿರುವ ಜಗದ ಎಲ್ಲ ಕಾರ್ಯಗಳಲ್ಲಿಯೂ ಶಿವಮಯತೆಯನ್ನು ಕಾಣುವ ದೃಷ್ಟಿಕೋನ ಏಕಕಾಲಕ್ಕೆ ಕವಿಯ ಆರೋಗ್ಯಪೂರ್ಣ ವಿಶಾಲ ಮನೋಭಾವ ಹಾಗೂ ಬಸವಣ್ಣನವರ ಅಂಕಿತದ ಅರ್ಥಪೂರ್ಣತೆಯನ್ನು ಎತ್ತಿಹಿಡಿಯುತ್ತದೆ.

'ಚಿತ್ರವೊಂದು ಚಾವಡಿ', 'ಮನದ ಮಸಣ', 'ಅಂತರಂಗದ ಅಂತರಿಕ್ಷದಿ', 'ಮಾನಸಕೆ ಮೊರೆ' ಹಾಗೂ 'ಮಾನಸ ಸರೋವರ' – ಇವು ಈ ಸಂಕಲನದ ಗಮನಾರ್ಹ ಕವನಗಳು. ಒಂದರ್ಥದಲ್ಲಿ ಈ ಸಂಕಲನದ ಒಟ್ಟು ಧೋರಣೆಯ ಸೂಕ್ಷ್ಮ ಎಳೆಗಳು ಈ ಕವನಗಳ ಮೂಲಕವೇ ಹೊರಟವುಗಳಾಗಿವೆ. ಕವಿಯ ಮನಸ್ಸು ಬದುಕಿನ ಗೊಂದಲಗಳಿಂದ ಪಾರಾಗಿ ಪ್ರಕೃತಿಯ ಹೃದಯಾರಾಮತೆಯಲ್ಲಿ ಲೀನವಾಗಲು ಬಯಸುವಂತಿದೆ. ಇಲ್ಲ, ಹಾಗಲ್ಲ! ಈ ಮನುಷ್ಯ ಪ್ರಕೃತಿಯಲ್ಲಿಯೇ ನಿಸರ್ಗದ ಎಲ್ಲ ಕಲ್ಯಾಣಗುಣಗಳನ್ನು ಅಳವಡಿಸಿಕೊಳ್ಳುವ ಹವಣಿಕೆ. ಅದಕ್ಕಾಗಿಯೇ 'ಮಾನಸಕೆ ಮೊರೆ'. ಅದರಿಂದಾಗಿಯೇ 'ಮಾನಸ ಸರೋವರ', 'ಚಿತ್ರವೊಂದು ಚಾವಡಿ' ಎಂಬ ಕವನದಲ್ಲಿ ನಮ್ಮ ಮನಸ್ಸು ಸುತ್ತಲಿನ ಬದುಕಿನಿಂದ ಎಷ್ಟೊಂದು ಕಲುಷಿತವಾಗಿದೆ ಎಂಬ ಚಿತ್ರವಿದೆ. ಬದುಕಿನ ಭ್ರಷ್ಟರೂಪಗಳೆಲ್ಲ ನಮ್ಮ-ನಮ್ಮ ಚಿತ್ತಗಳನ್ನೇ ತಮ್ಮ ಆಶ್ರಯಧಾಮಗಳನ್ನಾಗಿ ಮಾಡಿಕೊಂಡು ವ್ಯಕ್ತಿಯ ವೈಯಕ್ತಿಕ ಬೆಳವಣಿಗೆಗೆ ಅವಕಾಶವೇ ಇಲ್ಲದಂತೆ ಮಾಡಿವೆ. ಬದುಕಿನ ಭ್ರಷ್ಟಾಚಾರ ಚಿತ್ತಸ್ವಾಸ್ಥ್ಯವನ್ನೇ ಕೆಡಿಸಿದೆ. ಮನವನ್ನೇ ಮಸಣವನ್ನಾಗಿಸಿದೆ. 'ಮನದ ಮಸಣ'ದಲ್ಲಿ ಈ ಬದುಕಿನ ಬೀಭತ್ಸದ ವಿವರ ಹಸಿಹಸಿಯಾಗಿ ಹೊರಹೊಮ್ಮಿದೆ:

"ನೀಚತೆಯ ನರಿಗಳಿದೋ ಎಳೆಯುತಿವೆ ಹೆಣಗಳನು
ದೌರ್ಜನ್ಯ ಘೂಕಗಳು ಕಿರುಚುತಿಹವು!

ನಗ್ನ ಕಾಮದ ಕೊಳ್ಳಿದೆವ್ವಗಳು ಕುಣಿಯುತಿವೆ
ಸ್ವಾರ್ಥಸರ್ಪಗಳಿಕೋ ಬುಸುಗುಡುತಲಿಹವು !"

ಬದುಕಬೇಕೆಂಬ ವಾಂಛೆಯನ್ನೇ ಕಮರಿಸುವಂತಹ ಕರಾಳನೃತ್ಯ 'ಮನದ ಮಸಣ'ದಲ್ಲಿ ನಡೆದಿದೆ. ಅಲ್ಲಿ 'ನಿಂದೆಯ ನೆಗ್ಗಿಲ ಮುಳ್ಳು, ಸ್ವಪ್ರಶಂಸೆಯ ಗೋಳಗುಳಿಕೆ, ಮಚ್ಚಿನ ಮದಗುಣಿಕೆ, ವಿಷಯುದ ಕಾರಿಕಂಟಿ, ಕೇಡಿನ ಕಾಡಕವಡಿ, ಕೊಬ್ಬಿನ ಬಡಚೊಗಚಿ ನಿಂತಿವೆ ನಿಗುಚಿ'. ಒಂದೊಂದೂ ಬದುಕನ್ನು ಅಧಃಪಾತಾಳಕ್ಕೆಳೆಯುವ ಅಥ್ವಾನಗಳೇ ಆಗಿವೆ. ಎಲ್ಲವೂ ಒಟ್ಟಿಗೆ ಬೇಲಿಗಟ್ಟಿ ನಿಂತಾಗ ಇನ್ನೇನಾಗಬೇಡ ! ಆದರೆ ಕವಿ ಬದುಕಿನ ಬೀಭತ್ಸದಿಂದ ಜರ್ಜರಿತರಾಗಿ ಹೋಗುವುದಿಲ್ಲ. ಮಾನವ ಜನಾಂಗ ನಡೆದು ಬಂದ ದಾರಿಯ ಕಡೆ ಕಣ್ಣು ಹೊರಳಿಸಿ ನೋಡುತ್ತಾರೆ :

"ಇಂದಿನೀ ದುರ್ಗತಿಯ ಕಂಡು
ಹಳಹಳಿಸಬೇಡ, ತಳಮಳಿಸಬೇಡ, ಕಳವಳಿಸಬೇಡ !
ಇಂದಿನೀ ಮಸಣದಲ್ಲಿಯೇ ಹಿಂದೆ ಬೆಳೆಯುತ್ತಿತ್ತು
ಒಲವಿನ ಉಪವನ, ನಲವಿನ ನಂದನ,
ಮಾನವತೆಯ ಮಧುವನ !"

ಕವಿಯದು ಜೀವನಪರವಾದ ಧೋರಣೆ. ನಿರಾಶೆಯ ಕತ್ತಲಲ್ಲಿಯೇ ಆಶೆಯ ಜ್ಯೋತಿಯನ್ನು ಬೆಳಗಿಸುತ್ತಾರೆ. ಬದುಕಲು ಬೇಕಾದ ಧೈರ್ಯ, ಸ್ಥೈರ್ಯ, ಒತ್ಸಾಸಗಳು ಅಲ್ಲಿವೆ :

"ಬಿತ್ತು, ಬಿತ್ತು, ಬಿತ್ತು, ಬೆಳಕಿನ ಬಿತ್ತು!
ಒಕ್ಕು, ಒಕ್ಕು, ಒಕ್ಕು, ಅಮೃತದ ತುತ್ತು !"

ಈ ಕವನಗಳಿಗೆ ಪೂರಕವಾಗುವಂತೆಯೇ, ಆದರೆ ಹೊಸಮಾರ್ಗದ ಶೋಧನೆಗೆ ಕರೆದೊಯು ವ ಕವನಗಳು : 'ಅಂತರಂಗದ ಅಂತರಿಕ್ಷದಿ', 'ಮಾನಸಕೆ ಮೊರೆ' ಹಾಗೂ 'ಮಾನಸ ಸರೋವರ'. ಮನುಷ್ಯನ ಬದುಕಿಗೆ ಎರಡು ಮುಖಗಳಿವೆ. ಒಂದು ಬಹಿರಂಗ, ಮತ್ತೊಂದು ಅಂತರಂಗ. ಇದುವರೆಗಿನ ಕವನಗಳಲ್ಲಿ ವ್ಯಕ್ತವಾದದ್ದು ಬಹಿರಂಗದ ಹೋರಾಟ. ಬದುಕಿನ ಗೆಲವು ಬರೀ ಬಹಿರಂಗದ ಹೋರಾಟದಿಂದ ಸಾಧ್ಯವಿಲ್ಲ. ಅಂತರಂಗದ ಹೋರಾಟವೂ ತೀರಾ ಅವಶ್ಯ. ಆದರೆ ಅದರ ರೀತಿಯೇ ಬೇರೆ. ಮೇಲ್ನೋಟಕ್ಕೆ ವ್ಯಕ್ತಿ ಬಹಿರಂಗದಿಂದ ಅಂತರಂಗಕ್ಕೆ ಹೋಗುವುದು ಆತ ಬದುಕಿನಿಂದ ಮಾಡುವ ಪಲಾಯನ ಎನಿಸಬಹುದು. ಆದರೆ ಅದು ಪಲಾಯನವಲ್ಲ. ವ್ಯಕ್ತಿತ್ವದ ವಿಕಸನ. ನಿಜವಾದ ಮಾನವೀಯತೆಯ ಆವಿಷ್ಕಾರ ಇಲ್ಲಿಂದಲೇ ಮೊದಲುಗೊಳ್ಳುವುದು.

"ಅಂತರಂಗದ ಅಂತರಿಕ್ಷದಿ
ಅಂತವಿಲ್ಲದ ವ್ಯಾಪ್ತಿಯು
ಒಮ್ಮೆ ಕತ್ತಲೆ ಒಮ್ಮೆ ನಿಗಿ ನಿಗಿ
ಆತ್ಮಸೂರ್ಯನ ದೀಪ್ತಿಯು"

ಅಂತರಂಗದ ಅಂತರಿಕ್ಷ ಕೂಡ ಬಹಿರಂಗದ ಬದುಕಿನ ಆಶೆ, ನಿರಾಶೆ, ಗೊಂದಲಗಳಿಂದ ಕೂಡಿರುವುದೇ ಆಗಿದೆ. ಒಟ್ಟು ಬದುಕಿನ ಹೋರಾಟ ಎರಡಕ್ಕೂ ಸಮನಾದದ್ದೇ. ಅಂತ ರಂಗ–ಬಹಿರಂಗ ಎರಡರಿಂದಲೂ ಕವಿ 'ಮಾನಸಕೆ ಮೊರೆ' ಇಡುತ್ತಾನೆ. ಇಲ್ಲಿಯ ಮೊರೆ ಮನಸ್ಸಿನ ಶುದ್ಧತೆಗೆ ಮಾತ್ರ ವಲ್ಲ, ಮನುಷ್ಯತ್ವದ ಅಖಂಡತೆಗೆ ಎನ್ನುವುದು ಮುಖ್ಯ.

"ಗೋಗರೆವೆ ಕರೆವೆ
ಮಾನಸವೆ ಬಾರ
ತಾಮಸವ ಕಳೆಯೆ ಬಾರ
ಕಿಲ್ಮಿಷವ ಕಳೆದು
ರಾಜಸವ ತೊಳೆದು
ಸಂತಸದ ಸೆಲೆಯ ತಾರ"

ಕವಿಯೇ ಕೊಟ್ಟಿರುವ ಟಿಪ್ಪಣಿಯಂತೆ ಮನುಷ್ಯತ್ವದ ಆಧಿಕ್ಯದಿಂದಾಗಿ ಬದುಕಿನಲ್ಲಿಯ ರಕ್ಕಸತನ ಸಹನೀಯ ವಾಗಬೇಕಾಗಿದೆ, ಇಲ್ಲವಾಗಬೇಕಾಗಿದೆ.

'ಮಾನಸ ಸರೋವರ' ಈ ಸಂಕಲನದ ಕೊನೆಯ ಕವನ. ಮೊದಲಿನ ಕವನಗಳಲ್ಲಿ ಕವಿ ಬದುಕಿನಲ್ಲಿ ನಡೆಸ ಬಹುದಾದ ಎಲ್ಲ ಬಗೆಯ ಹೋರಾಟಗಳಿಗೆ ಅಭಿವ್ಯಕ್ತಿ ಯನ್ನು ಕೊಟ್ಟು ಕೊನೆಗೆ ಅವ್ಯಕ್ತ ಶಕ್ತಿಯೊಂದರ ಕಾರುಣ್ಯಕ್ಕಾಗಿ ಮೊರೆ ಇಡುತ್ತಿದ್ದಾರೆ. ಆದರೆ ಈ ಮೊರೆ ಮನುಷ್ಯ ಪ್ರಯತ್ನದಲ್ಲಿ ಸೋತ ನಿರಾಸೆಯಿಂದ ಹೊರಟುದಲ್ಲ, ಇಷ್ಟೆಲ್ಲ ಹೋರಾಟದ ನಂತರವೂ ಉಳಿಯಬಹುದಾದ 'ಅಹಂ' ನಿರಾಕರಣೆಗಾಗಿ.

"ಎಲ್ಲ ತುಂಬಿಸಬಹುದು ಏನಾದರೂ ಮಾಡಿ
ಎಂತಾದರೂ ಮಾಡಿ ಕಂತುಹರನೆ !
ತೂತು ಬಿದ್ದಿಹ ಮಡಕೆ ಮನವ ತುಂಬಿಸಬಹುದೆ
ನಾನೆಂಬ ಸೋರುತಿಹ ಚಿಪ್ಪಿನಿಂ ಹರನೆ ?"

ಈ ಮೊದಲೇ ಗಮನಿಸಿರುವಂತೆ ಭೌತ (ಪ್ರಕೃತಿ) ದಿಂದ ಹೊರಟ ಕವಿ ಮನುಷ್ಯ ಬದುಕನ್ನು ಹಾಯ್ದು ಭೌತಾತೀ

ತಕ್ಕೆ ತುಡಿಯುವ ಧ್ವನಿ ಇಲ್ಲಿದೆ. ಇದೊಂದು ರೀತಿಯ ಚಕ್ರೀಯ ಪ್ರಕ್ರಿಯೆ. ಯಾವುದು ಮುಖ್ಯ? ಯಾವುದು ಅಮುಖ್ಯ ? — ಎಂಬ ಪ್ರಶ್ನೆಗೆ ಅವಕಾಶವೇ ಇಲ್ಲ. ಪರಿಪೂರ್ಣ ಬದುಕಿನ ಆದರ್ಶ ಕವಿಯನ್ನು ಇಂತಹ ತುಡಿತಕ್ಕೆ ಒಳಗುಮಾಡುತ್ತದೆ. ಇಷ್ಟಾಗಿಯೂ ಕೂಡ ಕವಿ ಯಾವ ಹಂತದಲ್ಲಿಯೂ ತನ್ನ ಮತ್ತು ಓದುಗರ ಮಧ್ಯದ ಸಂಬಂಧವನ್ನು ಮರೆಯುವುದಿಲ್ಲ.

"ಈಗ ತುಂಬಿದೆಯಲ್ಲ, ಏನ ಬೆಳಸುವಿ ಹೇಳು :
ಇದರ ಸಲಿಲದಿ ತಂದೆ, ಶರಣು ಬಂದೆ !
ಓದುಗರ ಎದೆಯ ಹೊಲಕಿದರ ನೀರನು ಉಣಿಸಿ
ಬೆಳಸು ಹಿಗ್ಗಿನ ಬೆಳೆಯು, ಬೆಳಸು ತಂದೆ !"

ಮನುಷ್ಯ ಬದುಕಿನ ಒಳಿತಿಗಾಗಿ ಕವಿ ಪಟ್ಟಿರುವ ತಹ ತಹದ ಅಭಿವ್ಯಕ್ತಿಯೇ 'ಮಾನಸ ಸರೋವರ' ಸಂಕಲನದ ಮೂಲಸ್ರೋತವಾಗಿದೆ. ಇಲ್ಲಿಯ ಕವನಗಳು ಪ್ರಕೃತಿಯನ್ನು ಕುರಿತಾಗಿಯೇ ಇರಲಿ, ಬದುಕನ್ನು ಕುರಿತದ್ದೇ ಆಗಿರಲಿ, ಅವುಗಳ ಒಟ್ಟು ತುಡಿತ–ಮಾನಸದ ಪರಿಷ್ಕಾರಕ್ಕಾಗಿ, ಮನುಷ್ಯತ್ವದ ಆವಿಷ್ಕಾರಕ್ಕಾಗಿ. ಕಾವ್ಯತ್ವದ ಲವಲವಿಕೆಯ ದೃಷ್ಟಿಯಿಂದ ಈ ಸಂಕಲನದ ಕವನಗಳು 'ಕರುಣಾ ಶ್ರಾವಣ' ಸಂಕಲನದ ಕವನಗಳ ಮುಂದೆ ಕೊಂಚ ಸಪ್ಪೆ ಎನಿಸಬಹುದು. ಆದರೆ ಒಟ್ಟು ಧೋರಣೆಯ ದೃಷ್ಟಿಯಿಂದ 'ಮಾನಸ ಸರೋವರ'ಕ್ಕೆ ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಇಂತಹ ವಿಶಿಷ್ಟತೆಗೆ ಕಾರಣ ಕಾವ್ಯಾನಂದರ ಧೋರಣೆಯಲ್ಲಿಯೇ ಇದೆ. ಅವರು ಒಂದೆಡೆ ತಮ್ಮ ಸಂಕಲನಗಳನ್ನು ಕುರಿತು ಹೇಳುತ್ತಾ: 'ಒಂದೊಂದರಲ್ಲಿ ಒಂದೊಂದು ಬಗೆಯ ಆಧಿಕ್ಯ ಕವಿತೆಗಳು ಕಂಡುಬರದಿರದು. ಉದ್ದೇಶ: ಚರ್ವಿತ ಚರ್ವಣವಾಗದಿರಲೆಂಬುದು ; ಒಕ್ಕಣ್ಣತೆಗೆ ಆಸ್ಪದ ದೊರೆಯದಿರಲೆಂಬುದು; ಅಭಿವ್ಯಕ್ತಿಗೆ ಅನಿರ್ಬಂಧತೆಯಿರಲೆಂಬುದು ; ಏಕಾಗ್ರತೆ ಸಮಗ್ರತೆಗಳೆರಡಕ್ಕೂ ಸ್ಥಾನವಿರಲೆಂಬುದು..." ('ಮೊದಲು ಮಾನವನಾಗು' ಸಂಕಲನದ ಮೊದಲಮಾತು).

ತಮ್ಮ ಸಂಕಲನಗಳಿಗೆ ಮುನ್ನುಡಿಗಳನ್ನು ಬರೆಸುವಲ್ಲಿಯೂ ಕೂಡ ಕಾವ್ಯಾನಂದರು ಇಂತಹ ವಿಶಿಷ್ಟತೆಯನ್ನು ಮೆರೆದಿದ್ದಾರೆ. ಚಿಂತನಶೀಲ ಕವಿ ಪು.ತಿ.ನ. ಅವರ ಮುನ್ನುಡಿ 'ಮಾನಸ ಸರೋವರ' ಪ್ರವೇಶಕ್ಕೆ ಸೂಕ್ತ ಮಹಾದ್ವಾರವಾಗಿದೆ. ಕಾವ್ಯಾನಂದರ 'ಭವ ನಿಮಜ್ಜನ ಚಾತುರ್ಯ' ಹಾಗೂ 'ಲಘಿಮಾಕೌಶಲ'ಗಳಿಗೆ ಪು.ತಿ.ನ. ಅವರು ಶಿವ ಮತ್ತು ಸೌಂದರ್ಯದ ಮೆರಗು ನೀಡಿದ್ದಾರೆ. ಇದರಿಂದಾಗಿ 'ಮಾನಸ ಸರೋವರ'ದ ಸೆಲೆಗೆ ಮತ್ತಷ್ಟು ಆಳ ಪ್ರಾಪ್ತವಾಗಿದೆ.

□

ಮೌನದ ವೀಣೆಗೆ ಮಾತಿನ ತಂತಿಯೇಕಯ್ಯ ?
ಕೃತಿಯ ಬಿಲ್ಲಿಗೆ ಕನಸಿನ ಬಾಣವೇಕಯ್ಯ ?
ನಿಜದ ಬಳ್ಳಿಗೆ ಹುಸಿಯ ಹೂಗಳೇಕಯ್ಯಾ ?
ನಲ್ಮೆಯ ತಕ್ಕಡಿಗೆ ಆಣೆಯ ಕಾಣಿಯೇಕಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ
ಇಹದ ಬದುಕಿಗೆ
ಪರದ ನಿಕಷವೇಕಯ್ಯ ?

ವಚನೋದ್ಯಾನ, ಪು. 165

# ಶರಣಚರಿತಾಮೃತ

● ನಾ. ಮ. ಬಸವರಾಜ

"ಇಲ್ಲೊಂದು ದಾರಿಯಿದೆ, ಶರಣರ ದಾರಿ. ಇದೊಂದು ನೇರವಾದ, ನಿರ್ಭಯವಾದ, ನಿಸ್ಸಂದಿಗ್ಧವಾದ, ಅಡ್ಡಿ ಆತಂಕಗಳಿಲ್ಲದ ದಾರಿ, ಸುಲಭವಾದ, ಸುಗಮವಾದ, ಸುರಕ್ಷಿತವಾದ ದಾರಿ ; ಬೇಗ ಗುರಿ ಮುಟ್ಟಿಸುವ ಶಂಭು ಶರಣರ ನಂಬಿಗೆಯ ದಾರಿ, ಸರಿದೋರಿದರೆ ಇದನ್ನೊಮ್ಮೆ ತುಳಿದು ನೋಡಿ !" ಎಂದು ಹಿರಿಯ ಕವಿ ಶ್ರೀ ದ. ರಾ. ಬೇಂದ್ರೆಯವರು 'ಶರಣಚರಿತಾಮೃತ' ಎಂಬ ಬೃಹದ್ಗ್ರಂಥಕ್ಕೆ ಹಿಮ್ಮಾತಿನಲ್ಲಿ ತಿಳಿಸಿದ್ದಾರೆ. ಇದು ಅನುಭವ ಮಾತು. ಬೇಂದ್ರೆಯವರು ಶರಣ ಚರಿತೆಯನ್ನು ತುಲನಾತ್ಮಕ ದೃಷ್ಟಿಯಿಂದ ನೋಡಿ ಹೇಳಿದ ಮಾತಿದು. ಇದು ಶ್ರೀ ಸಿದ್ಧಯ್ಯ ಪುರಾಣಿಕರು ಶಿವಶರಣರ ಬಗ್ಗೆ ಬರೆದ ಈ ಕಾಲದ ಗದ್ಯ ಶೈಲಿಯ ಮೇರುಕೃತಿ ಎನ್ನಬಹುದು. ಈ ಗ್ರಂಥ ರಚಿಸಲು ಶ್ರೀ ಸಿದ್ಧಯ್ಯ ಪುರಾಣಿಕರು ಬಹಳ ಶ್ರಮಿಸಿದ್ದಾರೆ. ಅನೇಕ ಸ್ಥಳಗಳಿಗೆ ತಾವೇ ಖುದ್ದಾಗಿ ಹೋಗಿ, ಅಲ್ಲಲ್ಲಿ ಶರಣರ ಚರಿತೆಯ ಪ್ರತಿಗಳನ್ನೂ, ವಚನಗಳನ್ನೂ, ಶಿಲಾಶಾಸನಗಳನ್ನೂ, ಜಾನಪದ ರೂಪದಲ್ಲಿದ್ದ ಗೀತೆಗಳನ್ನು ಸಂಗ್ರಹಿಸಲು ಬಹಳ ದಿನಗಳು ಕಳೆದವೆಂದು ಅವರೇ ಹೇಳಿದ್ದಾರೆ. ಕಷ್ಟಪಟ್ಟಿದ್ದಕ್ಕೆ ಸರಿಯಾದ ಫಲ ಬಂದಿದೆಯಲ್ಲವೆ !

ಇದರಲ್ಲಿ 'ಮಹಾನುಭಾವ ಮಾದರ ಚನ್ನಯ್ಯ'ರಿಂದ ಆರಂಭವಾಗಿ 'ಜಂಗಮಜ್ಯೋತಿ ಮುರುಘೇಂದ್ರ ಮಹಾ ಶಿವಯೋಗಿಗಳು' ಎಂಬಲ್ಲಿಗೆ ಒಟ್ಟು ೬೧ ಪ್ರಕರಣಗಳಿವೆ. ಪ್ರಾಚೀನ ಹಾಗೂ ಅರ್ವಾಚೀನ ಶಿವಶರಣರ ಚರಿತೆಗಳು ಇಲ್ಲಿವೆ. ಇದು ದಂತಕಥೆಯಾಧಾರವಲ್ಲ, ಬರೀ ಪವಾಡಗಳ ಪೋಣಿಕೆಯಲ್ಲ, ಶರಣರ ವಚನಗಳ ಆಧಾರದ ಮೇಲೆ ಎಣೆಯಲ್ಪಟ್ಟ ಸುಂದರ, ಬಂಧುರ, ಮಾನವ ಮಾತ್ರದವರೆಲ್ಲರಿಗೂ ತಿಳಿಯುವ ಬಹು ಸುಲಭವಾದ ಗ್ರಂಥ. ವಚನಶಾಸ್ತ್ರದ ಆಳವಾದ ಅಭ್ಯಾಸದ ಕುರುಹೇ ಶರಣಚರಿತಾಮೃತವಾಗಿದೆ. ಇದರಲ್ಲಿ ಹೇರಳವಾಗಿ ವಚನಗಳನ್ನು ಉದಾಹರಿಸಿದ್ದಾರೆ. ಹರಿಹರ ಮುಂತಾದ ಶಿವಕವಿಗಳ ಮಾತುಗಳು ನಮಗೆ ಸಿಗುತ್ತವೆ. ಸರಿಯಾದ ಘಟ್ಟದಲ್ಲಿ ಸರಿಯಾದ ವಿಮರ್ಶೆಯನ್ನು ಕಾಣುತ್ತೇವೆ. ಕಥಾಲಹರಿ ತನ್ನಷ್ಟಕ್ಕೆ ತಾನೇ ಸಾಗಿದೆ. ಅಲ್ಲಲ್ಲಿ ನಾಟಕೀಯತೆಯ ಸಂಭಾಷಣೆಗಳನ್ನು ಕಾಣುತ್ತೇವೆ. ಉದಾ : 'ಸಸಿಯು ಸಲಹಿದ ಪ್ರಭುದೇವ'ರ ಚರಿತೆ (ಪುಟ 151–153) 'ಸಮತೆಯ ಗಾರುಡಿಗ ಸಿದ್ಧರಾಮ', 'ನೀರತಾವರೆ ಅಕ್ಕಮಹಾದೇವಿ', 'ಸುಜ್ಞಾನಿ ದೇವನಿಂದ ಸುಜ್ಞಾನೋದಯ' ಮುಂತಾದ ಚರಿತೆಗಳಲ್ಲಿ ನಾಟಕೀಯತೆಯ ಸೌಂದರ್ಯವನ್ನು ಕಾಣುತ್ತೇವೆ ಮತ್ತು ಅಲ್ಲಲ್ಲಿ ಕಾವ್ಯಶೈಲಿಯ ಸೊಬಗೂ ಎದ್ದು ಕಾಣುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಶರಣರ ವಚನಗಳಲ್ಲಿ ಅಡಕವಾದ ತತ್ತ್ವಗಳನ್ನು (ವೀರಶೈವ ಧರ್ಮಾಚರಣೆ)ಬಹು ಸರಳ, ಸುಲಭವಾಗಿ ವಿವರಿಸಿದ್ದಾರೆ. ಶರಣರ ಸಮಗ್ರ ಚರಿತ್ರೆ ಇದಲ್ಲ. ಆದರೂ ಅಲ್ಲವೆನ್ನಲಾಗುವುದಿಲ್ಲ. 'ಶರಣಚರಿತಾಮೃತ' ಎಂಬ ಹೆಸರೇ ಸೂಚಿಸಿದಂತೆ ಅಮೃತ ಬಿಂದುಗಳನ್ನು ಕೊಟ್ಟಿದ್ದಾರೆ. ಇದರ ಮೇಲೆ ಜಿಜ್ಞಾಸು

ಗಳು ಮೂಲ ಕೃತಿಗಳನ್ನು ಓದಲು ಪರಿಚಯ ಮಾಡಿ ಕೊಟ್ಟ ಆಧಾರಗ್ರಂಥವಾಗಿದೆ.

ಈ ಗ್ರಂಥದಲ್ಲಿ ಒಂದು ನಾವೀನ್ಯತೆ ತೋರುತ್ತದೆ. ವಚನಾಧಾರದಿಂದ ಅನ್ವರ್ಥಕವಾಗುವಂತೆ ತಲೆಬರಹ ಕೊಟ್ಟಿದ್ದಾರೆ. ಉದಾ :– 'ಮಹಾನುಭಾವ ಮಾದರ ಚನ್ನಯ್ಯ' 'ಮರೆಯಲಾಗದ ಮೆರೆಮಿಂಡದೇವ' 'ನೆನ ಪಾರದ ನಂಬಿಯಣ್ಣ' 'ರಾಗಯೋಗಿ ರಾಗದ ಸಂಕಣ್ಣ' 'ಬಾಗಿದ ತಲೆಯ ಮುಗಿದ ಕೈಯ ಬಸವ' 'ಸಸಿಯ ಸಲಹಿದ ಪ್ರಭುದೇವ' 'ಚಿನ್ಮಯಾನಂದ ಚನ್ನಬಸವಣ್ಣ' ಹೀಗೆ ಅನೇಕ ತಲೆಬರಹಗಳು ನೋಡಿದ ಮಾತ್ರದಿಂದಲೇ ಸಮಗ್ರ ಗ್ರಂಥ ಓದಬೇಕೆನಿಸುತ್ತದೆ.

ಪ್ರತಿಯೊಬ್ಬ ಶರಣರ ಚರಿತೆಗೆ ಸಂಬಂಧಿಸಿದ ಚಿತ್ರ ಗಳು ಇದರಲ್ಲಿ ಇವೆ. ಇವು ಓದುಗರಿಗೆ ಆಹ್ಲಾದ ವನ್ನುಂಟುಮಾಡುತ್ತವೆ. ಈ ಗ್ರಂಥಕ್ಕೆ ರಾಷ್ಟ್ರಕವಿ ಕುವೆಂಪು ಅವರ ಮುನ್ನುಡಿ, ನಿಜವಾಗಿಯೂ ಮುತ್ತಿ ನಂತೆ ನಾಲ್ಕೇ ಮಾತುಗಳಲ್ಲಿ ಮುಗಿಸಿರುತ್ತಾರೆ. ಮುನ್ನುಡಿ ಹಿನ್ನುಡಿಗಳಾಡಿದ ಕನ್ನಡ ಹಿರಿಯ ಕವಿದ್ವಯರ ಮಧ್ಯೆ ಒಳ್ನುಡಿ ಬರೆದು ಶ್ರೀ ಸಿದ್ಧಯ್ಯ ಪುರಾಣಿಕರಿಗೆ, ಕನ್ನಡಿಗರು ಚಿರಋಣಿಯಾಗಿದ್ದಾರೆ. ಪ್ರತಿಯೊಬ್ಬ ಮಾನವನು ಇದನ್ನೊಮ್ಮೆ ಓದಿ ತಣಿಯಬೇಕು. ಸಂಗ್ರಾಹ್ಯಕ್ಕೆ ಯೋಗ್ಯವಾದ ಗ್ರಂಥ. 'ಏನಾದರಾಗು ಮೊದಲು ಮಾನವನಾಗು' ಎಂಬುದು ಕಾವ್ಯಾನಂದರ ಕಾವ್ಯವಾಣಿ. ಆದರೆ, 'ಏನನೋದದೆಯೂ ಚಿಂತಿಲ್ಲ, ಮೊದಲು ಶರಣಚರಿತಾಮೃತವನೋದು' ಎಂಬುದು ಮನಗಾಣಬೇಕಾದರೆ, ಈ ಗ್ರಂಥವನ್ನು ಪ್ರತಿ ಶ್ರಾವಣ, ಕಾರ್ತೀಕ, ವೈಶಾಖಮಾಸಗಳಲ್ಲಿ, ಮಠ, ಮಂದಿರಗಳಲ್ಲಿ ಪುರಾಣಶ್ರವಣ ನಡೆಸುವಂತೆ, ಅಲ್ಲಲ್ಲಿ ಶಿವಾನುಭವ ಕಾರ್ಯಕ್ರಮಗಳಲ್ಲಿ ಮಠ, ಮಂದಿರಗಳಲ್ಲಿ ಇದರ ವಾಚನವಾಗಬೇಕು. ಸರ್ವರೂ ಸ್ವಾದ ಸವಿಯಬೇಕು. ಆಗ ಶರಣರ ಮಾತುಗಳೆಲ್ಲ ಮಾತುಗಳಲ್ಲ, ಮುತ್ತು ಗಳೆಂಬುದು ಅನುಭವದಲ್ಲಿ ಕಾಣುವುದೇ 'ಶರಣ ಚರಿತಾಮೃತದ ಘನ ಉದ್ದೇಶ.

□

ನೀ ಕೊಡಲಿಚ್ಛಿಸಿದಾಗ ತಡೆಯಬಲ್ಲವರ ಕಾಣೆ ;
ಹಾರುವವು ಅಡ್ಡಬರುವ ಅಡ್ಡಿಯ ಗುಡ್ಡಗಳು ಕಡ್ಡಿಯಂತೆ ;
ನಿನಗೆ ಕೊಡಲಿಷ್ಟವಿಲ್ಲದಾಗ ಕೊಡಬಲ್ಲವರ ಕಾಣೆ ;
ಮುಗ್ಗುರಿಸುವವು ಪ್ರಯತ್ನ-ಪುಂಗವಗಳು ತಗ್ಗು ಒಗ್ಗಾಲಿಗಳಿಲ್ಲದೆಯೆ !
ಕೊಡು, ಬಿಡು, ಕೈಬಿಡಬೇಡವಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

ವಚನೋದ್ಯಾನ, ಪು. 111

# ತುಷಾರಹಾರ

● ಬಿ. ಎಸ್. ಸ್ವಾಮಿ

'ತುಷಾರಹಾರ' ಕಾವ್ಯಾನಂದರು ಬರೆದ ೨೨ ಕಿರುಗತೆಗಳನ್ನೊಳಗೊಂಡ ಕಥಾ ಸಂಕಲನ. ಇವು ೨೪ ವರ್ಷಗಳ ಹಿಂದೆ ಬರೆದವು. ಇಲ್ಲಿನ ಕಥೆಗಳಲ್ಲಿ ನವೋದಯ ಕಾವ್ಯ, ಗದ್ಯ ಕಥನ ರೂಪದಲ್ಲಿ ಪ್ರಕಟಗೊಂಡಿದೆ. ಚಿಕ್ಕದಾದರೂ ಚೊಕ್ಕವಾದ ಈ ಕಥೆಗಳು ಮಕ್ಕಳಿಗಷ್ಟೇ ಅಲ್ಲ, ದೊಡ್ಡವರಿಗೂ ರಂಜಿಸುವುದರಲ್ಲಿ ಅನುಮಾನವಿಲ್ಲ. ಕಥೆಗಳು ಬೋಧಪ್ರದವಾದುವು, ಕುತೂಹಲ ಕೆರಳಿಸುವುವು. ಕೆಲವೆಡೆ ಹಾಸ್ಯ, ವ್ಯಂಗ್ಯ, ಮತ್ತೆ ಕೆಲವೆಡೆ ಹಿರಿಯ ಅನುಭವದ ಮಾತುಗಳ ಸಾರ ಸಂಗ್ರಹ, ಇನ್ನು ಕೆಲವು ಕಡೆ ಆಧ್ಯಾತ್ಮ ತುಂಬಿ ತುಳುಕಾಡುವುವು. ಈ ಸಂಕಲನದ ಕಥೆಗಳಲ್ಲಿ ಜೀವನದಲ್ಲಿ ಹೇಗೆ ನಡೆಯಬೇಕು ? ಹೇಗಿರಬೇಕು ? ಎಂಬುದನ್ನು ಕಥೆಗಾರರು ಸರಳವಾಗಿ, ಹೃದಯಂಗಮವಾಗಿ ಎಲ್ಲರಿಗೂ ಹಿತವಾಗುವಂತೆ ಚಿತ್ರಿಸಿದ್ದಾರೆ. ಬುದ್ಧಿಮಾತು ಹೇಳುವ ಈ ಕಥೆಗಳಲ್ಲಿ ಸಾಮ್ಯತೆ, ಸಹಜತೆ ತುಂಬಿ ಕೆಲವು ಕಾವ್ಯಮಯವಾಗಿವೆ. ಕಥೆಗಳು ಕಿರಿದಾದರೂ ಸಾಹಿತ್ಯ ದೃಷ್ಟಿಯಿಂದ ಹಿರಿದು. ಹೊತ್ತಗೆ ಕಿರಿದಾದರೂ ಭವ್ಯತೆಯಲ್ಲಿ ಹಿರಿದಾಗಿದೆ.

ಕವಿ-ಪ್ರಕೃತಿಗೆ ಎಷ್ಟೊಂದು ನಿಕಟ ಸಂಬಂಧವಿದೆ ಎಂಬುದು ಎಲ್ಲರಿಗೂ ಗೊತ್ತು. ಹಾಗೆಯೇ ಕವಿ ಕಾವ್ಯಾನಂದರು ಪ್ರಕೃತಿಯನ್ನು ಎಷ್ಟೊಂದು ಕಣ್ಣಲ್ಲಿ ಕಣ್ಣಿಟ್ಟು ನೋಡಿದ್ದಾರೆ ಎಂಬುದು ಈ ಕಥೆಗಳನ್ನೆಲ್ಲಾ ಅವಲೋಕಿಸಿದಾಗ ಯಾರಿಗಾದರೂ ವ್ಯಕ್ತವಾಗದೆ ಇರದು.

ಭಾಷಣ ಮಾಡುವಾಗ ಜನರನ್ನು ರಂಜಿಸಲು, ಬುದ್ಧಿ ಹೇಳಲು ಒಂದೊಂದು ಉಪ ಕಥೆಯನ್ನು ಹೇಳುವುದು ಸಹಜ. ಊಟಕ್ಕೆ ಉಪ್ಪಿನಕಾಯಿನಂತೆ ಇವು ಭಾಷಣದ ಉಪ್ಪಿನಕಾಯಿಗಳು. ಕವಿ ಕಾಣುವ ಗಿರಿ, ಬನ, ಸಮುದ್ರ, ಮರಗಿಡ ಬಳ್ಳಿ, ಚಂದ್ರ, ನಕ್ಷತ್ರ, ನವಿಲು, ಕೋಗಿಲೆ, ಚಿಟ್ಟೆ, ಭೃಂಗ, ಪತಂಗ ಎಲ್ಲವೂ ಪ್ರಕೃತಿಯಲ್ಲಿ ಕಾಣುವ ಸುಂದರ ಸೃಷ್ಟಿಗಳು. 'ರವಿ ಕಾಣದುದನ್ನು ಕವಿ ಕಂಡ' ಎಂಬಂತೆ ಪ್ರಕೃತಿಯ ಒಂದೊಂದು ವಸ್ತುವನ್ನೂ ಜೀವನಕ್ಕೆ ಹೋಲಿಸಿ ಅದರಲ್ಲಿ ಜಾಣ್ಮೆಯಿಂದ ಒಂದೊಂದು ಬೋಧನೆ ಇಟ್ಟಿರುವುದು, ಕಥನಶೈಲಿಗೆ ಮೆರುಗು ಕೊಟ್ಟಂತಾಗಿದೆ. ಅದಕ್ಕಾಗಿಯೇ ಅರಿಕೆಯಲ್ಲಿ ಅನ್ನದಾನಯ್ಯ ಪುರಾಣಿಕರು "ಇದೊಂದು ವಿಶಿಷ್ಟ ಪ್ರಯೋಗ, ಬಾಳು ಬೆಳೆದು ಬಂಗಾರವಾಗಲು ಒಂದೊಂದು ಕಥೆಯೂ ಒಂದೊಂದು ಅಂಶವನ್ನು ಸೂಚಿಸುತ್ತದೆ" ಎಂದಿದ್ದಾರೆ. ಕಥೆಗಳನ್ನು ಓದಿದ ಮೇಲೆ ಇದು ಸಹಜವೆನಿಸದೆ ಇರದು. ಕಾವ್ಯಾನಂದರೇ 'ನಾಲ್ಕು ನುಡಿ'ಯಲ್ಲಿ "ಈ ಕಥೆಗಳಲ್ಲಿ ಅವರಿವರ ಛಾಯೆ ಕಾಣುವುದು ಅಸಂಭವವೇನಲ್ಲ. ಆದರೆ ಈ ಮಾದರಿಯ ಕಥೆಗಳು ಕನ್ನಡದಲ್ಲಿ ಹೆಚ್ಚಿಲ್ಲವೆಂಬ ಧೈರ್ಯದಿಂದ ಪ್ರಕಟಿಸಿದ್ದೇನೆ" ಎನ್ನುವುದರಲ್ಲಿ ಸತ್ಯವಿದೆ ಎನ್ನಿಸುತ್ತದೆ.

ಈಗ ಆ ಕಥೆಗಳ ಸ್ವಾರಸ್ಯದ ಬಗ್ಗೆ ನೋಡೋಣ :

ದಿನ ನಿತ್ಯದಲ್ಲಿ ಪ್ರಕೃತಿಯಲ್ಲಿ ನಾವು ಒಂದಲ್ಲ ಒಂದು ರೀತಿಯಲ್ಲಿ ವಸ್ತುವನ್ನು ಕಾಣುತ್ತೇವೆ. ಆದರೆ ಅದೇ ಪ್ರಕೃತಿ ಕವಿ, ಕಥೆಗಾರನ ಕಣ್ಣಿಗೆ ಕಾಣಿಸುವುದು ಜೀವನಕ್ಕೆ ಸಂಬಂಧಿಸಿದ ಅನೇಕ ವಿಷಯಗಳು.

"ತುಷಾರ ಹಾರ" ಇದು ಕಥೆಯ ಹಾಗೂ ಕಥಾ ಸಂಕಲನದ ಶಿರೋನಾಮೆ. ಕವಿ ಸಾಹಿತ್ಯ ಸರಸ್ವತಿಯನ್ನು ಆರಾಧಿಸುತ್ತಾ 'ನಾನು ಕುಂದೇಂದು 'ತುಷಾರ ಹಾರ'ಗಳೆಲ್ಲಿ ತರಲಿ ? ಕಿರುನುಡಿಗಳ ಕಿರಿಬರಹಗಳ ಈ ತುಷಾರ ಹಾರವನ್ನು ನಿನ್ನ ಚರಣಕಮಲದಲ್ಲಿಟ್ಟು ನಿವೇದಿಸಿಕೊಳ್ಳುತ್ತೇನೆ' ಎಂದಿರುವಲ್ಲಿ ಸರಸ್ವತಿಗೆ ನಿವೇದನೆಯಾಗುತ್ತದೆಯೇ ಹೊರತು ಕಥೆಯಾಗಿ ಮಿನುಗುವುದಿಲ್ಲ.

ಸಹೃದಯ

ಗದುಗಿನ ಭಾರತದ ೨೧ನೇ ಸಂಧಿಯ ಸ್ಫೂರ್ತಿಯಿಂದ ಹೊರ ಹೊಮ್ಮಿದ ಕಥೆಯಲ್ಲಿ ಬ್ರಹ್ಮನಿಗೆ ಪೂಜೆಯಿಲ್ಲ ಎಂಬುದಾಗಿ ಕವಿ ಕನಸಿನಲ್ಲಿ ಬ್ರಹ್ಮನನ್ನು ಕಂಡು "ಸೃಷ್ಟಿಕರ್ತ ನಿನಗೆ ಹೀಗಾದರೆ ಹೇಗೆ ?" ಎಂದಾಗ "ಪೂಜೆ ಮಾಡಿಸಿಕೊಂಡು ಕುಳಿತಿರೆ ಸೃಷ್ಟಿಯ ಕಾರ್ಯ ನಿಲ್ಲುವುದು, ಮಾಡುವವರು ಬೇಡುವವರಾಗಬಾರದು. ಆದರೆ ಅನಾಹುತ" ಎಂದು ಕವಿಯನ್ನು ಸಂತೈಸುತ್ತಾನೆ ಬ್ರಹ್ಮ.

'ಕೈಕೆಸರಾದರೆ ಬಾಯಿ ಮೊಸರು' ಎಂಬ ಗಾದೆಯನ್ನು ಹೊಂದಿರುವ ಕಥೆ 'ಕೆಸರಿನಲ್ಲಿ ಲಕ್ಷ್ಮಿ'. ಕೆಸರಿನಲ್ಲಿ ಹುಟ್ಟಲು ಕಾರಣ ಕೆಸರಿಂದಲೇ ಹಸುರು ಎಂದು ಹೇಳುತ್ತಾಳೆ. ಇದೂ ಸಾಮಾನ್ಯ ಕಥೆಯಾಗಿ ನಿಲ್ಲುತ್ತದೆ.

'ಹೆಣ್ಣನ್ನು ಹಳಿಯದಿರು' ಹೆಣ್ಣು ಹೆಚ್ಚೆಂಬ ಧ್ಯೇಯವನ್ನು ಒಳಗೊಂಡ ತ್ರಿಮೂರ್ತಿಗಳನ್ನು ಕುರಿತು ಆಸ್ತಿಕನು ತ್ರಿಮೂರ್ತಿಗಳನ್ನು "ಏಕೆ ನಿಮಗೆ ಹೆಣ್ಣಿನ ಹುಚ್ಚು" ಎಂದಾಗ "ನಮ್ಮ ಉಪಾಸಕರೆಲ್ಲಾ ಸೌಹಾರ್ದಗಳಿಂದಿರುವರೆ ?" ಎಂದು ಪ್ರಶ್ನಿಸಿದರು. 'ಆಗ ಇಲ್ಲ' ಎಂಬ ಉತ್ತರ ಆತನಿಂದ ಬಂತು. 'ಈಗ ಸರಸ್ವತಿ, ಗೌರಿ, ಲಕ್ಷ್ಮಿ ಇವರಲ್ಲಿ ಜಗಳ ಇರದೇ ?' 'ಇಲ್ಲ'. 'ನಮ್ಮ ಜಗಳಗಳ ಬೆಂಕಿ ಆರಿಸಿಯಾರೆಂಬ ಆಸೆಯಿಂದಲೇ ಅವರನ್ನು ಏರಿಸಿದ್ದೇವೆ' ಎಂದಾಗ ಆ ಆಸ್ತಿಕ ಬೆಪ್ಪಾಗಿ ತಾನೂ ಮದುವೆಯಾಗುತ್ತಾನೆ. ಸಂಚಿ ಹೊನ್ನಮ್ಮನು ಹೇಳುವಂತೆ 'ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು' ಎಂಬುದನ್ನು ಓದಿದ ಸ್ಫೂರ್ತಿಯಿಂದ ಈ ಕಥೆ ಸೃಷ್ಟಿಯಾಗಿರಬೇಕು ಎನ್ನಿಸುತ್ತದೆ.

'ಗಂಡೆದೆಯ ಉಪ್ಪು ಹೆಣ್ಣೆದೆಯ ಸಕ್ಕರೆ' ನದಿ, ಸಮುದ್ರ ಸಂಗಮ ಕಂಡಾಗ ಸ್ಫೂರ್ತಿಯಿಂದ ರಚಿತವಾದ ಕಥೆ ಇದು ಎನ್ನಿಸುತ್ತದೆ.

ಸಿಹಿ ನೀರು ಹೆಣ್ಣೆದೆಯೆಂಬ ಸಕ್ಕರೆ, ಗಂಡೆದೆ ಎಂಬ ಉಪ್ಪಿನ ಸಮುದ್ರಕ್ಕೆ ಸೇರುವಾಗ ತಾನು ಸೊಬಗಿನ ಸೋನೆಯ ಪ್ರತೀಕವಾಗಿದ್ದೇನೆ ಎನ್ನುತ್ತದೆ. ಆಗ ಸಮುದ್ರ–ಉಪ್ಪು ದುಡಿತದ ಬೆವರಿನ ಪ್ರತೀಕ, ನಿಮ್ಮ ಸೊಬಗು ಗಳಿಸಲು ನನ್ನ ಮೈಯ ಉಪ್ಪು ಸುರಿಸುವನನ್ನೇಕೆ ತೆಗಳುವಿರಿ ? ಎಂದು ಹೇಳುತ್ತದೆ.

"ತಲೆಗೇರಿದರೆ ಫಲವಿಲ್ಲ" ಗಂಗೆ ಗೌರಿಯರ ಕಥೆಯನ್ನು ನಿರೂಪಿಸಿ, ಗಂಗೆ ಶಿರವೇರಿ ಫಲವಿಲ್ಲ ಎಂಬ ನಿರ್ಧಾರಕ್ಕೆ ಬರುತ್ತಾಳೆ. ಆದರೆ ಅದೇ ಪಾರ್ವತಿ ಆತನ ಅರ್ಧಾಂಗ ಸೇರಿದಳು. ಗಂಗೆ ಈಶನ ದರ್ಶನವಾಗದಿರಲು ಭೂಲೋಕಕ್ಕೆ ಬಂದು ಕಾಶೀವಿಶ್ವನಾಥನಾಭರಣ ಸನ್ನಿಧಿಗೆ ಸೇರಿ ಧನ್ಯಳಾದಳು.

ಬಿದರು ನಾನು ಕಾಡನ್ನೇ ನಾಶ ಮಾಡುತ್ತೇನೆ ಎಂದರೆ, ಜ್ವಾಲಾಮುಖಿ 'ನಾನು ನಿನ್ನ ವಂಶವನ್ನೇ ಹೆಸರಿಲ್ಲದಂತೆ ಮಾಡುತ್ತೇನೆ ನನ್ನ ಹೊಟ್ಟೆ ಒಳಗೇ ಹುದುಗಿಸಿಕೊಳ್ಳುತ್ತೇನೆ' ಎನ್ನುತ್ತದೆ. ಮನುಷ್ಯ 'ತನ್ನ ಬೆಂಕಿ ಹೆಚ್ಚು, ಹುಸಿ, ಲೋಭ, ಮದ ಅನೇಕ ಬಗೆ' ಎನ್ನುತ್ತಾನೆ. ಅದಕ್ಕೆ ಶಿವ 'ನಾನು ಹಿಮಗಿರಿಯ ಮಗಳನ್ನೇ ಮದುವೆ ಆಗಿರುವೆ. ಚಂದ್ರನ ಧರಿಸಿ, ಜಲ ಸದಾ ಮುಡಿಯಿಂದ ಹರಿಯುವಂತೆ ಮಾಡಿಕೊಂಡಿರುವೆ. ಬೆಂಕಿಯಲ್ಲಿರುವುದು ನನಗೇ ಸಾಧ್ಯವಿಲ್ಲ ಇನ್ನು ನಿಮ್ಮ ಪಾಡೇನು ? ಎಂದು ಎಲ್ಲರನ್ನೂ ಸಮಾಧಾನಿಸುತ್ತಾನೆ. 'ಬಗೆಯ ಬೆಂಕಿ ಮೊದಲು, ಜಗದ ಬೆಂಕಿ ಆಮೇಲೆ' ಎಂಬ ಕಥೆಯಲ್ಲಿ ಮನುಷ್ಯನ ಒಳಗಿನ ಬೆಂಕಿ ಆತನ ಅಧೀನದಲ್ಲಿರುತ್ತದೆ. ಬೇಕು ಎಂದರೆ ಹೊತ್ತುವುದು ಬೇಡ ಎಂದರೆ ಇಲ್ಲ. ಆದರೆ ಮಿಕ್ಕವುಗಳಲ್ಲಿರುವುದು ಒಂದೇ ಬೆಂಕಿ. ಅದು ಹತ್ತಿ ಉರಿಯುತ್ತದೆ ಎಂಬುದರಲ್ಲಿ ಎಷ್ಟೊಂದು ಆಧ್ಯಾತ್ಮ ತುಂಬಿದೆ?

'ಬೇಗ ಬಂದುದು ಬೇಗ ಹೋಗುತ್ತದೆ'. ತಿಪ್ಪೆಯ ಕಪ್ಪೆಗಳು ಎಷ್ಟು ಬೇಗ ಜನ್ಮಿಸಿ ಶಬ್ದ ಮಾಡುತ್ತಿದ್ದೇವೆ ಎಂದರೆ, ಹಿತ್ತಲ ಹೇಸಿಗೆಯ ಹೂಗಳು ನಾವೆಷ್ಟು ಬೇಗ ಅರಳಿದೆವು ಎನ್ನುತ್ತವೆ. ಮಂಜು ನನ್ನದೇ ಚಕ್ರಾಧಿಪತ್ಯ ಎಂಬ ಜಂಬದಿಂದ ಸಂತಸವಾಗಿದ್ದರೆ, ನೀರು ಹೋದ ಮೇಲೆ ಕಪ್ಪೆ ಇಲ್ಲವಾಗುತ್ತದೆ. ಹೇಸಿಗೆಯಲ್ಲಿ ಅರಳಿದ ಹೂ ಒಣಗುತ್ತದೆ. ಮಂಜು ಕರಗಿ ನೀರಾಗುತ್ತದೆ. ಆದರೆ ಜಾಜಿ ಮಲ್ಲಿಗೆ ಚಂಪಕಗಳು ವನದಲ್ಲಿ ಗಮಗಮಿಸುತ್ತವೆ. ತೊರೆಗಳು ಹರಿಯುತ್ತವೆ. ಈ ಕಥೆ ' ತುಂಬಿದ ಕೊಡ ತುಳುಕುವುದಿಲ್ಲ ' ಎಂಬ ಗಾದೆಯನ್ನು ಸಾರುತ್ತದೆ. ಅಲ್ಪಕಾಲದ ಮೆರತ ' ಅಲ್ಪನಿಗೆ ಐಸಿರಿ ಬಂದರೆ ಅರ್ಧರಾತ್ರಿಗೆ ಕೊಡೆ ಹಿಡಿ ' ಎಂದ ಹಾಗೆ ಆಗುತ್ತದೆ ಎಂಬ ಗಾದೆಯನ್ನು ಸಮರ್ಥಿಸುತ್ತದೆ ಈ ಕಥೆ.

"ಆಳಕ್ಕೆ ಇಳಿಯುವೆ ಎತ್ತರಕ್ಕೆ ಏರಲಾರೆ"–ಸಮುದ್ರದ ನೀರು ಬಿಸಿಲಿನಲ್ಲಿ ಕುದಿದು ಚಿಂತಿಸುತ್ತದೆ. ತೆಂಗಿನ ಮರ ನೋಡಿ ನಾನು ನಿನ್ನ ಹಾಗಿಲ್ಲವಲ್ಲ ಎಂದಾಗ ತೆಂಗು ಸಮಾಧಾನಿಸುತ್ತಾ ಹೇಳುತ್ತದೆ 'ಆವಿಯಾಗಿ, ಮೋಡ ವಾಗಿ, ನೀರಾಗಿ ಹೂವು ಕಾಯಿ ಹಣ್ಣುಗಳಲ್ಲಿ ಸೇರಿ ಕೊಂಡು ಸವಿಯಾಗು' ಎಂದು.

'ನೆರೆಯನ್ನು ನೋಡಿ ಜರಿಯ ಬೇಡ' ಎಂಬುದು ಶೀರ್ಷಿಕೆಯೇ ಹೇಳುವಂತೆ ನಾವು ಬೇರೆಯವರನ್ನು ನೋಡಿ ಆಡಿಕೊಳ್ಳಬಾರದು ಎಂದು. ದಾಳಿಂಬೆ ತೊಂಡೆ ನೋಡಿ ನಗುವುದು. ಮುಂದಿನ ಜನ್ಮದಲ್ಲಿ ತೊಂಡೆ ತುಟಿ ಗಳಾದರೆ ದಾಳಿಂಬೆ ಹಲ್ಲಾಗುವುದು. ನಾಲಿಗೆ ಕಚ್ಚಲು ಹೋದಾಗ ನಾಲಿಗೆ ಜಾರಿ ತಪ್ಪಿಸಿಕೊಳ್ಳುತ್ತಿತ್ತು. ತುಟಿ ಗಳನ್ನು ಕಚ್ಚಿದರೂ ತುಟಿಗಳು ಮುಚ್ಚಿ ಹಲ್ಲು ಮರೆ ಯಾಗುತ್ತಿತ್ತು. ಆಗ ಸೊಕ್ಕು ಇಳಿದು ಒಳ್ಳೆಯವರಾಗಿ ಬಾಳೋಣ ಎನ್ನುತ್ತವೆ ಹಲ್ಲುಗಳು. ಆಗ ತುಟಿಗಳಿಗೆ ಬಿಂಕ ಬರುತ್ತದೆ. ಹಲ್ಲುಗಳೆಲ್ಲ ಬಿದ್ದು ಹೋದವು. ಹಲ್ಲಿಲ್ಲದೆ ಮೋಹಕ ಮಂದಹಾಸ ಹೇಗೆ ಹೊಮ್ಮೀತು ? ಹಣ್ಣುಗಳಿಗೂ ಪುನರ್ಜನ್ಮ ತರುತ್ತಾನೆ ಕಥೆಗಾರ. ನಿಜಕ್ಕೂ ಈ ಮೋಡಿಯನ್ನು ಮೆಚ್ಚತಕ್ಕದ್ದೇ.

ಪರ್ವತರಾಜ, ವನರಾಜ ಉಟ್ಟು ನಗುತ್ತಿರಲು ಹುಲ್ಲು 'ನಿನ್ನ ದೇಹದ ಸುಂದರ ಅಂಶ ನಾನು' ಎಂದಿತು. ಆಗ ಪರ್ವತರಾಜ 'ನೀನಾವ ಹೆಚ್ಚು ಕಿರಿಯುವ' ಎಂದ. ಬಿರುಗಾಳಿ ಬಂದಾಗ ಗಿಡ ಮರಗಳೆಲ್ಲಾ ಉರುಳಿದವು. ಹುಲ್ಲು ಹಾಗೇ ಇತ್ತು. ಆಗ ಹುಲ್ಲು ಬಂದು ಕೇಳಿತು. ಆಗ ಪರ್ವತರಾಜ 'ಕಿರಿಯರ ಹಿರಿಮೆ' ಅರಿತೆ ಎನ್ನು ತ್ತಾನೆ. ಮೂರ್ತಿ ಚಿಕ್ಕದಾದರೇನು, ಕೀರ್ತಿ ದೊಡ್ಡದು ಅಲ್ಲವೇ ? ಅದಕ್ಕೇ ಬಸವಣ್ಣನವರು 'ಎನಗಿಂತ ಕಿರಿ ಯವರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂದು ಹೇಳಿ ದರು. ಈ ಸಂದೇಶವನ್ನು ಹೊತ್ತ ಕಥೆಯೇ 'ಕಿರಿಯರ ಹಿರಿಮೆ'.

ಒಂದು ಸಾರಿ ಒಂದು ಬೀಜ ಒಂದು ಬಳ್ಳಿಯ ಕಡೆಗೆ ಬಂದು ಬಿದ್ದಿತು. ಆಗ ಬಳ್ಳಿ 'ನೀನು ಬೆಳೆಯಬೇಡ ನಿನ್ನನ್ನು ಕಳೆ ಎಂದು ಬೀಸಾಡುವರು. ಇದರಿಂದ ನನ್ನ ಬೆಳವಣಿಗೆಗೂ ಅಡ್ಡಿಯಾಗಬೇಡ' ಎಂದಿತು. ಅದು ಹೋಗಿ ಎರಡು ಶಿಲೆಗಳ ನಡುವೆ ಸೇರಿತು. ಅದು ಬೆಳೆದು ಶಿಲೆಯನ್ನು ಸರಿಸಿತು, ಆನೆ ಬಂದು ಬಳ್ಳಿಯನ್ನು ತುಳಿಯಿತು. ಬಳ್ಳಿ ರೋಧಿಸಿತು. ಆಗ ಈ ಶಿಲೆಯ ಮಧ್ಯದ ಮರದ ಮೇಲಿನ ಹಕ್ಕಿ ಹಾಡಿತು. "ಬೆಳೆಯುವ ಇಚ್ಛೆ ಬಲವಾದರೆ ಶಿಲೆಯೇ ಹೊಲ. ಇಲ್ಲದಿದ್ದರೆ ಹೊಲವೇ ಶಿಲೆ" ಎಂಬಂತೆ. ಇದು ಕಥೆಗಾರನ ಅದ್ಭುತ ಕಲ್ಪನೆ. ಕಥೆ ಸೊಗಸಾಗಿ ಮೂಡಿ ಬಂದಿದೆ. ಆ ಹಾಡಿನ ಸಾಲುಗಳೇ ಈ ಕಥೆಯ ಶಿರೋನಾಮೆಯಾಗಿರುವುದು ಉಚಿತವೆನಿಸಿದೆ.

ಹನಿನೀರು ಕಂಡ ಸಮುದ್ರ 'ನೀನು ಸೂರ್ಯ ನಿಂದ ಹೊರ ಹೋಗಿದ್ದೆ. ಈಗ ಮತ್ತೆ ನನ್ನಲ್ಲಿಗೇ ಬಂದು ಸೇರಿಕೊಳ್ಳುವೆ' ಎಂದಾಗ ಹನಿ 'ನನ್ನ ಸ್ವಾತಂತ್ರ್ಯವೇ ಹೆಚ್ಚು' ಎನ್ನುತ್ತಿದ್ದಂತೆಯೇ ಸಮುದ್ರಕ್ಕೆ ಬಿತ್ತು. ಆದರೆ ಅದು ಸಿಂಪಿನ ಬಾಯಿನೊಳಗೆ ಬಿದ್ದು ಮುತ್ತಾಗಿ ಹೊರಬಂತು. ಅದನ್ನು ರಾಣಿ ಧರಿಸಿ ಕೊಂಡು ಸಪ್ತಸಾಗರ ಸುತ್ತಿದಾಗ ಅದು ತನ್ನ ಪ್ರತಿಜ್ಞೆ ಕುರಿತು ಸಮುದ್ರಕ್ಕೆ ಹೇಳುತ್ತದೆ. "ಸಂಕಲ್ಪ ಬಲವುಳ್ಳ ಶರೀರಕ್ಕೆ ಸಾಗರದಲ್ಲಿಯೂ ಸ್ವಾತಂತ್ರ್ಯ" ಎಂದು. ಕಥೆಗಾರನ ಕಥನ ಕೌಶಲ ಅದ್ಭುತ.

ಮೊಂಡನೊಬ್ಬ ತಿಳಿನೀರು ಕುಡಿಯುವಾಸೆಯಿಂದ ಮರಳನ್ನು ತೋಡಿ ತೋಡಿ ನೋಡುತ್ತಾನೆ ಬಗ್ಗಡ, ಮತ್ತೆ ಕೋಪದಿಂದ ತೋಡುತ್ತಾನೆ ಮತ್ತೆ ಬಗ್ಗಡ. ಏನೆಂದು ಒಬ್ಬ ಬಂದು ಕೇಳಿದಾಗ, ತನ್ನ ಮನದಾಸೆ ಯನ್ನು ಆತನಿಗೆ ಹೇಳುತ್ತಾನೆ. ಆಗ ಆತ "ಆತುರ ಬೇಡ ಸ್ವಲ್ಪ ನಿಧಾನಿಸು" ಎಂದಾಗ ಹಾಗೆಯೇ ಕೂತ. ಬಗ್ಗಡದ ನೀರು ತಿಳಿತುಕೊಂಡಿತು. ಯಾವಾಗಲೂ ಆತುರ ಪಡಬಾರದು ಶಾಂತವಾಗಿರಬೇಕು ಎನ್ನುವ ಬುದ್ಧಿ ವಾದ ಹೇಳುವ ಕಥೆಗಾರ ಈ 'ಮೊಂಡ ಮನುಜನಿಗೆ ಒಂಡು ನೀರು' ಎಂಬ ಕಥೆಯಲ್ಲಿ ಬುದ್ಧಿವಂತಿಕೆಯ ಬಗ್ಗೆ ತಿಳಿಸುತ್ತಾನೆ.

ಹುಬ್ಬು ರೆಪ್ಪೆಗಳನ್ನು, ಗಡ್ಡ ಮೀಸೆ ಕೂದಲು ಹೀಯಾಳಿಸುವುವು. ಗಡ್ಡ ಮೀಸೆ ಕೂದಲುಗಳನ್ನು ಬೆಳೆದಂತೆ ಕತ್ತರಿಸಿ ಹಾಕಲಾಯಿತು. ಆದರೆ ಹುಬ್ಬು ರೆಪ್ಪೆಗಳು ಹಾಗೆ ಉಳಿದುವು 'ಘನತೆಯ ಗುರುತು ಗಾತ್ರ ವಲ್ಲ ಪಾತ್ರತೆ' ಎಂಬುದನ್ನು ಹೇಳಲು ಬರೆದ ಒಂದು ಸಾಮಾನ್ಯ ಕಥೆ ಇದು.

ಒಂದೊಂದು ಕಾಲಕ್ಕೆ ಒಬ್ಬೊಬ್ಬರು ಬೇಕಾಗುತ್ತಾರೆ. ಆತ ಮಿತ್ರನಾಗಿರಲಿ ಶತ್ರುವಾಗಿರಲಿ 'ಕಡ್ಡಿ ಖಂಡುಗ

ನೀರು ತಡೆಯಿತು' ಎಂದು ಹೇಳುವುದಿಲ್ಲವೇ? ಮಲ್ಲಿಗೆ ಗಿಡದ ಹತ್ತಿರ ಪುಂಡಿಯು ಗಿಡ ಹುಟ್ಟಿರುತ್ತದೆ. ಆಗ ಮಲ್ಲಿಗೆ ಅದರ ಮೂಗು ಮುರಿಯುವುದು, ಮಲ್ಲಿಗೆ ಹೂವನ್ನು ದೇವರಿಗೆ ಕಟ್ಟಲು ಗಂಡ-ಹೆಂಡತಿಗೆ ಹೇಳುತ್ತಾನೆ. ದಾರ ಇಲ್ಲದಿರಲು ಪುಂಡಿನ ನಾರು ತಂದು ಹೂಕಟ್ಟಿ ದೇವರಿಗೆ ಅರ್ಪಿಸುವಾಗ ಅದೂ ದೇವರ ಮುಡಿ ಸೇರಿತು. ದಾರ ಇಲ್ಲದಾಗ ದೇವರ ಮುಡಿ ಶೃಂಗಾರಕ್ಕೆ ಅದೆಷ್ಟು ಉಪಯೋಗಕ್ಕೆ ಬಂತು ಪುಂಡಲದ ನಾರು. 'ಹೂವಿನಿಂದ ನಾರು ಸ್ವರ್ಗ ಸೇರಿತಲ್ಲವೇ?'

ನೆಟ್ಟಗಿನ ಬಿದಿರು ಡೊಂಕಿನದನ್ನು ಆಡಿಕೊಳ್ಳುತ್ತದೆ. ಡೊಂಬರವನು ನೆಟ್ಟಗಿನ ಬಿದಿರಿನಲ್ಲಿ ಆಡಿಸುವಾಗ ಅದು ಚೋಲಿ ಹೊಡೆಯುತ್ತಿತ್ತು. ಡೊಂಕಿನದು ಅರಸನ ಅಂದಣವಾಗಿ ಮೆರೆಯಿತು. ಆಗ ಡೊಂಕು ಬಿದಿರು ಹೇಳುತ್ತದೆ. 'ಬೀಗ ಬೇಡ ಬಾಗಿ ನಡೆ' ಎಂಬ ಹಿರಿಯರ ಹೇಳಿಕೆಯ ಮರ್ಮವನ್ನು.

ಪೂರ್ಣಚಂದ್ರ ನಕ್ಷತ್ರಗಳನ್ನು ನಗುವಾಗ ನೋಡಿ ನಕ್ಷತ್ರ ನಮಗೆ ಸ್ವಯಂ ಪ್ರಕಾಶವಿದೆ. ಮಿಂಚು ಹುಳುಗಳಿಗೂ ಇದೆ. ನಮಗಿಂತ ನೀನು ಹೆಚ್ಚಿನವನಲ್ಲ ಎಂದಾಗ ಪೂರ್ಣಿಮೆಯ ಚಂದಿರ ಮತ್ತೆ ಹುಣ್ಣಿಮೆ ಬರುವವರೆಗೆ ಮರೆಯಾದ. ಮನುಷ್ಯನಿಗೆ ಸ್ವಯಂ ಪ್ರತಿಭೆ ಬೇಕು ಎಂಬ ದೃಷ್ಟಿಯಿಂದ ಈ ಕಥೆಯನ್ನು ರಚಿಸಿರಬೇಕು. 'ಪರಪ್ರಕಾಶಾವಕಾಶಗಿಂತ ಸ್ವಪ್ರಕಾಶದ ಲವಲೇಶವೇ ಲೇಸು' ಎಂಬುದನ್ನು ಸಾರಲು ಹುಟ್ಟಿಕೊಂಡ ಕಥೆ ಸಾಧಾರಣ ಕಥೆಯಾಗಿ ಉಳಿಯುತ್ತದೆ.

ಇಬ್ಬರು ವಟುಗಳು. ಒಬ್ಬ ಮದುವೆಯಾದ. ಮತ್ತೊಬ್ಬ ಸನ್ಯಾಸಿಯಾಗಿಯೇ ಉಳಿದ. ಒಮ್ಮೆ ಮದುವೆ ಆದವನು ಬಂದು ಹೀಗೆ ಮಾಡಬಹುದೇ? ಎಂದಾಗ ನೀನು ಸಾಯುತ್ತೀಯೆ. ಆದರೆ ನಾನು ಸಾವನ್ನು ಗೆದ್ದಿದ್ದೇನೆ ಎಂದು ಮಕ್ಕಳನ್ನು ತೋರಿ 'ಇವೆನ್ನ ಜೀವದ ಸಸಿಗಳು' ಎನ್ನುತ್ತಾನೆ. 'ಒಲವಿನ ಬಲವಿದ್ದರೆ ಗೆಲ್ಲುವುದು ಸಾವನ್ನು' ಎಂಬುದು ಕಥೆಯ ಸಾರ. ಮನುಷ್ಯ ಸನ್ಯಾಸತ್ವದಿಂದಲೇ ಅಲ್ಲ ಸಂಸಾರದಿಂದಲೂ ಮುಕ್ತಿ ಪಡೆಯಬಹುದು ಎಂಬ ಆಧ್ಯಾತ್ಮ ಸಂದೇಶವನ್ನು ಹೊತ್ತು ನಿಂತಿದೆ ಈ ಕಥೆ.

ಕಬ್ಬು ಬಿದುರನ್ನು ಆಡಿಕೊಳ್ಳುತ್ತದೆ. ಕಬ್ಬು ಸಕ್ಕರೆಯಾಗುತ್ತದೆ. ಸಕ್ಕರೆ ಚಹದಲ್ಲಿ ಬೇಯುತ್ತಿದ್ದರೆ ಬಿದಿರು ಕೇಳಿದಾಗ ನಾನು ಕಾಗದವಾಗಿ ಅದರಲ್ಲಿ ಕವಿತೆ ಬರೆಯಿಸಿಕೊಂಡೆ. ಹೆಣ್ಣೊಂದು ಸುಮಧುರಗಾನ ಹಾಡುತ್ತಾಳೆ. ಬಿದಿರಿನ ಸುಖ ಕಬ್ಬಿನ ಸಕ್ಕರೆಗೆಲ್ಲಿ ಬಂತು? ಕುದಿಯುವ ನೀರಿನಲ್ಲಿರುವಂತಾಯಿತು. 'ಯಾರಲ್ಲಿ ಯಾವ ಯಾವ ಯೋಗ್ಯತೆ ಅಡಗಿದೆಯೋ ಯಾರಿಗೆ ಗೊತ್ತು?

ಚಿಟ್ಟೆ 'ನಾನು ಈಶ್ವರನ ಚಿತ್ರಕಲೆಯ ಪ್ರತೀಕ' ಎಂದಿತು. ಭೃಂಗ 'ನಾನು ಸಂಗೀತಕಲೆಯ ಪ್ರತೀಕ' ಎಂದಿತು. ಎರಡೂ ಜೇನನ್ನು ಹೀಯಾಳಿಸಿದುವು. ಅಷ್ಟರಲ್ಲಿ ಹಾವು ಬಂತು. ಭೃಂಗ, ಚಿಟ್ಟೆ ದೂರವಾದುವು. ಅವುಗಳನ್ನು ಕುರಿತು ಜೇನು ಏಕೆ ಹೊರಡುತ್ತೀರಿ? ಅವುಗಳು ಹೇಳಿದುವು 'ಅದು ವಿಷದ ಜಂತು' ಎಂದು. ಕಲಾಪ್ರೇಮಕ್ಕೆ ವಿಷ ಸೇರಿದರೆ ಕಂಟಕಪ್ರಾಯ. ಕಲಾಪ್ರೇಮಕ್ಕಿಂತ ಕಲಾವಿಹೀನತೆಯೇ ಶ್ರೇಯಸ್ಕರವಲ್ಲವೇ? ಎಂದಿತು ಜೇನು.

ನವಿಲಿಗೆ ಕಂಠ ಸರಿಯಾಗಿಲ್ಲವಲ್ಲ ಎಂಬ ಚಿಂತೆ. ಕೋಗಿಲೆಗೆ ಬಣ್ಣದ ಚಿಂತೆ. ತನ್ನಲ್ಲಿದ್ದುದನ್ನು ಮರೆತು ಬೇರೆಯವರಲ್ಲಿರುವುದಕ್ಕೆ ಆಸೆ ಯಾಕೆ ಪಡಬೇಕು? ಎಂಬ ಸಂದೇಶವನ್ನು ಹೊತ್ತು ನಿಂತಿದೆ. 'ಎಲ್ಲವೂ ಶಿವಪ್ರಸಾದ' ಎಂಬ ಕಥೆ, ನಾವು ತಂದುದನ್ನು ನಾವು ಅನುಭೋಗಿಸಬೇಕು ಎಂಬುದೇ ಕಥೆಗಾರನ ಉದ್ದೇಶ.

ಕಥೆಗಾರ ಪ್ರಕೃತಿಯಲ್ಲಿ ವಿಹರಿಸಿದಾಗ, ಪ್ರಕೃತಿಯ ವೈಚಿತ್ರ್ಯವನ್ನು ಕಂಡಾಗ, ತನ್ನ ಮನದಲ್ಲಾದ ಭಾವನೆಗಳನ್ನು ಕಥೆಗಳ ರೂಪದಲ್ಲಿ ಮೋಹಕ ಶೈಲಿಯಲ್ಲಿ ಹೆಣೆಯಲು ಪ್ರಯತ್ನಿಸಿದ್ದಾನೆ. ಈ ಕಥಾ ಸಂಕಲನದಲ್ಲಿನ ಮೂರು ನಾಲ್ಕು ಕಥೆಗಳನ್ನು ಬಿಟ್ಟರೆ ಮಿಕ್ಕೆಲ್ಲವೂ ಉತ್ತಮ ಮಟ್ಟಕ್ಕೆ ಏರಬಲ್ಲವು. ನವೋದಯ ಕಾಲದಲ್ಲಿ ಬರೆದರೂ ಕೆಲವು ಕಥೆಗಳು ಯಾವ ಕಾಲಕ್ಕೂ ನಿಲ್ಲುವ, ಸಾಮಾಜಿಕ, ಪೌರಾಣಿಕ ಹಿನ್ನೆಲೆಯನ್ನೊಳಗೊಂಡ ಕಥೆಗಳಾಗಿ ಎಲ್ಲರ ಮನದಲ್ಲೂ ಅಚ್ಚೊತ್ತಿ ನಿಲ್ಲುವುದರಲ್ಲಿ ಅನುಮಾನವಿಲ್ಲ. □

# ಗಿಲ್ ಗಿಲ್ ಗಿಲಗಚ್ಚಿ

● ಎ. ಕೆ. ರಾಮೇಶ್ವರ

ಡಾ. ಸಿದ್ದಯ್ಯ ಪುರಾಣಿಕರು ಕನ್ನಡ ನಾಡಿನ ಅತ್ಯುನ್ನತ ಕವಿಗಳು. ಮನೆಯಲ್ಲಿ ಅಜ್ಜಂದಿರಾದ ಚೆನ್ನಕವಿಗಳು, ತಂದೆ ಕಲ್ಲಿನಾಥ ಶಾಸ್ತ್ರಿಗಳು ಉದ್ದಾಮ ಪಂಡಿತರು. ಇಂತಹ ಸಾರಸ್ವತ ಕೌಟುಂಬಿಕ ವಾತಾವರಣದಲ್ಲಿ ಹುಟ್ಟಿ ಬೆಳೆದ ಶ್ರೀಯುತರಿಗೆ ಕಾವ್ಯಶಕ್ತಿ ಮನೆತನದ ಬಳುವಳಿಯಾಗಿ ಬಂದಿದೆ ಎಂದು ಹೇಳಿದರೆ ಅತ್ಯುಕ್ತಿಯಲ್ಲ. ಅಂತೆಯೇ ಅವರು ಬಾಲ್ಯದಲ್ಲಿಯೇ ಶರಣ ಸಾಹಿತ್ಯವನ್ನು ಕುಡಿದು ಅರಗಿಸಿಕೊಂಡರು. ಕಾವ್ಯ ಪುರಾಣಗಳನ್ನು ಆಳವಾಗಿ ಅಭ್ಯಾಸಮಾಡಿ ಅಗಾಧವಾದ ಪಾಂಡಿತ್ಯವನ್ನು ಗಳಿಸಿಕೊಂಡರು. ಆದುದರಿಂದಲೇ ಇವರ ಕಾವ್ಯ ಕಾರಂಜಿಯಲ್ಲಿ ಹೊಸ ಹೊಸ ಕಲ್ಪನೆಗಳು, ಹೊಸ ಹೊಸ ಉಪಮಾನಗಳು ಹೊಸ ಹೊಸ ಪ್ರಾಸಗಳು, ಹೊಸ ಹೊಸ ಓಟ ಕುಣಿತಗಳು, ಹೊಸ ಹೊಸ ಆಯಾಮುಗಳು ಪುಟಿದು ಬಂದು ಲೀಲಾಜಾಲವಾಗಿ ಹರಿದು 'ಜಲಪಾತ'ವಾಗಿ ಕಂಗೊಳಿಸಿತು. 'ಕರುಣಾ ಶ್ರಾವಣ'ವಾಗಿ ನಾಡಿಗೆ ಮಂಗಳವನ್ನುಂಟು ಮಾಡಿತು. 'ಮಾನಸ ಸರೋವರ' ವಾಗಿ ನಿಂತು 'ಮೊದಲು ಮಾನವನಾಗು' ಎಂಬ ದಿವ್ಯ ಭವ್ಯ ಸಂದೇಶ ನೀಡಿತು.

ಶ್ರೀಯುತರು ವಿದ್ಯಾರ್ಥಿದಿಸೆಯಲ್ಲಿಯೇ ಕಾವ್ಯ ಶಕ್ತಿಯನ್ನು ಅಳವಡಿಸಿಕೊಂಡು ಪ್ರಥಮ ಶ್ರೇಣಿಯ ಪದವೀಧರರಾಗಿ ಮಹಾವಿದ್ಯಾಲಯದಿಂದ ಹೊರಬಂದು ತಹಸೀಲದಾರ ಹುದ್ದೆಗೆ ಆಯ್ಕೆಗೊಂಡು, ಐ. ಎ. ಎಸ್. ಆಗಿ ಜಿಲ್ಲಾ ಅಧಿಕಾರಿಗಳವರೆಗೆ ನಾನಾ ಇಲಾಖೆಯಲ್ಲಿ ಶ್ರದ್ಧೆ, ವಿಶ್ವಾಸ, ಪ್ರಾಮಾಣಿಕತೆಯಿಂದ ಕೆಲಸ ಮಾಡಿ ದಕ್ಷರು, ಸಮರ್ಥರು, ಕರ್ತವ್ಯ ನಿಷ್ಠರು ಎಂದು ಹೆಸರು ಗಳಿಸಿದರು. ಕಾವ್ಯ ಹಾಗೂ ಆಡಳಿತದಲ್ಲಿ ಕೈತೊಡಗಿಸಿಕೊಂಡ ಇವರು ಕನ್ನಡ ನಾಡಿನ ಕಣ್ಮಣಿಯಾಗಿ ತಾಯಿ ಶಾರದೆಯ ಮುಕುಟಮಣಿಯಾಗಿ ಕಾಂತಿಯಿಂದ ಕಂಗೊಳಿಸುತ್ತಿದ್ದಾರೆ. ಸತತೋದ್ಯೋಗಿಗಳಾದ ಶ್ರೀಯುತರು ಎಂದೂ ವಿಶ್ರಾಂತಿಯನ್ನು ಬಯಸಲಿಲ್ಲ, ಪಡೆಯಲಿಲ್ಲ. ಅವಿಶ್ರಾಂತ ಹೋರಾಟದ ಫಲದಿಂದ ಆಡಳಿತದಲ್ಲಿ ನಾವಿನ್ಯತೆಯನ್ನು, ಕಾವ್ಯಕ್ಷೇತ್ರದಲ್ಲಿ ನೈಪುಣ್ಯತೆಯನ್ನು ಸಂಪಾದಿಸಿಕೊಂಡರು. ಅದರ ದ್ಯೋತಕವಾಗಿ 'ಶರಣ ಚರಿತಾಮೃತ' ಹೊರಬಂದಿತು. 'ವಚನೋದ್ಯಾನ' ನಿರ್ಮಾಣವಾಯಿತು. ಇವರ ಸಾಹಿತ್ಯ ಶೈಕ್ಷಣಿಕ, ಆಡಳಿತಾತ್ಮಕ ಶಕ್ತಿಯನ್ನು ಗುರುತಿಸಿ ಕರ್ನಾಟಕ ವಿಶ್ವವಿದ್ಯಾಲಯವು ಇವರಿಗೆ ಡಾಕ್ಟರೇಟ್ ಪದವಿಯನ್ನು ಕೊಟ್ಟು ಗೌರವಿಸಿತು. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ 'ವಚನೋದ್ಯಾನ' ಕ್ಕೆ ವಿಶೇಷ ಬಹುಮಾನವನ್ನಿತ್ತು ಪುರಸ್ಕರಿಸಿತು. ಇಂತಹ ಉತ್ತುಂಗಶೃಂಗ ಕವಿಪುಂಗವರಾದ ಶ್ರೀ ಸಿದ್ಧಯ್ಯ ಪುರಾಣಿಕರು ಕನ್ನಡನಾಡಿನ ಚಿಣ್ಣರನ್ನು, ಚೆನ್ನರನ್ನು ಎಂದೂ ಮರೆತವರಲ್ಲ. ಅವರಿಗಾಗಿ 'ತುಪ್ಪಾ ರೊಟ್ಟಿ ಗೇ ಗೇ ಗೇ' ಎಂದು ಕುಣಿದು 'ಗಿಲ್ ಗಿಲ್ ಗಿಲಗಚ್ಚಿ' ಬಾರಿಸಿ ಅವರ ಮಧ್ಯದಲ್ಲಿ ಅದೆಷ್ಟೋ ಸಲ ಆಡಿದ್ದಾರೆ, ಹಾಡಿದ್ದಾರೆ. ಆಡಳಿತದಲ್ಲಿ ಅನುಭವಿಸಿದ ಕಷ್ಟ-ನಷ್ಟಗಳನ್ನು ಮಕ್ಕಳ ಆಟಪಾಠದಲ್ಲಿ ಮಗುವಾಗಿ ಬೆರೆತು ಮರೆತಿದ್ದಾರೆ, ಅಲ್ಲಿಯೇ ಹೊಸ ಚೈತನ್ಯವನ್ನು ಪಡೆದಿದ್ದಾರೆ. ಹೀಗೆ ಶ್ರೇಷ್ಠಮಟ್ಟದ ಕವಿಗಳಾಗಿ, ವಚನಕಾರರಾಗಿ, ಮಕ್ಕಳಲೋಕದ ಚುಕ್ಕಿಯಾಗಿ, ಚಂದ್ರಮನಾಗಿ ಬೆಳಗುವ ಕವಿಯು ನಮ್ಮೆಲ್ಲರ ಮಧ್ಯದಲ್ಲಿರುವುದರಿಂದ ನಾವೂ ಧನ್ಯರಲ್ಲವೆ ? ಮಾನ್ಯರಲ್ಲವೆ ?

ಮಗು ದೇಶದ ಸರ್ವಸಂಪತ್ತು. ಅವನ ಸರ್ವತೋಮುಖ ಬೆಳವಣಿಗೆ ಅತ್ಯಗತ್ಯ. ಎಲ್ಲರ ಮನೆಯಲ್ಲಿಯೂ ಪುಟಾಣಿ ಮಕ್ಕಳು ಇದ್ದೇ ಇರುತ್ತವೆ. ಆದರೂ ಈ ಮಕ್ಕಳ ಭವಿಷ್ಯದತ್ತ ಅವರು ಅಷ್ಟು ಗಮನ ಕೊಟ್ಟಿರುವುದಿಲ್ಲ. ಅಂದಮಾತ್ರಕ್ಕೆ ಮಕ್ಕಳನ್ನು ಪ್ರೀತಿ-ವಾತ್ಸಲ್ಯ, ಅಂತಃಕರಣದಿಂದ ನೋಡಿಕೊಳ್ಳುವುದಿಲ್ಲವೆಂದು ಇದರರ್ಥವಲ್ಲ. ಮಕ್ಕಳದೂ ಒಂದು ಜಗತ್ತಿದೆ. ಆ ಜಗತ್ತಿನಲ್ಲಿ ವಿಹರಿಸಲು ಯಾರೂ ಪ್ರಯತ್ನಿಸುವುದಿಲ್ಲ. ಪರ್ಯಾಯವಾಗಿ ಮಕ್ಕಳನ್ನು ತಮ್ಮ ಲೋಕಕ್ಕೆ ಎಳೆದುಕೊಳ್ಳಲು ಯತ್ನಿಸುತ್ತಾರೆ. ಡಾ. ಪುರಾಣಿಕರು ಹಾಗಲ್ಲ. ಮಕ್ಕಳು ಹಿಗ್ಗಿನ ಬುಗ್ಗಿಗಳು, ಕರ್ತವ್ಯದ ಕಾರಂಜಿಗಳು. ಇಂಥ ಅದ್ಭುತ ರಹಸ್ಯವಾದ ಮಕ್ಕಳ ಅನಿಸಿಕೆಗಳನ್ನು ಅರಳಿಸಲು, ಕುತೂಹಲವನ್ನು ಕೆರಳಿಸಲು, ಅವರ ಬೇಕು ಬೇಡಿಕೆಗಳನ್ನು ಪೂರೈಸಲು ತಾವೇ ಮಕ್ಕಳ ಲೋಕಕ್ಕೆ ಇಳಿದು ಬಂದರು. ತಾವು ಮಕ್ಕಳ ಲೋಕಕ್ಕೆ ಇಳಿದು ಬಂದ ಘಟನೆಯನ್ನು ಕುರಿತು ಹೀಗೆ ಹೇಳುತ್ತಾರೆ :

"೧೯೫೦ ಇರಬಹುದು. ಒಮ್ಮೆ ನನ್ನ ಕನ್ನಡ ಗುರುಗಳಾದ ಪ್ರೊ. ಡಿ. ಕೆ. ಭೀಮಸೇನರಾಯರ ಮನೆಗೆ ಹೋದಾಗ ಅವರು 'ಸತ್ಯಾಶ್ರಯ ಪಠ್ಯಪುಸ್ತಕ ಮಾಲೆ'ಯನ್ನು ರೂಪಿಸುವ ಕಾರ್ಯದಲ್ಲಿ ಮಗ್ನರಾಗಿದ್ದರು. ನನ್ನನ್ನು ನೋಡುತ್ತಲೇ 3ನೇ 4ನೇ ತರಗತಿಯ ಪಠ್ಯಪುಸ್ತಕಗಳಿಗಾಗಿ ಎರಡು ಮಕ್ಕಳ ಪದ್ಯಗಳು ಬೇಕು. ಈಗಿಂದೀಗಲೇ ಬರೆದು ಕೊಡು ಎಂದು ಕಾಗದ ಪೆನ್ನುಗಳನ್ನು ಮುಂದಿರಿಸಿದರು. ಅದಾವ ಅಮೃತಗಳಿಗೆಯೋ "ಅಜ್ಜನ ಕೋಲಿದು ನನ್ನಯ ಕುದುರೆ" ಎಂಬ ಕವಿತೆಯನ್ನು, 'ಕರಡಿಯು ತಕ ತಕ ಕುಣಿಸುತ ಬಂದನು ಸಿದ್ದಿದ್ದಿ ಬಾವಾ' ಎಂಬ ಕವಿತೆಯನ್ನು ಕೆಲವೇ ನಿಮಿಷಗಳಲ್ಲಿ ಬರೆದು ಒಪ್ಪಿಸಿದೆ. ಅವರಿಗೆ ಅತೀವ ಆನಂದವಾಯಿತು. 'ನೀನು ಮಕ್ಕಳ ಪದ್ಯಗಳನ್ನು ಸೊಗಸಾಗಿ ಬರೆಯುತ್ತಿ, ಬರೆಯುತ್ತ ಹೋಗು' ಎಂದು ಹುರಿದುಂಬಿಸಿದರು. ಗುರುಗಳ ಈ ಸತ್ಪ್ರೇರಣೆ ಮಕ್ಕಳ ಸಾಹಿತ್ಯ ಲೋಕಕ್ಕೆ ಕಾಲಿರಿಸಲು ಅನುವು ಮಾಡಿಕೊಟ್ಟಿತು." ಹೀಗೆ ಮಕ್ಕಳ ಪಠ್ಯವಸ್ತುವಿನ ಅಗತ್ಯದಿಂದ ಕೆಲವು ಮಕ್ಕಳ ಕವಿಗಳು ಹೊರಬಂದರು. ಅಂತಹವರ ನಿಟ್ಟಿನಲ್ಲಿ ಡಾ. ಸಿದ್ದಯ್ಯ ಪುರಾಣಿಕರು ಅಗ್ರಗಣ್ಯರು. ಅವರು ಸತತ ಮೂವತ್ತು ವರ್ಷಗಳಿಂದಲೂ ಮಕ್ಕಳ ಕವಿಗಳಾಗಿ, ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡುವ ವ್ಯಕ್ತಿಗಳಿಗೆ ಪ್ರೋತ್ಸಾಹಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ, ಮಕ್ಕಳ ಮೊದಲ ಕೃತಿ "ತುಪ್ಪಾ ರೊಟ್ಟಿ ಗೇ ಗೇ ಗೇ" ಪುಸ್ತಕಕ್ಕೆ ಭಾರತ ಸರ್ಕಾರದ ಪುರಸ್ಕಾರ ದೊರೆಯಿತು. ಆ ಪುಸ್ತಕದ ಹಲವು ಪದ್ಯಗಳು ಮಕ್ಕಳ ಪಠ್ಯಪುಸ್ತಕದಲ್ಲಿ ಅಳವಡಿಸಿರುವುದರಿಂದ ಪುರಾಣಿಕರು ಕನ್ನಡ ನಾಡಿನ ಮಕ್ಕಳ ಲೋಕಕ್ಕೆ ಚಿರಪರಿಚಿತರು. ಅವರ ಇತ್ತೀಚಿನ ಮಕ್ಕಳ ಕವನ ಸಂಕಲನ "ಗಿಲ್ ಗಿಲ್ ಗಿಲಗಚ್ಚಿ" ತುಂಬಾ ಆಕರ್ಷಕವಾಗಿದೆ. ಇದರಲ್ಲಿ ಆಣಿ ಮುತ್ತಿನಂತಹ ಹದಿನೈದು ಕವನಗಳಿವೆ. ಪ್ರಸ್ತುತಃ ಈ 'ಗಿಲ್ ಗಿಲ್ ಗಿಲಗಚ್ಚಿ' ಬಾರಿಸಿ ನೋಡುವಾ !

ಮಕ್ಕಳ ಮನ, ಹೃದಯವುಳ್ಳ ಪುರಾಣಿಕರು ಮಕ್ಕಳ ಸಮೂಹದಲ್ಲಿ ಬಂದು ನಿಂತು ಒಂದು ಕೈಯಲ್ಲಿ 'ಗಿಲ್ ಗಿಲ್ ಗಿಲಗಚ್ಚಿ' ಇನ್ನೊಂದು ಕೈಯಲ್ಲಿ 'ಬಣ್ಣದ ಗರಿ' ಹಿಡಿದು 'ಯಾವುದು ಬೇಕೋ ಆರಿಸಿಕೋ' ಎಂದು ಆಟದಲ್ಲಿದ್ದ ಮಕ್ಕಳ ಆಸಕ್ತಿಯನ್ನು ಕೆರಳಿಸಿದ್ದಾರೆ. ಆಟದ ಆಕರ್ಷಕ ವಸ್ತುಗಳನ್ನು ತಂದು ಅವರ ಮನ ಅರಳಿಸಿದ್ದಾರೆ.

" ಗಿಲ್ ಗಿಲ್ ಗಿಲ್ ಗಿಲ್
ಗಿಲಗಚ್ಚಿ
ಕೊಡುವೆನು ಬಾರೆ
ಪಾಪಚ್ಚಿ "

ಎಂದು ಆಡುವ ಪಾಪಚ್ಚಿಯನ್ನು ಕರೆದು ಗಿಲಗಚ್ಚಿಯನ್ನು ಅವರ ಕೈಯಲ್ಲಿ ಕೊಟ್ಟು ಆಡಿಸಿದ್ದಾರೆ. ಆಡಿ, ಹಾಡಿ ನಲಿಯುವ ಪಾಪಚ್ಚಿಗೆ ನೋಡು, ಈ ಗಿಲಗಚ್ಚಿ

"ತಾಳದ ಗರಿಯಲಿ
ಹರಳು ಹವಳಗಳ
ಹೆಣೆದಿಹುದು
ತಳೆದಿಹುದು"

ಎಂದು ಅದರ ರಚನೆಯನ್ನು ಮುಗ್ಧ ಮಗುವಿನ ಮುಂದೆ ಬಣ್ಣಿಸುತ್ತಾರೆ. ಈ ಗಿಲಗಚ್ಚಿ ತಾಳದ ಗರಿಯಲ್ಲಿ ಸಿದ್ಧವಾಗಿದೆ. ಇದು ಚೆಂದ ಕಾಣಲೆಂದು 'ಹರಳು' 'ಹವಳ' ಪೋಣಿಸಲಾಗಿದೆ, ಬಣ್ಣದ ಬೇಗಡಿ ಹಚ್ಚಲಾಗಿದೆ. ಇಂಥ

ಆಕರ್ಷಕವಾದ ಆಟದ ವಸ್ತು ಬೇಡದ ಮಗು ಎಲ್ಲಿಯಾದರೂ ಇದ್ದೀತೆ?

ಇನ್ನು 'ನವಿಲುಗರಿ' ಯಾವ ಮಗು ನೋಡಿಲ್ಲ. ಅದಕ್ಕಿದ್ದ ಬಣ್ಣ ಹೊಳೆಯುವ ಕಣ್ಣು ನಡುವಿದ್ದ ದೇಟು ನೋಡಿ ತಮ್ಮ ಪುಸ್ತಕದ ಹೊಟ್ಟೆಯೊಳಗಿಟ್ಟು ಹಲವು ಬಾರಿ ಅದರ ಸೌಂದರ್ಯವನ್ನು ಸವಿಯುತ್ತಾರೆ. ಕಣ್ಣಿಗೆ ಒತ್ತಿಕೊಂಡು ಅದರ ಸೊಂಪನ್ನು ಅನುಭವಿಸಿ ಆನಂದಿಸುತ್ತಾರೆ. ಇಂಥ ಸೊಗಸಾದ 'ಬಣ್ಣದ ಗರಿ' ಇಲ್ಲಿದೆ.

"ಬಣ್ಣದ ಗರಿಯಿದು
ಮಣ್ಣೊಳು ದೊರೆಯಿತು
ಅಣ್ಣಗೆ ಆಟದಿ ನೋಡಮ್ಮ
ಚಿಣ್ಣರ ಚೆಣ್ಣರ
ಕಣ್ಣನು ತಣಿಸುವ
ಬಣ್ಣಗಳೆಂತಿವೆ ನೋಡಮ್ಮ"

ಎಂದು ಲಯಬದ್ಧವಾಗಿ ಹಾಡುತ್ತ ಮುದ್ದು ಮಗು ಬಣ್ಣದ ಗರಿ ಹಿಡಿದು ತಾಯಿಯ ಹತ್ತಿರ ಬರುವ ದೃಶ್ಯ ನೋಡಬೇಕು. ಓಹೋ ! ಎಂಥ ಸುಂದರ ಸೊಬಗಿನ ನೋಟವದು. ಮಗು ಮುಂದುವರಿದು ಇನ್ನೂ ರಾಗ ಎಳೆದು

"ಚೆಲುವಿನ ಚವರಿ
ಒಲವಿನ ಈ ಗರಿ
ನಲವಿನ ಚಿಲುಮೆಯು ಅಲ್ಲೇನಮ್ಮ

ಎಂದು ಆನಂದಪುಳಕಿತನಾಗಿ ಪ್ರಶ್ನಿಸುತ್ತದೆ.

"ನಡುವಿದೆ ಬೊಟ್ಟು
ಕೊನೆಗಿದೆ ಜುಟ್ಟು
ಸುತ್ತಲು ಝುಲ್ಲರಿ ಹೇಗಿದೆಯಮ್ಮ"

ಎಂದು ಆ ಮುಗ್ಧ ಬಾಲಕ ದೇವರ ಸೃಷ್ಟಿಯನ್ನು ಸ್ಮರಿಸಿಕೊಳ್ಳುತ್ತದೆ. ಆ ದೇವ ದೇವನ ಅಗಾಧವಾದ ಲೀಲೆಯನ್ನು ಮೆಲಕು ಹಾಕುತ್ತದೆ. ಇಂಥ ಅನೇಕ ಬಾಲ ಲೀಲೆಗಳನ್ನು ಮೆರೆದು ತೋರಿದ ಶ್ರೀಕೃಷ್ಣಪರಮಾತ್ಮನ ಹೆಸರನ್ನು ನೆನಪಿಗೆ ತಂದುಕೊಂಡು

"ತಲೆಗಿದು ಕಟ್ಟು
ಕೊಳಲನು ಕೊಟ್ಟು
ನಾನೂ ಕೃಷ್ಣನೇ ಆಗುವೆನಮ್ಮ"

ಎಂದು ಹೇಳುವ ಮಾತು ಎಷ್ಟು ಮಾರ್ಮಿಕವಾಗಿದೆ. ಮಗುವಿನ ಆಟ, ದೇವನ ಮಾಟವನ್ನು ಕುರಿತು ಇಲ್ಲಿ ಎಷ್ಟು ಬಣ್ಣಿಸಿದರೂ ಕಡಿಮೆಯೇ ಸರಿ. ಹುಟ್ಟಾ ಶರಣಕವಿಯಾದ ಪುರಾಣಿಕರು ಮಗುವಿನ ಬಾಳು ಬಂಗಾರವಾಗಲಿ ಎಂದು ಹಲವು ವಸ್ತುಗಳನ್ನು ಹಲವು ವಿಷಯಗಳನ್ನು ಚಿಕ್ಕಮಕ್ಕಳ ಮುಂದಿರಿಸಿ ಯಾವುದು ಬೇಕೋ ಆರಿಸಿಕೋ ಕೊನೆಗೆ

"ಅರಿವಿನ ಬಾಳು
ಮರವೆಯ ಗೋಳು
ಯಾವುದು ಬೇಕೊ ಆರಿಸಿಕೊ"

ಎಂದಿದ್ದಾರೆ. ಮಗುವಿನ ಮೈದಡವಿ ಅರಿತರೇ ಜ್ಞಾನಿಯಾಗುವಿ. ಮರೆತರೆ ಗೋಳಕ್ಕೀಡಾಗುವಿ. ಯಾವುದು ಬೇಕು, ಏನಾಗುವಿ ಎಂದು ಕವಿ ಮಕ್ಕಳಿಗೆ ಹಾಕಿದ ಸವಾಲು ಎಷ್ಟೊಂದು ಸಮರ್ಪಕವಾಗಿದೆ. ಆಕರ್ಷಕ ವಾಗಿದೆ. ಹೀಗೆ ಅನೇಕ ಭಾವಕುಸುಮಗಳನ್ನು, ಸುಂದರ ಕಲ್ಪನೆಗಳನ್ನು ಮಕ್ಕಳ ಮುಂದಿರಿಸಿ ಅವರ ಕಲ್ಪನಾ ಶಕ್ತಿಯನ್ನು ಕುದುರಿಸಿದ್ದಾರೆ.

ಮಕ್ಕಳಿಗೆ ಆಟವೆಂದರೆ ಪಂಚಪ್ರಾಣ. ಮಗು ತಾನೂ ಆಡಬೇಕು. ತನ್ನ ತಂಗಿ, ತಮ್ಮನನ್ನೂ ಆಡಿಸಬೇಕು. ಹಾಡಿಸಿ ಸಂತೈಸಬೇಕು. ಇದು ಮಗುವಿನ ಆಟವೂ ಹೌದು. ಕೆಲಸವೂ ಹೌದು. ಮಗು ಮಗುವನ್ನು ಸುಲಭವಾಗಿ ಆಡಿಸುವಷ್ಟು ಮತ್ತಾರೂ ಆಡಿಸಲಾರರು. ಈ ಕೆಲಸ ಮಗುವಿಗೆ ಸಹಜವಾಗಿ, ಸುಲಭವಾಗಿ ಕೈವಶವಾಗಿದೆ. ಇಲ್ಲಿ ಒಬ್ಬ ಬಾಲಕ ತನ್ನ ಚಿಕ್ಕ ತಮ್ಮನನ್ನು ಬೆನ್ನಿಗೆ ಹಾಕಿಕೊಂಡು "ಕುರಿ ಮರಿ ಬೇಕೆ ಕುರಿ ಮರಿ" ಎಂದು ಮಗುವನ್ನು ಆಡಿಸುವ ಕವನ ಕಮನೀಯವಾಗಿದೆ.

"ಆಡುವ ಹಾಡುವ ಕುರೀಮರಿ
ಕಾಡುವ ಬೇಡುವ ಕುರೀಮರಿ
ತೋಳನ ಅಂಜಿಕೆ ಕುರುಬನ ಹಂಗು
ಎರಡೂ ಇಲ್ಲದ ಕುರೀಮರಿ
ಕುರಿಮರಿ ಬೇಕೆ ಕುರಿಮರಿ"

ಈ ಕುರಿಮರಿ ಸಾಮಾನ್ಯವಲ್ಲ. ಆಟ ಆಡಿಸುವ ಅಣ್ಣನ ತಮ್ಮ ಅಂತೆಯೇ ಅವನಿಗೆ ಇಲ್ಲಿ ಯಾರ ಅಂಜಿಕೆಯೂ ಇಲ್ಲ. ಹಂಗೂ ಇಲ್ಲ. ಇಲ್ಲಿ ಈ ಕವನ ಸಹಜ ಸುಂದರವಾಗಿ ಮೂಡಿ ಬಂದಿದೆ. ಇಂತು ಬೀದಿ

ಯಲ್ಲಿ ಆಡುವ ಮಕ್ಕಳ ಬಳಿಗೆ ಬಂದ ಮಿಠಾಯಿ ಬಂಡಿ ಅವರ ಗಮನ ಸೆಳೆಯುತ್ತದೆ. ನಾನಾ ಪದಾರ್ಥಗಳಿಂದ ಬರುವ ಗಮಗಮ ವಾಸನೆ ಮಕ್ಕಳ ಮೂಗಿನ ಸೊಳ್ಳೆಗಳನ್ನು ಅರಳಿಸುತ್ತದೆ. ನಾಲಿಗೆಯ ಮೇಲೆ ಜುಳುಜುಳು ನೀರು ಹರಿಯುತ್ತದೆ. 'ಮಿಠಾಯಿ ಮಕ್ಕಳೆ' ಎಂಬ ಕೂಗು ಕೇಳಿದೊಡನೆ ಕೊಂಡು ತಿನ್ನುವ ಬಯಕೆ ಹೆಚ್ಚುತ್ತದೆ. ಈ ಮಿಠಾಯಿಗಾರ ತಂದ ಪದಾರ್ಥಗಳು ಹೀಗಿವೆ :

ಗೋಕಾಕದ ಕರದಂಟು
ರಾಜಧಾನಿಯ ಪೆಪ್ಪರಮೆಂಟು
ಬೆಳಗಾವಿಯ ಕುಂದ
ಹೈದರಾಬಾದದ ಕಲಕುಂದ
ಬಾಯೊಳು ನೀರನು ಬರಿಸುವವು
ಕೈಯೊಳು ಕಾಸನು ತರಿಸುವವು"

ಇನ್ನೂ ಮುಂದುವರಿದು ಹೀಗೆ ಹಾಡುತ್ತಾರೆ :

"ಧಾರವಾಡ ಪೇಡೆ
ಬೆಂಗಳೂರಿನ ಪೇಣೆ
ಉತ್ತರ ದೇಶದ ಭರ್ಜಿ
ಚೌಪಾಟಿಯ ಕುಲ್ಪಿ
ಮಿಠಾಯಿ ಮಕ್ಕಳೆ
ಕೊಳ್ಳಿರಿ ಈಗಳೆ"

ಹೀಗೆ ನಾಡಿನ ನಾನಾ ಪ್ರದೇಶದಲ್ಲಿ ಪ್ರಸಿದ್ಧವಾಗಿರುವ ಪದಾರ್ಥಗಳನ್ನು ಸಂಗ್ರಹಿಸಿ ಮಕ್ಕಳಿಗೆ ಕೊಡುವಲ್ಲಿ ಒಂದು ತರದ ಚಾಣಾಕ್ಷತನವಿದೆ. ಬೇರೆ ಬೇರೆ ಪ್ರದೇಶದ ರುಚಿ, ಶುಚಿಗಳೊಡನೆ ಅಲ್ಲಿ ತಯಾರಿಸುವ ಪದಾರ್ಥಗಳ ಪರಿಚಯವೂ ಆಗುವುದು. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಂಚರಿಸುವಾಗ ಮಕ್ಕಳು ಅಲ್ಲಿಯ ಪದಾರ್ಥಗಳನ್ನು ನೆನಪಿಸಿಕೊಳ್ಳಬಹುದು. ಈ ಅಂಗಡಿಕಾರ ಸಾಮಾನ್ಯ ಅಂಗಡಿಕಾರನಲ್ಲ. ಎಲ್ಲವನ್ನು, ಎಲ್ಲದನ್ನು ಸಂಗ್ರಹಿಸಿ ಸುಲಭ ಬೆಲೆಗೆ ಕೊಡುವ ಉದಾರಿ, ದಯಾಳು, ಕರುಣಿ. ಮಕ್ಕಳು ಇಂಥ ರುಚಿಯಾದ, ಶುಚಿಯಾದ ಪದಾರ್ಥಗಳನ್ನು ಕೊಂಡು ಕೊಂಡು ಒಬ್ಬರಿಗೊಬ್ಬರು ಹಂಚಿಕೊಂಡು ತಿನ್ನುವುದು ಮಕ್ಕಳಲ್ಲಿ ಬೆಳೆದು ಬಂದ ಸಹಜ ಪ್ರವೃತ್ತಿ. ಅವರಿಗೆ ಕೂಡಿ ಆಡುವುದು, ಕೂಡಿ ತಿನ್ನುವುದು ತುಂಬ ಇಷ್ಟ. ಅಂತೆಯೇ ಮಕ್ಕಳು ತಾಯಿಗೆ—

"ಗೆಳೆಯರ ಊಟಕೆ ಕರೆಯುವೆನಮ್ಮ
ತರತರದಡಿಗೆಯ ಮಾಡಮ್ಮ
ಒಬ್ಬರ ರುಚಿ ಇನ್ನೊಬ್ಬರಿಗಿಲ್ಲವು
ಏನು ಬೇಡಿದರೂ ನೀಡಮ್ಮ"

ಎಂದು ತನ್ನ ಗೆಳೆಯರ ಅಭಿರುಚಿಯನ್ನು ಅರಿತ ಮಗು ತಾಯಿಗೆ 'ಏನು ಬೇಡಿದರೂ ನೀಡಮ್ಮ' ಎಂದು ಹೇಳುತ್ತದೆ. ಈ ಪ್ರಪಂಚದಲ್ಲಿ ಬೇರೆ ಬೇರೆ ಜನರ ಭಿನ್ನ ಭಿನ್ನ ರುಚಿ, ಅಭಿರುಚಿಗಳಿವೆ. ಒಬ್ಬರಿಗೆ ಒಂದು ಆಗಿ ಬಂದರೆ ಇನ್ನೊಬ್ಬರಿಗೆ ಇನ್ನೊಂದು ಆಗಿ ಬರುವುದಿಲ್ಲ. ಒಬ್ಬರಿಗೆ ಒಂದು ಸೇರಿದರೆ ಇನ್ನೊಬ್ಬರಿಗೆ ಇನ್ನೊಂದು ಸೇರುವುದಿಲ್ಲ. ಅದಕ್ಕಾಗಿ ಯಾರಿಗೆ ಯಾವುದು ಇಷ್ಟವೋ ಅದನ್ನು ಮಾಡಿ ಉಣಬಡಿಸಿ ತಣಿಸು ಎಂದು ಹೇಳುವ ಮಾತು ತುಂಬ ತೂಕಬದ್ಧವಾಗಿದೆ.

ಹೀಗೆ ನಮ್ಮ ಊಟ – ಉಡಿಗೆ, ಮಾತು–ಕಥೆ ಮುಂತಾದವುಗಳಲ್ಲಿ ಅದೆಷ್ಟೋ ವೈವಿಧ್ಯತೆಗಳಿವೆ. ಇಷ್ಟೆಲ್ಲ ವೈವಿಧ್ಯತೆಗಳಿದ್ದರೂ ನಾವೆಲ್ಲ ಒಂದೇ ಎಂಬ ಭಾವನೆ ಇದೆ. ಇದೇ ನಮ್ಮ ವೈಶಿಷ್ಟ್ಯ. ಇದು ಕವಿಯ ಒಳಧ್ವನಿ.

ಇನ್ನೊಂದು ಒಳ್ಳೆಯ ಆಕರ್ಷಕವಾದ ಕವನ 'ಮಜಾ ಅಂದರೆ ಮಜಾ' ತುಂಬಾ ಕ್ರೀಡಾಭಾವನೆಯಿಂದ ಕೂಡಿಕೊಂಡಿದ್ದು, ಈ ಕವನವನ್ನು ಮಕ್ಕಳು ಓದಿ ಕಂಠಪಾಠ ಮಾಡಿ ತಮ್ಮ ಆಟದಲ್ಲಿ ಆಡಿ–ಹಾಡಿ ನಲಿಯುತ್ತಾರೆ. ತುಂಟತನ ಮಗುವಿನ ಇನ್ನೊಂದು ಹೆಸರು. ಅವನಿಗೆ ಆಡುವುದು ಹಾಡುವುದು, ಮುಂದಾಳುತನ ವಹಿಸುವುದು, ಕುಣಿಯುವುದು, ಕೇಕೇ ಹಾಕುವುದು ಎಂದರೆ ತುಂಬ ಇಷ್ಟ. ಇವೆಲ್ಲವುಗಳಿಗೆ ಬಂಧನ ಹಾಕುವುದು ಶಾಲೆ. ಎಂದು ಶಾಲೆಗೆ ಬಿಡುವೊ ಅಂದು ಇಷ್ಟೆಲ್ಲ ಮಜಾ ಅವನ ಮುಂದೆ ಬಂದು ನಿಂತು ಕೇಕೇ ಹಾಕುತ್ತವೆ. ಅಂತಹ ಮಕ್ಕಳ ಮಜಾ ನಾವೊಂದಿಷ್ಟು ಸವಿಯೋಣ :

"ತೋಟಕೆ ಊಟಕೆ
ಹೋಗೋಣ
ಉಂಡು ಹಿಗ್ಗಿ ನಲಿ
ಕೂಗೋಣ
ಟೊಂಗೆಯ ಹಿಡಿದು

ತೂಗೋಣ
ಬಾಲ ಹನುಮರು
ಆಗೋಣ"

ಹೀಗೆ ಸ್ವಚ್ಛಂದವಾಗಿ ಗಿಡದಿಂದ ಗಿಡಕ್ಕೆ, ಟೊಂಗೆಯಿಂದ ಟೊಂಗೆಗೆ ಏರಿ, ಹಾರಿ ತಾವೂ ನಕ್ಕು ಇತರರಿಗೂ ನಲಿಸಿ ಆ ಇಡೀ ದಿನ ಮಜಾದಲ್ಲಿಯೇ ಕಳೆದ ಕಥೆ ಈ ಕವನ ದುದ್ದಕ್ಕೂ ಬಹು ಸುಂದರವಾಗಿ ಬಂದಿದೆ. ಮಕ್ಕಳು ಮನೆಗೆ ಮಾಣಿಕ್ಯ. ನಾಳಿನ ನಾಡಿಗೆ ಆಸ್ತಿ, ಸಂಪತ್ತು ಎನಿಸಿಕೊಂಡಿದ್ದಾರೆ. ಇಲ್ಲಿ ಕವಿ "ನೀನು ನಕ್ಕು ಜಗವ ನಗಿಸು" ಎಂದು ಹಾಡಿದ್ದಾರೆ.

"ನೀನು ನಕ್ಕು ಜಗವ ನಗಿಸು
ನಕ್ಕ ಮುಖವು ಅರಳಲಿ
ಮೋರೆ ಗಂಟು ಹಾಕುವಂಥ
ಚಾಳಿ ದೂರ ತೆರಳಲಿ"

ಎಂದು ಕಿವಿ ಮಾತು ಹೇಳುತ್ತಾರೆ.

"ಸೃಷ್ಟಿಯಲ್ಲಿ ಸರ್ವವೂ
ನಗುತಲಿಹವು ಗೆಳೆಯನೆ
ಹೂವು ಹಕ್ಕಿ ಚಂದ್ರ ಚಿಕ್ಕೆ
ನಗುವವೆಲ್ಲ ಕೆಳೆಯನೆ"

ಹೀಗೆ ಅನೇಕ ಉಪಮಾನ, ಉಪಮೆಗಳನ್ನು ಕೊಟ್ಟು ಮಕ್ಕಳಿಗೆ ನಗುನಗುತ್ತ ಬೆಳೆಯಲು, ಬಾಳಲು, ಬೆಳಗಲು ಹೇಳಿದ್ದಾರೆ.

ಮಕ್ಕಳು ಸ್ವಚ್ಛಂದ ವಿಹಾರಿಗಳು. ಅವರು ತಮ್ಮ ನಿತ್ಯ ಜೀವನದಲ್ಲಿ ಹೊಸತನವನ್ನು ಕಾಣಲು ಹಂಬಲಿ ಸುತ್ತಾರೆ. ಹೊಸ ಹೊಸದನ್ನು ಮಾಡಲು ಬಯ ಸುತ್ತಾರೆ. ಹೊಸತನದಲ್ಲಿ ಅವರಿಗೆ ಅಪಾರ ವಿಶ್ವಾಸ. ತಾನು ಏನಾದರೂ ಒಂದು ಹೊಸದನ್ನು ಕಲಿಯಬೇಕು. ಹೊಸದನ್ನು ಮಾಡಬೇಕು. ಹೊಸದನ್ನು ಹೇಳಬೇಕು. ಈ ಲವಲವಿಕೆ ಅವರಲ್ಲಿ ನಿತ್ಯನೂತನವಾಗಿರುತ್ತದೆ. ಅಂತೆಯೇ ಈಗ ಅವರು ತಮ್ಮ ಆಟಕ್ಕೆ ಮುಗಿಲಿನಲ್ಲಿ ಓಡುವ ಮೋಡವನ್ನು ಕರೆಯುತ್ತಾರೆ. "ಓ ಮೋಡ ಓಡಿಬಾರ" ಎಂದು.

"ಓ ಮೋಡ ಓಡಿ ಬಾರ
ನಮ್ಮೂರ ನೋಡು ಬಾರ
ಓ ಮೋಡ ಓಡಿ ಬಾರ
ನಮ್ಮೊಡನೆ ಆಡು ಬಾರ
ನಮ್ಮೊಡನೆ ಹಾಡು ಬಾರ"

ಆಹ! ಎಂಥ ಸುಂದರ ಕಲ್ಪನೆಯಿದು! ಆಕಾಶದಲ್ಲಿ ದುಡುದುಡು ಓಡುವ ಮೋಡವನ್ನು ನೋಡಿ 'ನಮ್ಮೊಡನೆ ಆಡು ಬಾರ, ನಮ್ಮೊಡನೆ ಹಾಡು ಬಾರ' ಎಲ್ಲಕ್ಕಿಂತ ಮಿಗಿಲಾಗಿ 'ನಮ್ಮೂರ ನೋಡು ಬಾರ' ಎಂದು ಬಿನ್ನವಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ನಮ್ಮೂರ ನೋಡಿ ನೀನು ಎಲ್ಲೆಲ್ಲಿ ವಿಹರಿಸುತ್ತಿ ಅಲ್ಲಲ್ಲಿ ನಮ್ಮನ್ನು ಕರೆದೊಯ್ಯಿ ಎಂದು ಕೇಳುವ ಮಾತು ಹೀಗಿದೆ :

"ನೀನಾಗು ನಮ್ಮ ತೇರು
ನವಖಂಡಗಳನು ತೋರು
ನಮ್ಮೂರ ಮತ್ತೆ ಸೇರು"

ಎಂಥ ಅಗಾಧವಾದ ಬಯಕೆ ಇದು!

ನೀನಾಗು ನಮ್ಮ ನೌಕೆ
ಕರೆದೊಯ್ಯಿ ಕಡಲ ಕುಲಕೆ
ಮರಳಿ ಬಿಡು ನಮ್ಮ ಸ್ಥಲಕೆ"

ಇಲ್ಲಿ ಕವಿಯ ಕಲ್ಪನೆ ಮಿಂಚಿನಂತೆ ಹೊಳೆದಿದೆ.

"ನೀನಾಗು ನಮ್ಮ ಕ್ಷಿಪಣಿ
ಗ್ರಹದಿಂದ ಗ್ರಹಕೆ ಪಯಣ
ಅದು ಮುಗಿಯೇ ನಮ್ಮ ತಾಣ
ಓ ಮೋಡ ಓಡಿ ಬಾರ
ನಮ್ಮೂರ ನೋಡು ಬಾರ"

ಮಕ್ಕಳು ಎತ್ತಿನ ಬಂಡಿಯಲ್ಲಿ, ಬಸ್ಸಿನಲ್ಲಿ, ರೈಲಿನಲ್ಲಿ ಕುಳಿತು ಪ್ರಯಾಣಮಾಡುತ್ತಿರುತ್ತಾರೆ. ಅವರಿಗೆ ಒಂದು ಊರಿಂದ ಇನ್ನೊಂದು ಊರಿಗೆ ಹೋಗಿ ಬರುವು ದೆಂದರೆ ಎಲ್ಲಿಲ್ಲದ ಹಿಗ್ಗು. ಅದರಲ್ಲಿಯೂ ಅವರಿಗೆ ಕುತೂಹಲಕಾರಿಯಾದ ಪಯಣವೆಂದರೆ ವಿಮಾನ, ಹಡಗು, ಭರದಿಂದ ಓಡುವ ಕ್ಷಿಪಣಿ. ಈ ವಾಹನ ಗಳನ್ನು ನೋಡುವುದೆಂದರೆ ಇನ್ನೂ ಹಿಗ್ಗು. ಅಂತೆಯೇ ಓಡುವ ಮೋಡಕ್ಕೆ ತಡೆದು ನಮ್ಮ ತೇರಾಗಿ ನವಖಂಡ ಗಳನ್ನು ತೋರು. ನಮ್ಮ ನೌಕೆಯಾಗಿ ಕಡಲ ಕುಲವನ್ನು ತೋರಿಸು. ಅತ್ಯಂತ ವೇಗದಿಂದ ಚಲಿಸುವ ಕ್ಷಿಪಣಿ ಯಾಗಿ ಸೂರ್ಯ, ಚಂದ್ರರ ಬಳಿಗೆ ಕರೆದೊಯ್ದು ಮತ್ತೆ ನಮ್ಮ ಸ್ಥಳಕ್ಕೆ ತಂದುಬಿಡು ಎನ್ನುವ ಮಾತು ಬಹು ಸುಂದರವಾಗಿದೆ. ಕಾವ್ಯವೂ ಅಷ್ಟೇ ಬಂಧುರ ವಾಗಿದೆ.

ಸಹೃದಯ

ಇನ್ನೊಂದು ನಿಸರ್ಗರಮ್ಯವಾದ ಕವಿತೆ– “ಕಾರು ಮಳೆಯೆ ಕಪ್ಪತ್ತು ಮಳೆಯೆ ಬೇಗನೆ ಬಾರೋ ಸುರಿ ಮಳೆಯೆ” ಎಂದು ಮಕ್ಕಳು ಗುಂಪು ಕಟ್ಟಿಕೊಂಡು ಸಿಂಬಿಯಾಕಾರ ತಿರುಗುತ್ತ ಮಳೆರಾಯನಿಗೆ ಮೊರೆಯಿಡುತ್ತಾರೆ. ನೀನು ಗಕ್ಕನೆ ಬಂದು ಜಗತ್ತನ್ನು ತಣಿಸು.

“ಯಾರ ಮಾತನೂ ಕೇಳದ ನೀನು
ಮಕ್ಕಳ ಮಾತನು ಕೇಳುತಿರು
ಕರೆದು ಕೊಳ್ಳುವೆವು ಆಟಕೆ–ನಿನ್ನನು
ನಮ್ಮ ಮಾತನು ಕೇಳುತಿರು”

ಎಂದು ಆಗ್ರಹಪಡಿಸುತ್ತಾರೆ. ನಮ್ಮ ಮಾತನ್ನು ಕೇಳಿದರೆ ನಿನ್ನನ್ನು ನಮ್ಮ ಆಟವಲ್ಲಿ ಪಾಲುಗಾರನನ್ನಾಗಿ ಮಾಡಿಕೊಳ್ಳುತ್ತೇವೆ ಎಂದು ಹೇಳುವ ಬಾಲಸಹಜವಾದ ನುಡಿಗಳು ಬೆಳಕಿನ ಕಿಡಿಗಳಾಗಿವೆ; ಬಳ್ಳಿಯ ಕುಡಿಗಳಾಗಿವೆ.

ಮಳೆ ಬಂದು ಭೂಮಿ ಹದವಾಗಿ ರೈತ ಬಿತ್ತಿ ಬಂದ ಬೆಳೆ ನೋಡಬೇಕು :

“ರವದಿಗೆ ರವದಿಗೆ ಸಕ್ಕರೆ ಪೆಂಟೆ
ಔತಣ ನೀಡುತಿದೆ
ಸಿಗರನು ಸುಲಿದರೆ ಸವಿ ಕಬ್ಬೆನ್ನುತ
ದಂಟದು ಹಾಡುತಿದೆ”

ಅತ್ತ ಗಿರಿ ಇತ್ತ ದರಿ
ನಡುವೆ ಕಾಲುದಾರಿಯು
ಅತ್ತ ಮಬ್ಬು ಇತ್ತ ಮಬ್ಬು
ನಡುವೆ ದೀಪಧಾರಿಯು
ಅತ್ತ ಮುಳ್ಳು ಇತ್ತ ಮುಳ್ಳು
ನಡುವೆ ಚೆಂಗುಲಾಬಿಯು
ಅತ್ತ ಹುಟ್ಟು ಇತ್ತ ಸಾವು
ನಡುವೆ ಬಾಳನಾವೆಯು

—ಕಲ್ಲೋಲವಾಲೆ, ಪು. 47

‘ಬಾಲರು ನಾವು’ ಎನ್ನುವ ಕವನದಲ್ಲಿ

“ನಾಡಿನ ನರದಲಿ ನೆತ್ತರ ನಾವು
ನುಡಿಯ ಬಳ್ಳಿಯಲಿ ಹೂವೇ ನಾವು
ನಾಳಿನ ಕನಸಿನ ಅರ್ಥವು ನಾವು
ನಾವು ಬಾಲರು”

‘ಕನ್ನಡಿಗರಾಗಿ ಬಾಳೋಣ ಕನ್ನಡ ತೇಜದಿ ಹೊಳೆಯೋಣ ಕನ್ನಡತೇರನು ಎಳೆಯೋಣ’ ಎಂದು ಕನ್ನಡ ಚಿಣ್ಣರ ಕಣ್ಣುತೆರೆಸಿದ್ದಾರೆ. ನಿದ್ದೆ ತೊರೆದು ‘ಏಳು ಕಂದ’, ‘ರವಿ ಬಂದ’ ಎಂದು ಮೈದಡವಿ ಎಚ್ಚರಿಸುತ್ತಾರೆ, ಎಚ್ಚರಿಸಿದ್ದಾರೆ.

ಹೀಗೆ ಸಿದ್ಧಯ್ಯ ಪುರಾಣಿಕರು ‘ಗಿಲ್ ಗಿಲ್ ಗಿಲಗಚ್ಚಿ’ಯಲ್ಲಿ ಮಕ್ಕಳ ಆಟ, ಪಾಠ, ಆಹಾರ, ವಿಹಾರಗಳನ್ನು ಕುರಿತು ಬಹು ರಮ್ಯವಾಗಿ, ಅತ್ಯಂತ ಮೋಹಕ ಶೈಲಿಯಲ್ಲಿ ಕವನಗಳನ್ನು ರಚಿಸಿದ್ದಾರೆ. ಈ ಎಲ್ಲ ಕವಿತೆಗಳಲ್ಲಿ ನೀತಿ ಜ್ಯೋತಿಯಂತೆ ಬೆಳ್ಳನೇ ಬೆಳಗುತ್ತದೆ. ಕ್ರಿಯೆ ಸೃಜನಾತ್ಮಕ ಸಂಚರಿಸಿ ಮಕ್ಕಳ ಅವಧಾನವನ್ನು ಸೆರೆಹಿಡಿಯುತ್ತದೆ. ಇಂಥ ಹಲವಾರು ಕೃತಿಗಳು ಹೊರಬಂದು ಮಕ್ಕಳ ಸಾಹಿತ್ಯಲೋಕ ಶ್ರೀಮಂತವಾಗಲಿ ಎಂದು ಹೃದಯ ತುಂಬಿ ಹಾರೈಸಲಾಗಿದೆ. □

# ವಚನೋದ್ಯಾನವನ್ನು ಕುರಿತು

● ಡಾ. ಎಂ. ಚಿದಾನಂದಮೂರ್ತಿ

**ಡಾ.** ಸಿದ್ಧಯ್ಯ ಪುರಾಣಿಕರ 'ವಚನೋದ್ಯಾನ'ವನ್ನು ಓದುವವರೆಗೆ ಆಧುನಿಕ ಕಾಲದಲ್ಲಿ ವಚನಗಳ ರಚನೆ ಸಾಧುವೂ ಅಲ್ಲ, ಸಾಧ್ಯವೂ ಇಲ್ಲ ಎಂಬ ಒಂದು ಕುರುಡು ನಂಬಿಕೆಯಲ್ಲೇ ಇದ್ದೆ. ಈ ಶತಮಾನದಲ್ಲಿ ಹಿಂದೆ ಬಂದಿರುವ ವಚನ ಸಂಕಲನಗಳಲ್ಲಿ ಬಹು ಪಾಲು ಹಿಂದಿನ ವಚನಕಾರರ ಅನುಕರಣೆಗಳು ; ಹೊಸ ಕಾಲದ ಆಲೋಚನೆಗಳನ್ನು ಹೇಳಲು ವಚನ ಮಾಧ್ಯಮವನ್ನು ಬಳಸಿರುವಲ್ಲಿಯೂ ಅಂತಹ ಸ್ವಂತಿಕೆ ಕಾಣದು. ತನ್ನ ಎಲ್ಲ ಸಾಧ್ಯತೆಗಳನ್ನು ಕಂಡುಕೊಂಡ ಒಂದು ಪ್ರಕಾರವೊಂದನ್ನು ಬಳಸುವ ಬಹುಜನ ಲೇಖಕರು ಹೀಗೆ ನಿರಾಸೆ ಹುಟ್ಟಿಸುವ ಬರಹ ತಮ್ಮಿಂದ ಬರಬಹುದೆಂದು ನಿರೀಕ್ಷಿಸಿಯೂ ಇರಲಾರರು. ಆದರೆ, ಪುರಾಣಿಕರ 'ವಚನೋದ್ಯಾನ' ಆ ದೃಷ್ಟಿಯಿಂದ ಒಂದು ಅಪೂರ್ವ ಗ್ರಂಥ. ಇಲ್ಲಿನ ವಚನಗಳಿಗೆ ಸ್ಫೂರ್ತಿ ಸೆಲೆ ಆ ಹಿಂದಿನ ವಚನಕಾರರೇ. ಭಾಷೆ, ಬಂಧ ಇಲ್ಲೆಲ್ಲ ಅವು ನಮಗೆ ವಚನಕಾರರನ್ನು ನೆನಪಿಗೆ ತರುತ್ತವೆಯಾದರೂ, ವಚನೋದ್ಯಾನದ ವಚನಗಳು ಕೇವಲ ಅನುಕರಣೆಯ ಬರಹಗಳೆಂದು ತಳ್ಳಿ ಹಾಕುವುದು ಕಷ್ಟವಾಗುತ್ತದೆ. ಆ ಹಿಂದಿನ ವಚನಕಾರರ ಧಾರ್ಮಿಕ ಶ್ರದ್ಧೆಯ ಜೊತೆಗೆ ಇಂದಿನ ಬದುಕಿನ ಅನುಭವಗಳೂ ಪರಸ್ಪರ ಅವಿರೋಧಿಯಾಗಿ ಬೆರೆತುಕೊಂಡಿವೆ. 'ಸ್ವತಂತ್ರಧೀರ ಸಿದ್ಧೇಶ್ವರನ' ಅನುಯಾಯಿಗಳಾದ ಲೇಖಕರ ಭಾವನೆಗಳನ್ನು ಕೃತಕ, ಮೋಸ ಎಂದು ಸುಲಭವಾಗಿ ಹಣೆ ಚೀಟಿ ಅಂಟಿಸಿದರೆ ಗುಣಕ್ಕೆ ಮೋಸ ಮಾಡಿದಂತೆ. ಏಕೆಂದರೆ ಆ ಭಾವನೆಗಳು ಬರಹಕ್ಕಾಗಿ ಕಷ್ಟಪಟ್ಟು ಮಾಡಿಸಿಕೊಂಡುದಲ್ಲ ; ಸಹಜವಾಗಿ ಅವರ ಮನದಲ್ಲಿ ಮೂಡಿ ನಿಂತು ಅವರೊಂದಿಗೆ ಬೆಳೆದು ಅರಳಿ ನಿಂತಂಥವು. ಲೇಖಕ ಅಪ್ರಾಮಾಣಿಕನಾದರೆ ಎಲ್ಲೋ ಒಂದು ಕಡೆ ಅವನು ತನ್ನನ್ನು ತಾನು ಬಯಲು ಮಾಡಿಕೊಳ್ಳುತ್ತಾನೆ. 'ವಚನೋದ್ಯಾನ'ವನ್ನು ಓದಿದವರಿಗೆ ಇಲ್ಲಿಯ ತೀವ್ರ, ಪ್ರಾಮಾಣಿಕ ಅನ್ನಿಸಿಕೆಗಳು ಹೃದಯವನ್ನು ಸ್ಪರ್ಶಿಸುತ್ತವೆ ; ಓದುಗರ ಹೃದಯದ ಸ್ಪಂದನವನ್ನು ಮೀಟುತ್ತವೆ.

'ಸ್ವತಂತ್ರಧೀರ ಸಿದ್ಧೇಶ್ವರ' ಅವರ ವಚನಗಳ ಅಂಕಿತ. ಸಿದ್ಧೇಶ್ವರನನ್ನು ದೈವವೆಂದಾದರೂ ಭಾವಿಸಬಹುದು ; ಕೃತಿಕಾರನ ಒಳಗಿನ ಸಾವರಿಯದ ಸತ್ವವೆನ್ನಬಹುದು ; ಮಾನವೀಯತೆ ಎನ್ನಬಹುದು ; ಅನಾದಿ ಕಾಲದಿಂದ ಮನುಷ್ಯ ಸಾಧಿಸಲು ಯತ್ನಿಸಿ ಮತ್ತೆ ಮತ್ತೆ ಸೋಲುತ್ತಿರುವ ಆದರ್ಶವೆನ್ನಬಹುದು. ಅವನನ್ನು ಸಂಬೋಧಿಸಿ ಮಾತನಾಡಿಸುವುದು ಲೇಖಕರಿಗೆ ಬರಹದ ಉದ್ದೇಶದಿಂದಲ್ಲ, ತಮ್ಮನ್ನು ತಾವು ಅರ್ಥಮಾಡಿಕೊಳ್ಳಲಿಕ್ಕೆ. ಎಲ್ಲ ವಚನಗಳಲ್ಲೂ ಲೇಖಕ ತನ್ನನ್ನು ತಾನು ಹುಡುಕಿಕೊಳ್ಳುತ್ತಿದ್ದಾನೆ ಎನ್ನಿಸುತ್ತದೆ. ತನ್ನನ್ನು ತಾನು ಗುರುತಿಸಿಕೊಳ್ಳುವ ಈ ಹಂಬಲ ಮಾತಾಗಿ ಮೂಡಿ ಬಂದು ವಚನಗಳಾಗಿವೆ.

ಇಲ್ಲಿಯ ಬರಹಗಳ ನವುರು, ಮೋಹಕತೆ ಅವರ್ಣನೀಯ. ಮಾತನ್ನು ಎಳೆ ಎಳೆಯಾಗಿ ತಿದ್ದಿ ತೀಡಿ ಬಳಸಿರುವ ರೀತಿ, ಸಮಾನ ಉಕ್ತಿಗಳನ್ನು ಜೋಡಿಸಿರುವ ಬಗೆ, ಆಲೋಚನೆಯನ್ನು ಬೆಳೆಸಿರುವ ಕೌಶಲ ಎಲ್ಲವೂ ಇದನ್ನೊಂದು ಅತ್ಯಾಕರ್ಷಕ ಸಂಗ್ರಹವಾಗಿ ಮಾಡಿವೆ. ನಾನು ಎಷ್ಟೋ ಬಾರಿ ಬೇಸರವಾದಾಗ,

ಬಸ್ಸಿನಲ್ಲಿ ಕಾಲಯಾಪನೆಗೆ, ಮನೆಯಲ್ಲಿ ಸಮಯವಿದ್ದಾಗ ಒಂದೊಂದೇ ವಚನವನ್ನು ಓದಿ, ಪುಲಕಿತನಾಗಿ, ಅಲ್ಲಿಗೆ ಓದನ್ನು ನಿಲ್ಲಿಸಿ, ಪುಸ್ತಕವನ್ನು ಮುಚ್ಚಿ, ಆ ವಚನ ಕೊಟ್ಟ ಹಿತಾನುಭವದ ಗುಂಗನ್ನು ಉಳಿಸಿಕೊಂಡಿರುವ ಸಂದರ್ಭಗಳು ಎಷ್ಟೋ !

ವೈದುಷ್ಯ ವಣಿಕ,
............
ಕಾವ್ಯಮೀಮಾಂಸೆಯಲ್ಲ
ಕಾವ್ಯವಾಗಿ ಬಾ ಇಲ್ಲಿ ;
............
ಪೂಜಾರಿಯಾಗಿ ಅಲ್ಲ
ಭಕ್ತನಾಗಿ ಬಾ ಇಲ್ಲಿ !

ಒಣ ಪಾಂಡಿತ್ಯದ ವ್ಯಾಪಾರಿಯನ್ನು ಕುರಿತು ಆಡುವ ಮಾತು–ಅವನ ಪಾಂಡಿತ್ಯ ಏನಾಗಿ, ಯಾವ ರೂಪದಲ್ಲಿ ಓದುಗರಿಗೆ ಸೇರಬೇಕು ಎಂಬ ಕಲ್ಪಕತೆಯನ್ನು ಗಮನಿಸಿ. ಹೃದಯ, ತರ್ಕ; ಅನುಭವ, ಆಲೋಚನೆ ಇಂತಹ ಮೇಲ್ನೋಟದ ವೈರುಧ್ಯಗಳನ್ನು ಚಿತ್ರಿಸುವ, ಸಮಕಾಲೀನ ಭಾರತವನ್ನು ಸೂಕ್ಷ್ಮವಾಗಿ ವಿಡಂಬಿಸುವ, ತಮ್ಮನ್ನು ತಾವು ಪರೀಕ್ಷೆಗೆ ಒಳಗು ಮಾಡಿಕೊಳ್ಳುವ, ಕನ್ನಡ ನಾಡಿನ, ಭಾರತದ ಭವಿಷ್ಯದ ಬಗ್ಗೆ ಕಳಕಳಿ ವ್ಯಕ್ತಪಡಿಸುವ ಎಲ್ಲ ಕಡೆಗಳಲ್ಲೂ ಒಂದೇ ಕವಿಹೃದಯ ಕೆಲಸ ಮಾಡಿದೆ. ವಿನೂತನ ಉಪಮೆಗಳನ್ನು ಚಿಮ್ಮಿಸುತ್ತ, ಉದಾತ್ತ ಧ್ಯೇಯಗಳನ್ನು ಓದುಗರ ಮುಂದೆ ಹಿಡಿಯುತ್ತ ಸಿದ್ಧಯ್ಯ ಪುರಾಣಿಕರು ತಮ್ಮ ವಾಚಕರನ್ನು ಉದಾತ್ತ ನೆಲೆಗೆ ಏರಿಸುತ್ತಾರೆ. ಎಲ್ಲೂ ವೈಯಕ್ತಿಕ ಆಕ್ರೋಶವಿಲ್ಲ; ಹತಾಶೆಯಿಲ್ಲ; ದ್ವೇಷ ಅಸೂಯೆಗಳಿಲ್ಲ. ಎಲ್ಲವನ್ನೂ, ಎಲ್ಲರನ್ನೂ ತಬ್ಬಿ ಸ್ವತಂತ್ರ ಸಿದ್ದೇಶ್ವರನೆಡೆಗೆ ಕೊಂಡೊಯ್ಯುವ ದೊಡ್ಡತನದ ಮನಸ್ಸೊಂದು ಈ ಎಲ್ಲ ವಚನಗಳ ಹಿನ್ನೆಲೆಯಲ್ಲಿ ಸ್ಪಂದಿಸಿದೆ. ಒಮ್ಮೊಮ್ಮೆ ಪುರಾಣಿಕರ ವಿನಯ ಒಂದು ಮಿತಿ ಮೀರಿ ಓದುಗರಿಗೆ ಸ್ವಲ್ಪ ಅಸಹನೀಯವಾಗಬಹುದು–ಇದು ರೂಕ್ಷ ಸಂಸ್ಕೃತಿಯ ನೆರಳಿನಲ್ಲಿ ಬದುಕುತ್ತಿರುವ ಹಲವರಿಗೆ ಹೀಗೆ ಅನ್ನಿಸಬಹುದೇ ಹೊರತು ಪುರಾಣಿಕರ ಪರಿಚಯ ಇರುವವರಿಗೆ ಈ ವಿನಯ ಸೌಜನ್ಯ ಸಂಸ್ಕೃತಿಗಳು ಅವರಿಗೆ ತೀರ ಸಹಜವೆಂಬುದು ಗೊತ್ತು.

'ವಚನೋದ್ಯಾನ' ಸಿದ್ಧಯ್ಯ ಪುರಾಣಿಕರು ಬರೆದ ಕೃತಿ ಎಂಬ ಕಾರಣಕ್ಕಾಗಿ ಮಾತ್ರವಲ್ಲದೆ, ತನ್ನ ಗುಣದಿಂದಲೂ ಕನ್ನಡದಲ್ಲಿ ಬಹು ಕಾಲ ಉಳಿಯಬಲ್ಲ ಸತ್ವಶಾಲಿ ಸಂಕಲನವಾಗಿದೆ. □

ಜಗವೆ ದೇಗುಲ ಜೀವ ದೇವನು
ಜೀವನವೆ ಆರಾಧನೆ
ಹಗಲು ದೀಪವು ರಾತ್ರಿ ಅಕ್ಷತೆ
ಗೈದುದೆಲ್ಲವು ಸಾಧನೆ
ಪ್ರೀತಿ ತುಳುಕುವ ಮನೆಯೆ ಸ್ವರ್ಗವು
ಪ್ರೀತಿಪರೆ ದೇವತೆಗಳು
ಘನತರವು ಗಾರ್ಹಸ್ಥ್ಯಯೋಗವು
ಪ್ರೀತಿಸಿರೆ ದಂಪತಿಗಳು

ಕಲ್ಲೋಲಮಾಲೆ, ಪು. 27

# ಪುರಾಣಿಕರ ಕೃತಿಗಳಲ್ಲಿ ಜಾನಪದ ಅಂಶಗಳು

● ಜಿ. ಆರ್. ತಿಪ್ಪೇಸ್ವಾಮಿ

ಮಾತುಮಾತಿಗೆ 'ಜಾನಪದ' ಹೊರಹೊಮ್ಮುತ್ತದೆಂದರೆ ಆ ಲೇಖಕ ಜನಪದ ಸಂಸ್ಕೃತಿಗೆ ಆಳವಾಗಿ ಬೇರು ಬಿಟ್ಟಿದ್ದಾನೆಂದು ಅರ್ಥ. ಆತನ ಕೃತಿಯಲ್ಲಿ ಜಾನಪದ ಅಂಶಗಳನ್ನು ಗುರ್ತಿಸಲು ಹೊರಡುವುದು ಲೇಖಕ ಎಷ್ಟರಮಟ್ಟಿಗೆ ಗ್ರಾಮೀಣ ಪರಿಸರಕ್ಕೆ ಸ್ಪಂದಿಸಿದ್ದಾನೆಂಬುದರ ಶೋಧನೆ. ಈ ದಿಸೆಯಲ್ಲಿ ಅರ್ಚಕ ಬಿ. ರಂಗಸ್ವಾಮಿಯವರ ಹುಟ್ಟಿದ ಹಳ್ಳಿ, ಗೋರೂರರ ಹೇಮಾವತಿ ತೀರದಲ್ಲಿ, ಹಳ್ಳಿಯ ಬಾಳು, ಬೆಟಗೇರಿಯವರ ನಮ್ಮ ಸಂಸ್ಕೃತಿ ಪರಂಪರೆ, ಎಚ್. ಎಲ್. ನಾಗೇಗೌಡರ ನನ್ನೂರು, ದೊಡ್ಡಮನೆ-ಕೃತಿಗಳನ್ನು ಮರೆಯುವಂತಿಲ್ಲ. ಅಧಿಕಾರಿಗಳಾಗಿದ್ದು ಆಡಳಿತದ ಜೊತೆ ಜೊತೆಯಲ್ಲಿಯೇ ಬರಹವನ್ನೂ ರೂಢಿಸಿಕೊಂಡು ಬಂದವರಲ್ಲಿ ಸಿದ್ಧಯ್ಯ ಪುರಾಣಿಕರೂ ಒಬ್ಬರಾಗಿದ್ದಾರೆ. ಅಂದಮೇಲೆ ಇವರ ವಚನೋದ್ಯಾನದಲ್ಲಿ ಶ್ರೀಸಾಮಾನ್ಯನ ಬದುಕಿನ ಆಶಯಗಳನ್ನು ಗುರ್ತಿಸುವ ಹೊಣೆಗಾರಿಕೆಯ ಜೊತೆಯಲ್ಲಿಯೇ ಬಂಡವಾಳಶಾಹಿಗಳ ವಿರುದ್ಧದ ಪ್ರತಿಭಟನೆಗಳನ್ನು ಅಲ್ಲಲ್ಲಿ ಕಾಣುತ್ತ ಹೋಗುತ್ತೇವೆ. ಮೇಲಿನ ಕೃತಿಗಳಲ್ಲಿರುವಂತೆ ವಿವರವಾದ ಜಾನಪದ ಚಿತ್ರಣ ಇವರ ಕೃತಿಗಳಲ್ಲಿ ವಿರಳವಾದರೂ ಜಾನಪದ ಅಂಶಗಳನ್ನು ಅಲ್ಲಲ್ಲಿ ಕಾಣುತ್ತೇವೆ.

ಜನಪದ ಸಾಹಿತ್ಯದಲ್ಲಿ ಕ್ರಿಯಾತ್ಮಕ ಹಾಡುಗಾರಿಕೆಯ ಭಾಗವೇ ಗರತಿಯ ಹಾಡುಗಳು. ಈಕೆ ಕಲಿತವಳಲ್ಲ. ತಾನು ಹೇಳುತ್ತಿರುವ ಹಾಡುಗಾರಿಕೆ ಒಂದು ಕಲೆ ಎಂಬ ವಿಚಾರವೇ ಆಕೆಗೆ ಗೊತ್ತಿರುವುದಿಲ್ಲ. ಇನ್ನೊಬ್ಬರು ಹಾಡುವುದನ್ನು ಕಿವಿಯಿಂದ ಕೇಳಿ ತಾನೂ ಹಾಡುವುದನ್ನು ಕಲಿಯುತ್ತಾಳೆ. ಎಷ್ಟೋ ಸಲ ಆಕೆ ಹೇಳುವ ಹಾಡುಗಳನ್ನು ಆಕೆಯಿಂದಲೇ ಹೇಳಿಸಿದಾಗ ಅದರ ಲಯದಲ್ಲಿ ಮಾತ್ರವಲ್ಲದೆ ಶಬ್ದಗಳಲ್ಲಿಯೂ ವ್ಯತ್ಯಾಸ ಕಂಡುಬರುತ್ತದೆ. ಹಾಡು ಹೇಳಿದಾಕೆಗೆ ಈ ವ್ಯತ್ಯಾಸ ಗೊತ್ತೇ ಇರುವುದಿಲ್ಲ. ಇಂಥ ಗರತಿ ಹಾಡುಗಳು ಸಾಮಾನ್ಯವಾಗಿ ತ್ರಿಪದಿಯಲ್ಲಿರುತ್ತವೆ. ಈ ಹಾಡುಗಳಲ್ಲಿನ ವಸ್ತು-ಭಾವನೆಗಳು ದಿನನಿತ್ಯದ ಜೀವನಕ್ಕೆ ಸಂಬಂಧಿಸಿದವುಗಳಾಗಿರುತ್ತವೆ. ಇಂಥ ಸ್ವಾರಸ್ಯಪೂರ್ಣ ಸನ್ನಿವೇಶಗಳನ್ನು ಅನುಭವಿಸಿದ ಪುರಾಣಿಕರು "ತಲೆಯಲ್ಲುಳಿಯದ ವೇದೋಪನಿಷತ್ತುಗಳಿಗಿಂತ ಕೃತಿಯಲ್ಲುಳಿಯುವ ಗರತಿಯ ಹಾಡು ಹಿತಕರವಯ್ಯಾ" ಎಂದಿದ್ದಾರೆ. ಈ ಹಾಡುಗಳಲ್ಲಿ ಬದುಕಿನ ಸಣ್ಣಪುಟ್ಟ ವಿವರಗಳು ಶ್ರದ್ಧಾಭಕ್ತಿಗಳಿಂದ ವರ್ಣಿಸಲ್ಪಟ್ಟಿರುತ್ತವೆ. ಈ ಹಿನ್ನೆಲೆಯಲ್ಲಿ ಹೇಳಿದ "ಚಂಪೂಕಾವ್ಯದಲ್ಲಿ ಸಿಕ್ಕದ ರಸೋತ್ಕರ್ಷ ಹಳ್ಳಿಯ ಹಾಡುಗಳಲ್ಲಿ ಸಿಕ್ಕುವುದಯ್ಯಾ" (373) ಎಂಬ ಮಾತೂ ಅದನ್ನೇ ಧ್ವನಿಸುತ್ತದೆ.

ಜನಪದವು ಹಬ್ಬ ಹರಿದಿನ, ಜಾತ್ರೆ ಉತ್ಸವಗಳನ್ನು ಕೇವಲ ಉಂಡು ನಲಿಯುವುದಕ್ಕಾಗಿ ಮಾತ್ರ ಆಚರಿಸದೆ ಅವು ಪೂಜ್ಯನೀಯ, ಪವಿತ್ರವಾದುವು ಎಂದು ಭಾವಿಸಿ ಆಚರಿಸುವುದರಲ್ಲಿ ಮಾನಸಿಕ ನೆಮ್ಮದಿ ತಂದುಕೊಂಡರು. ವಸಂತಕಾಲದಲ್ಲಿ ಬರುವ ಹೋಳಿ ಕಾಮನನ್ನು ಪೂಜಿಸುವ ಒಂದು ಹಬ್ಬ. ಈ ಸಂದರ್ಭದಲ್ಲಿ ಹೇಳುವ ಹಾಡುಗಳಿಗೆ ಹೋಳಿ ಹಾಡುಗಳೆಂದು ಕರೆಯುತ್ತಾರೆ. ಆಗ ಕಾಮನನ್ನು ಇಟ್ಟು ಜನ ಹಾಡಿ, ಕುಣಿದು ಸಂತೋಷಪಡುತ್ತಾರೆ. ಹಾಡುಗಳು ಇಂಥವೇ ಆಗಿರಬೇಕೆಂಬ ಕಟ್ಟಿಲ್ಲ. ಅಶ್ಲೀಲ ಅಸಹ್ಯವಾದ ಮಾತುಗಳನ್ನೊಳಗೊಂಡ ಹಾಡುಗಳನ್ನು ಹೇಳಿ ಆದಿಮಾನವ ಪ್ರವೃತ್ತಿಗಿಳಿಯುವುದುಂಟು. ಆಗ ಪರಸ್ಪರ ಬೈಯ್ಯುವುದು, ಸಗಣಿನೀರು, ಬಣ್ಣಗಳನ್ನು ಒಬ್ಬರ ಮೇಲೊಬ್ಬರು ಎರಚಾಡುವುದು ಅಣಕಿಸುವುದು, ಗೇಲಿಮಾಡುವುದು ಇತ್ಯಾದಿ ನಡೆಯುತ್ತವೆ. ಇಂಥಹ ಹೋಳಿಯ ಹಾಡುಗಳನ್ನು ಪುರಾಣಿಕರು ಮಹಾಕಾವ್ಯದೊಂದಿಗೆ ತೂಗಿ ನೋಡಿ ವಿದ್ವಾಂಸರ ಚರ್ಚೆಯ ಬಗೆಗೆ ಗುಮಾನಿ ವ್ಯಕ್ತಪಡಿಸಿದ್ದಾರೆ :

ಹೋಳಿಯ ಹಾಡುಗಳಲ್ಲಿ ಅವಾಚ್ಯ ಶಬ್ದಗಳಿದ್ದರೆ
ಆಕ್ಷೇಪಿಸುವವರಿಲ್ಲ

ಮಹಾಕಾವ್ಯದಲ್ಲಿ ಒಂದೇ ಒಂದು ಅನುಚಿತ
ಪದವಿದ್ದರೂ ಎತ್ತಿ ತೋರುವರಯ್ಯ (315)

ಜನಪದ ಸಾಹಿತ್ಯದ ಗೀತೆ, ಲಾವಣಿಗಳಂತೆ ಗಾದೆಗೂ ಪ್ರಮುಖ ಸ್ಥಾನವಿದೆ. ಜನಪದರು ತಮ್ಮ ಅಭಿಪ್ರಾಯಗಳನ್ನು ತುಂಬ ಅರ್ಥವತ್ತಾಗಿ ಗಾದೆಗಳ ಮೂಲಕ ಹೇಗೆ ವ್ಯಕ್ತ ಪಡಿಸುತ್ತಾರೆಂಬುದಕ್ಕೆ ವಚನೋದ್ಯಾನದಲ್ಲಿ ಬರುವ ಕೆಲವನ್ನು ಗಮನಿಸಬಹುದು :

ಮೂರು ಸಲ ಬನ್ನಿಯ ಮರ ಸುತ್ತಿ
ಹೊಟ್ಟೆಮುಟ್ಟಿ ನೋಡಿಕೊಂಡ
ಬಂಜೆಯಂತಾಗದಿರಲಯ್ಯ ನನ್ನ ಸಾಧನೆ (226)

ಭಾರತದಲ್ಲಿ ಪವಿತ್ರವೆಂದು ಪರಿಗಣಿಸಿರುವ ಮರಗಳಲ್ಲಿ 'ಬನ್ನಿ' ಒಂದು. ವಿಜಯದಶಮಿಯಲ್ಲಿ ಬನ್ನಿಪೂಜೆಗೆ ವಿಶೇಷ ಸ್ಥಾನವಿದೆ. ಪಾಂಡವರು ಅಜ್ಞಾತವಾಸಕಾಲದಲ್ಲಿ ತಮ್ಮ ಶಸ್ತ್ರಗಳನ್ನು ಮೂಟೆಕಟ್ಟಿ ಅದರ ಮೇಲಿಟ್ಟಿದ್ದರೆಂದು ಹೇಳುತ್ತಾರೆ. ಬನ್ನಿಯ ಮರದ ಗಾಳಿ ಗರ್ಭಕೋಶದ ರೋಗಗಳನ್ನು ನಾಶಮಾಡುವ ಗುಣವುಂಟೆಂದು ಹೇಳುವುದರಿಂದ ಬನ್ನಿಯನ್ನು ಬಂಜೆಯರು ಸುತ್ತುತ್ತಾರೆ. ಮಕ್ಕಳಾಗುತ್ತವೆಂಬ ನಂಬಿಕೆಯಿಂದ ಸುತ್ತಿಬಂದವರನ್ನು ಹಾಸ್ಯಮಾಡುವುದಕ್ಕಾಗಿ ಮೂರು ಸಲ ಬನ್ನಿಯ ಮರ ಸುತ್ತಿ ಹೊಟ್ಟೆಮುಟ್ಟಿ ನೋಡಿಕೊಂಡಂತೆ ಎಂಬ ಗಾದೆ ಹುಟ್ಟಿಕೊಂಡಿದೆ. "ಕನ್ನಡಿಯೊಳಗಣ ಗಂಟಿನಿಂದ ವ್ಯಾಪಾರವ ಮಾಡಿದವರುಂಟೆ" (256) 'ಗೆದ್ದೆತ್ತಿನ ಬಾಲ ಹಿಡಿವವರು' (345) ಎಂಬ ಗಾದೆಗಳೂ ಸಂದರ್ಭೋಚಿತವಾಗಿ ಬಂದಿವೆ.

ಗಾದೆಗಳಂತೆಯೇ ಶಕುನಗಳೂ ಗ್ರಾಮೀಣರಿಗೆ ಮುಖ್ಯ. ಮುಂದೆ ಒದಗಲಿರುವ ಘಟನೆಗಳನ್ನು ಸೂಚಿಸುವಂಥವು. ಆದರೆ ಅವುಗಳನ್ನು ವಿವರಿಸುವುದಿಲ್ಲ. "ಅಸ್ಪಷ್ಟತೆ ಮತ್ತು ಸಂದಿಗ್ಧತೆಗಳು ಅವುಗಳ ಪ್ರಮುಖ ಲಕ್ಷಣಗಳು" (ದೇಜಗೌ) ಶಕುನಗಳನ್ನು ನಂಬದಿರುವ ಜನಾಂಗವಿಲ್ಲ. ಆದರೆ ಅವು ಸುಳ್ಳು, ಅವುಗಳಿಗೆ ಅರ್ಥವಿಲ್ಲ ಅಂತ ಸಂಪ್ರದಾಯವಿರೋಧಿ ವೈಜ್ಞಾನಿಕ ಯುಗದಲ್ಲಿ ಬದುಕುತ್ತಿರುವ ವಿಜ್ಞಾನಿಯೊಬ್ಬನಿಗೆ ಬೆಕ್ಕು ಅಡ್ಡ ಬಂದಾಕ್ಷಣಕ್ಕೆ ಆತ ತನ್ನ ಪ್ರಯಾಣವನ್ನೇ ನಿಲ್ಲಿಸಿದರೆ ದಡ್ಡರಿಗಿಂತ ಕಡೆ ಎಂಬ ಮಾತನ್ನು ಹೇಳಿದ್ದಾರೆ :

ವಿಜ್ಞಾನಿಯೆಂದು ಜಂಬಕೊಚ್ಚಿಕೊಂಡು
ಬೆಕ್ಕು ಅಡ್ಡ ಹಾಯುತ್ತಲೆ ಗಕ್ಕನೆ ನಿಂತರೆ
ಮಡ್ಡರಿಗಿಂತ ಕಡೆಯಲ್ಲವೆ ಅವನು (359)

ಜೀವನದ ಅನಿವಾರ್ಯ ಶಕ್ತಿಗಳಾಗಿ ಪರಿಣಮಿಸಿರುವ ಸ್ಪಷ್ಟ ಶಕುನಗಳು ಎಲ್ಲ ಕಾಲಗಳಲ್ಲಿಯೂ ಇದ್ದೇ ಇವೆ. ಇವಿಲ್ಲದ ಸಾಹಿತ್ಯ ಕೃತಿಗಳು ವಿರಳವೆಂದೇ ಹೇಳಬೇಕಾಗುತ್ತದೆ.

ಆರನೆಯ ವಿಕ್ರಮಾದಿತ್ಯನನ್ನು ನಾಯಕನನ್ನಾಗಿ ಮಾಡಿಕೊಂಡು ಪುರಾಣಿಕರು ಬರೆದ ಐತಿಹಾಸಿಕ ಕಾದಂಬರಿ 'ತ್ರಿಭುವನ ಮಲ್ಲ'ದಲ್ಲಿ ವಿಕ್ರಮ ಕಂಡ ಕನಸಿನ ವರ್ಣನೆ ಮುಂಬರುವ ನೂತನ ಘಟನೆಯೊಂದನ್ನು ಸಂಘಟಿಸಿ ಕಥೆಗೆ ಹೊಸ ತಿರುವು ಬರುವಲ್ಲಿ ಜಯಾಪಜಯಗಳ ಅಥವಾ ಇಷ್ಟಾನಿಷ್ಟಗಳ ಮುನ್ಸೂಚನೆಯಾಗಿ ವರ್ಣಿತವಾಗಿದೆ : "ರಣಭೂಮಿಯಲ್ಲಿ ನೋಡನೋಡುತ್ತ ವಿವಾಹಮಂಟಪವೆದ್ದು ನಿಂತಿತು, ರಣಕಹಳೆಗಳ ಕರ್ಕಶ ಸ್ವರ ನಿಂತು ವಿವಾಹದ ಮಂಗಳವಾದ್ಯಗಳು ಮೊಳಗಿದುವು ಕರ್ಣಾನಂದಕರವಾಗಿ ; ಪಟುಭಟರ ಆರ್ಭಟ ಅಡಗಿ ಸುಮಂಗಲೆಯರ ಮಂಜುಳ ಸ್ವರ ತೆರೆತೆರೆಯಾಗಿ ತೇಲಿ ಬಂದಿತು ; ಅವರಲ್ಲಿ ಕೆಲವರು ಬಂದು ವಿಕ್ರಮನ ಒಪ್ಪಿಗೆಯನ್ನು ನಿರೀಕ್ಷಿಸದೆ ಅವನಿಗೆ ಮತ್ತೆ ತುಂಗಭದ್ರೆಯ ಜಲದಲ್ಲಿ ಮಂಗಲ ಮಜ್ಜನ ಮಾಡಿಸಿದರು; ಹರಿದ್ವಾಲೇಪನಗೈದರು ; ಕೈಗೆ ಕಂಕಣ ಕಟ್ಟಿದರು; ತಲೆಗೆ ಬಾಸಿಂಗ ಕಟ್ಟಿದರು; ಮದುಮಗನನ್ನು ಬಗೆಬಗೆಯಾಗಿ ಸಿಂಗರಿಸಿ ಕಿಲಕಿಲನೆ ನಕ್ಕರು; 'ಸುಮಂಗಲ ಸಾವಧಾನ' ವೆಂದು ಕುಚೇಷ್ಟೆಯ ಧ್ವನಿಯಲ್ಲಿ ನುಡಿದರು; ಎಳೆದೊಯ್ದು ಹಸೆಗೆ ಕುಳ್ಳಿರಿಸಿದರು; ಸರ್ವಾಲಂಕಾರ ವಿಭೂಷಿತೆಯಾಗಿದ್ದ ಸುರಸುಂದರಿಯೊಬ್ಬಳನ್ನು ಕರೆದು ತಂದು ಪಕ್ಕದಲ್ಲಿ ಕುಳ್ಳಿರಿಸಿದರು ; ಪುರೋಹಿತರು ಬಂದರು; ವಿವಾಹವಿಧಿಯಂತೆ ಮಂತ್ರಪಠನ ಪ್ರಾರಂಭವಾಯಿತು. ವಿಕ್ರಮನು ಕಕ್ಕಾವಿಕ್ಕಿಯಾಗಿ ಕುಳಿತಿದ್ದ. ಯಾರ ಮಗಳಿವಳು ? ಯಾರು ತಂದವರು ? ಯಾರು ಮದುವೆ ಮಾಡುತ್ತಿರುವವರು ? ಏನಿದೆಲ್ಲ ?.........

ಇಂಥ ಜಾನಪದ ಅಂಶಗಳ ಸೇರ್ಪಡೆಯಿಂದ ಸಮಕಾಲೀನ ಪ್ರಜ್ಞೆ ಸ್ಪಷ್ಟವಾಗಿ ಗೋಚರವಾಗುತ್ತದೆ. ಯಾವ ಶಿಷ್ಟಕಾವ್ಯವನ್ನು ತೆಗೆದುಕೊಂಡರೂ ಅದರಲ್ಲಿ ಕೆಲವು ಜಾನಪದೀಯ ಅಂಶಗಳನ್ನು ಗುರ್ತಿಸಬಹುದು. ಅಂಥದೊಂದು ಪ್ರಯತ್ನ ಈ ಲೇಖನ. □

# ವಚನೋದ್ಯಾನ

## ಅದರ ನೆಲೆ ಬೆಲೆಗಳು

**ಟಿ. ಕೇಶವ ಭಟ್ಟ**

ಈ ಲೋಕದಲ್ಲಿ ಪ್ರಾಣಿವರ್ಗಗಳು ಎಷ್ಟೋ ಇವೆ. ಅವುಗಳಲ್ಲಿ ಮನುಷ್ಯರ ವರ್ಗವೂ ಒಂದು. 'ಜನ್ಮನಾ ಜಾಯತೇ ಜಂತುಃ' ಎಂಬ ವಾಕ್ಯದಂತೆ ಹುಟ್ಟಿನಿಂದ ಮನುಷ್ಯನೂ ಒಂದು ಪ್ರಾಣಿ. ಆದರೆ ಈ ಪ್ರಾಣಿ ಬೆಳೆದು ಬಂದಂತೆಲ್ಲ ಇತರ ಪ್ರಾಣಿವರ್ಗಕ್ಕಿಂತ ಮೇಲೆನಿಸುತ್ತಾನೆ. ಹೀಗೆ ಮೇಲೆನಿಸುವುದಕ್ಕೆ ಕಾರಣವಾದ ಸುಪ್ತಶಕ್ತಿಗಳು ಆತನಲ್ಲಿರುತ್ತವೆ. ಪ್ರಾಣಿ ಪಕ್ಷಿಯಂತಹ ಯಾವುದೇ ಇತರ ಜಂತುವಿನಲ್ಲಿ ಅದರ ರೂಪ, ಆಕಾರ, ನಡತೆ, ಹಾರಾಟ, ಚೀರಾಟ ಹಾಗೂ ನೋವು ನಲಿವಿನ ಸಾಧನಗಳು ಅದರ ವರ್ಗಕ್ಕಿಂತ ಬೇರೆ ವಿಧವಾಗಿ ಇರುವುದಿಲ್ಲ. ಎಷ್ಟೇ ಕಲಿಸಿದರೂ ಅವು ಮನುಷ್ಯನ ಮಟ್ಟಕ್ಕೆ ಏರಲಾರವು. ಮನುಷ್ಯ ಜನ್ಮಕ್ಕೆ ಬಂದ ಮೇಲೆಯೇ ಸರಿ ಅವುಗಳಿಗೆ ಬುದ್ಧಿ-ಸಂಸ್ಕೃತಿಗಳ ಪ್ರಗತಿ. ಆದರೇನು ? 'ಜಂತೂನಾಂ ನರಜನ್ಮ ದುರ್ಲಭಂ'-ಪ್ರಾಣಿಗಳಿಗೆ ಮನುಷ್ಯಜನ್ಮ ದೊರಕುವುದು ಕಷ್ಟ-ಎಂದು ನೀತಿಶಾಸ್ತ್ರದ ಮಾತಿದೆ.

ನಾವು ನೋಡುತ್ತೇವಲ್ಲ, ಈ ನರಜನ್ಮದಲ್ಲಿ ಬಂದವರೆಲ್ಲ ನಡೆ-ನುಡಿಗಳಲ್ಲಿ ಮೇಲೆನ್ನಬಹುದೆ ? ನರರಲ್ಲಿ ದುರ್ಮಾರ್ಗ, ದುರಾಚಾರ, ಅನ್ಯಾಯಗಳ ಹಾದಿ ಹಿಡಿದವರಿಲ್ಲವೆ ? ಆದೇಕೆ ಅವರು ಹಾಗೆ ?—ಮನುಷ್ಯರಾಗಿ ಹುಟ್ಟಿದ ಅಂಥವರಿಗೆ ಮಾನವೀಯ ಸಂಸ್ಕಾರ ದೊರಕಿಲ್ಲ ; ಅವರ ಮನಸ್ಸು, ಬುದ್ಧಿ, ಕ್ರಿಯೆಗಳು ಸನ್ಮಾರ್ಗದ ಕಡೆಗೆ ಒಲಿದಿಲ್ಲ. ಆದುದರಿಂದಲೇ ಬಲ್ಲವರ ಮಾತಿದು— ಮನುಷ್ಯನಿಗೆ ಚಿಕ್ಕಂದಿನಿಂದ ಪ್ರಾರಂಭಿಸಿ ಒಳ್ಳೆಯ ಶಿಕ್ಷಣ, ಸಂಸ್ಕಾರ ದೊರೆಯಬೇಕು ; ಧರ್ಮ ಸಂಸ್ಕೃತಿಗಳ ಬೋಧನೆ ಸಾಧನೆಗಳು ಬೇಕು. ಮಾನವರಾಗಿ ಜನಿಸಿದ ಮೇಲೆ ಆತ್ಮೋದ್ಧಾರವನ್ನು ಸಾಧಿಸಿ, ಮಾನವ ಕಲ್ಯಾಣವನ್ನೇ ಧ್ಯೇಯವಾಗಿಟ್ಟು ದುಡಿದವರ ಜೀವನಾದರ್ಶ ಬೇಕು ; ಅಂಥವರ ಬೋಧನ ಸಾಹಿತ್ಯದ ಅಧ್ಯಯನವೂ ಬೇಕು. ಆ ಬಗೆಯ ಭವ್ಯಸಾಹಿತ್ಯ ನಮ್ಮಲ್ಲಿದೆ. ಅದನ್ನು ತಿಳಿಯುವ ಕುತೂಹಲ ಪ್ರಯತ್ನಗಳು, ಅವನ್ನು ಉಂಟು ಮಾಡುವ ಸಾಧನಗಳು ಬೇಕು. ನಿಜಕ್ಕೂ ಅವೆಲ್ಲ ಅನಾದಿ ಕಾಲದಿಂದ ಇಂದಿನವರೆಗೆ ಉಪಲಬ್ಧವಿರುವುದು ಎಲ್ಲ ಮನುಷ್ಯರ ಮಹಾಭಾಗ್ಯ.

ಅತಿ ಪ್ರಾಚೀನ ಕಾಲದಲ್ಲೇ ವಿಶ್ವಕ್ಕೆ ಹಾಗೂ ಮಾನವ ಜಾತಿಗೆ ಭಾರತೀಯರ ಶ್ರೇಷ್ಠ ಜ್ಞಾನ-ವಿಜ್ಞಾನಗಳ ಕೊಡುಗೆ ವೇದಗಳ ರೂಪದಲ್ಲಿ ಆಗಿದೆ. ಆದರೆ, ಸಾಮಾನ್ಯರ ಮಾತಿರಲಿ-ಬಹುಮಂದಿ ವಿದ್ವಾಂಸರಿಗೆ ಕೂಡ ವೇದವಾಣಿ ಅರ್ಥವಾಗುವುದು ಕಷ್ಟ. ವೇದಗಳ ಅನಂತರ ಉಂಟಾದವು ಉಪನಿಷತ್ತುಗಳು. ಸಂಖ್ಯೆಯಲ್ಲಿ ಅವು ನೂರಾರು. ಪ್ರತಿಯೊಂದೂ ಮಾನವನ ಆತ್ಮೋದ್ಧಾರಕ್ಕೆ ನೆರವಾಗತಕ್ಕವೆ. " ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಗಂ ಸಮಾಃ "— ಈ ಪ್ರಪಂಚದಲ್ಲಿ ಮನುಷ್ಯನು ಕರ್ಮವನ್ನು (ಕಾಯಕವನ್ನು) ಮಾಡಿಕೊಂಡು

ನೂರು ವರ್ಷ ಬಾಳಬೇಕು–ಎಂದು ಈಶೋಪನಿಷತ್ತಿನ ಈ ವಾಕ್ಯದ ಅರ್ಥ. ಸಂಸ್ಕೃತ ತಿಳಿಯದವರಿಗೆ ಈ ವಾಕ್ಯದ ಅರ್ಥ ಬೋಧೆಯಾದೀತೆ ? ಹೀಗೆಯೇ ನಮ್ಮಲ್ಲಿ ಹುಟ್ಟಿಕೊಂಡ ಸ್ಮೃತಿ, ಆಗಮ, ನೀತಿಶಾಸ್ತ್ರ, ಪುರಾಣ, ರಾಮಾಯಣ, ಮಹಾಭಾರತ, ಕಾವ್ಯನಾಟಕಗಳು ಸಂಸ್ಕೃತದಲ್ಲೇ ಹಿಂದೆ ನಿರ್ಮಾಣವಾದವು. ಜನಸಾಮಾನ್ಯರಿಗೆ ಅವುಗಳ ಸಾರ ತಲುಪದೆ, ಅವರು ಅಜ್ಞಾನವಶರಾಗಿ ಉಳಿವಂತಾಯಿತು. ಇದನ್ನು ತಿಳಿದ ದೇಶೀಯ ಭಾಷಾ ವಿದ್ವಾಂಸರು ಆಯಾ ಪ್ರದೇಶದ ಜನಭಾಷೆಯಲ್ಲಿ ನೀತಿ-ಧರ್ಮಬೋಧಕವಾದ ಸಾಹಿತ್ಯವನ್ನು ರಚಿಸಿದರು. ಮಹಲಿಂಗರಂಗನು ತನ್ನ ಅನುಭವಾಮೃತದಲ್ಲಿ ಹೀಗೆಂದಿರುವನು :—

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರುವ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದೊಳಿನ್ನೇನು ?

ಒಟ್ಟಿನಲ್ಲಿ ಆತ್ಮಜ್ಞಾನ ಪಡೆಯತಕ್ಕುದು. ಅದಕ್ಕೆ ಭಾಷೆ ಯಾವುದಾದರೇನು ? ಕನ್ನಡವೂ ಸಾಕು. ಅದು ಸುಲಭ ಮತ್ತು ಸೊಗಸಾದುದು-ಎಂದು ಹೇಳಿದ್ದಾನೆ. ಈ ತತ್ತ್ವವನ್ನು ಅನುಸರಿಸಿದ ಕನ್ನಡದ ಕೀರ್ತನಕಾರರು ಸರಳವಾದ ಕನ್ನಡದಲ್ಲಿ ಭಕ್ತಿ-ನೀತಿ ಪರವಾದ ಹಾಡುಗಬ್ಬಗಳನ್ನು ರಚಿಸಿದ್ದಾರೆ. ಕನ್ನಡಸಾಹಿತ್ಯವೆಂಬುದು ಪದ್ಯರೂಪದಲ್ಲೇ ಇರುತ್ತಿತ್ತು. 'ಪದ್ಯರಚನೆ' ಎಂದಾಗ ಅದು ಪ್ರಾಸ, ಗಣ, ಪಾದ, ಅನ್ವಯ ವಿನ್ಯಾಸಗಳಿಂದ ಸಾಮಾನ್ಯರ ಮಟ್ಟಿಗೆ ಅರ್ಥಕ್ಕೆ ಅಲ್ಲಲ್ಲಿ ತೊಡಕಾಗದೆ ಇರುವುದಿಲ್ಲ. ಈ ತೊಡಕನ್ನು ಕೂಡ ಪರಿಹರಿಸಿ, ಜನಸಾಮಾನ್ಯರಿಗೆ ಧರ್ಮನೀತಿ, ತತ್ತ್ವ, ಸದಾಚಾರ, ಜ್ಞಾನ, ವಿವೇಕಗಳನ್ನು ಮೂಡಿಸುವಂತಹ ರಚನೆಗಳನ್ನು ಮಾಡಿದವರು ಶಿವಶರಣರು. ಅವರ ರಚನೆ ' ವಚನಸಾಹಿತ್ಯ 'ವೆನಿಸಿದೆ.

ವಚನಗಳು ರಚನೆಯಲ್ಲಿ ಗದ್ಯವೂ ಅಲ್ಲ, ಪದ್ಯವೂ ಅಲ್ಲ. ಅವೆರಡರ ಸೊಗಸಿನೊಂದಿಗೆ ಶಾಸ್ತ್ರದ ಕಂಪು, ಅನುಭಾವದ ಬೆಡಗು, ಜನತೆಗೆ ಬೇಕಾಗುವ ಬಾಳಿನ ದಾರಿಗುರಿಗಳು, ಜೀವನದ ಸೋಲುಗಳನ್ನು ನೀಗಿಸುವ ಸತ್ತ್ವ, ಬೌದ್ಧಿಕ ಜಾಡ್ಯವನ್ನು ದೂಡುವ ಬೆಳಕು, ಭಾವದ ಭ್ರಾಂತಿಯನ್ನು ಬಿಡಿಸುವ ಬಲ—ವಚನಗಳಲ್ಲಿ ನಿಹಿತವಾಗಿವೆ. ಅದಕ್ಕೆ ಪಾದಸಂಖ್ಯಾ ನಿಯಮವಿಲ್ಲ. ಅವುಗಳಲ್ಲಿ ವಚನ ಕರ್ತೃವಿನ ಇಷ್ಟದೇವರ ಮುದ್ರಿಕೆಯಿರುತ್ತದೆ. ವಚನಗಳನ್ನು ರಾಗಬದ್ಧವಾಗಿ, ತಾಳಯುಕ್ತವಾಗಿ ಕೂಡ ಹಾಡುವ ಪದ್ಧತಿ ಹಿಂದಿನಿಂದಲೂ ಇತ್ತು. ಅವುಗಳ ಅಂತರಂಗ ಮಹತ್ತ್ವದ ದೃಷ್ಟಿಯಿಂದ ವಚನವನ್ನು 'ಅನುಭಾವ ಗದ್ಯ' ಎಂದಿದ್ದಾರೆ. ಅವನ್ನು ರಚಿಸಿದವರು ಲೌಕಿಕ ಪಾರಮಾರ್ಥಿಕ ಜ್ಞಾನಸಂಪನ್ನರಾದುದರಿಂದ ನೀತಿ, ನಿಯಮ, ನಿಷ್ಠೆ, ಭಗವದ್ಭಕ್ತಿ, ಲೋಕಕಲ್ಯಾಣ ಭಾವನೆ ಹಾಗೂ ಕಾಯಕವೇ ಕೈಲಾಸವೆಂಬ ವರ್ತನೆಯುಳ್ಳವರು. ಆದುದರಿಂದಲೇ ವಚನಗಳು ಸಮಾಜದ ಉದ್ಧಾರಕ್ಕೆ ಅಮೂಲ್ಯವಾದ ಕಾಣಿಕೆಗಳು.

ವಚನ ಸಾಹಿತ್ಯದ ಇತಿಹಾಸವನ್ನು ನೋಡಿದರೆ ಕ್ರಿ.ಶ. ಶತಮಾನಗಳು ೧೧,೧೨,೧೩,೧೪—ಈ ನಾಲ್ಕು ವಚನ ರಚನೆಗಳ ವಿಶೇಷವಾದ ಹಂತಗಳು. ಹನ್ನೊಂದನೆಯ ಶತಮಾನದ ಪ್ರಾತಿನಿಧಿಕ ವಚನಕಾರ ದೇವರ ದಾಸಿಮಯ್ಯನೆಂದು ಅಭಿಪ್ರಾಯವಿದೆ. ಹನ್ನೆರಡನೆಯ ಶತಮಾನದವರು ಭಕ್ತಿಭಂಡಾರಿ ಬಸವಣ್ಣನವರು. ಹದಿನೈದನೆಯ ಶತಮಾನದ ಪ್ರಮುಖರು ತೋಂಟದ ಸಿದ್ಧಲಿಂಗೇಶ್ವರರು ಮತ್ತು ಹದಿನೇಳನೆಯ ಶತಮಾನವನ್ನು ಪ್ರತಿನಿಧಿಸುವ ಮುಖ್ಯರು ಷಣ್ಮುಖ ಸ್ವಾಮಿಗಳು. ಈ ಪ್ರಮುಖರೆಲ್ಲರೂ ಶ್ರೇಷ್ಠ ಅನುಭಾವಿಗಳು, ವಚನಕಾರರು, ಜನತೆಗಾಗಿ ಬಾಳಿದವರು. ಹಿಂದಿನ ಈ ನಾಲ್ಕು ಕಾಲಖಂಡಗಳಲ್ಲಿ ವಿಶೇಷವಾಗಿ ಆದ ವಚನ ಸಾಹಿತ್ಯರಚನೆ ಮತ್ತೆ ನಿಂತುಹೋಯಿತೆ ? ಎಂಬ ಪ್ರಶ್ನೆಗೆ "ಇಲ್ಲಾ" ಎಂಬ ಉತ್ತರ ಈ ಇಪ್ಪತ್ತನೆಯ ಶತಮಾನದಲ್ಲಿ ಧ್ವನಿಯೆತ್ತಿದೆ ಎಂಬುದನ್ನು ಪ್ರಸ್ತುತ ' ವಚನೋದ್ಯಾನ ' ಎಂಬ ಗ್ರಂಥ ಸಾಕ್ಷಿ ನುಡಿಯುತ್ತಿದೆ.

ಆಧುನಿಕ ವಚನಕಾರರಲ್ಲಿ ಡಾ. ಜ. ಚ. ನಿ. ಅವರ ವಚನಗಳ ಸಂಖ್ಯೆ ಸುಮಾರು ಐದು ಸಾವಿರದಷ್ಟಾಗಿವೆ. ಇನ್ನಿತರರಲ್ಲಿ ಡಾ. ಸಿದ್ಧಯ್ಯ ಪುರಾಣಿಕರು, ಜೋಳದರಾಶಿ ದೊಡ್ಡನಗೌಡ, ಎಸ್. ವಿ. ಪರಮೇಶ್ವರಭಟ್ಟ, ಎಸ್. ವಿ. ರಂಗಣ್ಣ, ಶ್ರೀಮೂಜಗಂ–ಮುಂತಾದವರು ಖ್ಯಾತರಾಗಿದ್ದಾರೆ. ಸಿದ್ಧಯ್ಯ ಪುರಾಣಿಕರ 'ಈ ವಚನೋದ್ಯಾನ' ಎಂಬ ಬಹುಮಾನಿತ ಉದ್ಗ್ರಂಥದಲ್ಲಿ ೩೨೩ ವಚನಗಳು ಸೇರ್ಪಡೆಯಾಗಿವೆ. 'ಸ್ವತಂತ್ರ ಧೀರ

ಸಿದ್ಧೇಶ್ವರಾ' ಎಂಬುದು ಇವರ ವಚನಗಳ ಅಂಕಿತ.
ಆದುದರಿಂದ ಇವರ ವಚನಗಳನ್ನು 'ಸಿದ್ಧೇಶ್ವರ ವಚನ
ಗಳು' ಎಂತಲೂ ಕರೆಯಬಹುದೇನೋ ?
'ಸ್ವತಂತ್ರ ಧೀರ ಸಿದ್ಧೇಶ್ವರ' ಎಂಬಲ್ಲಿ 'ಈಶ್ವರ'
ಎಂಬುದು ಶಿವನ ಪರ್ಯಾಯನಾಮವಷ್ಟೆ? ಅದಕ್ಕೆ
ವಿಶೇಷಣಗಳಾದ ಸ್ವತಂತ್ರ-ಧೀರ-ಸಿದ್ಧ ಎಂಬ ಮೂರು
ಶಬ್ದಗಳು ಅರ್ಥವತ್ತಾಗಿ ಕಾಣುತ್ತವೆ. ಇಷ್ಟದೈವಕ್ಕೆ
ಇವು ವಿಶೇಷಣಗಳಾಗಿರುವಂತೆಯೆ ಇವು ಆ ದೈವದ ಶರಣ
ನಿಗೂ ಅರ್ಥಾತ್ ವಚನಕಾರನಿಗೂ ಆತನ ವಚನಗಳಿಗೂ
ಅರ್ಥಾನ್ವಯವುಳ್ಳವಾಗಿ ತೋರುತ್ತವೆ. 'ಸ್ವತಂತ್ರ'
ಎಂದರೆ ತನ್ನದೆ ಆದ ತಂತ್ರ, ಕೇವಲ ಪೂರ್ವ ವಚನ
ಕಾರರ ಅನುಕರಣೆ ಇವಲ್ಲ. ಆಧ್ಯಾತ್ಮಿಕತೆ, ಭಕ್ತಿಭಾವ
ಗಳೊಂದಿಗೆ ಸಮಕಾಲೀನ ಸಾಮಾಜಿಕ ಜೀವನದ ಮಾರ್ಗ
ದರ್ಶನ ಈ ವಚನಗಳಲ್ಲಿ ಅಡಕವಾಗಿದೆ. ಆದುದರಿಂದ
ಸ್ವ-ತಂತ್ರವಾಗಿದೆ. ಸ್ವ-ತಂತ್ರದ ನಿಜಾರ್ಥ 'ಸ್ವೋಪಜ್ಞ'.
ಈ ಸಂಕಲನದಲ್ಲಿರುವವು ಸ್ವೋಪಜ್ಞ ವಚನ ರಚನೆಗಳು.
ಪೂರ್ವವಚನಗಳ ಮಾತುಗಳ ಸಾಮ್ಯವಿರಬಹುದಾದರೂ
ಅವುಗಳ ನಕಲಿಯಲ್ಲ. ಭಾವಪುಷ್ಟಿ-ಭಾವವೃದ್ಧಿಗಳಿವೆ.
ಈ ಆಧುನಿಕ ಕಾಲದ ಜಗತ್ತು ಹಾಗೂ ಅದರ ಪ್ರಾಪ್ತಿ
ಪರಿಸ್ಥಿತಿಗಳು, ದೋಷಗಳಿಗೆ ಪರಿಹಾರಗಳು ಇವುಗಳಲ್ಲಿ
ಬಿಂಬಿತವಾಗಿವೆ. ಆದುದರಿಂದ ಈ ರಚನೆಗಳು ಸ್ವತಂತ್ರ
ವಾದುವು. ವಚನಕಾರರೂ ಹಾಗೆಯೆ ಪೂರ್ಣಸ್ವತಂತ್ರರು
ಯಾರ ಹಂಗಿಗರೂ ಅಲ್ಲ (ಉದ್ಯೋಗ ನಿವೃತ್ತರು ಕೂಡ)
'ಧೀರ' ಶಬ್ದದ ಅರ್ಥವ್ಯಾಪ್ತಿ ವಿದ್ವಾಂಸ, ಧೈರ್ಯ
ಶಾಲಿ ಎಂದು ಮಾತ್ರವಲ್ಲ. 'ಸ್ಥಿರಮತಿ' ಎಂತಲೂ
ಇದೆ. ಪರಿಸ್ಥಿತಿಯ ಆಗು ಹೋಗುಗಳಿಗೆ, ಹೊಗಳಿಕೆ
ತೆಗಳಿಕೆಗಳ ದ್ವಂದ್ವಗಳಿಗೆ ವಿಕ್ರೀತನಾಗದವನೆ ಧೀರ.
"ವಿಕಾರ ಹೇತೌ ಸತಿ ವಿಕ್ರಿಯಂತೇ ಯೇಷಾಂ ನ ಚೇತಾಂಸಿ
ತ ಏವ ಧೀರಾಃ" ಎಂಬುದು ಕುಮಾರಸಂಭವ ಕಾವ್ಯದಲ್ಲಿ
ಕಾಳಿದಾಸೋಕ್ತಿ. ಈ ಧೀರತೆಯನ್ನು ಬಿಂಬಿಸುವ ಹಲವು
ವಚನಗಳು ಈ ಸಂಕಲನದಲ್ಲಿವೆ. 'ಸಿದ್ಧ ಎಂದರೆ ಸಿದ್ಧಿ
ಪಡೆದವನು. ಮೊದಲನೆಯದಾಗಿ ಶಿವನು. ಕಾರ್ಯಕ್ಕೆ
ಅಣಿಯಾದವನು, ವಚನ ರಚನೆಯಲ್ಲಿ ಸಿದ್ಧಿಯುಳ್ಳವನು
-ಎಂಬರ್ಥಗಳಲ್ಲಿ ಹಾಗೂ ನಾಮಾಂಕಿತ ಶಬ್ದವಾಗಿ ವಚನ
ಕರ್ತೃವನ್ನು ನಿರ್ದೇಶಿಸುತ್ತದೆ. ಈ ವಚನಗಳೂ ಸಿದ್ಧ
ರೂಪದವು. ಹೀಗೆ ಈ 'ವಚನೋದ್ಯಾನ'ದ ವಚನಗಳ

ಒಂದು ಗುಪ್ತವಿಮರ್ಶೆಯಾಗಿ ಅವುಗಳ ನೆಲೆ ಬೆಲೆಗಳ
ಗಣಿಯೆನಿಸುವುದು ಈ ಅಂಕಿತ ಎಂದರೆ ತಪ್ಪಲ್ಲ.

ವಚನಕಾರರ ಬಹುಮುಖ ಅನುಭವದ ಹಾಗೂ ಅರಿವಿನ
ಕುರುಹಾಗಿ ಈ ವಚನೋದ್ಯಾನದ ವಚನಗಳಿವೆ. ಓದುವ
ಕೇಳುವ ಎಲ್ಲ ವರ್ಗದ ಜನರಿಗೆ ಬೆಳಕೀಯುವ ಅಂಶ
ಗಳು ಅಲ್ಲಲ್ಲಿ ವಚನಗಳಲ್ಲಿ ದೊರಕುತ್ತವೆ. ಶಿವತತ್ವ,
ಪರಮಾತ್ಮ, ಸೃಷ್ಟಿವೈಚಿತ್ರ್ಯ, ಶರಣನ ಅಂತರಂಗ
ನಿವೇದನೆ, ಸತಿಪತಿಭಾವ, ಜನರ ನೀತಿ, ಆಧುನಿಕತೆ,
ವ್ಯಕ್ತಿಯ ಆತ್ಮೋದ್ಧಾರದ ಬಗೆ, ಲೋಕವಿಮರ್ಶೆ-
ಮುಂತಾದ ಬಹುವಿಧ ವಿಮರ್ಶೆಗಳು ಮನಮುಟ್ಟು
ವಂತೆ ವಚನೋದ್ಯಾನದಲ್ಲಿ ಬಂದಿವೆ. ಸರಳತೆ, ಭಾವು
ಕತೆಗಳು ಎಲ್ಲ ವಚನಗಳಲ್ಲಿ ಸ್ಥಾಯಿಯಾಗಿವೆ;
ಆತ್ಮೀಯತೆ ಮಡುಗಟ್ಟಿಕೊಂಡಿದೆ. ಯಾವ ಕಾಳನ್ನೆತ್ತಿ
ಒತ್ತಿನೋಡಿದರೂ ಬೆಂದ ಪಾಕವಾಗಿ ಕಾಣಿಸುವ
ಸ್ಥಾಲೀಪುಲಾಕನ್ಯಾಯ ಈ ವಚನಗಳ ಸೊಗಸಿಗೆ ಸಲ್ಲು
ತ್ತದೆ. ಕೆಲವನ್ನು ಉದಾಹರಿಸುತ್ತೇನೆ :—

ಸದ್ಭಕ್ತನ ದೃಷ್ಟಿಯಿಂದ ಸ್ವರ್ಗ-ನರಕಗಳು, ಸತ್ಯ-ಮಿಥ್ಯ
ಗಳು ಮುಂತಾದವು ಯಾವುವೆಂಬ ವ್ಯಾಖ್ಯಾನ ಹೀಗಿದೆ :
ದೇವನನ್ನು ಸಂಬೋಧಿಸಿ ನುಡಿದ ವಚನವಿದು—
ನಿನ್ನನರಿವುದೆ ಸ್ವರ್ಗ, ನಿನ್ನ ಮರೆವುದೆ ನರಕ; ನಿನ್ನ
ನೆನಹೇ ಜೀವನ, ನಿನ್ನ ಮರಹೇ ಮರಣ; ನೀನೆಂಬುದೇ
ಪುಣ್ಯ, ನಾನೆಂಬುದೇ ಪಾಪ; ಎಲ್ಲಾ ನಿನ್ನಿಂದ ಎಂಬುದೇ
ಸತ್ಯ, ನನ್ನಿಂದ ಎಂಬುದೇ ಮಿಥ್ಯ ; ನನಗಾಗಿ ಮಾಡಿದರೆ
ಬಂಧನ, ನಿನಗಾಗಿ ನಿನ್ನವರಿಗಾಗಿ ಮಾಡಿದರೆ ನಿರ್ಬಂಧನ;
ನೀನಿಲ್ಲದಿಲ್ಲವೆಂಬುದೆ ಜ್ಞಾನ, ಇದೆಯೆಂಬುದೇ ಅಜ್ಞಾನ :
ನಿನ್ನನು ನಿನಗಾಗಿ ಪ್ರೀತಿಸುವುದು ಭಕ್ತಿ. ನಿನ್ನನು
ನನಗಾಗಿ ಪ್ರೀತಿಸುವುದು ಶಕ್ತಿಯಯ್ಯ-ಸ್ವತಂತ್ರಧೀರ
ಸಿದ್ಧೇಶ್ವರಾ! (೮೫).

ಈ ವಚನಕ್ಕೆ ಎಷ್ಟು ವ್ಯಾಖ್ಯಾನವನ್ನು ಕೊಡಬಹುದು.
ವ್ಯಾಖ್ಯಾನವಿಲ್ಲದೆಯೆ ಯಾರಿಗೂ ಅರ್ಥವೂ ಆದೀತು.
ಅಗೋಚರನಾದ ಪರಮಾತ್ಮನನ್ನು ನಾವು ಏನೆಂದು
ಕಲ್ಪಿಸಬಹುದೆಂಬ ದಿಗ್ದರ್ಶನ ಇಲ್ಲಿದೆ. ಯಾವುದಾದರೂ
ಕಾರ್ಯವೆಸಗಿ, 'ಇದೆಲ್ಲ ನನ್ನಿಂದಾಯಿತು' ಎನ್ನುವವರಿಗೆ
ಸ್ವಾರ್ಥಲಾಲಸೆಯಿಂದ ಭಕ್ತಿ ಮಾಡುವವರಿಗೆ ಈ ವಚನ
ದಲ್ಲಿ ಎಚ್ಚರಿಕೆಯ ಮಾತಿದೆ. ಹಾಗೆಯೆ ಇನ್ನೊಂದು

ವಚನದಲ್ಲಿ ದಾಸ್ಯ–ಸ್ವಾತಂತ್ರ್ಯ, ಬಂಧನ–ಬಿಡುಗಡೆ, ಶಾಪ–ವರದಾನ, ಅಜ್ಞಾನ–ಸುಜ್ಞಾನ, ರಚನೆ–ವಚನ ಎಂಬೀ ತಾರತಮ್ಯದ ಪರಿಭಾಷೆಯನ್ನು ಕಾಣಬಹುದು. ಇದು ಕೂಡ, ದೇವರನ್ನು ಅಭಿಮುಖೀಕರಿಸಿ ನುಡಿದ ವಚನ :–

"ನರರಿಗೆ ಶರಣು ಹೋದರೆ ಅದು ದಾಸ್ಯ; ನಿನಗೆ ಶರಣುಹೋದರೆ ಸ್ವಾತಂತ್ರ್ಯವಯ್ಯಾ; ನನ್ನಲ್ಲಿ ನಾನು ನೆಲೆಯೂರಿದರೆ ಅನುಬಂಧನ, ನಿನ್ನಲ್ಲಿ ನೆಲಸಿ ಬದುಕಿದರೆ ಬಿಡುಗಡೆಯಯ್ಯಾ; ನನಗಾಗಿ ನಾನು ಅರ್ಜಿಸಿದರೆ ಅದು ಅಭಿಶಾಪ, ನಿನಗಾಗಿ ನಿನ್ನವರಿಗಾಗಿ ಗಳಿಸಿದರೆ ಅದು ವರ ದಾನವಯ್ಯಾ; ನನ್ನಿಷ್ಟಕ್ಕೆ ನಾನೆಂದರೆ ಅದು ಅಜ್ಞಾನ, ನಿನ್ನಿಷ್ಟದಂತೆ ನಾನೆಂದರೆ ಅದು ಸುಜ್ಞಾನವಯ್ಯಾ; ನನಗೆ ತೋರಿದಂತೆ ಬರೆದರೆ ಅದು ರಚನೆ, ನೀನು ತೋರಿಸಿದಂತೆ ಬರೆದರೆ ಅದು ವಚನವಯ್ಯಾ; ಸ್ವತಂತ್ರ ಧೀರ ಸಿದ್ಧೇಶ್ವರಾ, ನಿನ್ನಿಂದ ನಿನ್ನಲ್ಲಿ ನಿನಗಾಗಿ ಬದುಕಿ ನನ್ನಿಯಾಗುವ ಗುಟ್ಟ ತಿಳಿಸಯ್ಯಾ!" (೮೭)

ಸಾಹಿತಿಯೊಬ್ಬನು ತನಗೆ ತೋರಿದಂತೆ ಬರೆದರೆ ಅದು ಗದ್ಯವೋ ಮಾತೋ ಆಗಬಹುದು ; ಅದೊಂದು ರಚನೆ ಯೆನಿಸಬಹುದು. ನಿಜಾರ್ಥದಲ್ಲಿ ವಚನವೆನಿಸಬೇಕಾದರೆ, ಅದಕ್ಕೆ ದೈವಪ್ರೇರಣೆ ಬೇಕು ಎಂಬುದು ಸಾರ್ವಕಾಲಿಕ ಸತ್ಯ, ಆಧುನಿಕ ವಚನಕಾರರಿಗೊಂದು ದಿಗ್ದರ್ಶಿ. ಪರಮಾತ್ಮನು ಎಲ್ಲರನ್ನು ಹುಟ್ಟಿಸಿದ ತಂದೆ. ಅವನ ವಾತ್ಸಲ್ಯಮಯ ವ್ಯವಸ್ಥೆಯ ನಿರೂಪಣೆಯನ್ನು ಕೆಳಗಿನ ವಚನದಲ್ಲಿ ನೋಡಬೇಕು :—

"ತಂದೆ, ಜೀವರಾಶಿಗಳ ಹುಟ್ಟಿಸುವ ಮುನ್ನ ಅವುಗಳಿಗಾಗಿ ಅನ್ನ ಔಷಧಗಳ ಹುಟ್ಟಿಸಿದೆ ಸಸ್ಯಸೃಷ್ಟಿಯಲ್ಲಿ ; ನೀರು ಹುಟ್ಟಿಸಿದೆ ನದಿ ಸರಸಿ ಚಿಲುಮೆಗಳಲ್ಲಿ ; ಖನಿಜ, ತೈಲ, ಅನಿಲಗಳ ಹುಟ್ಟಿಸಿದೆ ಗಣಿಗಳಲ್ಲಿ ; ನನ್ನ ಹುಟ್ಟಿಸುವ ಮುನ್ನ ಹಾಲು ಹುಟ್ಟಿಸಿದೆ ನನ್ನ ತಾಯ ಎದೆಯಲ್ಲಿ ! ಬೆಂಕಿ ಹುಟ್ಟಿಸುವ ಮುನ್ನ ನೀರು ಹುಟ್ಟಿಸಿದೆ ! ಸಾವು ಹುಟ್ಟಿಸುವ ಮುನ್ನ ಜೀವ ಹುಟ್ಟಿಸಿದೆ ! ಎಂಥ ಕರುಳಿನ ತಂದೆ ನೀನು, ಕರುಣಾಸಿಂಧು ನೀನು ! ನಿನ್ನ ವಾತ್ಸಲ್ಯಮಯ ವ್ಯವಸ್ಥೆಯ ಅರ್ಥವನ್ನೇ ಅರಿಯದೆ ವ್ಯರ್ಥ ವಿಲಾಪಿಸುತ್ತಿಹೆನಯ್ಯಾ – ಸ್ವತಂತ್ರಧೀರ ಸಿದ್ಧೇಶ್ವರಾ !"(೧೮).

ಇಂದು ಲೋಕದಲ್ಲಿ ನಡೆಯುತ್ತಿರುವುದೇನು ? ಜನರಿಗೆ ಯುಕ್ತಾಯುಕ್ತ ಪ್ರಜ್ಞೆ ಇಲ್ಲವಾಗಿದೆ -ಎಂಬುದನ್ನು ವಚನ ಚಿತ್ರಣದಲ್ಲಿ ನೋಡೋಣ :—

"ಮನೆ ಕಾಯುವ ನಾಯಿಯನ್ನು ಹೊರಗಿರಿಸಿ ಕದ್ದು ಕುಡಿಯುವ ಬೆಕ್ಕನ್ನು ಒಳಗಿರಿಸಿಕೊಂಡೆವಯ್ಯಾ: ದುಡಿದಿಕ್ಕುವ ಬಡವರನ್ನು ಅಡಿಗೊತ್ತಿ ದೋಚಿ ಉರಿವವರ ಹೊತ್ತು ಮೆರೆಸುವೆವಯ್ಯಾ; ಕಡುನಿಷ್ಠೆಯ ಬಡಭಕ್ತರಿಗೆ ಇಲ್ಲೆನಿಸಿ ಕಾಸು ಸುರಿವ ಲಂಡರಿಗೆ ದೇವದರ್ಶನ ಮಾಡಿಸುವೆವಯ್ಯಾ; ಕಲಾತಪಸ್ವಿಗಳನ್ನು ಕಡೆಗಣಿಸಿ ಕಲೆಯ ವ್ಯಭಿಚಾರ ನಡೆಸುವವರ ತಲೆಯ ಮೇಲಿರಿಸಿಕೊಳ್ವೆವಯ್ಯಾ; ಸ್ವತಂತ್ರಧೀರ ಸಿದ್ಧೇಶ್ವರಾ ! ನೀನು ಮೆಚ್ಚಿದವರ ತುಚ್ಛೀಕರಿಸಿ ಸಿರಿ ಹೆಚ್ಚಿದವರ ಮೊಚ್ಚೆ ಒರಸುವೆವಯ್ಯಾ !"(೩೪೭).

ಜನಜೀವನದಲ್ಲಿ ಮೌಲ್ಯವಸ್ತುವಿಗೆ ಮೌಲ್ಯವಿಲ್ಲ ; ಕೀಳಾದುದಕ್ಕೆ ಗೌರವ ಸಲ್ಲುತ್ತದೆ–ಎಂಬುದರ ಚಿತ್ರಣ ಮೇಲೆ ಬಂದಿದೆ. ಕವಿವರ್ಯ ಕುವೆಂಪು. ಅವರ ಗೀತಗಳಾಗಿರುವ 'ಭಾರತ ಜನನಿಯ ತನುಜಾತೆ' ಹಾಗೂ 'ಕಿಂದರಿ ಜೋಗಿ' ಇವುಗಳಿಂದ ಪ್ರಭಾವಿತರಾಗಿ ಬರೆದ ವಚನಗಳೂ ಇಲ್ಲಿವೆ. ಅಲ್ಲಿಯ ಭಾವ ಇಲ್ಲಿ ಉದಾತ್ತಗೊಂಡಿದೆಯೆನ್ನಬಹುದು — "ಜಗಜ್ಜನನಿಯ ಉಜ್ವಲ ತನಯೆ, ತಾಯೆ, ಭರತಭೂಮಿಯೆ ! ನಿನ್ನ ಬೆಳಕಿನ ಮಗಳ ಮಗನಾಗಿ ಹುಟ್ಟಿದುದೆನ್ನ ಭಾಗ್ಯ ! ಈಗ ಬದುಕಿರುವುದಂತೂ ಪರಮ ಭಾಗ್ಯ !.........ನೀನೀಗ ಸಂಕ್ಷಿಪ್ತ ಬ್ರಹ್ಮಾಂಡ ! ಏಳಬಹುದು ಅನಂತ ಜ್ವಾಲೆಗಳು ಆಗಾಗ ನಿನ್ನ ಮನೆಯಲ್ಲಿ, ಬೀಸಬಹುದು ವೈರದ ಬಿರುಗಾಳಿಗಳು ಆಗಾಗ ಎಡಬಲಗಳಿಂದ, ತಲೆಯ ಮೇಲಿಂದ ! ಆದರಿನ್ನೂ ನೀನು ಹಿಮಾಲಯದಂತೆ ನಿಶ್ಚಲ, ಹಿಂದೂ ಸಾಗರದಂತೆ ಅವಿನಾಶಿ ! ಸ್ವತಂತ್ರಧೀರ ಸಿದ್ಧೇಶ್ವರನ ದಯೆಯಿಂದ ನಿರಂಕುಶ ಮತಿಗಳಾಗಲಿ, ವಿಶ್ವಜಿತುಗಳಾಗಲಿ, ಸರ್ವಹಿತ ವ್ರತಗಳಾಗಲಿ ನಿನ್ನ ಮಕ್ಕಳು ! ದಿಗಂತ ವಿಶ್ರಾಂತವಾಗಲಿ ನಿನ್ನ ಕೀರ್ತಿ, ಯಶಗಳು !" (೩೮)

ಮುಂದಿನ ವಚನ ದೇಶಭಕ್ತಿ ಪ್ರೇರಿತವಾದುದು—

"ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗಿನ ಈ ಸುಂದರ ಸುಮನೋಹರ ವನವನ್ನು ಜಾತಿ ಉಪಜಾತಿ ಉಪ ಉಪ ಜಾತಿಗಳ ಕೋತಿಗಳಿಗಾಗಿ ಹುಟ್ಟಿಸಿದೆಯೇನಯ್ಯಾ ?. ಕೊನರುತ್ತಲೆ ಕಡಿದೊಗೆಯುತ್ತಿವೆ

ಪ್ರತಿಭೆಯು ಕುಡಿಗಳನ್ನು; ಅರಳುವ ಮೊದಲೇ ಕಿತ್ತೆಸೆಯುತ್ತಿವೆ ಸವಿಭಾವಗಳ ಹೂಗಳನ್ನು; ಹಣ್ಣಾಗುವ ಮೊದಲೇ ಗೀರಿ ತೂರುತ್ತಿವೆ ಕ್ರತುಶಕ್ತಿಯ ಕಾಯಿಗಳನ್ನು ! ಬನವಿದು ಬೆಳೆಯುವ ಬಗೆ ಯಾವುದಯ್ಯಾ? ಉಳಿಯುವ ಪರಿ ಯಾವುದಯ್ಯಾ? ಇವುಗಳನ್ನೆಲ್ಲ ಕರೆದೊಯ್ದು ಕಡಲಿಗೆ ತಳ್ಳಬಲ್ಲ ಕಿಂದರಿ ಜೋಗಿಯೊಬ್ಬನ ಕಳಿಸಯ್ಯ–ಸ್ವತಂತ್ರಧೀರ ಸಿದ್ಧೇಶ್ವರಾ !" (೩೯).

ಉತ್ಕಟ ಹಾಗೂ ಆದರ್ಶ ದೇಶಭಕ್ತಿಗೆ ಪ್ರೇರಕವಾಗುವ ಹಲವು ವಚನಗಳು ಈ ಸಂಕಲನದಲ್ಲಿವೆ—"ಭಾರತವು ಸಂಕ್ಷಿಪ್ತ ಬ್ರಹ್ಮಾಂಡವಾದರೆ, ಕರ್ನಾಟಕವು ಸಂಕ್ಷಿಪ್ತ ಭಾರತ ನೋಡಾ ! ಇಲ್ಲಿ ಇಲ್ಲದುದು ಇನ್ನೆಲ್ಲಿದೆ ತೋರಾ !" ಎಂದಿರುವ ವಚನದಲ್ಲಿ "ಕನ್ನಡ ನಾಡಿನಲ್ಲಿ ಜನ್ಮವ ಬೇಡಿಕೊಂಡರೆ ಎಲ್ಲವನ್ನೂ ಬೇಡಿಕೊಂಡಂತೆ" ಎನ್ನಲಾಗಿದೆ. "ಮತ್ತೆ ಹುಟ್ಟಿಸುವುದಾದರೆ ನನ್ನನ್ನಿಲ್ಲಿಯೇ ಹುಟ್ಟಿಸು ತಂದೆ !" ಎಂದೂ ಪ್ರಾರ್ಥಿಸಲಾಗಿದೆ. "ನರನಾಗಿ ಅಲ್ಲ–ಸುರಭಿಯಾಗಿ ಹುಟ್ಟಿಸು ; ಇಟ್ಟರೆ ಸಗಣಿಯಾಗಿ, ತಟ್ಟಿದರೆ ಬೆರಣಿಯಾಗಿ, ತಟ್ಟದೆ ಹಾಕಿದರೆ ಗೊಬ್ಬರವಾಗಿ ಈ ನಾಡಿನ ಕೃಷಿಋಷಿಯ ಸೇವಿಸುವಾಸೆ ನನಗೆ; ಸುಟ್ಟರೆ ಶ್ರೀ ವಿಭೂತಿಯಾಗಿ ಈ ನಾಡಿನ ಹರಭಕ್ತರ ಹಣೆಗಳಲ್ಲಿ ಶೋಭಿಸುವಾಸೆ ನನಗೆ ! ಸುರಭಿಯಾಗಿಸದಿರೆ, ಗಂಧದ ಮರವಾಗಿ ಹುಟ್ಟಿಸು ; ಅದನ್ನು ಬೆಳೆಸಿ ತುಂಡರಿಸು ; ಮನೆಗೊಂದು ತುಂಡು ಮುಟ್ಟಿಸು ; ತೆಯ್ದರೆ ಶ್ರೀಗಂಧವಾಗಿ ಈ ನಾಡಿನ ಹರಿಭಕ್ತರ ಹಣೆಗಳಲ್ಲಿ ವಿರಾಜಿಸುವಾಸೆ ನನಗೆ ! ಇದಾಗದಿರೆ ಬಿದಿರ ಮೆಳೆಯಾಗಿ ಹುಟ್ಟಿಸಿ ಬಡವರ ಗುಡಿಸಲುಗಳಿಗೆ ಒದಗಿಸು ; ಮಕ್ಕಳ ಆಟಿಕೆಗಳಾಗಿ ಮಾರ್ಪಡಿಸು ; ಮುರಲೀಪ್ರಿಯರಿಗೆ ಕೊಳಲ ಮಾಡಿಕೊಡು" (೪೦) — ಹೀಗೆಂದಿರುವ ವಚನದ ಭಾವವು ವಚನಕಾರರ ಮೇಲುಮಟ್ಟದ ಮನೋಭಾವದ ಚಿತ್ರಣವಾಗಿದೆ.

ಹಿಂದಿನ ಶರಣರು ಅಭಿವ್ಯಕ್ತಗೊಳಿಸಿದ ಸತಿ-ಪತಿ ಭಾವದ ಮಧುರ ಭಕ್ತಿಯಿಂದೊಪ್ಪುವ ವಚನಗಳು ಇಲ್ಲಿ ಸ್ವೋಪಜ್ಞತೆಯಿಂದ ಕಂಗೊಳಿಸುತ್ತವೆ — "ಕೂಡಿದರೆ ಸತಿಯನ್ನೇ ಇಲ್ಲವಾಗಿಸುವ ಪತಿ ನೋಡಪ್ಪ" (೬೧) ಎಂಬಲ್ಲಿ ಆ ಶಿವಪತಿ ಈ ಶರಣಸತಿಗೆ ಕೈವಲ್ಯವನ್ನು ನೀಡುವನೆಂಬುದೇ ಭಾವವಾದರೂ ಅದನ್ನು ತಿಳಿಸುವ ಮಾತಿನ ಮರ್ಮ ಅಸಾಧಾರಣವಾದುದು.

ಸತ್ಯದ ಅನ್ವೇಷಣೆಯಲ್ಲಿ ಜಿಜ್ಞಾಸುಗಳು, ವೇದಾಂತಿಗಳು, ವಿಜ್ಞಾನಿಗಳು, ಸಂಶೋಧಕರು, ಹಾಗೂ ರಾಜಭಟರು ಕೂಡ ಬಹಳ ಸಾಧನೆ ಮಾಡತಕ್ಕವರೇ. 'ಸತ್ಯವೇ ದೇವರು' ಎಂಬುದನ್ನು 'ಹರನೆಂಬುದೇ ಸತ್ಯ' ಎಂಬ ಮಾತಿನಿಂದ ಕವಿ ರಾಘವಾಂಕನು ಹೇಳಿದ್ದಾನೆ. 'ಸತ್ಯವ ನುಡಿವುದೆ ದೇವಲೋಕ' ಎಂದು ಬಸವಣ್ಣನವರೂ ಹೇಳಿದ್ದುಂಟು. ಸತ್ಯಾನ್ವೇಷಣೆ, ಸತ್ಯರಕ್ಷಣೆ – ಇವೆರಡನ್ನೆಂದಿಗೂ ಯಾರೂ ಬಿಡಬಾರದು – ಎಂಬೀ ವಿಷಯದಲ್ಲಿ ಸಿದ್ಧೇಶ್ವರ ವಚನವೊಂದು ಹೀಗಿದೆ :—

"ಸತ್ಯಾನ್ವೇಷಣೆಯ ಹಾದಿಯಲ್ಲಿ ತುಳಿದ ಮುಳ್ಳೂ ಮಲ್ಲಿಗೆಯೇ ! ಮಿಥ್ಯಾದರಣೆಯ ದಾರಿಯಲ್ಲಿ ತುಳಿದ ಮಲ್ಲಿಗೆಯೂ ಮುಳ್ಳೇ ! ಸತ್ಯರಕ್ಷಣೆಯ ಹೋರಾಟದಲ್ಲಿ ಪಡೆದ ಸೋಲೂ ಗೆಲವೇ ! ಮಿಥ್ಯಾನುಮೋದನೆಯ ಕೀಳಾಟದಲ್ಲಿ ಪಡೆದ ಗೆಲವೂ ಸೋಲೇ ! ನೀನು ಸತ್ಯ ಸ್ವರೂಪ ಮಾತ್ರವಲ್ಲ, ಸತ್ಯವೇ ನೀನು, ನೀನೇ ಸತ್ಯ! ಈ ಸತ್ಯದಲ್ಲಿ ಸೇರಿ ಬಯಲಾಗಲಿ— ನಾನೆಂಬುವ ಮಿಥ್ಯ……" (೬೭)

ಲೋಕದಲ್ಲಿ ನಾಸ್ತಿಕರು—ಅಂದರೆ, ದೇವರಿಲ್ಲವೆಂಬವರು ಎಲ್ಲ ಕಾಲದಲ್ಲಿಯೂ ಇದ್ದರು. ಇಂದು ಅವರ ಸಂಖ್ಯೆ ಹೆಚ್ಚಿರಬಹುದು. ದೇವರಿಲ್ಲವೆನ್ನುವವರು ತಾವೂ ಇಲ್ಲವೆಂದು ವಾದಿಸುವ ತಿಳಿಗೇಡಿಗಳು — ಎಂಬ ಅಭಿಪ್ರಾಯವನ್ನು ಹಲವು ದೃಷ್ಟಾಂತಗಳಿಂದ ವಚನವೊಂದು ದೃಢಪಡಿಸುತ್ತದೆ :—

"ಕೆರದ ಖರ್ಚು ಉಳಿಸಲು ಕಾಲುಗಳನ್ನೇ ಕತ್ತರಿಸಿಕೊಂಡವರು ಉಂಟೇನಯ್ಯಾ? ಮಂಜನದ ವೆಚ್ಚ ಉಳಿಸಲು ಹಲ್ಲುಗಳನ್ನೆ ಕಿತ್ತೊಗೆದವರು ಉಂಟೇನಯ್ಯಾ? ವೃದ್ಧರ ಶುಲ್ಕ ಉಳಿಸಲು ವ್ಯಾಧಿಯನ್ನೇ ಅಪ್ಪಿಕೊಂಡವರು ಉಂಟೇನಯ್ಯಾ? ತಿಗಣೆಯ ಕಾಟ ತಪ್ಪಿಸಿಕೊಳ್ಳಲು ಮನೆಗೇ ಬೆಂಕಿ ಹಚ್ಚಿದವರು ಉಂಟೇನಯ್ಯ? ಸ್ವತಂತ್ರಧೀರ ಸಿದ್ಧೇಶ್ವರಾ, ನೀನಿಲ್ಲವೆಂದು ಸಾಧಿಸಲು ತಾನಿಲ್ಲವೆಂದು ವಾದಿಸುವವರೂ ಉಂಟೇನಯ್ಯ?" (೧೨೧).

'ವಿದ್ಯೆ ಬಂದಾಗ ವಿನಯ ಬರುತ್ತದೆ' ಎಂಬುದು ನೀತಿಕಾರರ ಮಾತು. ಆದರೆ ಕಾಲವೈಚಿತ್ರ್ಯದಿಂದ ಆಧುನಿಕ ವಿದ್ಯೆ ಬಂದಾಗ ವಿನಯ ಹೋಗಿಬಿಡುತ್ತದೆಂದು

ಒಂದು ವಚನದಲ್ಲಿ ಸ್ವಾರಸ್ಯವಾಗಿ ಹೇಳಿದೆ. (ವಚನ ೧೦೦). ವಿನಯ ಗುಣವನ್ನು ಕೊಂಡಾಡುವ ವಚನ ಗಳಲ್ಲಿ ಈ ಕೆಳಗಿನದು ಭರ್ತೃಹರಿಯ ನೀತಿಪದ್ಯವೊಂದನ್ನು ಸ್ವಲ್ಪ ಹೋಲುತ್ತದೆ—

"ಫಲವಿತ್ತ ರೆಂಬೆ ಬಾಗುತ್ತದೆ, ಗೊನೆ ಹೊತ್ತ ಬಾಳೆ ಬಾಗುತ್ತದೆ,
ತೆನೆ ಹೆತ್ತ ದಂಟು ಬಾಗುತ್ತದೆ, ಏನೇನೂ ಇಲ್ಲದುದು ಬೀಗುತ್ತದೆ ನೋಡಾ—ಸ್ವತಂತ್ರಧೀರ ಸಿದ್ಧೇಶ್ವರಾ!" (೧೮೫)

ಭರ್ತೃಹರಿ ನೀತಿಯ ಅನುವಾದರೂಪ ಹೀಗಿದೆ :—

ಕಂದ ॥ ತರುಗಳ್ ಬಾಗುಗುಮುರುಫಲ
ಭರದಿಂದೆ ನವಾಂಬು ಭಾರದೆ ಜೋಲ್ಗುಂ
ಸಿರಿಯೊಳ್ ನಯಯುತರಾರ್ಯರ್
ಪರಿಕಿಪೊಡೆ ಪರೋಪಕಾರಿಗಳ್ಗಿದು ಸಾಜಂ ॥

ಈ ಕಾಲದ ಯುಗಧರ್ಮವೆಂದರೆ 'ನವೀಕರಣ' —ಏನೊಂದಿದ್ದರೂ ಅದನ್ನು ಹೊಸತು ಮಾಡುವುದು. ಇಂದಿನ ತರುಣರಿಗೆ ನವೀಕರಣದಲ್ಲಿ ಬಹಳ ಆಸಕ್ತಿ. ಆದರೆ ಈ ನವೀಕರಣದಲ್ಲಿ ಮಾನವತೆಯನ್ನೆ ಕಳೆದುಕೊಳ್ಳುವು ದುಂಟು. ಇದನ್ನು ಆಕ್ಷೇಪಿಸುವ ವಚನವಾಣಿ ಲಕ್ಷಿಸ ಬೇಕಾದುದು :—

"ನವೀಕರಣ ನವೀಕರಣವೆಂದು ನಲುಗುತ್ತಲಿಹರಯ್ಯ ನವ ಯುವಕರು ; ಮಾ-ನವೀಕರಣ ಮಾ-ನವೀಕರಣ ವೆಂದು ಯಾರೆನ್ನುವರು ? ನಾನಂತೂ ಎನ್ನಲಾರೆ ! ಆದರೆ ಮಾನವೀಕರಣ, ಮಾನವೀಕರಣವೆಂದು ಎನ್ನದಿರ ಲಾರೆ ! ನವೀಕರಣದೊಡನೆ ಮಾನವೀಕರಣವೂ ಸಾಗಿದರೆ ಸರಿ, ಇಲ್ಲದಿದ್ದರೆ ಬಲು ಬರಿ ! ನನ್ನ ದೇಶದಲ್ಲಿ ಇವೆ ರಡೂ ಒಟ್ಟಿಗೆ ನಡೆಯುವಂತೆ ಮಾಡಾ, ಸ್ವತಂತ್ರಧೀರ ಸಿದ್ಧೇಶ್ವರಾ !" (೨೦೩).

ಈ ವಚನದಲ್ಲಿ 'ಮಾ-ನವೀಕರಣ' ಎಂದಾಗ ನವೀ ಕರಣ ಬೇಡ ಎಂದರ್ಥ. 'ಮಾನವೀಕರಣ' ಎಂದರೆ ವ್ಯಕ್ತಿಯನ್ನು ಮಾನವೀಯ ಗುಣವುಳ್ಳವನನ್ನಾಗಿ ಮಾಡುವುದು. ನವೀಕರಣವನ್ನು ಬೇಡವೆನ್ನುವುದಿಲ್ಲ ; ಅದನ್ನೂ ಮಾಡಬಹುದು. ಅದರೊಂದಿಗೆ ಮಾನವೀಕರಣ ಮಾಡಬೇಕಾದುದು ಅವಶ್ಯ–ಈ ವಚನ ನಿರೂಪಣೆ ಕಾವ್ಯ ಮಯ ಅಭಿವ್ಯಕ್ತಿಯಿಂದ ಕೂಡಿದೆಯೆನ್ನಬಹುದು.

ಲೋಕದಲ್ಲಿ ನಲಿವು (ಸಂತೋಷ, ಸುಖ) ಮತ್ತು ನೋವು (ದುಃಖ) ಇವೆರಡೂ ಇವೆ. 'ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ' ಎಂದು ಶ್ಲೋಕೋಕ್ತಿ. ನಲವು ಕ್ಷಣಿಕ, ನೋವು ದೀರ್ಘಕಾಲಿಕ ವೆಂಬುದನ್ನು ಉಪಮೆ–ರೂಪಕಗಳಿಂದ ನಿರೂಪಿಸುವ ವಚನ ಸಾರವಿದು—ಜೀವನವೆಂಬುದು ಪಾಠಶಾಲೆ ಯೆಂದಿಟ್ಟುಕೊಂಡರೆ, ಅಲ್ಲಿ ಹಾಜರಿ ಹಾಕಿದೊಡನೆ ಹೊರಟುಹೋಗುವ ವಿದ್ಯಾರ್ಥಿಯಂತಿದೆ ನಲವು ; ಅಂದರೆ ಅದು ಸ್ವಲ್ಪಹೊತ್ತು ಮಾತ್ರ ಇರುತ್ತದೆ. ಪಾಠ ಮುಗಿಯುವವರೆಗೆ ಹಾಜರಿರುವವನಂತೆ ನೋವು ಇರು ತ್ತದೆ ; ಅಂದರೆ ಅದು ಹೆಚ್ಚುಕಾಲ ನಿಂತಿರುತ್ತದೆ. ಜೀವನವೆಂಬ ಪ್ರವಾಹದಲ್ಲಿ ನೋವು ಅಲೆಯಾದರೆ, ನಗೆ ಅದರಲ್ಲಿ ಕಾಣಿಸುವ ನೊರೆ. ಜೀವನವೆಂಬ ಹುತ್ತದಲ್ಲಿ ನೋವು ಹಾವು ; ನಲವು ಅದರ ಪರೆ—ಅದು ಆಗಾಗ ಕಳಚಿಬೀಳುತ್ತದೆ. ನೋವು-ನಲವುಗಳು ನಾಣ್ಯದ ಎರಡು ಮುಖಗಳು. ನಾಣ್ಯದ ಒಂದು ಮುಖ ಮಾತ್ರ ಬೇಕು, ಇನ್ನೊಂದು ಬೇಡ ಎನ್ನುವಂತಿಲ್ಲ. ನೋವು-ನಲವುಗಳು ನೆಳಲು-ಬೆಳಕಿನ ಆಟದಂತೆ. ಈ ಆಟದಲ್ಲಿಯೇ ಮನುಷ್ಯನು ನೆಮ್ಮದಿ ಪಡೆಯಬೇಕು—ಈ ನೀತಿಯನ್ನು ಸಾರುತ್ತಿದೆ ವಚನ (೨೫೧).

ಜೀವಗುಣ, ದೇವಗುಣ ಎಂಬೆರಡು ಬಗೆಯುಂಟು. ಅವನ್ನು ತಿಳಿಸುವ ವಚನ ಹೀಗಿದೆ—"ಬಯಸುವುದು ಜೀವಗುಣ, ಬಯಸದಿರುವುದು ದೇವಗುಣವೇನಯ್ಯಾ? ಬಯಸನೆ ದೇವ, ಉತ್ಪತ್ತಿ ಸ್ಥಿತಿ-ಲಯಗಳನ್ನು ? ಬಯ ಸನೆ ಲೋಕ ಕಲ್ಯಾಣವನ್ನು ? ಬಯಸನೆ ಸದ್ಭಕ್ತ ಗಾನ ವನ್ನು ? ತನಗಾಗಿ ಬಯಸಿದರೆ ಜೀವಗುಣ, ಎಲ್ಲರಿಗಾಗಿ ಬಯಸಿದರೆ ದೇವಗುಣವೆಂಬೆನಯ್ಯಾ — ಸ್ವತಂತ್ರಧೀರ ಸಿದ್ಧೇಶ್ವರಾ !" (೨೮೯) ಈ ವಚನದ ಪ್ರಕಾರ ಬಯಕೆ ಯೆಂಬುದು ಜೀವನಿಗೂ ಉಂಟು, ದೇವನಿಗೂ ಉಂಟು. ಆದರೆ ಎಲ್ಲರಿಗಾಗಿ ಬಯಸಬೇಕು. ಅದು ದೇವಗುಣ ; ತನಗಾಗಿ ಬಯಸುವುದು ಜೀವಗುಣ.

ಸ್ವಾತಂತ್ರ್ಯರಕ್ಷಣೆ, ದೇಶದಲ್ಲಿ ಆಗುತ್ತಿರುವ ಪ್ರತಿಭಾ ಸಂಹಾರ, ಜನರ ವರ್ತನೆಯಲ್ಲಿ ಅಧಃಪಾತ, ದಾಸ್ಯ ನಿರಾಕರಣೆ, ಸುಖೀರಾಜ್ಯ ದುಃಖೀರಾಜ್ಯಗಳ ಸ್ವರೂಪ, ನೈಜ ಅಧಿಕಾರ, ಹಣದುಬ್ಬರ, ಬೆಲೆಯೇರಿಕೆ, ಶಿಕ್ಷಣ ಮುಂತಾದ ಸಮಕಾಲೀನ ವಿಷಯಗಳ ಕಡೆಗೂ ಪ್ರಸ್ತುತ

ಗ್ರಂಥದ ವಚನಗಳ ವಿಚಾರದ ಹರಹು ಚಾಚಿರುವುದು ಒಂದು ವೈಶಿಷ್ಟ್ಯವಾಗಿದೆ. ಇಂಥದೊಂದು ವಚನ ಕೃತಿಯನ್ನು ಬರೆದು ಹೊಗಳಿಕೆಗೆ ಪಾತ್ರರಾದರೂ ಈ ವಚನಕಾರರು ಅದನ್ನು ಬಯಸಿಲ್ಲ. ಬಸವಣ್ಣನವರು ತಮ್ಮದೊಂದು ವಚನದಲ್ಲಿ 'ಎನ್ನವರೆನ್ನ ಹೊನ್ನಶೂಲ ದಲಿಕ್ಕಿದರು ಹೊಗಳಿ ಹೊಗಳಿ...ಎನ್ನ ಹೊಗಳಿಕೆಗೆ ಅಡ್ಡ ಬಾರಾ' — ಎಂದು ಮೊರೆಯಿಟ್ಟುದುಂಟು. ಸಿದ್ಧೇಶ್ವರ ವಚನದಲ್ಲಿ ಹೊಗಳಿಕೆ-ತೆಗಳಿಕೆಗಳೆರಡನ್ನೂ ತಿರಸ್ಕರಿಸ ಲಾಗಿದೆ :—

"ಹೊಗಳಿದರು ಹಲವರೆಂದು ತೆಗಳಿದರು ಕೆಲವರೆನ್ನ : ಇದು ಕಾರಣ, ಹೊಗಳಿದವರೇ ಹೊಣೆಗಾರರೆನ್ನ ತೆಗಳಿ ಕೆಗೆ ! ದಯವಿಟ್ಟು ಹೊಗಳದಿರಿ, ದಮ್ಮಯ್ಯ! ಹೊಗ ಳುವ ನೀವು ನನ್ನ ಗುಣಶೀಕರಗಳ ಮುಂದೆ ಪಾರದರ್ಶಕವ ನ್ನಿರಿಸುವಿರಿ ; ತೆಗಳುವವರು ನನ್ನ ದೋಷಗಳ ಮುಂದೆ ಸೂಕ್ಷ್ಮದರ್ಶಕವನ್ನಿರಿಸುವರು. ಎರಡರಲ್ಲಿಯೂ ವಿಶ್ವಾಸ ವಿಲ್ಲ ನನಗೆ ; ಆದರೂ ಇಬ್ಬರಿಗೂ ನಮಸ್ಕಾರಗಳು..." ಕೆಲವರು ಹೊಗಳಿದುದರಿಂದಲೇ ಇನ್ನು ಕೆಲವರು ತೆಗಳಲು ಕಾರಣವಾಯಿತೆಂದು ಇಲ್ಲಿ ಅಭಿಪ್ರಾಯ ಪಡಲಾಗಿದೆ.

ವಚನಕಾರರ ಅಭಿಪ್ರಾಯ ಹೀಗಿದ್ದರೂ ಈ ಗ್ರಂಥವನ್ನು ಓದುವವರು ಕೇಳುವವರು ಮೆಚ್ಚಿತಲೆದೂಗದೆ ಇರುವು ದಿಲ್ಲ. ಆಗ ಬಾಯಿಯಿಂದ ಮೆಚ್ಚಿಕೆಯ ಮಾತು ಬಾರ ದಿರುವುದಿಲ್ಲ. ಬರೆಯುವ ಕೈ ಅದನ್ನು ಬರೆಯದಿರು ವುದೂ ಇಲ್ಲ. ಇದು ಹೊಗಳಿಕೆಯಲ್ಲ, ಗುಣಗ್ರಹಣ ಮಾಡಿದುದರ ಅಭಿವ್ಯಕ್ತಿ ಮಾತ್ರ.

ಉದ್ಯಾನದಲ್ಲಿ ನೆಟ್ಟುಬೆಳೆಸಿದ ಗಿಡ-ಮರ-ಬಳ್ಳಿ ಪೊದರುಗಳು ನಳನಳಿಸಿ ಬೆಳೆದು ಬಗೆ ಬಗೆಯ ಹೂ ಕಾಯಿ ಹಣ್ಣುಗಳನ್ನು ನೆರಳಿನ ತಂಪನ್ನು ಕೊಡುವಂತೆ, ಈ ವಚನೋದ್ಯಾನದ ವಚನಗಳು ಮಾನವಜೀವನದ ಅನುಭವ-ಅನುಭಾವಗಳ ಚೆಲುವಿನ ಕಂಪನ್ನು ತಂಪನ್ನು ಹಣ್ಣುಗಳ ತನಿರಸವನ್ನು ಓದುಗರಿಗೆ ಒದಗಿಸುತ್ತಿವೆ. ಜನಮನದ ಕತ್ತಲೆಗಿದು (ವಚನೋದ್ಯಾನವು) ಬೆಳಕು ; ಭಾವದ ಹಸಿವಿಗೆ ಮೃಷ್ಟಾನ್ನ; ಬುದ್ಧಿಯ ಕಮಲ ವಿಕಸನಕ್ಕೆ ರವಿಯುದಯ ; ಒಳನೋಟದ ಕನ್ನಡಿಗೆ ಹೊಸ ಚೌಕಟ್ಟು — ಹೀಗೆನ್ನುವುದು ಹೊಗಳಿಕೆಯ ಮಾತಲ್ಲ, ಕೃತಿಯ ಗಳಿಕೆಯ ಬೆಲೆ ಮಾತ್ರ. □

ಸುಳ್ಳಿಗಿದೆ ಸುಳ್ಳುಸುಖ ಸತ್ಯಕ್ಕೆ ಸತ್ಯಸುಖ
ಕಳ್ಳನೇ ಒಲಿದವರು ಒಲಿಯುವರೆ ಹಾಲ ?
ಎಳ್ಳನಿತು ಸುಖಕಾಗಿ ಸುಳ್ಳು ತಬ್ಬುತ ಅದರ
ಬಳ್ಳಿಯಲೆ ಸಾಯುವರೆ ಮರುಳಸಿದ್ಧ ॥

ಸಾವು ಹಗೆಯೆಂದವನ ಜೀವನವು ವ್ಯಥೆಯು ಕಥೆ
ಸಾವು ಸಖನೆಂದವನ ಬದುಕು ಬಂಗಾರ ;
ಜೀವ ಸಾವಿನ ಕೊಡುಗೆ, ಸಾವು ಜೀವನದುಡಿಗೆ
ಸಾವಿಗೂ ಶರಣೆನ್ನೊ ಮರುಳಸಿದ್ಧ ॥

—ಮರುಳಸಿದ್ಧನ ಕಂತೆ

# ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸಂತಾನ

| | | | |
|---|---|---|---|
| ೧. | ಸುಬೋಧಸಾರ | ಸಂಪಾದಿತ ಕೃತಿ (ಹರ್ಡೇಕರ ಮಂಜಪ್ಪನವರೊಡನೆ) | ೧೯೩೯ |
| ೨. | ಆತ್ಮಾರ್ಪಣ | ೩ ಅಂಕದ ರಂಗನಾಟಕ | ೧೯೪೨ |
| ೩. | ಶ್ರೀಕಾರ ಹಾಗೂ ಪ್ರಬಂಧ ಮಾಲೆ | ಸಂಪಾದಿತ ಕೃತಿ (ಶ್ರೀ ಇಟಗಿ ರಾಘವೇಂದ್ರ ಅವರೊಡನೆ) | ೧೯೫೨ |
| ೪. | ಜಲಪಾತ | ಕವನ ಸಂಕಲನ | ೧೯೫೩ |
| ೫. | ವಿಕಾಸವಾಣಿ | ವಿಕಾಸಯೋಜನೆಗೆ ಸಂಬಂಧಿಸಿದ ಹಾಡುಗಳು | ೧೯೫೪ |
| ೬. | ಕರುಣಾಶ್ರಾವಣ | ಕವನ ಸಂಕಲನ | ೧೯೫೫ |
| ೭. | ತುಷಾರ ಹಾರ | ಕಿರುಗತೆಗಳು | ೧೯೫೬ |
| ೮. | ಪದ್ಯ ರತ್ನಾಕರ | ಸಂಪಾದನೆ (ನರಸಿಂಗರಾವ್ ಮಾನ್ವಿ ಮತ್ತು ಎಫ್.ಜಿ. ಮಠದ ಇವರೊಡನೆ) | ೧೯೫೬ |
| ೯. | ಮಾನಸ ಸರೋವರ | ಕವನ ಸಂಕಲನ | ೧೯೫೯ |
| ೧೦. | ಭಾರತವೀರ | ೩ ಅಂಕದ ರಂಗನಾಟಕ | ೧೯೬೩ |
| ೧೧. | ಶರಣ ಚರಿತಾಮೃತ | ಜೀವನ ಚರಿತ್ರೆ | ೧೯೬೪ |
| ೧೨. | ಮಹಾತ್ಮ ಕನಕದಾಸ ಪ್ರಶಸ್ತಿ | ಸಂಪಾದಕ ಸಮಿತಿಯ ಅಧ್ಯಕ್ಷರಾಗಿ | ೧೯೬೫ |
| ೧೩. | ರಜತ ರೇಖೆ | ಪ್ರಸಾರ ನಾಟಕಗಳು | ೧೯೬೫ |
| ೧೪. | ಕಲ್ಲೋಲ ಮಾಲೆ | ಅನುಭಾವ ಗೀತಗಳು | ೧೯೬೮ |
| ೧೫. | ಶರಣ ಪ್ರಸಾದ | ಸಂಪಾದಿತ ಕೃತಿ (ಬಿ. ಎ. ಸನದಿಯವರೊಂದಿಗೆ) | ೧೯೬೯ |
| ೧೬. | ಮೊದಲು ಮಾನವನಾಗು | ಕವನ ಸಂಗ್ರಹ | ೧೯೬೯ |
| ೧೭. | ತುಪ್ಪಾರೊಟ್ಟಿ ಗೇ ಗೇ ಗೇ | ಮಕ್ಕಳ ಪದಗಳು | ೧೯೭೩ |
| ೧೮. | ಸಿದ್ಧರಾಮ | ಜೀವನ ಚರಿತ್ರೆ | ೧೯೭೪ |
| ೧೯. | ನಿರ್ಬಂಧನ | ೨ ಏಕಾಂಕ ನಾಟಕಗಳು | ೧೯೭೪ |
| ೨೦. | ತ್ರಿಭುವನ ಮಲ್ಲ | ಐತಿಹಾಸಿಕ ಕಾದಂಬರಿ | ೧೯೭೪ |
| ೨೧. | ಬಸವಣ್ಣನವರ ಜೀವನ ಹಾಗೂ ಸಂದೇಶ | ಉಪನ್ಯಾಸ | ೧೯೭೭ |
| ೨೨. | ವಚನೋದ್ಯಾನ | ವಚನಗಳು | ೧೯೭೭ |
| ೨೩. | ನಜೀರ್ ಅಕಬರಾಬಾದಿ | ಜೀವನ ಚರಿತ್ರೆ | ೧೯೭೮ |
| ೨೪. | ಗಿಲ್ ಗಿಲ್ ಗಿಲಗಚ್ಚಿ | ಮಕ್ಕಳ ಪದಗಳು | ೧೯೭೮ |
| ೨೫. | ಹರ್ಡೇಕರ್ ಮಂಜಪ್ಪನವರು | ಜೀವನ ಚರಿತ್ರೆ | ೧೯೭೮ |
| ೨೬. | ಮಿರ್ಜಾ ಗಾಲಿಬ್ | ಜೀವನ ಚರಿತ್ರೆ | ೧೯೭೯ |

**ಬರಲಿರುವ ಕೃತಿಗಳು :**

೧. ಮರುಳಸಿದ್ಧನ ಕಂತೆ
೨. ವಚನೋದ್ಯಾನ-ಸಂಪುಟ ೨
೩. ತುಷಾರಹಾರ-ವಿಸ್ತೃತ ದ್ವಿತೀಯ ಆವೃತ್ತಿ
೪. ಕವನ ಸಂಗ್ರಹ
೫. ಲೇಖನಗಳು ಮತ್ತು ಭಾಷಣಗಳು
೬. ರೇಡಿಯೋ ರೂಪಕಗಳ ಸಂಗ್ರಹ

**ಡಾ. ಪುರಾಣಿಕರ ಮತ್ತು ಅವರ ಕೃತಿಗಳ ಬಗ್ಗೆ ಬಂದಿರುವ ಗ್ರಂಥಗಳು**


೧. ಕಾವ್ಯಶ್ರೀ ಕಾವ್ಯಾನಂದ : ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ' ಅವರಿಗೆ ಅರ್ಪಿಸಿದ ಸನ್ಮಾನ ಗ್ರಂಥ, ಸಂ. ಸತ್ಯಾನಂದ ಮತ್ತು ಮೇಘಮಿತ್ರ, ವಿಜಾಪುರ.
೨. ಕಾವ್ಯಾನಂದ : ಸಂ. ಮಿರ್ಜಿ ಅಣ್ಣಾರಾಯ ಕೃಷ್ಣ ಕೊಲ್ಹಾರ ಕುಲಕರ್ಣಿ, ಶ್ರೀ ಚಂದ್ರ-ಗಂಗಾ ಜ್ಞಾನಪೀಠ, ಶೇಡಬಾಳ ೧೯೭೩.
೩. ಐವತ್ತು ತುಂಬಿದ 'ಕಾವ್ಯಾನಂದ' : ವಿಶೇಷ ಸಂಚಿಕೆ : ಜೀವನ ವಿಕಾಸ, ೬-೮-೯. ಆಗಸ್ಟ್-ಸೆಪ್ಟಂಬರ್, ೧೯೭೩.
೪. ವಚನೋದ್ಯಾನ ದರ್ಶನ : ಸಂ. ದೇ. ಜವರೇಗೌಡ, ಡಾ. ಸಿದ್ಧಯ್ಯ ಪುರಾಣಿಕ ಅಭಿನಂದನ ಸಮಿತೀ ಮೈಸೂರು, ೧೯೮೦.
೫. ಕಾವ್ಯಾನಂದ : ಸಂ. ಸಾ. ಶಿ. ಮರುಳಯ್ಯ, ಡಾ. ಸಿದ್ಧಯ್ಯ ಪುರಾಣಿಕ ಅಭಿನಂದನ ಸಮಿತಿ, ಬೆಂಗಳೂರು, ೧೯೮೧.
೬. ಸಹೃದಯ : ಸಂ. ಟಿ. ಆರ್. ಮಹಾದೇವಯ್ಯ, ಡಾ. ಸಿದ್ಧಯ್ಯ ಪುರಾಣಿಕ ಅಭಿನಂದನ ಸಮಿತಿ, ಬೆಂಗಳೂರು, ೧೯೮೧.

# ಡಾ. ಸಿದ್ಧಯ್ಯ ಪುರಾಣಿಕರ ಜೀವನದ ಪ್ರಮುಖ ಘಟನೆಗಳು

| | |
|---|---|
| ೧೮-೮-೧೯೧೮ | ಜನನ, ರಾಯಚೂರು ಜಿಲ್ಲೆಯ ಯಲಬುರಗಿ ತಾಲೂಕಿನ ದ್ಯಾಂಪುರದಲ್ಲಿ |
| | ತಂದೆ ಕಲ್ಲಿನಾಥಶಾಸ್ತ್ರಿಯವರು, ತಾಯಿ ದಾನಮ್ಮನವರು |
| ೧೯೩೭ | ಆಲಮಟ್ಟಿಯಲ್ಲಿ ಹರ್ಡೇಕರ ಮಂಜಪ್ಪನವರೊಂದಿಗೆ ಆಶ್ರಮವಾಸ |
| ೧೯೪೩ | ತಹಸಿಲ್ದಾರರಾಗಿ ಉದ್ಯೋಗ ಆರಂಭ |
| ೫-೧೨-೧೯೪೩ | ವಿವಾಹ, ಗಿರಿಜಾದೇವಿಯವರೊಡನೆ |
| ೨-೮-೧೯೪೪ | ಅಸಿಸ್ಟೆಂಟ್ ಕಲೆಕ್ಟರ್, ನಾಂದೇಡ |
| ೨೨-೮-೧೯೪೫ | ಅಸಿಸ್ಟೆಂಟ್ ಕಲೆಕ್ಟರ್, ಲ್ಯಾಂಡ್ ರಿಕಾರ್ಡ್ಸ್ ವಿಭಾಗ, ಗುಲ್ಬರ್ಗ |
| ೧೪-೮-೧೯೪೮ | ಅಸಿಸ್ಟೆಂಟ್ ಕಮೀಷನರ್ (ಜಾಗೀರಾತ್) |
| ೨೫-೯-೧೯೫೧ | ಅಸಿಸ್ಟೆಂಟ್ ರೆವಿನ್ಯೂ ಸೆಕ್ರೆಟರಿ, ಹೈದರಾಬಾದ್ ಸಂಸ್ಥಾನ |
| ೭-೨-೧೯೫೨ | ಸ್ಥಾನಿಕ ಸ್ವರಾಜ್ಯ ಆಡಳಿತ ಸಚಿವರ ಕಾರ್ಯದರ್ಶಿ |
| ೮-೧-೧೯೫೩ | ಕೃಷಿ ಯೋಜನೆ ಹಾಗೂ ಪೂರೈಕೆ ಇಲಾಖೆಯ ಸಚಿವರ ಕಾರ್ಯದರ್ಶಿ |
| ೧೯೫೫ | ಡೆಪ್ಯೂಟಿ ಕಲೆಕ್ಟರ್, ತಾಂಡೂರು |
| ೫-೬-೧೯೫೭ | ಡೆಪ್ಯೂಟಿ ಕಲೆಕ್ಟರ್, ಯಾದಗಿರಿ |
| ೨೯-೩-೧೯೫೮ | ಭಾರತೀಯ ನಾಗರಿಕ ಸೇವೆ (ಐ.ಎ.ಎಸ್) |
| ೩೦-೩-೧೯೬೦ | ವಿದ್ಯಾ ಇಲಾಖೆಯ ಡೆಪ್ಯೂಟಿ ಸೆಕ್ರೆಟರಿ |
| ೬-೭-೧೯೬೨ | ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ನಿರ್ದೇಶಕರು |
| ೧೮-೨-೧೯೬೪ | ಅರ್ಥಶಾಖೆಯಲ್ಲಿ ಡೆಪ್ಯೂಟಿ ಸೆಕ್ರೆಟರಿ, ಚಿನ್ನ ನಿಯಂತ್ರಣಾಧಿಕಾರಿ |
| ೩-೭-೧೯೬೫ | ಡೆಪ್ಯೂಟಿ ಕಮೀಷನರ್, ಮಡಿಕೇರಿ |
| ೫-೫-೧೯೬೭ | ಸಾರಿಗೆ ಕಮೀಷನರ್, ಬೆಂಗಳೂರು |
| ೨೮-೯-೧೯೭೦ | ಡೆಪ್ಯೂಟಿ ಕಮೀಷನರ್, ಬೆಳಗಾವಿ |
| ೧-೧೨-೧೯೭೨ | ಲೇಬರ್ ಕಮೀಷನರ್, ಬೆಂಗಳೂರು |
| ೩೦-೧೨-೧೯೭೪ | ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ |
| ೨೫-೧೦-೧೯೭೫ | ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ |
| ೩೦-೬-೧೯೭೬ | ನಿವೃತ್ತಿ ಹಾಗೂ ವಿಶ್ರಾಂತ ಜೀವನ |
| ೧೯೭೮ | ವಚನೋದ್ಯಾನಕ್ಕೆ ರಾಜ್ಯ ಸಾಹಿತ್ಯ ಅಕಾಡಮಿಯ ಅತ್ಯುತ್ತಮ ಪುಸ್ತಕ ಪುರಸ್ಕಾರ |
| ೧೯೭೯ | ಬಸವ ಸಮಿತಿಯ ಸಂಶೋಧನ ಮತ್ತು ಪ್ರಕಟಣ ವಿಭಾಗದ ನಿರ್ದೇಶಕ ; ಬಸವ ಪಥ (ಕನ್ನಡ, ಮಾಸಿಕ), ಬಸವ ಜರ್ನಲ್ (ಇಂಗ್ಲಿಷ್, ತ್ರೈಮಾಸಿಕ) ಪತ್ರಿಕೆಗಳ ಪ್ರಧಾನ ಸಂಪಾದಕ |
| ೧೯೮೦ | ಭಿಲ್ವಾರ ಪ್ರಶಸ್ತಿ (ಭಾರತೀಯ ಭಾಷಾ ಪರಿಷತ್ತು, ಕಲ್ಕತ್ತಾ) |
| ೧೯೮೧ | ಮಾಳವಾಡ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯ |
| ೨೧-೬-೧೯೮೧ | ರಾಜ್ಯಮಟ್ಟದ ಅಭಿನಂದನ ಸಮಿತಿಯ ಸತ್ಕಾರ ; ಅಭಿನಂದನ ಗ್ರಂಥ ಹಾಗೂ ನಿಧಿ ಸಮರ್ಪಣೆ |